*Research Lectures Series— No. 10*

ಕನ್ನಡ ವ್ಯಾಕರಣದ ಕೆಲವು ಸಮಸ್ಯೆಗಳು

( ಪ್ರಥಮ ಭಾಗ )

# ಕನ್ನಡ ವರ್ಣಗಳು

ಉಪನ್ಯಾಸಕರು:

ಶ್ರೀ. ಸೇಡಿಯಾಪು ಕೃಷ್ಣಭಟ್ಟರು,

ಮಂಗಳೂರು



1955

KANNADA RESEARCH INSTITUTE

DHARWAR

ಚಿ। ಶ್ರೀ. ಮುಳ್ಳಿಂಯ ಕೇಶವನಿಗೆ
ಪ್ರೀತಿಯ ಕಾಣಿಕೆ

28 · 12 · 1955.

ಪ್ರಕಾಶಕರು:—
ಎಸ್. ಎಸ್. ಮಾಳವಾಡ
ಡಾಯರೆಕ್ಟರ ಕನ್ನಡ ಸಂಶೋಧನ ಸಂಸ್ಥೆ
ಧಾರವಾಡ



ಬೆಲೆ: ಒಂದೂವರೆ ರೂಪಾಯಿ

ಮುದ್ರಕರು:—
ಶ್ರೀ. ಎನ್. ವ್ಹಿ. ಕುರಡಿ
ಶ್ರೀ ಸರಸ್ವತೀ ಮುದ್ರಣಾಲಯ,
ಧಾರವಾಡ.

# ಪೀಠಿಕೆ

ಕನ್ನಡ ಸಂಶೋಧನ ಸಂಸ್ಥೆಯ ೧೯೪೯–೫೦ನೆಯ ವರುಷದ ಉಪನ್ಯಾಸ ಮಾಲೆಯಲ್ಲಿ ನಡೆದ ಶ್ರೀ. ಸೇಡಿಯಾಪು ಕೃಷ್ಣಭಟ್ಟರ ಉಪನ್ಯಾಸಗಳನ್ನು ಇದೀಗ ಪುಸ್ತಕರೂಪದಲ್ಲಿ ಪ್ರಕಟಿಸಲು ಸಂತೋಷವಾಗುತ್ತಿದೆ. ಸುಪ್ರಸಿದ್ಧ ಕನ್ನಡ ಪಂಡಿತರಾದ ಮಂಗಳೂರಿನ ಶ್ರೀ. ಸೇಡಿಯಾಪು ಕೃಷ್ಣಭಟ್ಟರು ಕನ್ನಡ ವ್ಯಾಸಂಗಕ್ಕೆ ಉಪಯುಕ್ತವಾದ ಸಾಮಗ್ರಿಯನ್ನು ಒದಗಿಸುವಲ್ಲಿ ವ್ಯಾಸಂಗಿಗಳ ಮನ್ನಣೆಗೆ ಪಾತ್ರರಾಗಿದ್ದಾರೆ. ಅವರು ಕನ್ನಡ ವರ್ಣಮಾಲೆಯನ್ನು ಕುರಿತು ಇಲ್ಲಿ ಆಳವಾಗಿ ವಿವೇಚಿಸಿದ್ದಾರೆ. ದ್ರಾವಿಡ ವಿಶೇಷವಾಗಿ ಕನ್ನಡ ಉಚ್ಚಾರ ವೈಶಿಷ್ಟ್ಯದ ಹಿನ್ನೆಲೆಯಲ್ಲಿ ಕೆಲವೊಂದು ವರ್ಣ ಮತ್ತು ಶಬ್ದಗಳನ್ನು ತುಲನಾತ್ಮಕವಾಗಿ ಶಾಸ್ತ್ರೀಯ ದೃಷ್ಟಿಯಿಂದ ವಿಮರ್ಶಿಸಿ, ಅವುಗಳ ಸಾಧುವಾದ ಉಚ್ಚಾರ ಮತ್ತು ಲೇಖನ ರೂಪಗಳನ್ನು ತೋರಿಸುವ ಪ್ರಯತ್ನವನ್ನು ಈ ಹೊತ್ತಗೆಯಲ್ಲಿ ನಾವು ಕಾಣುತ್ತೇವೆ. ಇದುವರೆಗೆ ಪ್ರಕಟವಾದ ಕೆಲವು ವ್ಯಾಕರಣ ವಿಷಯಕವಾದ ಗ್ರಂಥಗಳಲ್ಲಿ ಕೇವಲ ಗ್ರಾಂಥಿಕ ಪ್ರಯೋಗಗಳ ಆಧಾರಗಳು ಮಾತ್ರ ದೊರೆಯುತ್ತಿವೆ. ಭಾಷೆಯ ಸಮಗ್ರ ಅಭ್ಯಾಸಕ್ಕೆ ಇದು ಸಾಲದು. ಈ ಹೊತ್ತಗೆಯಲ್ಲಿ ವಾಙ್ಮಯದ ಮೂಲವಾದ ಜನಬಳಕೆಯ ಶಬ್ದಗಳನ್ನು, ಅಲ್ಲದೆ ಕನ್ನಡದ ಒಡನುಡಿಗಳಾದ ತಮಿಳು, ತೆಲುಗು, ಮಲಯಾಳ, ತುಳು ನುಡಿಗಳೊಡನೆ ತಿಕ್ಕಿ ತೂಗಿ ನೋಡುವ ವೈಜ್ಞಾನಿಕ ರೀತಿಯನ್ನು ಉಪನ್ಯಾಸಕರು ಚರ್ಚೆಯಲ್ಲಿ ಬಳಸಿಕೊಂಡಿದ್ದಾರೆ. ಶ್ರೀ. ಕೃಷ್ಣಭಟ್ಟರು ತಮ್ಮ ಪ್ರತಿಪಾದನೆಯಲ್ಲಿ ಉದಾಹರಣೆಗಾಗಿ ಎತ್ತಿಕೊಂಡ ಕೆಲವು ಶಬ್ದ-ವರ್ಣಗಳನ್ನು ಆಳವಾಗಿ, ವಿಶಾಲವಾಗಿ, ಸೂಕ್ಷ್ಮವಾಗಿ ಚರ್ಚಿಸಿರುವುದರಿಂದ ಈ ಚರ್ಚೆ ಕನ್ನಡ ಭಾಷಾವಿಜ್ಞಾನದ ಅಭ್ಯಾಸಕ್ಕೆ ಉಪಯುಕ್ತವೂ ಮಾರ್ಗದರ್ಶಕವೂ ಆಗುವಲ್ಲಿ ಸಂದೇಹವಿಲ್ಲ.


ಮೊದಲ ಉಪನ್ಯಾಸ (ಪೀಠಿಕಾ ಪ್ರಕರಣ) ದಲ್ಲಿ ಭಾಷಾವಿಜ್ಞಾನದ ಅರ್ಥವಿವರಣೆಯನ್ನು ಕೊಟ್ಟು, ಆ ದಿಶೆಯಲ್ಲಾದ ಇದುವರೆಗಿನ ಗ್ರಂಥ ನಿಷ್ಪತ್ತಿಯನ್ನು ಉಲ್ಲೇಖಿಸಲಾಗಿದೆ. ಕನ್ನಡ ಭಾಷೆಯ ವಿಷಯದಲ್ಲಿ ಹಿಂದಿನವರು (ನೃಪತುಂಗ, ನಾಗವರ್ಮ, ಕೇಶಿರಾಜ ಇ.) ತಮ್ಮ ಗ್ರಂಥ ರಚನೆಯಲ್ಲಿ, ನುಡಿಯ ಸಾಧುರೂಪಗಳನ್ನು ನಿರ್ದೇಶಿಸುವಾಗ ಅವುಗಳಲ್ಲಿ

ವಿಶೇಷವಾಗಿ ಶಬ್ದಮಣಿದರ್ಪಣದಲ್ಲಿ ಈಗಿನ ವಿಶಾಲಾರ್ಥದ ವೈಜ್ಞಾನಿಕ ದೃಷ್ಟಿ ಅಷ್ಟೊಂದು ಕಾಣದಿದ್ದರೂ ವೈಜ್ಞಾನಿಕ ಲಕ್ಷಣಗಳಾದ ಕನ್ನಡದ ವಿಶೇಷಗಳನ್ನು ಎತ್ತಿ ತೋರಿಸುವ ತುಲನಾತ್ಮಕ ದೃಷ್ಟಿ, ಕೆಲವೊಂದು ಪದಗಳ ಉಚ್ಚಾರ ಮತ್ತು ಸಿದ್ಧಿಗಳನ್ನು ಕುರಿತು ಬೆಳಕು ಬೀರುವ ಐತಿಹಾಸಿಕ ಮತಿ ಇವುಗಳೂ ಇದ್ದವೆಂಬುದಕ್ಕೆ ನಿದರ್ಶನ ತೋರಿಸಲಾಗಿದೆ. ನಿಜವಾಗಿ ದ್ರಾವಿಡ ಭಾಷೆಗಳ ತುಲನಾತ್ಮಕ ಅಭ್ಯಾಸವನ್ನು ಮೊದಲಿಸಿದವರು ಶತಮಾನದ ಹಿಂದೆ ಕಾಲ್ಡ್‌ವೆಲ್ಲರವರು. ಅವರ ದೀರ್ಘಕಾಲದ ಏಕಮುಖವಾದ ವ್ಯಾಸಂಗದ ಫಲವಾದ 'Comparative Grammer of Dravidian Languages' ಎಂಬ ಗ್ರಂಥದಲ್ಲಿಯ ಪ್ರತಿಪಾದನಗಳನ್ನು ಶ್ರೀ. ಕೃಷ್ಣಭಟ್ಟರು ಇಲ್ಲಿ ಹೆಚ್ಚಾಗಿ ಪರಾಮರ್ಶೆಗೆ ತೆಗೆದುಕೊಂಡಿದ್ದಾರೆ. ಕಾಲ್ಡ್‌ವೆಲ್ಲರ ಪರಿಶ್ರಮಪೂರ್ಣವಾದ ಸೇವೆ ಪ್ರಶಂಸನೀಯವೆ ಅಹುದು. ಆದರೆ ಸ್ವಕೀಯ ಭಾಷೆಯ ಉಚ್ಚಾರ ಶಬ್ದರಚನೆಗಳಿಂದ ತೀರ ಭಿನ್ನವಾದ ದ್ರಾವಿಡಭಾಷೆಗಳ ಆಳವಾದ ಜ್ಞಾನದ ಕೊರತೆ, ಜನಗಳ ಆಡುಮಾತಿನ ಕಡೆಗೆ ಅಲಕ್ಷ್ಯ, ಇವುಗಳಿಂದ ಕೆಲವೊಂದು ತಪ್ಪುತಿಳುವಳಿಕೆಗೆ ಅವರು ಒಳಗಾಗಬೇಕಾದುದೂ ನಿಜ. ಇದರಿಂದಾಗಿ ಅವರ ಹಲವು ಪ್ರತಿಪಾದನೆಗಳು ಹೇಗೆ ತಪ್ಪುದಾರಿ ಹಿಡಿದಿವೆ ಎಂಬುದನ್ನು ಉಪನ್ಯಾಸಕರು ಸೋದಾಹರಣವಾಗಿ ಈ ಉಪನ್ಯಾಸಗಳುದ್ದಕ್ಕೂ ಚರ್ಚಿಸಿದ್ದಾರೆ. ಕಾಲ್ಡ್‌ವೆಲ್ಲರ ಈ ದೋಷಗಳನ್ನು ಶಾಸ್ತ್ರೀಯವಾಗಿ ಪರಿಶೋಧಿಸಿ ಆಧಾರಭೂತವಾದ ರೀತಿಯಲ್ಲಿ ತಿದ್ದುವ ಪಂಡಿತಪ್ರಯತ್ನಗಳು ಸಾಕಷ್ಟು ನಡೆದಿಲ್ಲ. ಇಂತಹ ಕೆಲಸ ಒಬ್ಬ ಪಂಡಿತನ ತುತ್ತಲ್ಲವೆಂಬುದು ನಿಜ. ಆದರೆ, ಎಲ್ಲ ದ್ರಾವಿಡಭಾಷೆಗಳ ಪರಿಚಯ, ಕನ್ನಡದ ಆಳವಾದ ಅಭ್ಯಾಸ, ಜನರ ಆಡುಮಾತಿನಲ್ಲಿಯ ಪ್ರಯೋಗಗಳ ಗುರುತುಗಳುಳ್ಳ ಹಲವು ಪಂಡಿತರು ಕನ್ನಡ ಭಾಷಾವಿಜ್ಞಾನವನ್ನು ಬರೆಯಲು ತೊಡಗಿದ ಸಂದರ್ಭದಲ್ಲಿ, ಶ್ರೀ. ಕೃಷ್ಣಭಟ್ಟರ ಈ ಉಪನ್ಯಾಸಗಳು ಒಳ್ಳೆಯ ಸಹಾಯವನ್ನು ನೀಡಬಲ್ಲವು.

ಎರಡನೆಯದಾದ ಸ್ವರಪ್ರಕರಣದಲ್ಲಿ, ಕನ್ನಡದಲ್ಲಿ ಬಳಕೆಗೆ ಬಂದಿರುವ ಐ ಔ ಲಿಪಿಗಳ ಉಚ್ಚಾರದ ವಿಷಯವು ಚರ್ಚಿತವಾಗಿದೆ. ಮುಖ್ಯವಾಗಿ, ಐಕಾರದ ಉಚ್ಚಾರದ ವಿಷಯದಲ್ಲಿ, ಕಾಲ್ಡ್‌ವೆಲ್ಲರು ಅದನ್ನು ಎಯ್-ಎಇ-ei ಎಂಬುದಾಗಿ ವಿಭಜಿಸಿದ್ದರಿಂದುಂಟಾದ ಗೊಂದಲವನ್ನು ಕೃಷ್ಣಭಟ್ಟರು ಸಮಾಲೋಚಿಸಿದ್ದಾರೆ. ವಿವಿಧ ದ್ರಾವಿಡ ಭಾಷೆಗಳ ಉಚ್ಚಾರ

ವೈಶಿಷ್ಟ್ಯಗಳನ್ನು ಪರಾಮರ್ಶಿಸಿ "ಅಯ್" ಎಂಬ ಉಚ್ಚರಣೆಯನ್ನು "ಅಯ್" ಎಂದು ಬರೆಯುವದಕ್ಕೆ ಬದಲು "ಐ" ಎಂಬ ಲಿಪಿಯನ್ನು ಬಳಸಿಕೊಳ್ಳಲಾಗಿದೆಯೆಂಬುದೆ ಉಪನ್ಯಾಸಕರ ಅಭಿಪ್ರಾಯವಾಗಿದೆ. ಉದಾಹರಣೆಗಾಗಿ ಎತ್ತಿಕೊಂಡ ಕೈ–ಮೈ ಎಂಬ ಶಬ್ದಗಳನ್ನು ಒರೆಗೆ ಹಚ್ಚಿ ನೋಡಲಾಗಿದೆ. ಹಸ್ತಾರ್ಥದಲ್ಲಿ ಕಯ್ ಎಂದಿದ್ದುದೇ ಕೈ ಆಗಿದೆಯೆಂದೂ, ಭತ್ತದ ಸಸಿ ಅಥವಾ ಪಯಿರು ಎಂಬರ್ಥದ 'ಕೆಯ್' ಎಂಬುದು ಕೆಯ್ಯೇ ಎಂದೂ, ಹಿಂದೆಲ್ಲ ಮೆಯ್ (ದೇಹ) ಎಂದಿದ್ದ ಶಬ್ದವು ಮೈಯೆಂದಾಗುವುದು ಸಾಧುವಲ್ಲವೆಂದೂ ಲೇಖಕರ ಪ್ರತಿಪಾದನದ ಮಥಿತಾರ್ಥವಾಗಿದೆ.

ವ್ಯಂಜನ ಪ್ರಕರಣದಲ್ಲಿ ಕನ್ನಡದಲ್ಲಿ ಪಕಾರವು ಹಕಾರವಾದ ವಿಚಾರವನ್ನೂ, ಸಕಾರಕ್ಕೆ ಹೆಚ್ಚಾಗಿ ಚಕಾರವು ಕ್ವಚಿತ್ತಾಗಿ ಯ-ತ-ದ-ವ-ಕಕಾರಗಳು— ಬರುವುದನ್ನೂ ವ-ಮಕಾರಗಳ ಪರಸ್ಪರ ವಿನಿಮಯವನ್ನೂ ಸುದೀರ್ಘವಾಗಿ ಚರ್ಚಿಸಿದ್ದಾರೆ. ಪಕಾರದ ಮಹಾಪ್ರಾಣದ ರೂಪಗಳು ಎಲ್ಲೂ ಸಿಕ್ಕುವುದಿಲ್ಲವಾದ್ದರಿಂದ, ಪಕಾರವು ಮಹಾಪ್ರಾಣವನ್ನು ಪಡೆದು ಹಕಾರಕ್ಕೆ ತಿರುಗಿಕೊಂಡಿತೆಂಬ ವಾದಕ್ಕೆ ಆಧಾರವಿಲ್ಲವೆಂದು ಅದನ್ನು ಇವರು ಅಲ್ಲಗಳೆಯುತ್ತಾರೆ. ಆದರೆ ಪಕಾರವು ಹಕಾರವಾಗಿ ರೂಪಾಂತರಿಸಿಕೊಂಡುದಕ್ಕೆ ಸರಿಯಾದ ಯಾವ ವಿಕಾಸಮಾರ್ಗವೂ ಕಾಣದೆ, ಸದ್ಯಕ್ಕೆ ಹಕಾರವು ದ್ರಾವಿಡ ವರ್ಣವಲ್ಲ; ದ್ರಾವಿಡ ಭಾಷೆಗಳೊಳಗೆ ಪ್ರಾಕೃತ ಭಾಷೆಗಳ ನಿಕಟಸಂಪರ್ಕವಿದ್ದ ನುಡಿಯಾದುದರಿಂದ ಕನ್ನಡದಲ್ಲಿ ಅದು ಪ್ರವೇಶಗೊಂಡಿತೆಂದು ಹೇಳುವುದೇ ಯುಕ್ತಿಯುಕ್ತವಾಗಿದೆ ಎಂಬ ಅಭಿಪ್ರಾಯವನ್ನು ಲೇಖಕರು ಇಟ್ಟುಕೊಂಡಿದ್ದಾರೆ.

ಅನುಬಂಧ ಪ್ರಕರಣದಲ್ಲಿ ಱಟಿ ಕುಳ ಕ್ಷಳ ಎಂಬ ಲಿಪಿಸಂಜ್ಞೆಗಳು ಹುಟ್ಟುವುದಕ್ಕೆ ಕಾರಣ, ಮತ್ತು ಱ ಳ ಅಕ್ಷರಗಳಿಗೆ ಈ ಹೆಸರು ಇಟ್ಟ ಬಗೆ ಇವುಗಳ ಮೀಮಾಂಸೆ ಬಂದಿದೆ. ಆದರೆ, ಕನ್ನಡ ವರ್ಣಗಳ ಸಂಖ್ಯೆಯನ್ನು ನಿರ್ದೇಶಿಸುವಾಗ ಕೇಶಿರಾಜನು, ಳ ಕಾರದ ವರೆಗಿನ ೫೨ ವರ್ಣಗಳನ್ನು ಹೇಳಿ, ಅವುಗಳಲ್ಲಿ ಕ್ಷಳ (ಸಂಸ್ಕೃತ ಳ) ಕಳೆದು 'ಕುಳ' (ಕನ್ನಡ ಳ) ಕೂಡಿಸು ಎಂದು ಹೇಳಿರುವನಷ್ಟೆ. ಈ ವಿಷಯವಾಗಿ ಶ್ರೀ. ಕೃಷ್ಣ ಭಟ್ಟರು ಪ್ರತಿಪಾದಿಸಿದಂತೆ 'ಕುಳ' ಎಂದರೆ ಆ ಕಾಲದಲ್ಲಿ  (ಕು) ವರ್ಣದಂತಿರುವ 'ಳ' ಎಂದರ್ಥವಾದುದರಿಂದ ಚಾಕ್ಷುಷ (ಲಿಪಿ) ವರ್ಣಮಾಲೆಯಲ್ಲಿಯೂ ಈ ಕುಳ ಕ್ಷಳ (ಕ್ಷದ ಹತ್ತಿರದ ಳ) ಗಳು ಭಿನ್ನವಾಗಿದ್ದ

ವೆಂದು ತೋರುತ್ತದೆ. ಆದರೆ, ಈ ಕ್ಷಳ ಯಾವುದೆಂಬ ಪ್ರಶ್ನೆಗೆ ಇಲ್ಲಿ ಸಮಾಧಾನವಿಲ್ಲ. ಇನ್ನು, ಱಕಾರದಂತೆಯೇ ಇಂದು ಅಸ್ತಿತ್ವವನ್ನು ಕಳೆದು ಕೊಂಡು ರಕಾರವಾಗಿ ಮಾರ್ಪಟ್ಟಿರುವ ಱಕಾರವನ್ನು ಕುರಿತು ವಿವೇಚಿಸುವ ಸಂದರ್ಭದಲ್ಲಿ ಇದಕ್ಕೂ ಒಂದು ಸಂಜ್ಞೆ ಅಗತ್ಯವಷ್ಟೆ! ಕುಳ ಸಂಜ್ಞೆಯ ರೀತಿಯಲ್ಲಿಯೇ, ಈ ಱಕಾರವನ್ನು (ಅ ಲಿಪಿಯಂತಿರುವುದರಿಂದ) ಅಱ ಎಂದು ಹೆಸರಿಸುವುದು ಯುಕ್ತವೆಂದು ಅವರು ಸೂಚಿಸಿದ್ದಾರೆ. ಇದು ಪಂಡಿತಗ್ರಾಹ್ಯವಾಗಬಹುದೆಂದೂ ತೋರುತ್ತದೆ.

ಸಂಸ್ಥೆಯ ಪರವಾಗಿ ನಡೆದ ಈ ಉಪನ್ಯಾಸಗಳಲ್ಲಿ ಅಡಕವಾಗಿರುವ ವಿಷಯದ ಹಸ್ತಪ್ರತಿಗೆ ೧೯೫೪ ನೆಯ ಇಸವಿಯಲ್ಲಿ ಮದ್ರಾಸ ಸರಕಾರದಿಂದ ೫೦೦ ರೂಪಾಯಿಗಳ ಸಂಭಾವನೆ ದೊರೆತಿರುವುದು ಸಂತೋಷದ ಸಂಗತಿಯಾಗಿದೆ.

ನಮ್ಮ ಮಾತನ್ನು ಮುಗಿಸುವ ಮೊದಲು, ಈ ಗ್ರಂಥದಲ್ಲಿಯ ಅಡಿಟಿಪ್ಪಣಿಗಳ ಬಗ್ಗೆ ಒಂದು ಮಾತು ಹೇಳಬೇಕು. ಅಡಿಟಿಪ್ಪಣಿಗಳಲ್ಲಿ ಕೇವಲ ಪ್ರಮಾಣ ಸೂಚನೆಗಳನ್ನಾಗಲಿ ಅಭಿಪ್ರಾಯ ಭೇದಗಳನ್ನಾಗಲಿ ಲೇಖಕರು ಕೊಟ್ಟಿಲ್ಲ. ಅನ್ಯಮತ ಖಂಡನೆ ಮತ್ತು ಸ್ವಮತ ಮಂಡನೆ ಕೂಡ ಅನೇಕ ಅಡಿಟಿಪ್ಪಣಿಗಳಲ್ಲಿ ಬಂದಿವೆ; ಅವು ಅವರ ಪ್ರತಿಪಾದನೆಗೆ ಪೂರಕವಾದ ವಿಚಾರಗಳನ್ನೊಳಗೊಂಡಿವೆ. ಅಡಿಟಿಪ್ಪಣಿಗಳ ಈ ವೈಶಿಷ್ಟ್ಯವನ್ನು ವಾಚಕರು ಅವಶ್ಯವಾಗಿ ಗಮನಿಸಬೇಕು.

ಈ ಪುಸ್ತಕದಲ್ಲಿ ಬಳಸಬೇಕಾದ ಕೆಲವು ಸಂಕೇತಗಳ ಪಡಿಯಚ್ಚುಗಳು ಈ ಭಾಗದಲ್ಲಿ ದೊರೆಯುವಂತಿರಲಿಲ್ಲ. ಅವುಗಳನ್ನು ನಮಗಾಗಿ ಲೇಖಕರು ಮಂಗಳೂರಲ್ಲಿ ತಯಾರಿಸಿ ಕಳುಹಿಸುವ ಶ್ರಮವನ್ನು ವಹಿಸಿಕೊಂಡರು. ಈ ಗ್ರಂಥ ಪ್ರಕಟನೆಯಲ್ಲಿ ಶ್ರಮ-ಆಸ್ಥೆ ವಹಿಸಿದ ಶ್ರೀ. ಸೇಡಿಯಾಪು ಕೃಷ್ಣಭಟ್ಟ ಅವರಿಗೆ ಸಂಸ್ಥೆ ತುಂಬ ಋಣಿಯಾಗಿದೆ.

ಧಾರವಾಡ
೧೩—೫—೧೯೫೫

**ಸ. ಸ. ಮಾಳವಾಡ**
ಡಾಯರೆಕ್ಟರ
ಕನ್ನಡ ಸಂಶೋಧನ ಸಂಸ್ಥೆ

# ಪ ರಿ ವಿ ಡಿ

—●—

# ಬಿನ್ನಹ

ಅಡಿಟಿಪ್ಪಣಿಗಳನ್ನು, ಮುದ್ರಣದ ಸೌಲಭ್ಯಕ್ಕಾಗಿ, ಆಯಾ ಪ್ರಕರಣದ ಕೊನೆಯಲ್ಲಿ ಪ್ರತ್ಯೇಕಿಸಿ ಮುದ್ರಿಸಲಾಗಿದೆ. ವಾಚಕರು ಉಪನ್ಯಾಸವನ್ನೋದುವಾಗ, ಅಲ್ಲಲ್ಲಿ ಕಾಣಿಸಿದ ಅಂಕೆಯನ್ನು ಕೃಪೆಯಿಟ್ಟು ಅನುಲಕ್ಷಿಸಿ, ಆಯಾ ಟಿಪ್ಪಣಿಯನ್ನು ಆಗಲೇ ಓದಿಕೊಂಡು ಅಭಿಪ್ರಾಯಗಳನ್ನು ಪೂರ್ಣವಾಗಿ ಗ್ರಹಿಸಿಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ.

ಸೇಡಿಯಾಪು ಕೃಷ್ಣಭಟ್ಟ

ಶ್ರೀಃ

# ಕನ್ನಡ ವ್ಯಾಕರಣದ ಕೆಲವು ಸಮಸ್ಯೆಗಳು

## ಪ್ರಥಮ ಭಾಗ

## ಕನ್ನಡ ವರ್ಣಗಳು

### ೧. ಪೀಠಿಕಾ ಪ್ರಕರಣ

#### ವ್ಯಾಕರಣ ಮತ್ತು ಭಾಷಾವಿಜ್ಞಾನ

ಕನ್ನಡ ಭಾಷೆಯಲ್ಲಿ, ಸ್ಥೂಲಮಾನದಲ್ಲಿ ಹೇಳುವುದಾದರೆ, ಸುಮಾರು ಎರಡು ಸಾವಿರ ವರುಷಗಳಿಂದ ಸಾಹಿತ್ಯ ರಚನೆಯಾಗುತ್ತಿದೆ ಯೆನ್ನಬಹುದು.[೧] ಯಾವ ಭಾಷೆಯಲ್ಲೇ ಆಗಲಿ ಗ್ರಂಥರಚನೆ ಸಾಕಷ್ಟು ಬೆಳೆದಮೇಲೆಯೇ ವ್ಯಾಕರಣಾದಿ ಭಾಷಾತತ್ತ್ವ ವಿಚಾರಗಳು ಹುಟ್ಟುತ್ತವೆ. ಇದು ಹಲವು ಭಾಷೆಗಳ ಇತಿಹಾಸದಿಂದಲೂ ಸಿದ್ಧವಾಗುತ್ತದೆ; ವಿವೇಕವೂ ಹಾಗೆಯೇ ನುಡಿಯುತ್ತದೆ. ಕನ್ನಡವಾದರೂ ಈ ಸಾಮಾನ್ಯ ನಿಯಮಕ್ಕೆ ಅಪವಾದವಾಗಿಲ್ಲ. ಇಲ್ಲಿ ಒಂಬತ್ತನೆಯ ಶತಮಾನದಿಂದ ಈ ವಿಚಾರಗಳು ಬರತೊಡಗಿದುದಕ್ಕೆ ಆಧಾರಗಳು ದೊರಕುತ್ತವೆ. ವ್ಯಾಕರಣ, ನಿಘಂಟು, ಛಂದಸ್ಸು, ಅಲಂಕಾರ ಮೊದಲಾದ ಶಾಸ್ತ್ರಗಳೆಲ್ಲ ಭಾಷಾತತ್ತ್ವವನ್ನೇ ಅವಲಂಬಿಸಿರುವುವಾದರೂ, ವ್ಯಾಕರಣವೇ ಅದನ್ನು ವಿಶಿಷ್ಟವಾಗಿ ಪ್ರತಿಪಾದಿಸುವ ಜ್ಞಾನಶಾಖೆಯೆಂದು ಹೇಳಿದರೆ ತಪ್ಪಾಗಲಾರದು. ಇಂದು **'ಭಾಷಾವಿಜ್ಞಾನ'** ವೆಂದು ಕರೆಯಲ್ಪಡುವ ಶಾಸ್ತ್ರದ ಹುಟ್ಟು, ಬೆಳವಣಿಗೆ, ಹಬ್ಬುಗೆಗಳನ್ನು ನೋಡಿದರೂ ಅದರ ಮುಖ್ಯಾಂಗವು ವ್ಯಾಕರಣವೆಂದೇ ತೋರದಿರದು.

ಮನುಷ್ಯನ ಜ್ಞಾನದ ವಿವಿಧಾಂಗಗಳನ್ನು ಸಂಪೂರ್ಣವಾಗಿ ಒಂದರಿಂದ ಮತ್ತೊಂದನ್ನು ಬೇರ್ಪಡಿಸಲಾಗುವುದಿಲ್ಲ. ಒಂದು ಶಾಸ್ತ್ರದಲ್ಲಿ ಇನ್ನೊಂದು ಶಾಸ್ತ್ರದ ವಿಷಯಗಳು ಬಂದೇ ಬರುತ್ತವೆ; ಬರಲೇಬೇಕಾಗುತ್ತವೆ. ನಮ್ಮ ಪ್ರಾಚೀನ ಶಾಸ್ತ್ರಕಾರರ ಅಭಿಪ್ರಾಯವೂ ಹಾಗೆಯೇ ಇತ್ತು.

ಆಯುರ್ವೇದದಲ್ಲಿ ಕೂಡ 'ಅತ್ರ ಸಕಲಶಾಸ್ತ್ರಾಣಾಂ ಪಾರಿಷದತ್ವಾತ್' ಎಂದು ಮುಂತಾಗಿ ಹೇಳಿರುತ್ತಾರೆ. ಹೀಗಿರುವಾಗ ಭಾಷಾವಿಜ್ಞಾನ ಅಥವಾ ಭಾಷಾಶಾಸ್ತ್ರ ಎಂಬ ಹೊಸ ಹೆಸರೊಂದೇಕೆ? ವ್ಯಾಕರಣವೆಂದೇ ಅದನ್ನೂ ಹೇಳಬಾರದೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದರಲ್ಲಿಯೂ ನಮ್ಮ ದೇಶದ ಪುರಾತನ ಸಂಸ್ಕೃತ ವ್ಯಾಕರಣ ಗ್ರಂಥಗಳನ್ನು ಓದಿ ನೋಡಿದರೆ, ಶಬ್ದವ್ಯುತ್ಪತ್ತಿಯ ಕುರಿತು ಅವುಗಳಲ್ಲಿರುವ ವಿವೇಚನೆಗಳನ್ನೂ ಶಬ್ದ ಪ್ರವೃತ್ತಿ-ನಿಮಿತ್ತದ ಕುರಿತು ಮತ್ತು ಭಾಷೆಯ ಉದಯದ ಕುರಿತು ಅವುಗಳಲ್ಲಿರುವ ವಿಚಾರಗಳನ್ನೂ ಗಮನಿಸಿದರೆ, ಆ ಪ್ರಶ್ನೆ ಮತ್ತಷ್ಟು ಬಲಗೊಳ್ಳುತ್ತದೆ. ಶಬ್ದವ್ಯುತ್ಪತ್ತಿಯ ಕುರಿತು ಆಧುನಿಕ ಭಾಷಾವಿಜ್ಞಾನ ಗ್ರಂಥಗಳಲ್ಲಿಯೂ ಕಾಣುವ ವಿವೇಚನೆಯ ವೈಪುಲ್ಯವನ್ನು ಕಂಡೇ ಪ್ರಾಯಃ ಕೆಲವರು Philology ಎಂಬುದನ್ನು, ಆ ಶಬ್ದದ ಮೂಲಾರ್ಥವನ್ನು ಲಕ್ಷಿಸಿ, 'ಶಬ್ದ-ವ್ಯುತ್ಪತ್ತಿ-ಶಾಸ್ತ್ರ' ಎಂದು ಕನ್ನಡದಲ್ಲಿ ಭಾಷಾಂತರಿಸಿಕೊಂಡು ದಾಗಿರಬೇಕೆಂದು ತೋರುತ್ತದೆ.[೨] ಹಾಗಾದರೆ ಭಾಷಾವಿಜ್ಞಾನವೆಂದರೆ ಪ್ರೌಢಗ್ರಾಹ್ಯವಾದ ವ್ಯಾಕರಣವೆಂದೇ ಹೇಳೋಣವೆ?

ಹಾಗೆನ್ನಕೂಡದು. ವ್ಯಾಕರಣವೆಂದರೆ ಯಾವುದೊಂದು ಭಾಷೆಯ ಯಾವುದೊಂದು ಅವಸ್ಥೆಯ ಸ್ವರೂಪವನ್ನು ಪರೀಕ್ಷಿಸಿ ಅದರ ಅರ್ಥಪ್ರಕಾಶನ ವಿಧಾನಗಳನ್ನು ನಿರ್ದೇಶಿಸುವ ಶಾಸ್ತ್ರ. ಭಾಷಾವಿಜ್ಞಾನದ ಜೀವಾಳವು ತುಲನಾತ್ಮಕ. ಒಂದು ಭಾಷೆಯ ಅನೇಕಾವಸ್ಥೆಗಳ ತುಲನೆ, ಅದರ ಸಜಾತೀಯ ಹಾಗೂ ವಿಜಾತೀಯ ಭಾಷೆಗಳ ಪರಸ್ಪರ ಸ್ವರೂಪ-ನಿಯಮಗಳ ತುಲನೆ, ಅದರಿಂದ ನಿಷ್ಪನ್ನವಾಗುವ ಸಿದ್ಧಾಂತಗಳ ಕ್ರೋಢೀಕರಣ ಮೊದಲಾದುವು ಭಾಷಾವಿಜ್ಞಾನದ ಕಾರ್ಯಗಳಾಗಿವೆ. ಯಾವುದಾದರೊಂದು ಭಾಷೆಯಲ್ಲಿ ಶುದ್ಧವಾಗಿ—ಸುಲಭಗ್ರಾಹ್ಯವಾಗಿ, ಅಂದವಾಗಿ ಬರೆಯುವುದೂ ಮಾತಾಡುವುದೂ ಹೇಗೆ ಎಂಬುದನ್ನು ತೋರಿಸಿಕೊಡುವುದೇ ಸಾಮಾನ್ಯವಾಗಿ ವ್ಯಾಕರಣದ ಪ್ರಯೋಜನ ಮಾನವರ ವಿಶಿಷ್ಟತೆಯಾದ ಮಾತಿನ ಮೂಲವೇನು? ಅದರ ಪ್ರಾರಂಭಿಕ ರೂಪಗಳೇನು? ಅವರ ಬೆಳವಣಿಗೆಯ ಹಜ್ಜೆಗಳಾವುವು? ಆ ಅಂದಿನ ಅವರ ಸ್ಥಿತಿ-ಗತಿಗಳು ಎಷ್ಟರ ಮಟ್ಟಿಗೆ ಆಯಾ ಭಾಷೆಗಳಲ್ಲಿ, ನುಡಿಗಳಲ್ಲಿ,[೩] ಗೋಚರವಾಗುತ್ತವೆ? ಪ್ರಪಂಚದಲ್ಲಿ ಮೂಲಭಾಷೆಗಳೆಷ್ಟು? ಅವುಗಳ ಅಥವಾ ಅದರದರ ಶಾಖೆಗಳಾವುವು? ಆಯಾ ನುಡಿಗಳು ರೂಪಾಂತರ ಹೊಂದುವ ಕಾರಣಗಳೇನು,

ನಿಯಮಗಳೇನು? ಯಾವ ಯಾವ ಭಾಷಾಭೇದಗಳು ಎಷ್ಟರ ಮಟ್ಟಿಗೆ ಪರಪುಷ್ಟಗಳು? ಇದರಿಂದ ಮಾನವರ ಪರಸ್ಪರಾವಲಂಬಿತೆ ಹಾಗೂ ಏಕತೆ ಎಷ್ಟರ ಮಟ್ಟಿಗೆ ದೃಗ್ಗೋಚರವಾಗುತ್ತದೆ ? — ಇತ್ಯಾದಿ ನಾನಾ ಪ್ರಗಲ್ಭ-ವಿಷಯಗಳ ಪರಿಜ್ಞಾನವೇ ಭಾಷಾವಿಜ್ಞಾನದ ಪ್ರಯೋಜನವಾಗಿದೆ. ಹೀಗೆ ವ್ಯಾಕರಣ – ಭಾಷಾವಿಜ್ಞಾನಗಳು ಭಿನ್ನವೆನಿಸಿಕೊಳ್ಳುವುವಾದರೂ ನಮ್ಮ ದೇಶದ ವಿದಗ್ಧ ವ್ಯಾಕರಣ ಗ್ರಂಥಗಳಲ್ಲಿ 'ಭಾಷಾವಿಜ್ಞಾನ' ಎಂಬ ಜ್ಞಾನ ಶಾಖೆಗೆ ಸಹಜವಾಗಿ ಸೇರುವ ಎಷ್ಟೋ ತತ್ವವಿಚಾರಗಳು ತುಂಬಿವೆಯೆಂದು ಹೇಳದೆ ನಿರ್ವಾಹವಿಲ್ಲ. ನಮ್ಮವರು ಪ್ರೌಢವ್ಯಾಕರಣ ಗ್ರಂಥಗಳನ್ನು 'ಶಬ್ದಶಾಸ್ತ್ರ' ಎಂದೇ ಕರೆದಿರುವರು. ಒಂದು ವೇಳೆ ಭಾಷಾವಿಜ್ಞಾನವೆಂಬ ಈ ನವೀನ ಶಾಸ್ತ್ರವು— ಇನ್ನೂ ತಪ್ಪು ಹಜ್ಜೆಗಳನ್ನಿಡುತ್ತ, ತೊದಲು ನುಡಿಯುತ್ತ ತನ್ನ ಚೇಷ್ಟೆಗಳಿಂದ ಕೈಗೆ ಸಿಕ್ಕಿದುದನ್ನು ಕೆಡಿಸುತ್ತ ಬೆಳೆಯುತ್ತಿರುವ ಈ ಶಿಶುಶಾಸ್ತ್ರವು—ನಮ್ಮ ದೇಶದಲ್ಲಿಯೇ ಹುಟ್ಟಿ, ಬೆಳೆದು, ರೂಪುಗೊಂಡುದಾಗಿರುತ್ತಿದ್ದರೆ, ಮೊದಲೇ ಬೆಳೆದು ಬಲಿತಿರುವ ನಮ್ಮ ವ್ಯಾಕರಣ ಶಾಸ್ತ್ರ ಅಥವಾ ಶಬ್ದ ಶಾಸ್ತ್ರದ ಒಂದು ರೂಪವಿಲಾಸವೆನ್ನಿಸಿಕೊಂಡು 'ಶಬ್ದ ಶಾಸ್ತ್ರ'ವೇ ಎಂದೋ ಅಥವಾ 'ಶಬ್ದವಿದ್ಯೆ' ಎಂದೋ ಹೆಸರು ಪಡೆಯುತ್ತಿತ್ತು. ಏಕೆಂದರೆ ಭಾರತೀಯರಾದ ನಾವು ಸಂಸ್ಕೃತಿವಶಾತ್ ಬಹುಧಾ ವಸ್ತುಗಳೊಳಗೆ ವೈಷಮ್ಯಕ್ಕಿಂತ ಹೆಚ್ಚಾಗಿ ಸಾಮ್ಯವನ್ನೇ ಕಂಡು ನುಡಿಯುವ ಸಂಶ್ಲೇಷಕ ಮತಿಪ್ರಧಾನರು.[೪] ಇದು ವಿಶ್ಲೇಷಕ ಮತಿಪ್ರಧಾನರಾದ ಪಾಶ್ಚಾತ್ಯರು ಸಾಕಿದ ಶಿಶು ತಾತ್ಕಾಲಿಕ ಭಾಷಾಶುದ್ಧಿಯೇ ಪ್ರಯೋಜನವಾದ ತಮ್ಮ ವ್ಯಾವಹಾರಿಕ ವ್ಯಾಕರಣ ( Grammar ) ಕ್ಕೂ, ತಾವು ಮಾಡತೊಡಗಿದ ಶಬ್ದಮೂಲ ಸಂಶೋಧನ ರೂಪವಾದ ಶಾಸ್ತ್ರ ಪ್ರಯತ್ನಕ್ಕೂ ಸಾಮ್ಯಕ್ಕಿಂತ ಭೇದವೇ ಅಧಿಕವಾಗಿ ಕಂಡುಬಂದುದರಿಂದ Philology ( ಶಬ್ದಶಾಸ್ತ್ರ ) ಎಂಬ ಹೆಸರನ್ನಿಟ್ಟು ಅವರು ವ್ಯವಹರಿಸತೊಡಗಿ, ಸಂಸ್ಕೃತದ ಸಂಪರ್ಕವುಂಟಾಗಿ ಅದು ತುಲನಾತ್ಮಕವಾಗಿ ಬೆಳೆದ ಮೇಲೆ ಮೊದಲಿನ ಹೆಸರು ಅನ್ವರ್ಥವಲ್ಲವೆಂದು ತಿಳಿದು, Comparative Philology (ತುಲನಾತ್ಮಕ ಶಬ್ದಶಾಸ್ತ್ರ) ಎಂಬ ಹೆಸರನ್ನು ಬಳಕೆಗೆ ತಂದರು. ಅದು ಕೂಡ ಸಾಕಷ್ಟು ತದರ್ಥವ್ಯಂಜಕವಲ್ಲವೆಂದು ತಿಳಿದು ಕೆಲವರು Glottology ( ವಾಗ್ವಿದ್ಯೆ ಅಥವಾ ಭಾಷಾಶಾಸ್ತ್ರ) ಎಂಬ ಹೆಸರನ್ನೂ ಕಲ್ಪಿಸಿದರು. ಆದರೆ ಈ ಹೆಸರು ಕ್ಲಿಷ್ಟವಾದುದರಿಂದಲೋ ಏನೋ ಹೆಚ್ಚು ಬಳಕೆಗೆ ಬಾರದೆ Science of Language (ಭಾಷಾವಿಜ್ಞಾನ) ಎಂಬ

ಲಲಿತವಾದ ಹೆಸರೂ ರೂಢಿಗೆ ಬರುವಂತಾಯಿತು. ಪರಿಣಾಮವಾಗಿ ಇಂದು Philology ಅಥವಾ Comparative Philology ಎಂದರೆ ಭಾಷಾವಿಜ್ಞಾನ ಎಂಬರ್ಥವನ್ನೆ ಕೊಡುವಂತಾಗಿದೆ. ಹೀಗೆ ಬೆಳೆದು ಬೆಳೆಯುತ್ತಿರುವ ಈ ಶಾಸ್ತ್ರದಲ್ಲಿ ತುಲನಾತ್ಮಕ ವ್ಯಾಕರಣ ಮಾತ್ರವಲ್ಲದೆ, ನಿರುಕ್ತ ಶಿಕ್ಷಾ ಛಂದಸ್ ಇತ್ಯಾದಿ ಶಬ್ದವಿದ್ಯೆಯ ಸಕಲ ಅಂಗಗಳಿಗೂ ಪ್ರವೇಶವಿರುವುದರಿಂದ, ನಾವಾದರೂ ವಿಶಾಲಾರ್ಥವುಳ್ಳ 'ಭಾಷಾವಿಜ್ಞಾನ' ವೆಂಬ ಪದವನ್ನೇ ಈ ಶಾಸ್ತ್ರಕ್ಕೆ ಹೆಸರಾಗಿ ಬಳಸಿಕೊಳ್ಳುವುದು ಇದರ ಮುಂದಿನ ಬೆಳವಣಿಗೆಯ ದೃಷ್ಟಿಯಿಂದಲೂ ಹಿತವೆನ್ನಬಹುದು 'ಶಬ್ದಶಾಸ್ತ್ರ' ಎಂಬುದನ್ನೇ ಬಳಸುತ್ತ ಬಂದರೆ ಅದು ಹೆಚ್ಚು ಕಡಿಮೆ ವ್ಯಾಕರಣ ಕ್ಷೇತ್ರದಲ್ಲಿಯೇ ಸಂಕುಚಿತವಾಗಿಹೋಗುವ ಭಯವಿದೆ.

ಮಳೆ ಬಾರದೆ ಗುಡ್ಡದಲ್ಲಿ ಹುಲ್ಲು ಮೊಳೆಯುವುದಿಲ್ಲ. ಪರಿಸ್ಥಿತಿಯ ಅನುಕೂಲ್ಯವು ಸಾಕಷ್ಟು ಇಲ್ಲದೆ ಯಾವುದೂ ಮೇಲೆ ಬರುವುದಿಲ್ಲ. ನಮ್ಮ ಪುರಾತನರು ಶಬ್ದವಿದ್ಯೆಯ ತತ್ವಗಳನ್ನು ಬಹಳ ಸೂಕ್ಷ್ಮವಾಗಿ ಪರಾಮರ್ಶಿಸಿರುವರಾದರೂ 'ಭಾಷಾವಿಜ್ಞಾನ'ವು ನಮ್ಮಲ್ಲಿ ಸಾಕಷ್ಟು ಬೆಳೆಯಲಿಲ್ಲ. ಏಕೆಂದರೆ, ಮೊದಲೇ ನಿವೇದಿಸಿಕೊಂಡಂತೆ ಭಾಷಾವಿಜ್ಞಾನದ ಜೀವಾಳವು ತುಲನಾತ್ಮಕ ಒಂದು ಭಾಷೆಯನ್ನಾಡುವವನು ಇನ್ನೊಂದು ಭಾಷೆಯಲ್ಲಿ ವ್ಯವಹರಿಸತೊಡಗಿದಾಗ ಮಾತ್ರ, ಆ ಎರಡು ಭಾಷೆಗಳ ನಿಯಮಗಳ ತುಲನೆ ಮಾಡುವ ಪ್ರೇರಣೆ, ಅವನು ಶಬ್ದತತ್ವವಿವೇಚಕಮತಿಯಾಗಿದ್ದಲ್ಲಿ, ಉಂಟಾಗುವುದು. ಅಂಥ ಆವಶ್ಯಕತೆ— ಸ್ವಾಯತ್ತವಾದ ಗ್ರಾಮಗಳು, ಸ್ವಸಂಪೂರ್ಣವಾದ ನಾಡುಗಳು, ಪರಂಪರೆಯಿಂದ ಬಂದ ಒಂದೇ ವಿದ್ಯಾವಿಚಾರದಲ್ಲಿ ನಿಷ್ಠೆ ಇವು ಸಾಮಾನ್ಯ ನಿಯಮವಾಗಿದ್ದ ಕಾಲದಲ್ಲಿ— ನಮ್ಮ ವಿದ್ವಾಂಸರಿಗೆ ಉಂಟಾಗಲಿಲ್ಲ. ಅಲ್ಲದೆ ನಮ್ಮ ಸಕಲ ಲೌಕಿಕ ಶಾಸ್ತ್ರಗಳ ಬೆಳವಣಿಗೆಯನ್ನುಕುಂಠಿತವಾಗಿ ಮಾಡಿದ 'ಐತಿಹಾಸಿಕಮತಿ'ಯ ಅಭಾವವೂ ನಮ್ಮ 'ಶಬ್ದಶಾಸ್ತ್ರ'ವು 'ಭಾಷಾವಿಜ್ಞಾನ' ವಾಗಿ ಮಾರ್ಪಡದಿದ್ದುದಕ್ಕೆ ಒಂದು ಪ್ರಬಲವಾದ ಕಾರಣವಾಗಿದೆ. ಹೀಗಿದ್ದರೂ ಅನೇಕ ಎಂದರೆ ಸೈಕ ಭಾಷಾವ್ಯವಹಾರವು ಯತ್‌ಕಿಂಚಿತ್ತಾದರೂ ಉಂಟಾಗಿದ್ದ ಎಡೆಗಳಲ್ಲಿ ತುಲನಾತ್ಮಕ ಪ್ರಯತ್ನಗಳು ಅಲ್ಪಸ್ವಲ್ಪವಾದರೂ ಆಗಿವೆಯೆಂಬುದು ನಮ್ಮ ಪ್ರಾಚೀನ ಗ್ರಂಥಗಳ ಪರಿಶೀಲನದಿಂದ ತಿಳಿದು ಬರುವುದು.

ಸಂಸ್ಕೃತದಲ್ಲಿ ಶಬ್ದಶಾಸ್ತ್ರವು ಅಪಾರವಾಗಿ, ಬೇರೆಲ್ಲಿಯೂ ಬೆಳೆಯದಷ್ಟು, ಬೆಳೆದಿತ್ತು; ಅದರ ಬೇರೆ ಅಂಗಗಳೆನ್ನಬಹುದಾದ ಶಿಕ್ಷಾ ನಿರುಕ್ತ ಛಂದಸ್ ಮೊದಲಾದ ವಿದ್ಯೆಗಳೂ ಪರಿಪುಷ್ಟವಾಗಿದ್ದುವು. ಆದರೂ—ಆದಿ ಕಾಲದವರದಲ್ಲ. ಅನಂತರ ಕಾಲೀನರ – ಏಕವಿದ್ಯಾನಿಷ್ಠೆಯಿಂದಾಗಿ, ಆ ವಿವಿಧಾಂಗಗಳ ಸಮನ್ವಯದಿಂದ ಹುಟ್ಟಬೇಕಾಗಿದ್ದ 'ಸಮಗ್ರ ಶಬ್ದ-ವಿಜ್ಞಾನ'ವು ಉಂಟಾಗಲಿಲ್ಲ; ಐತಿಹಾಸಿಕಮತಿಯ ಹಾಗೂ ತುಲನಾತ್ಮಕ ವಿಚಾರಪ್ರೇರಕ ಸಂನಿವೇಶದ ಅಭಾವದಿಂದಲೂ, ಆ ಶಬ್ದ ಶಾಸ್ತ್ರವು 'ಭಾಷಾಶಾಸ್ತ್ರ'ವಾಗಿ ಪರಿಣಮಿಸಲಿಲ್ಲ. ಸಂಸ್ಕೃತ ವಿದ್ವಾಂಸರಿಗೆ ಇತರ ಭಾಷಾಭಾಷಿಗಳ ಸಂಪರ್ಕ ಸಾಕಷ್ಟು ಇರಲಿಲ್ಲ. ಇದ್ದರೂ ಸಂಸ್ಕೃತಕ್ಕೆ ಮಿಗಿಲಾದ ಅಥವಾ ಸಮಾನಸ್ಕಂಧವಾದ, ಇಲ್ಲವೆ ಸಾಕಷ್ಟು ಸಾಹಿತ್ಯ ಸಂಪತ್ತಿಯಾದರೂ ಇದ್ದ ಯಾವ ಇತರ ಭಾಷೆಯ ಸಾಹಚರ್ಯವೂ ಅದರ ಬೆಳವಣಿಗೆಯ ಕಾಲದಲ್ಲಿ ಉಂಟಾಗಲಿಲ್ಲ. ಸಂಪರ್ಕವಿದ್ದಿದ್ದರೆ, ಹೆಚ್ಚಿನ ಮಟ್ಟಿಗೆ ಇದ್ದುದು ಸಂಸ್ಕೃತಜನ್ಯವಾದ ಪ್ರಾಕೃತಗಳದು. ಸಂಸ್ಕೃತಕ್ಕೂ ಅವಕ್ಕೂ ಕೇವಲ ಶಬ್ದರೂಪ ಭೇದವೇ ಮುಖ್ಯ ಭೇದವಾಗಿದ್ದುದು. ಸಂಸ್ಕೃತದಲ್ಲಿ ಶಬ್ದಶಾಸ್ತ್ರವು ಗೆಲವಿನಲ್ಲಿ ಹುಟ್ಟಿ ಬೆಳೆದುದು ಕ್ರಿಸ್ತಪೂರ್ವ ಶತಮಾನಗಳಲ್ಲಿ. ಆಗ ದ್ರಾವಿಡ ಭಾಷೆಗಳಲ್ಲಿ ಗ್ರಂಥರಚನೆಯೇ ಉಂಟಾಗಿರಲಿಲ್ಲವೆನ್ನಬಹುದು; ಅವು ಆಗ ಕೇವಲ ಆಡುನುಡಿಗಳಾಗಿದ್ದುವು. ಆದುದರಿಂದ ಅವುಗಳ ತುಲನೆಯ ಲಾಭ ಸಂಸ್ಕೃತ ವಿದ್ವಾಂಸರಿಗೆ ದೊರಕಲಿಲ್ಲ. ಮತ್ತಿನ ಕಾಲದ ಸಂಸ್ಕೃತ ವಿದ್ವಾಂಸರು ಪೂರ್ವಗ್ರಂಥಗಳ ಪರಿಧಿಯಿಂದ ಹೊರಗೆ ಕಣ್ಣುಹಾಕದೆ ಅನುವಾದ ವ್ಯಾಖ್ಯಾನಗಳಲ್ಲಿಯೂ ವಾದಗಳಲ್ಲಿಯೂ ತಮ್ಮ ಪ್ರತಿಭೆಯನ್ನೆಲ್ಲ ವೆಚ್ಚ ಮಾಡಿದರು ಹೀಗಾಗಿ ಸಂಸ್ಕೃತದಲ್ಲಿ 'ಭಾಷಾವಿಜ್ಞಾನ'ದ ಜೀವಾಳವಾದ ತುಲನಾತ್ಮಕ ವಿಚಾರಕ್ಕೆ ಆಸ್ಪ-ದವೇ ದೊರೆಯಲಿಲ್ಲ.

ಈ ದೃಷ್ಟಿಯಿಂದ ನೋಡಿದರೆ ಕನ್ನಡದ ಕ್ಷೇತ್ರವು ಸಂಸ್ಕೃತದ ಕ್ಷೇತ್ರಕ್ಕಿಂತ ಈ ಶಾಸ್ತ್ರಕ್ಕೆ ಅನುಕೂಲತರವಾಗಿತ್ತೆಂದು ಹೇಳಬೇಕು. ಕನ್ನಡದ ಹಳೆಯ ವಿದ್ವಾಂಸರು ಹೆಚ್ಚಿನವರು ಜೈನರಾಗಿದ್ದುದರಿಂದ ಜೈನ ಗ್ರಂಥಗಳ ಮುಖ್ಯ ಭಾಷೆಯಾದ ಪ್ರಾಕೃತಗಳ ಜ್ಞಾನವು ಅವರಿಗೆ ಅವಶ್ಯವಾಗಿತ್ತು. ಪ್ರಾಕೃತದ ಕೂಲಂಕಷ ಜ್ಞಾನಕ್ಕೆ ಸಂಸ್ಕೃತವು ಅನಿವಾರ್ಯ. ಅಲ್ಲದೆ ಅಂದಿನ ಸಾಮಾನ್ಯ ಶಾಸ್ತ್ರಭಾಷೆ ಸಂಸ್ಕೃತವೇ ಆಗಿತ್ತು. ಹೀಗೆ ಅಂದಿನ ಕನ್ನಡ

ಗ್ರಂಥಕಾರರಿಗೆ ಮೂರು ನಾಲ್ಕು ಭಾಷೆಗಳ ಪರಿಚಯವಿರುವುದಿತ್ತು. ಹಳೆಯ ಕನ್ನಡ ಕವಿಗಳು ಹೆಚ್ಚಾಗಿ ಉಭಯ ಕವಿತಾವಿಶಾರದರಾಗಿದ್ದರು; 'ಚತುರ್ಭಾಷಾಕವಿಚಕ್ರವರ್ತಿ' ಎಂಬುದೂ ನಮ್ಮ ಕನ್ನಡ ಕವಿಗಳ ಬಿರುದುಗಳಲ್ಲೊಂದು. ಹೀಗೆ ತುಲನಾತ್ಮಕ ವಿಚಾರಕ್ಕೆ ಕ್ಷೇತ್ರವು ತಕ್ಕ ಮಟ್ಟಿಗಾದರೂ ಅನುಕೂಲವಾಗಿದ್ದುದರಿಂದಲೇ, ಕವಿರಾಜಮಾರ್ಗ, ಶಬ್ದಮಣಿ ದರ್ಪಣಗಳಲ್ಲಿ ಭಾಷಾವಿಜ್ಞಾನದ 'ಬೀಜ'ಗಳನ್ನಿಂದು ನಾವು ಕಾಣುವಂತಾಗಿದೆ. ಆದರೆ ನಮ್ಮ ಚತುರ್ಭಾಷಾಚಕ್ರವರ್ತಿಗಳ ಸಾಮ್ರಾಜ್ಯವು ಕನ್ನಡ, ಸಂಸ್ಕೃತ ಮತ್ತು ಅದರ ವಿಕಾರಗಳಾದ ಪ್ರಾಕೃತಗಳು—ಇಷ್ಟೇ ಪ್ರದೇಶಗಳಲ್ಲಿ ಪರಿಮಿತವಾಗಿತ್ತು; ಹೊರತು, ಕನ್ನಡಕ್ಕೆ ಸಜಾತೀಯವಾದ ಇತರ ದ್ರಾವಿಡ ಭಾಷೆಗಳ ಪರಿಚಯವು ಅವರಿಗೆ ಸುತರಾಂ ಇರಲೇ ಇಲ್ಲ. ದ್ರಾವಿಡ ಭಾಷೆಗಳೊಳಗೆ ಮೊದಲಾಗಿ ವ್ಯವಸಾಯಗೊಂಡ ತಮಿಳು ಕನ್ನಡಗಳು ಕಣ್ಣುತೆರೆದು ಎದ್ದು ನಿಲ್ಲುವುದರೊಳಗೆ, ಗೀರ್ವಾಣವಾಣಿ—ಯಾವ ಭಾಷೆಯಿಂದಾಗಿ ಹಿಂದುಕುಶ್ ಪರ್ವತದಿಂದ ಹಿಡಿದು ಮಣಿಪುರದವರೆಗೂ, ಹಿಮಾಚಲದಿಂದ ಮೊದಲುಗೊಂಡು ಕನ್ಯಾಕುಮಾರಿಯವರೆಗೂ ನಾನಾ ಜನಕುಲ (Race) ದವರು ನಾನಾ ಭಾಷಾಭಾಷಿಗಳು ನಾನಾ ಮತಧರ್ಮಾನುಯಾಯಿಗಳು ವಾಸಿಸುತ್ತಿರುವ, ಹಾಗೂ ಇತಿಹಾಸದ ಯಾವ ಕಾಲದ ಸ್ಥಿತಿಯನ್ನು ಪರೀಕ್ಷಿಸಿದರೂ ಸಂಪೂರ್ಣವಾಗಿ ಒಂದೇ 'ರಾಜ್ಯ'ವಾಗಿ ಇರದಿದ್ದ ಈ ಭರತಖಂಡವು ಒಂದು ದೇಶ, ಒಂದೇ ಸಂಸ್ಕೃತಿಯುಳ್ಳ ಒಂದು ಜನಾಂಗದ ಜನ್ಮಭೂಮಿ, ಒಂದು ರಾಷ್ಟ್ರ ಎಂದೆನಿಸಿತೋ ಆ ವೀರ್ಯಸಂಪನ್ನವಾದ ಸಂಸ್ಕೃತ ಭಾಷೆ — ಅಖಿಲ ಭಾರತದ ಶಾಸ್ತ್ರಭಾಷೆಯೂ ಬೇರೆ ಬೇರೆ ಮಾತೃಭಾಷೆಯ ವಿದ್ವಜ್ಜನರ ಸಾಧಾರಣ ಭಾಷೆಯೂ ಆಗಿತ್ತು; ಎಂದರೆ ಅದು ರಾಷ್ಟ್ರಭಾಷೆಯಾಗಿ ಹೋಗಿತ್ತು. ಆದುದರಿಂದ ಕನ್ನಡಿಗರಿಗೂ ತಮಿಳರಿಗೂ ಪರಸ್ಪರ ಭಾಷಾ ಪರಿಚಯದ ಆವಶ್ಯಕತೆಯುಂಟಾಗಲಿಲ್ಲ. ಹೇಗೆ ಇಂದು ಕೂಡ ಸಾಧಾ-ರಣವಾಗಿ ಕನ್ನಡ ವಿದ್ವಾಂಸರಿಗೆ ತಮಿಳಿನ ಪರಿಚಯವಿಲ್ಲವೋ, ಹೇಗೆ ತಮಿಳು ವಿದ್ವಾಂಸರಿಗೆ ಕನ್ನಡದ ಗಂಧವೂ ಅನವಶ್ಯವೆನ್ನಿಸಿದೆಯೋ ಹಾಗೆಯೇ ಕ್ರಿಸ್ತಶಕದ ಆರಂಭದಿಂದಲೂ ಇತ್ತೆಂದು ಹೇಳಿದರೆ ತಪ್ಪಾಗಲಾರದು. ಕನ್ನಡನಾಡಿನ ವೀರಶೈವ ಮತದ ಕೆಲವು ಬೇರುಗಳು ತಮಿಳು ಸಾಹಿತ್ಯದಲ್ಲಿ ಅಡಗಿದ್ದರೂ, ಕನ್ನಡನಾಡಿನ ಶ್ರೀವೈಷ್ಣವರ 'ಉಭಯ ವೇದಾಂತ'ದ ಒಂದಂಗವು ತಮಿಳಿನಲ್ಲಿ ಹುದುಗಿದ್ದರೂ 'ಕರ್ನಾಟಕ

ಸಂಗೀತ' ಎಂಬ ಹೆಸರಿನಿಂದಲೇ ಇಂದೂ ಮೆರೆಯುತ್ತಿರುವ ನಮ್ಮ ದಾಕ್ಷಿಣಾತ್ಯ ಸಂಗೀತದ 'ತಲೆಕಾವೇರಿ' ಕನ್ನಡ ಸಾಹಿತ್ಯದಲ್ಲಿಯೇ ಉದ್ಭವಿಸಿ ರೂಪುಗೊಂಡಿದ್ದರೂ ಹಿಂದಿನ ಕಾಲದ ಶಾಸ್ತ್ರಪ್ರಯತ್ನಗಳಲ್ಲಿ ಪರಸ್ಪರ ವ್ಯವಹಾರವು ಈ ಭಾಷೆಗಳೊಳಗೆ ಒಂದಿಷ್ಟು ನಡೆದಂತೇನೂ ತೋರಿಬರುವುದಿಲ್ಲ; ಈಗಲಾದರೂ ಸಾಕಷ್ಟು 'ಕೊಳ್ಕೊಡೆ' ಆಗಿರುವದಿಲ್ಲ.[೫] ಭಾರತದ ಕೆಲವು ಭಾಷೆಗಳು ಸಂಸ್ಕೃತಜನ್ಯವಲ್ಲ ಎಂಬ ತಿಳಿವು ಹಬ್ಬಿದ ಮೇಲೆ ಕೆಲವರಲ್ಲಿ ಕಾಣುವ ಒಂದು ಪರಿಣಾಮವೆಂದರೆ, ದ್ರಾವಿಡ ಭಾಷೆ ಸಂಸ್ಕೃತಿಗಳ ಅಭಿಮಾನವೆನ್ನಿಸಿಕೊಳ್ಳುವ ಒಂದು ತರದ ಪಕ್ಷಪಾತದ ಉದಯ. ವ್ಯಕ್ತವಾಗಿ ಹೇಳುವುದಾದರೆ, ನಮ್ಮ ದೇಶದ ಪುರಾತನ ಇತಿಹಾಸಕ್ಕಾಗಲಿ ಸಂಸ್ಕೃತಿಗಾಗಲಿ ಸಂಬಂಧಪಟ್ಟ ಯಾವುದೊಂದು ವಿಚಾರವನ್ನು ಮಾಡುವ ಕಾಲದಲ್ಲಿ ಸಾಕಷ್ಟು ಆಧಾರವಿಲ್ಲದೆ ಇದು ದ್ರಾವಿಡ, ಇದು ಆರ್ಯ ಎಂದು ಸ್ವಚ್ಛಂದತೆಯಿಂದ ವಿಭಾಗಿಸುವ ಪ್ರವೃತ್ತಿ; ಯಾವುದೊಂದು ಸಂಸ್ಕೃತ ಶಬ್ದಕ್ಕೆ ಹೋಲುವ ಯಾವುದೋ ಒಂದು 'ದೇಶ್ಯ' ಶಬ್ದವು ಕಂಡಂತಾದೊಡನೆ, ಇದರಿಂದಲೇ ಅದು ಹುಟ್ಟಿತೆಂದು ಮಾಡಿಬಿಡುವ ತೀರ್ಪು; ಸಂಸ್ಕೃತದ ಸಂಪರ್ಕವಾಗುವ ಕಾಲದಲ್ಲಿ ನಮ್ಮ ಭಾಷೆಗಳು ಸ್ವಸ್ವರೂಪವನ್ನು ಸಾಕಷ್ಟು ಕಾದುಕೊಳ್ಳಲಿಲ್ಲವೆಂಬ ಪಶ್ಚಾತ್ತಾಪದ ಫಲವಾಗಿ, ಇಂದು ರೂಢವಾಗಿರುವ ಸುಲಭ ಶಬ್ದಗಳನ್ನು ಬಿಟ್ಟು ರೂಢಿಗೊಳ್ಳದ, ನಾಡಿನ ಬಹು ಜನರಿಗೆ ಸರಿಯಾಗಿ ಅರ್ಥವೇ ಆಗಲಾರದ, ಪರಿಣಾಮವಾಗಿ ಅನ್ಯಥಾಪ್ರಯುಕ್ತವಾಗಿ ಅರ್ಥವನ್ನುಕೆಡಿಸಿಕೊಂಡು ವಿಫಲವಾಗಲಿರುವ ಶಬ್ದಗಳನ್ನು ಎಲ್ಲಿಂದಲೋ ತಂದು ತುರುಕುವ ಪ್ರಯತ್ನ; ಇತ್ಯಾದಿ, ಇತ್ಯಾದಿ. ಆದರೆ ಇರುವ ಶಬ್ದವನ್ನು ಬಿಟ್ಟು ಸಮಾನಾರ್ಥಕವಾದ ಮತ್ತೊಂದು ಶಬ್ದವನ್ನು ಪ್ರಯೋಗಿಸಿದ ಮಾತ್ರದಿಂದ ಭಾಷೆ ವೃದ್ಧಿಯಾದಂತಾಗಲಿಲ್ಲ. ಭಾಷೆ ಬೆಳೆಯುವುದು ಭಾವ ಎಂದರೆ ( Idea ) ಅರ್ಥದಿಂದ. ನಮ್ಮ ಆಲೋಚನೆ ಬೆಳೆದರೆ ಸಹಜವಾಗಿ ನಮ್ಮ ಭಾಷೆ ಬೆಳೆಯುವುದು. ಸಂಸ್ಕೃತವೋ ಇಂಗ್ಲಿಷೋ ಬೆಳೆದುದು ಹೀಗೆ ಹೊರತು ರೂಢವಾದ ಅನ್ಯ ಭಾಷಾ ಶಬ್ದಗಳಿಗೆ ಪ್ರತಿಶಬ್ದಗಳನ್ನು ನಿರ್ಮಾಣ ಮಾಡಿದುದರಿಂದಲ್ಲ. ದ್ರಾವಿಡ ಭಾಷಾಭಿಮಾನವೆಂದರೆ ಆರ್ಯ ಅಥವಾ ಗೌಳ ಭಾಷೆಗಳ ಮೇಲಿನ ದ್ವೇಷವಲ್ಲ. ನಾವು ಇಂದು ಹೇಗೆ ಇಂಗ್ಲಿಷ್ ಭಾಷೆಯನ್ನು ಅಪ್ಪಿಕೊಂಡಿರುವೆವೋ ಹಾಗೆಯೇ, ಅಥವಾ ಆ ಕಾಲದಲ್ಲಿ ಇದಕ್ಕಿಂತಲೂ ಹೆಚ್ಚಿನ ಅರ್ಹತೆಯಿಂದ, ನಮ್ಮ ಹಿರಿಯರು ಸಂಸ್ಕೃತ

ಭಾಷೆಯನ್ನು ಅಪ್ಪಿ ಹಿಡಿದುಕೊಂಡರು; ಮಾತ್ರವಲ್ಲ, ಆ ಜನಾಂಗವನ್ನೇ — ಅದು ಭಿನ್ನ ಜನಾಂಗವೆಂಬ ಐತಿಹಾಸಿಕರ ಮತ ಸತ್ಯವಾಗಿದ್ದಲ್ಲಿ— ಅಪ್ಪಿ ಕೊಂಡು ಕೂಡಿ ಬೆರೆದು ಬೆಳೆದು ದೈಹಿಕವಾಗಿಯೂ ಮಾನಸಿಕವಾಗಿಯೂ ಒಂದಾದುದರಿಂದ ಸರ್ವಾತ್ಮನಾ ಅವಿಭೇದ್ಯರಾಗಿ ಇರುವೆವು, ಎಂಬುದನ್ನು ಮರೆತು, – ನಾವು ವಿಶುದ್ಧ ದ್ರಾವಿಡ ಜನಕುಲದವರು; ಆರ್ಯರು ನಮ್ಮನ್ನು ತುಳಿದವರು; ನಮ್ಮ ಸಂಸ್ಕೃತಿಯನ್ನೂ ಭಾಷೆಯನ್ನೂ ಬೆಳೆಯಿಸಿ ದವರಲ್ಲ, ಕೆಡಿಸಿದವರು — ಎಂಬ ಅಜ್ಞಾನಜನಿತವಾದ ಪೀಡಿತಂಮನ್ಯ ತೆಯ ಫಲವಾಗಿ ತಮಿಳರೊಳಗೆ ಕೆಲವರಲ್ಲಿ ಮೊಳೆದು ಬೆಳೆಯುತ್ತಿರುವ ಭಾವಗಳನ್ನು, ಉತ್ತರದಿಂದ ಬಂದಿರುವುದನ್ನೆಲ್ಲ ಸಾರಾಸಾರ ವಿಚಾರವಿಲ್ಲದೆ ಒತ್ತರಿಸುವ ಪ್ರವೃತ್ತಿಗಳನ್ನು -- ಅನಾದಿಯಿಂದಲೂ ಉತ್ತರ ದಕ್ಷಿಣ ಭಾರತ ಗಳ ಸಂಸ್ಕೃತಿ ಸಂಗಮಸ್ಥಾನ— ಸಮನ್ವಯಸ್ಥಾನವಾಗಿರುವ ನಮ್ಮ ಕನ್ನಡ ನಾಡಿನ ಪುರಾತನ ಪರಂಪರೆಯ ಐಶ್ವರ್ಯವನ್ನು ಮರೆತು — ನಮ್ಮಲ್ಲಿಯೂ ಹುಟ್ಟಿಸಿಕೊಳ್ಳುವ ಕುರುಹುಗಳು ಕಾಣುತ್ತಿವೆ; ಸತ್ಯೈಕನಿಷ್ಠೆ ಇರಬೇಕಾ ಗಿರುವ ಸಂಶೋಧನ ಪ್ರಯತ್ನಗಳಲ್ಲಿ ಕೂಡ ಈ ಪಕ್ಷಪಾತದ ಕಳೆಗಳು ಮೊಳೆಯುತ್ತಿವೆ. ಇದರಿಂದ ಸತ್ಪರಿಣಾಮವಾಗದು. ನಮಗೆ ದೈವಾ ಯತ್ತವಾಗಿ ಅನೇಕ ಭಾಷಾಸಂಪತ್ತು ದೊರಕಿರುವಾಗ ಅದನ್ನು ಪ್ರಾಮಾ ಣಿಕ ಬುದ್ಧಿಯಿಂದ ಶಾಸ್ತ್ರಾಭಿವೃದ್ಧಿಗೆ ಅಂದರೆ ಅಖಿಲ ಮಾನವ ಕುಲದ ನಿಜವಾದ ಜ್ಞಾನಾಭಿವೃದ್ಧಿಗೆ ಬಳಸಿಕೊಳ್ಳೋಣ. ಸ್ವಲ್ಪ ವಿಷಯಾಂತರ ವಾಯಿತು, ಮನ್ನಿಸಿರಿ.

## ಹಳಗನ್ನಡದಲ್ಲಿ ತುಲನಾತ್ಮಕ ವಿಚಾರಗಳು

ಕನ್ನಡ ಲಕ್ಷಣ ಗ್ರಂಥಗಳೊಳಗೆ ನಮಗೆ ದೊರಕಿರುವವುಗಳಲ್ಲಿ ಹಳೆಯದು ನೃಪತುಂಗನ ಕವಿರಾಜಮಾರ್ಗ. ಅದು ವಿಚಾರಗಳ ದೃಷ್ಟಿ ಯಿಂದ ಬಹಳ ಮಟ್ಟಿಗೆ ಸಂಸ್ಕೃತ ಲಕ್ಷಣ ಗ್ರಂಥಗಳ ಅನುಯಾಯಿ. ಸಾಹಿತ್ಯಲಕ್ಷಣಗಳ ಮಟ್ಟಿಗೆ ಹೇಳುವುದಾದರೆ, ಕನ್ನಡದಲ್ಲಿ ಆವರೆಗೆ ಆ ಕ್ಷೇತ್ರದಲ್ಲಿ ಹೆಚ್ಚು ಬೆಳವಣಿಗೆಯಾಗಿದ್ದಿಲ್ಲವಾದುದರಿಂದ ಅನ್ಯಥಾ ಆಗು ವುದು ಸಂಭಾವ್ಯವಾಗಿದ್ದಿಲ್ಲವೆಂದು ಹೇಳಬಹುದು. ಒಬ್ಬ ಪ್ರತಿಭಾಶಾಲಿ ಸ್ವತಂತ್ರ ಮಾರ್ಗಕ್ಕೆ ಕಾಲಿಡುತ್ತಿದ್ದರೆ ಆಗುತ್ತಿತ್ತು ಎಂಬ ಮಾತಿನಲ್ಲಿ ಹುರುಳಿಲ್ಲ; ಅಂಥವನು ಹುಟ್ಟಲಿಲ್ಲ, ಹುಟ್ಟಿದ್ದರೂ ಸಾಹಿತ್ಯಗೋಷ್ಠಿಗಳಲ್ಲಿ ಕಾವ್ಯವಿಮರ್ಶೆಗಳನ್ನು ಮಾಡುತ್ತಿದ್ದಿರಬಹುದು ಹೊರತು, ಶಾಸ್ತ್

ರಚನೆಗೆ ಕೈಹಾಕಿದ್ದು ಕಂಡುಬರುವುದಿಲ್ಲ; ಅದು ಹಾಗಿರಲಿ. ಆದರೂ ಕವಿರಾಜಮಾರ್ಗದಲ್ಲಿ ಭಾಷಾವಿಷಯಕವಾದ ತುಲನಾತ್ಮಕ ವಿಚಾರಗಳು ಸ್ವಲ್ಪ ಕಾಣಿಸಿಕೊಳ್ಳುತ್ತವೆ. ಅದರಲ್ಲಿರುವ ದಕ್ಷಿಣೋತ್ತರ ಮಾರ್ಗಗಳ ಮೀಮಾಂಸೆ ಕೇವಲ ಆಲಂಕಾರಿಕ ಎಂದರೆ ಕಾವ್ಯರೀತಿ ಭೇದದರ್ಶಕ ವಾಗಿ ಅಲ್ಲಿ ಕಾಣಿಸಿಕೊಳ್ಳುವುದಾದರೂ, ನೋಡುವೆಂ—ನೋೞ್ಪೆಂ, ಬೇಡುವೆಂ— ಬೇೞ್ಪೆಂ, ಇರಿಸುವೆಂ—ಇರಿಪೆಂ — ಇರಿಪ್ಪೆಂ, ಬರಿಸುವೆಂ— ಬರಿಪೆಂ—ಬರಿಪ್ಪೆಂ, ಎಂಬಿವು ಅರ್ಥದಲ್ಲಿ ಒಂದೇ, ಶಾಬ್ದಿಕವಾಗಿ ಮಾತ್ರ ಬೇರೆ ಎಂಬ 'ನುಡಿ'ಯ ವೈವಿಧ್ಯದ ಪ್ರತಿಪಾದನವೂ; ಸಾಮ್ಯಭ್ರಾಂತಿ ಯಿಂದ, ಸೂಡುವೆಂ, ಕೂಡುವೆಂ, ಕಾಡುವೆಂ, ತೋಡುವೆಂ ಎಂಬಿವು ಗಳನ್ನು ಸೂೞ್ಪೆಂ, ಕೂೞ್ಪೆಂ, ಇತ್ಯಾದಿಯಾಗಿ, ಅಥವಾ ಪರಸುವೆಂ, ಬೆರಸುವೆಂ ಎಂಬಿವುಗಳನ್ನು ಪರಪೆಂ ಬೆರಪೆಂ ಎಂದಾಗಿ ರೂಪಾಂತರಿಸ ಲಾಗದು, ಎಂದು ಕೊಟ್ಟ ಎಚ್ಚರವೂ ಆ ಗ್ರಂಥಕಾರನ ತುಲನಾತ್ಮಕ ಪ್ರವೃತ್ತಿಯ ದ್ಯೋತಕವಾಗಿವೆ. ಇವು ಕೇವಲ ವ್ಯಾಕರಣ ವಿಷಯಗಳು, ಆಲಂಕಾರಿಕವಲ್ಲ; ಮೃದು-ಕಠಿನ-ಬಂಧವಿಚಾರ ಮಾತ್ರವು ಇದಲ್ಲ. ಏಕೆಂದರೆ ಸಕಾರ-ಪಕಾರಗಳ ಧ್ವನಿಮಾರ್ದವ-ಕಾಠಿನ್ಯಗಳ ತಾರ ತಮ್ಯವು ಅಲ್ಲಿ ಪ್ರತಿಪಾದಿತವಾಗಿಲ್ಲ; ಆಯಾ ಶಬ್ದಸ್ವರೂಪ ಭೇದವೂ ಶಬ್ದಶುದ್ಧಿಯೂ ಪ್ರತಿಪಾದಿತವಾಗಿವೆ. ಅಲಂಕಾರಶಾಸ್ತ್ರ ದೃಷ್ಟಿಯಿಂದ ಇದು ಇಲ್ಲಿ ಬಂದುದು ಅಪ್ರಸ್ತುತವೆನ್ನಬಹುದಾದರೂ, ಗ್ರಂಥಕರ್ತನ ಭಾಷಾತುಲನಾತ್ಮಕ ದೃಷ್ಟಿ ನಮಗಿಲ್ಲಿ ಕಾಣುತ್ತದೆ. ಅದು ಆ ಗ್ರಂಥದ ಬೇರೆ ಭಾಗಗಳಲ್ಲಿಯೂ ಕಂಡುಬರುತ್ತದೆ. ಕನ್ನಡ ನುಡಿಯ ಬೇರೆ ಬೇರೆ ಸ್ವರೂಪಗಳನ್ನು ಅವನು ಪರಿಶೀಲನ - ಮಾಡಿದುದಕ್ಕೆ— 'ವಾಸುಗಿಯು- ಮಱಿಪಲಾರದೆ ಬೇಸಱುಗುಂ ದೇಸಿ ಬೇಱೆವೇಱಪ್ಪುದಱಿಂ' (೧-೪೬) ಎಂಬ ಮಾತೂ, ಅವನು ಮಾಡಿದ ತಿರುಳ್ಗನ್ನಡದ ಅವಸ್ಥಾನ ವಿಚಾರವೂ (೧-೩೭) ಸಾಕ್ಷ್ಯಗಳಾಗಿವೆ.

ನಾಗವರ್ಮನು ತನ್ನ ಶಬ್ದಸ್ಮೃತಿ ಮತ್ತು ಭಾಷಾ-ಭೂಷಣ ಎಂಬ ಎರಡು ವ್ಯಾಕರಣ ಗ್ರಂಥಗಳಲ್ಲಿಯೂ ವರ್ಣಮಾಲೆಯ ಕುರಿತು ಸಂಸ್ಕೃತ ಕನ್ನಡಗಳನ್ನು ಹೋಲಿಸಿದ್ದಾನೆ. ಸಂಸ್ಕೃತದಲ್ಲಿಲ್ಲದ, ಆದರೆ ಕನ್ನಡಕ್ಕೆ ಸಹಜವಾಗಿದ್ದ 'ಳ ಱ ೞ'ಗಳ ಉಚ್ಚಾರಸ್ವರೂಪವನ್ನೂ ನಿರ್ದೇಶಿಸಿ ದ್ದಾನೆ. (ಲ ರ ಡ ಗ್ರಹಣದೆ ಳ ಱ ೞಾಕ್ಷರಮಕ್ಕುಂ— ಶಬ್ದಸ್ಮೃತಿ)

ಮತ್ತು ಕನ್ನಡದಲ್ಲಿ ಮಹಾಪ್ರಾಣಗಳು ಪ್ರಾಯಃ ಇಲ್ಲವೆಂದೇ ಅಭಿಪ್ರಾಯ ಪಟ್ಟಿದ್ದಾನೆ. 'ನಾತ್ರ ಪ್ರಾಯೇಣ ವರ್ಗಾಣಾಂ ದ್ವಿತೀಯಚತುರ್ಥಾಃ' ( ಭಾಷಾಭೂಷಣ. ಸೂ-೧೧ ) ಮತ್ತು ಶಷಗಳು ಋೂ ಋೂ ಌ ೡ ಗಳೂ ಇಲ್ಲವೆಂದಿದ್ದಾನೆ. ಆದರೆ ಅಚ್ಚಗನ್ನಡ ವರ್ಣಮಾಲೆಯ ಕುರಿತು ಹೆಚ್ಚಿನ ವಿಚಾರವನ್ನು ಮಾಡಿದವನು ಕೇಶಿರಾಜನು. 'ಒಳವು ಮಹಾಪ್ರಾಣಂಗಳ್ ವಿಳಸತ್ ಕರ್ಣಾಟ ಭಾಷೆಯೊಳ್ ಕೆಲವು ನಿಜೋಜ್ವಳಮಾಗಿ' ಎಂದು ನಾಗವರ್ಮನ ಮತಕ್ಕೆ ವಿರುದ್ಧವಾಗಿ, ಸಂಖ್ಯಾನುಕರಣಗಳಲ್ಲಿ ಮಾತ್ರವಲ್ಲದೆ, ಸಹಜವಾಗಿಯೂ ಮಹಾಪ್ರಾಣ ಕನ್ನಡದಲ್ಲಿ ಉಂಟೆಂಬ ಯಥಾರ್ಥವಲ್ಲದ ನಿರ್ಣಯಕ್ಕೆ ಅವನು ಬಂದಿದ್ದರೂ ಅವನ ಪರಿಶ್ರಮಕ್ಕೆ ನಾವು ಮೆಚ್ಚಲೇಬೇಕಾಗಿದೆ. ಮತ್ತು ಕನ್ನಡ ಧಾತುಗಳನ್ನು ಅವನು ಸಂಗ್ರಹಿಸಿದುದಕ್ಕೂ, ವಿಚಾರಕ್ಕಾಗಿ ಅವನು ಮಾಡಿದ ಪ್ರಯತ್ನಕ್ಕೂ ಕನ್ನಡಿಗರು ಅವನಿಗೆ ಚಿರಕೃತಜ್ಞರಾಗಿರಲೇಬೇಕು. ಅಲ್ಲದೆ ಭಾಷಾ-ವಿಜ್ಞಾನಕ್ಕೆ ಸಹಕಾರಿಗಳಾದ ಇನ್ನೂ ಎಷ್ಟೋ ವಿಚಾರಗಳನ್ನು ನಾವು ಅವನ ಗ್ರಂಥದಲ್ಲಿ ಕಾಣಬಹುದು. ಅವನ ತುಲನಾತ್ಮಕ ದೃಷ್ಟಿಗೆ ಶಬ್ದ-ಮಣಿದರ್ಪಣದ ಕೊನೆಯ ಪದ್ಯದೊಂದೇ ಸಾಕ್ಷ್ಯವು ಸಾಕಾಗಬಹುದು. ಅದರಲ್ಲಿವನು ಕನ್ನಡದ ವಿಶೇಷಗಳನ್ನು ತನಗೆ ಕಂಡಂತೆ ನಿರೂಪಿಸುವಾಗ, ಸಂಸ್ಕೃತವನ್ನೇ ಅನುಲಕ್ಷಿಸಿದ್ದನೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅವನು ನಿರೂಪಿಸುವ ಆ ಒಂಬತ್ತು ವಿಶೇಷಗಳು ಇವು :—

೧. ಗಮಕಸಮಾಸ
೨. ಱಱ ಕುಳ ಕ್ಷಳ
೩. ಶ್ರುತಿಸಹ್ಯಸಂಧಿ
೪. ಸಮುಚಿತವಾಗಿ ಬರ್ಪ ಸತಿಸಪ್ತಮಿ.
೫. ಸಮಸಂಸ್ಕೃತೋಕ್ತಿ.
೬. ವ ಮ ಹ ಪ ಭೇದ ( ವ ಮ ಹ ಪ+ಅಭೇದ )
೭. ಸಂಸ್ಕೃತದ ಅವ್ಯಯಗಳ ರಾಹಿತ್ಯ.
೮. ಶಿಥಿಲ ದ್ವಿತ್ವ
೯. ಯತಿವಿಲಂಘನ.

ಇವುಗಳೊಳಗೆ ೧, ೨, ೩, ೬, ೭, ೮, ೯ ಇವುಗಳು ಸಂಸ್ಕೃತವನ್ನೇ ಹೋಲಿಸಿ ಎತ್ತಿ ಹೇಳಿದ ವೈಲಕ್ಷಣ್ಯಗಳು. ಅವನು ಹೀಗೆ

ಕನ್ನಡದ ವಿಶೇಷಣಗ್ಳಳನ್ನು ಎತ್ತಿ ಹೇಳದಿರುತ್ತಿದ್ದರೆ ಅವನ ವ್ಯಾಕರಣವು ಒಂದಿಷ್ಟೂ ಅಪೂರ್ಣವೆನಿಸುತ್ತಿರಲಿಲ್ಲ. ಕನ್ನಡದ ತುಲನಾತ್ಮಕವಾದ ಅಭ್ಯಾಸವನ್ನು ಅವನು ಮಾಡಿದುದರಿಂದಲೇ ಈ ವಿಶೇಷ ವಿವರಣವು ಅವನ ಗ್ರಂಥಾಂತ್ಯದಲ್ಲಿ ಬಂದಿದೆಯೆಂಬುದರಲ್ಲಿ ಸಂದೇಹವಿದೆಯೆ ?

ಅವನು ತೋರಿಸಿದ ಈ ವೈಲಕ್ಷಣ್ಯಗಳೊಳಗೆ ಶ್ರುತಿಸಹ್ಯ ಸಂಧಿ, ಶಿಥಿಲ ದ್ವಿತ್ವ, ವ ಮ ಹ ಪ ಭೇದಾಭೇದ ಇವುಗಳೂ ಅವನು ಬೇರೆಡೆಯಲ್ಲಿ ವಿವರಿಸಿದ ಯ ವ ಲ ಗಳ ಸಾನುನಾಸಿಕತೆ ನಿರನುನಾಸಿಕತೆಗಳೂ ದ್ರಾವಿಡ ವರ್ಣಗಳ ಹಾಗೂ ಶಬ್ದಗಳ ಇತಿಹಾಸವನ್ನು ತಿಳಿಯುವುದಕ್ಕೆ ತುಂಬ ಸಹಾಯಕಗಳಾಗಿವೆ. ಅವನು ಮಾಡಿದ ಗಮಕಸಮಾಸ ವಿಚಾರವು ದ್ರಾವಿಡ ಭಾಷೆಗಳಲ್ಲಿ, ವಿಶೇಷವಾಗಿ ಕನ್ನಡದಲ್ಲಿ,ಪದಭೇದಗಳು ಶಾಸ್ತ್ರೀಯ ದೃಷ್ಟಿಯಿಂದ ಎಷ್ಟು ಎಂದು ವಿಭಾಗಿಸಲು ಅತ್ಯಂತ ಸಹಾಯಕವಾಗಿದೆ. ಅವನ ಸತಿಸಪ್ತಮಿಯ ವಿಚಾರದಿಂದ ಸಪ್ತಮೀ ವಿಭಕ್ತಿಯ ನಾನಾ ಸ್ವರೂಪ ಗಳನ್ನೂ ಅದರ ಅರ್ಥವಿಶೇಷಗಳನ್ನೂ ಅದರ ಇತಿಹಾಸವನ್ನೂ ಸಾಧಾರ ವಾಗಿ ವಿವೇಚಿಸಲು ಸಾಹಾಯ್ಯ ದೊರಕುತ್ತದೆ. ಅವನ ಸಂಸ್ಕೃತಾಪ್ಪಯ ಗಳ ರಾಹಿತ್ಯ ವಿಚಾರದಿಂದ ಬೇರೆ ಭಾಷೆಯ ಶಬ್ದಗಳು ಕನ್ನಡದಲ್ಲಿ, ಹಾಗೆಯೇ ಇತರ ಭಾಷೆಗಳಲ್ಲಿ, ಬಂದು ಸೇರುವ 'ವೇಷ' ಯಾವುದು ಮಾರ್ಗ ಯಾವುದು ಎಂದು ತಿಳಿದು, ಸಕಲ ಭಾಷೆಗಳ ಮೂಲಪದ ಸ್ವರೂಪವೇನು ಎಂದು ಅನುಮಾನಿಸುವುದಕ್ಕೆ ಬೆಂಬಲ ದೊರಕುತ್ತದೆ. ಇಷ್ಟೂ ಅಲ್ಲದೆ ಅವನಲ್ಲಿದ್ದ ಇನ್ನೊಂದು ವಿಶೇಷ ಅಪೂರ್ವವಾದುದು, ನಮ್ಮ ಶಾಸ್ತ್ರಕಾರರಲ್ಲಿ ಸಾಧಾರಣವಾಗಿ ಅಲಭ್ಯವಾಗಿರುವ ಐತಿಹಾಸಿಕ- ಮತಿಯ ಕಿಡಿ. ಉದಾಹರಣವೊಂದನ್ನು ನೋಡಿ:— ಇವು ಧಾತುಗಳು, ಇವುಗಳಿಗೆ ಈ ಪ್ರತ್ಯಯಗಳು ಸೇರಿ ಈ ಕ್ರಿಯಾಪದರೂಪಗಳುಂಟಾಗು ತ್ತವೆ — ಎಂದು ಹೇಳಿದರೆ ಸಾಧಾರಣ ವ್ಯಾಕರಣದ ಆ ಕೆಲಸವಾಯಿತು. ಇಷ್ಟನ್ನೇದಿದ ಸಾಮಾನ್ಯ ವಿದ್ಯಾರ್ಥಿಯ ಮನಸ್ಸಿನಲ್ಲಿ— ದೈವಾಯತ್ತವಾಗಿ ಕೆಲವು ಧಾತುಗಳು ಉದ್ಭವಿಸಿದುವು; ಕೆಲವು ಪ್ರತ್ಯಯಗಳೂ ಮೊದಲೇ ಉಂಟಾಗಿದ್ದಿರಬಹುದು; ವೈಯಾಕರಣನು ಅವುಗಳನ್ನು ಹೊಂದಿಸಿ ಪದಗಳನ್ನು ನಿರ್ಮಿಸಿದನು; ನಾವು ಅವುಗಳನ್ನು ಬಳಸುತ್ತೇವೆ— ಎಂಬ ಭಾವವು ಹುಟ್ಟುವಂತಾಗುತ್ತದೆ; ಹೀಗೆ ಹಲವರಲ್ಲಿ ಹುಟ್ಟಿದೆ.೩ ಆದರೆ ಕೇಶಿರಾಜನು, ಧಾತುವೆಂದರೆ ಶಾಬ್ದಿಕರ ಪ್ರಯತ್ನದಿಂದ ಸಂಶೋಧಿತ

ವಾಗುವ ಶಬ್ದರೂಪ ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ (ಸೂತ್ರ-೨೧೬). ಅವನ ೨೨೨ನೆಯ ಸೂತ್ರವನ್ನು ಪರಿಶೀಲಿಸಿದರೂ ಅವನ ಐತಿಹಾಸಿಕಬುದ್ಧಿ ಪ್ರಕಟವಾಗುತ್ತದೆ:—

> ಪರಿಭಾವಿಸೆ ಕಾಲತ್ರಯ
> ಪರಿಣಾಮಿಗಳೆನಿಸಿ ನೆಗೞ್ದ ಮೂಱುಂ ಕ್ರಿಯೆಯೊಳ್
> ನಿರುತಂ ಪ್ರತಿಷೇಧಕ್ರಿಯೆ
> ಬರೆ ಭೂತಾರ್ಥದೊಳೆ ಸಲ್ವುದೆಂಬರ್ ಪಿರಿಯರ್.
>
> (ಸೂ. ೨೨೨ ಶ. ದ.)

ಮಾಡಂ, ಬಾರಂ, ಇರದು ಇತ್ಯಾದಿಯಾದ ನಿಷೇಧ ಕ್ರಿಯಾಪದವು ಮೂರು ಕಾಲಗಳ ಪ್ರಕೃತಾರ್ಥಗಳಿಗೂ ಅಭಾವ (Negative) ರೂಪ ಕ್ರಿಯಾಪದವಾಗಿದ್ದರೂ, ಅದು ಸಹಜವಾಗಿ ಭೂತಾರ್ಥಕ ಎಂದು ಹಿರಿಯರು ಹೇಳುತ್ತಾರೆ ಎಂದರೆ, ಮೊದಲು ಅದು ಭೂತಕಾಲಕ್ಕೆ ಮಾತ್ರ ನಿಷೇಧರೂಪವಾಗಿತ್ತು; ಈಗ ಮೂರು ಕಾಲಗಳಿಗೂ ಅದೊಂದೇ ರೂಪವು ನಿಷೇಧಾರ್ಥವನ್ನು ಕೊಡುತ್ತಿದೆ — ಎಂದ ಹಾಗಾಯಿತು. ಅಭಾವ ಕ್ರಿಯಾಪದಕ್ಕೆ ಮೂರು ಕಾಲಗಳಲ್ಲಿಯೂ ಒಂದೇ ರೂಪ ಎಂಬ ಅವನ ಪ್ರತಿಪಾದನಕ್ಕೆ, ಆ ಕ್ರಿಯಾಪದರೂಪದ ಅರ್ಥದ ಚರಿತ್ರೆ ಅವಶ್ಯವಿರಲಿಲ್ಲ. ಆದರೆ ಅವನ ಅಂತರಂಗದಲ್ಲಿ ಐತಿಹಾಸಿಕಮತಿಯು ಅಂತವೊಂದು ಜಾಗರವಾಗಿದ್ದುದರಿಂದಲೇ ಆ ಮಾತನ್ನು ಅವನು, ಪ್ರಸ್ತಾವಕ್ಕೆ ಆವಶ್ಯಕವಲ್ಲದೆಯೂ, ಸೇರಿಸಿದ್ದಾನೆಂಬುದು ತಿಳಿಯಬಹುದಾಗಿದೆ. ಹೀಗೆ ಅವನು ಹೇಳಿದುದರಿಂದ ಅವನ ಮನಃಪ್ರವೃತ್ತಿ ನಮಗೆ ಗೊತ್ತಾದುದು ಮಾತ್ರವಲ್ಲ; ಅಭಾವ ಕೃದಂತದಲ್ಲಿ ಮಾಡದ, ಮಾಡದೆ ಇತ್ಯಾದಿಯಾಗಿ ದಕಾರವೇ ಏಕೆ ಇರುತ್ತದೆ ಎಂಬುದು ಸಕಾರಣವಾಗಿ ತಿಳಿಯುವಂತಾಗಿದೆ. ಹೀಗೆಯೇ ಗುಂ ಕುಂ ಪ್ರತ್ಯಯಗಳ ಅರ್ಥವಿವರಣದಲ್ಲಿಯೂ ಐತಿಹಾಸಿಕ ಪ್ರವೃತ್ತಿಯನ್ನು ತೋರಿಸಿದ್ದಾನೆ. ಅವನು ಮಾಡಿದ ಪದಾಂತ್ಯ ವ್ಯಂಜನ ಸ್ವರೂಪ ಮೀಮಾಂಸೆಯಿಂದಾಗಿ, ದ್ರಾವಿಡ ಭಾಷೆಗಳಲ್ಲಿ ಆರಂಭದಿಂದಲೂ ಸ್ವರಾಂತವಾಗಿದ್ದಿರಬಹುದಾದ ಮತ್ತು ಹಾಗಿಲ್ಲದಿದ್ದಿರಬಹುದಾದ ಪದಗಳು ಯಾವ ಯಾವವು ಎಂಬ ವಿಚಾರದಲ್ಲಿ ಬೆಳಕು ಬೀಳುವಂತಾಗಿದೆ.[೯] ಅವನ ಪ್ರಾಸಪರಿಮರ್ಶೆಯಿಂದ ಆನುಷಂಗಿಕವಾಗಿ, ೞಕಾರದ ಉಚ್ಚಾರದ ಇತಿಹಾಸವನ್ನು ಊಹಿಸಲು ಅವಕಾಶ ದೊರೆತಿದೆ.[೧೦] ಒಟ್ಟಾರೆ ಅವನಲ್ಲಿ ಭಾಷಾವಿಜ್ಞಾನಿಗೆ ಬೇಕಾದ ಮತಿಸಂಪತ್ತು ಚೆನ್ನಾಗಿತ್ತು.

ಭಟ್ಟಾಕಳಂಕನ ಶಬ್ದಾನುಶಾಸನದಲ್ಲಿಯೂ ಸಂಸ್ಕೃತ ಕನ್ನಡಗಳ ತುಲನಾತ್ಮಕ ವಿಚಾರಗಳು ಅಲ್ಲಲ್ಲಿ ಬಂದಿವೆಯಾದರೂ ಅವನೊಬ್ಬ ಶುಷ್ಕ ತಾರ್ಕಿಕನಾದುದರಿಂದ (ಕ್ಷಮೆ ಇರಲಿ) ಕನ್ನಡ ಭಾಷೆಯ 'ಸಾಜ' ವನು ಅಥವಾ ಜಾಯಮಾನವನ್ನು — ಹೀಗೆ ಹೇಳಬಹುದೆಂದಾದರೆ — ಕಂಡು ನುಡಿಯುವ 'ಮತಿ' ಅವನಿಗಿದ್ದಂತೆ ತೋರುವುದಿಲ್ಲ. ಅವನು ಉದಾಹರಿಸಿದ 'ಕನ್ನಡ' ಪ್ರಯೋಗಗಳೆಷ್ಟೋ ಸಂಸ್ಕೃತ ವಾಕ್ಯಗಳ ಅಕ್ಷರಶಃ ಭಾಷಾಂತರಗಳು. ಉದಾ: — ಕಮಂಡಲುವಿಂ ಛಾತ್ರನಂ ಕಂಡಂ, ಇತ್ಯಾದಿ. ಆದುದರಿಂದ ಅವನು ತೋರಿಸುವ ಕನ್ನಡ ಭಾಷಾಸ್ವರೂಪವನ್ನೆಲ್ಲ ಒಂದು ಕಾಲದ ರೂಢಿಯ ಪ್ರಮಾಣವೆಂದು ನಾವು ನಂಬಿ, ಆಧರಿಸಿ ವಿಚಾರಗಳನ್ನು ಮುಂದೊತ್ತುವುದು ಅಪಾಯಕರ. ಆದರೂ ಅವನು ಸಂಸ್ಕೃತ ಪ್ರಾಕೃತ ಕನ್ನಡ ಭಾಷೆಗಳಲ್ಲಿ ಆಗ ಉಪಲಬ್ಧವಾಗಿದ್ದ ಹೆಚ್ಚು ಕಡಿಮೆ ಎಲ್ಲಾ ಪ್ರಧಾನ ಶಬ್ದಶಾಸ್ತ್ರಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ, ಅವನೇ ಹೇಳುವಂತೆ 'ನಾನಾಮತ-ತರ್ಕ-ಕರ್ಕಶಮತಿ' ಯಾಗಿದ್ದುದರಿಂದ ಅನ್ಯತ್ರಒಂದೆಡೆಯಲ್ಲಿ ಉಪಲಬ್ಧವಾಗದಿರುವ ಅಮೂಲ್ಯವಾದ ಭಾಷಾತತ್ವವಿಚಾರಗಳು ಅವನ ಗ್ರಂಥದಲ್ಲಿ ತುಂಬಿವೆ. ಅನ್ವಯ, ವಿಭಕ್ತ್ಯರ್ಥವಿಚಾರ, ನಿರುಕ್ತಪ್ರಕಾರ, ಆಖ್ಯಾತಭೇದಗಳ ಅರ್ಥ ಇತ್ಯಾದಿ ವಿಷಯಗಳಲ್ಲಿ ಇಂದಿನ ಭಾಷಾವಿಜ್ಞಾನಿಗಳೂ ಅವಶ್ಯವಾಗಿ ತಿಳಿಯಬೇಕಾಗಿರುವ ವಿಚಾರಪ್ರಚೋದಕವಾದ ಜ್ಞಾನಸಂಪತ್ತು ಅದರಲ್ಲಿ ಅಡಕವಾಗಿದೆ.

## ನವೀನರ ಪ್ರಯತ್ನಗಳು

ಆದರೆ ಈಯೆಲ್ಲ ನಮ್ಮ ಕನ್ನಡ ವೈಯಾಕರಣರ ಪ್ರಯತ್ನಗಳಲ್ಲಿ ಕಾಣುವ ತುಲನಾತ್ಮಕ ವಿಚಾರವೆಂದರೆ, ವ್ಯಾಕರಣ ಸಮುದ್ರದೊಳಗೊಂದು ಬಿಂದು. ಕನ್ನಡ ಮೊದಲಾದ ನಮ್ಮ ಭಾಷೆಗಳ ತುಲನಾತ್ಮಕ ವಿಜ್ಞಾನಕ್ಕೆ ಅಡಿಗಲ್ಲು ಹಾಕಿದವರೆಂದರೆ ಪಾಶ್ಚಾತ್ಯ ಪಂಡಿತರೇ ಸರಿ. ಇವರೊಳಗೆ ಕಿಟ್ಟೆಲ್ ಇವರು ಕನ್ನಡದ ಕುರಿತು, ಇತರರಿಗಿಂತ ಹೆಚ್ಚಾಗಿ, ಅಮೋಘವಾಗಿ ದುಡಿದವರಾದರೂ ದ್ರಾವಿಡಭಾಷೆಗಳ ಸಮಗ್ರಕೂಟದ ಮೀಮಾಂಸೆಯನ್ನು ಮಾಡಿ ದ್ರಾವಿಡ ಭಾಷಾವಿಜ್ಞಾನ ಮಂದಿರದ ಮಹಾವಾಸ್ತು-ಶಿಲ್ಪಿ ಎನ್ನಿಸಿಕೊಂಡವರು, ಕಾಲ್ಡ್‌ವೆಲ್ಲರೇ ಸರಿ. ಈ ಕ್ಷೇತ್ರದಲ್ಲಿ ಅವರನ್ನು ಮೀರಿಸಿದವರು ಬಿಡಿ, ಸಮೀಪಗತರಾದವರೂ ಬೇರೆ ಯಾರೂ ಇಲ್ಲ.

ಆದರೆ ಅವರ ಗ್ರಂಥವು ಪ್ರಕಾಶಿತವಾಗಿ ಸುಮಾರು ಒಂದು ಶತಮಾನವೇ ಕಳೆದರೂ ಅದರ ಮೇಲೆ ದ್ರಾವಿಡ ಭಾಷಾವಿಜ್ಞಾನವು ಹೆಚ್ಚೇನೂ ಬೆಳೆದಿರುವುದಿಲ್ಲ. ಅಷ್ಟು ಮಾತ್ರವಲ್ಲ; ಯಾವುದೊಂದು ಶಾಸ್ತ್ರದ ಮೊದಮೊದಲ ಪ್ರಯತ್ನಗಳಲ್ಲಿ ಬಂದೇ ಬರುವ, ವಿಶೇಷವಾಗಿ ಭಾಷಾವಿಜ್ಞಾನದಂತಹ ಅನುಮಾನ ಪ್ರಧಾನವಾದ ಶಾಸ್ತ್ರದಲ್ಲಿ ಇರಲೇ ಇರಬಹುದಾದ — ಅದು ಕೂಡ ಯಾವುದೋ ಒಂದು ಭಿನ್ನ ದೇಶದ ವಿಲಕ್ಷಣ ಭಾಷಾವರಣದಲ್ಲಿ ಬೆಳೆದ ಮನೋವೃತ್ತಿಯ ವಿದ್ವಾಂಸನ ನಿರ್ಮಾಣವಾಗಿರುವಾಗ, ಅದರಲ್ಲಿಯೂ ಆತನ ಮೀಮಾಂಸೆಗೆ ಒಳಪಟ್ಟ ಭಾಷಾಕೂಟದ ಎಲ್ಲಾ 'ವ್ಯಕ್ತಿ'ಗಳ ಪ್ರತ್ಯಕ್ಷ ಪರಿಚಯವು ಆತನಿಗೆ ಇಲ್ಲದಿರುವಾಗ, ಅವನ ರಚನೆಯಲ್ಲಿ ಸಹಜವಾಗಿ ಸೇರಿಕೊಂಡಿರಬಹುದಾದ — ಅಜ್ಞಾನ–ಪ್ರಮಾದಾದಿಜನಿತ ದೋಷಗಳನ್ನು ತಿದ್ದುವ ಪ್ರಯತ್ನಗಳು ಕೂಡ ಸಾಕಷ್ಟು ಆಗಿರುವುದಿಲ್ಲ. ಈ ಕ್ಷೇತ್ರದಲ್ಲಿ ಮಾಡಬೇಕಾದ ವ್ಯವಸಾಯವು ಬಹಳವಾಗಿದೆ. ಅದಕ್ಕೆ ಎಲ್ಲ ದ್ರಾವಿಡ ಭಾಷೆಗಳ ಸಾಹಿತ್ಯದ ಹಾಗೂ ಆಯಾ ಭಾಷೆಯ ಬೇರೆ ಬೇರೆ ಆಡುನುಡಿಗಳ ಸಮಗ್ರವಾದ ಪರಿಚಯವೂ, ಈಯೆಲ್ಲ ದ್ರಾವಿಡ ಭಾಷೆಗಳ ಬೆಳವಣಿಗೆಗೆ ಹೆಚ್ಚುಕಡಿಮೆ ಯಾವ ಭಾಷೆಗಳು ಪೋಷಕವಾಗಿದ್ದುವೋ ಆ ಸಂಸ್ಕೃತ ಹಾಗೂ ಪ್ರಾಕೃತಗಳ೧೧ ಸರಿಯಾದ ತಿಳಿವೂ ಶಾಸ್ತ್ರೀಯವಾದ ಅಭ್ಯಾಸವೂ ಉಳ್ಳ, ಪಾಶ್ಚಾತ್ಯ ಹಾಗೂ ಪೌರಸ್ತ್ಯ ವ್ಯಾಕರಣ ಮಾರ್ಗಗಳ ಅನುಭವವುಳ್ಳ, ಯಾವ ಪೂರ್ವಾಭಿನಿವೇಶವೂ ಇಲ್ಲದಿರುವ, ಸಂಶೋಧಕಮತಿಗಳಾದ ವಿದ್ವಜ್ಜನರ ಒಂದು ಕೂಟವು — ಒಬ್ಬನಲ್ಲೇ ಇದೆಲ್ಲ ಒದಗುವುದು ಸಂಭಾವ್ಯವಲ್ಲ — ಒಮ್ಮನದಲ್ಲಿ ಕೆಲಸ ಮಾಡುವುದು ಅವಶ್ಯವಾಗಿದೆ. ಆಗ ಮಾತ್ರ ಯಥಾರ್ಥವಾದ ದ್ರಾವಿಡ ಭಾಷಾವಿಜ್ಞಾನವು ರೂಪುಗೊಳ್ಳುವುದು.

ಕಾಲ್ಡ್‌ವೆಲ್ಲರಿಗೆ, ಅವರೇ ಹೇಳುವಂತೆ, ತಮಿಳಿನಲ್ಲಿ ಚೆನ್ನಾಗಿ ಪರಿಜ್ಞಾನವಿದ್ದಿರಬೇಕು. ಇತರ ದ್ರಾವಿಡ ಭಾಷೆಗಳಲ್ಲಿ ತೆಲುಗು ಮಲಯಾಳಗಳ ಪ್ರತ್ಯಕ್ಷ ಪರಿಚಯವು ಅವರಿಗೆ ಎಷ್ಟರಮಟ್ಟಿಗೆ ಇತ್ತೆಂದು ನಾನು ಹೇಳಲಾರೆ. ಆದರೆ ಅವರಿಗೆ ಸಾಕಷ್ಟು ಕನ್ನಡ ತುಳುಗಳ ಪ್ರತ್ಯಕ್ಷ ಪರಿಚಯವಿದ್ದಂತೆ ತೋರುವುದಿಲ್ಲ. ಇದರಿಂದಾಗಿ ಅವರ ಪ್ರತಿಪಾದನದಲ್ಲಿ ಎಷ್ಟೋ ದೋಷಗಳು ಉಳಿದಿವೆ. ಆದರೂ ಅವರು ತಮ್ಮ ಸೂಕ್ಷ್ಮದರ್ಶಿತೆಯ ಹಾಗೂ ಸಾರಗ್ರಾಹಿತೆಯ ಬಲದಿಂದ ಹೆಚ್ಚಾಗಿ ಸಾಧುವಾದ ನಿಗಮನ

(Conclusion) ಗಳನ್ನೇ ಮುಟ್ಟಿರುವರಾದರೂ, ತಮಿಳಿನಂತೆಯೇ ಇತರ ದ್ರಾವಿಡಭಾಷೆಗಳ ಸಮಗ್ರ ಪರಿಚಯವೂ, ಸಂಸ್ಕೃದಲ್ಲಿಯೂ ಇನ್ನಷ್ಟು ಅನುಭವವೂ ಅವರಿಗೆ ಇರುತ್ತಿದ್ದರೆ ಅವರ ನಿರ್ಣಯಗಳು ಇನ್ನಷ್ಟು ಸಮಂಜಸವಾಗುತ್ತಿದ್ದುವೆನ್ನಬೇಕಾಗುತ್ತದೆ. ಅಂತಹ ಸಂದರ್ಭಗಳ ದಿಗ್ದರ್ಶನವನು ಮಾತ್ರ ಮಾಡುತ್ತೇನೆ.

ಅವರು ತಮ್ಮ Comparative Grammar of Dravidian Languages ಎಂಬ ಉದ್ಗ್ರಂಥದ ಧ್ವನಿ (Sounds) ಪ್ರಕರಣದ ೨೪ನೆಯ ಪುಟ (ದ್ವಿತೀಯ ಮುದ್ರಣ)ದಲ್ಲಿ, ಏಡಿ ಎಂಬರ್ಥದ ತಮಿಳಿನ 'ನಂಡು' ಎಂಬ ಶಬ್ದವು ಮಲಯಾಳದಲ್ಲಿ ಞಂಡು ಎಂದೂ ಕನ್ನಡದಲ್ಲಿ **ಯುಂಡ್ರಿ** ಎಂದೂ ಇರುತ್ತದೆಂದು, ಮೂಲ ದ್ರಾವಿಡ ಯಕಾರವು ನಕಾರವಾಗಿ ಪರಿಣಮಿಸುವುದೆಂಬುದಕ್ಕೆ ನಿದರ್ಶನವಾಗಿ ಕೊಟ್ಟಿದ್ದಾರೆ. ಈ 'ಯುಂಡ್ರಿ' ನನ್ನ ತಿಳಿವಿನಂತೆ ಕನ್ನಡದಲ್ಲಿಲ್ಲ. ಮೂಲತಃ ಡ್ರಿ ಎಂಬ ಸಂಯೋಗವು ಕನ್ನಡವಾಗಲಾರದು. ಕಿಟ್ಟೆಲರು ತಮ್ಮ ಕೋಶದಲ್ಲಿ 'ಎಂಡ್ರ ಕಾಯಿ' ಎಂಬ ಒಂದು ಶಬ್ದವನ್ನು ಅಭಿಧಾನಿಸಿ ಅದಕ್ಕೆ ಏಡಿ ಎಂಬ ಅರ್ಥವನ್ನು ಕೊಟ್ಟಿರುವರಾದರೂ, ಕುಂಡಲ (Bracket) ದೊಳಗೆ 'ಎಂಡ್ರಕಾಯೆ' ಎಂಬ ತೆಲುಗಿನ ರೂಪವನ್ನು ತೋರಿಸಿದ್ದಾರೆ. ವಸ್ತುತಃ ಇದು ಕನ್ನಡ ನಾಡಿನ ಯಾವ ಭಾಗದಲ್ಲಾದರೂ ರೂಢವಾಗಿದ್ದರೆ ಅದು ತೆಲುಗಿನಿಂದ ಬಂದುದೆಂಬುದರಲ್ಲಿ ಸಂದೇಹವಿರಲಾರದು; ಇರಲಿ. ಕಾಲ್ಡ್‌ವೆಲ್ಲರ ಆ ಪ್ರತಿಪಾದನದ ಮಟ್ಟಿಗೆ ಅದು ತೆಲುಗಾದರೂ ಒಂದೇ, ಕನ್ನಡವಾದರೂ ಒಂದೇ. ಏಕೆಂದರೆ ದ್ರಾವಿಡ ಭಾಷೆಗಳಲ್ಲಿ ಯಕಾರವು ನಕಾರವಾಗುವುದಿದೆ ಎಂಬುದೇ ಅವರ ಪ್ರತಿಪಾದ್ಯ. ಆದರೆ ತೆಲುಗಿನಲ್ಲಾದರೂ **ಯುಂಡ್ರಿ** ಎಂಬ ರೂಪವಿದ್ದಂತಿಲ್ಲ; ಕಿಟ್ಟೆಲರು ಅದನ್ನು 'ಎಂಡ್ರಕಾಯೆ' ಎಂದೇ ಕೊಟ್ಟಿದ್ದಾರೆ. ಇದೊಂದು ಸಣ್ಣ ದೋಷವೆಂದು ತೋರಬಹುದಾದರೂ, ಇದರ ಆಧಾರದಿಂದಲೇ ಎಂಬಂತೆ ಕಾಲ್ಡ್‌ವೆಲ್ಲರು ನಾನ್, ಞಾನ್, ಆನ್, ಯಾನ್ ಎಂಬ ಸರ್ವನಾಮ ರೂಪಗಳನ್ನು ತುಲನೆ ಮಾಡಿ ಯಾನ್ ಎಂಬುದೇ ಮೂಲ ರೂಪವಾಗಿರಬೇಕೆಂದು ಅನುಮಾನಿಸುತ್ತಾರೆ. ಆದರೆ **ಎಂಡ್ರಿ** ಎಂಬುದು ಉಚ್ಚಾರ ವೈಚಿತ್ರ್ಯದಿಂದ **ಯುಂಡ್ರಿ** ಎಂದಾದುದೆಂದು ಅವರಿಗೆ ಗೊತ್ತಾಗುತ್ತಿದ್ದರೆ ಯಾನ್ ಎಂಬುದು ಮೂಲರೂಪವೆಂದು ಅವರು ಸಿದ್ಧಾಂತಿಸುತ್ತಿರಲಿಲ್ಲ. ವಾಸ್ತವವಾಗಿ ನೋಡಿದರೆ ಯಾನ್ ಎಂಬು

ದರ ತಾಯಿ 'ಏನ್' ಎಂಬುದೆಂದು ತಿಳಿಯದಿರದು.[೧೨] ಬೇರೆ ಬೇರೆ ದ್ರಾವಿಡ ಭಾಷೆಗಳ ಉತ್ತಮ ಪುರುಷ ಸರ್ವನಾಮರೂಪಗಳನ್ನು ತೋರಿಸುವಲ್ಲಿಯೂ ಅವರು ಯಾನ್ ಎಂಬುದು ಹಳಗನ್ನಡಗ್ರಂಥಗಳಲ್ಲಿ ಕಾಣುವ ಉತ್ತಮಪುರುಷ ಸರ್ವನಾಮರೂಪಗಳಲ್ಲೊಂದು ಎಂದಿರುತ್ತಾರೆ![೧೩] ತುಳುವಿನ **ಏನ್** ಎಂಬುದನ್ನು **ಯೇನ್** ಎಂದೇ ಭ್ರಮಿಸಿರುತ್ತಾರೆ (Introduction ಪುಟ ೬೦). ತುಲನಾತ್ಮಕ ಶಬ್ದಶಾಸ್ತ್ರದ ತಾಯಿಬೇರೆನ್ನಿಸುವ ಸರ್ವನಾಮದ ಮೂಲರೂಪದ ಸಿದ್ಧಿ ಎಂಬುದು ಮುಖ್ಯತಮ ವಿಷಯ. ಏಕೆಂದರೆ ಬೇರೆ ಅನೇಕ ಪ್ರತಿಪಾದನಗಳು ಅದನ್ನವಲಂಬಿಸಿ ಮಾಡಲ್ಪಡುತ್ತವೆ.

ಇನ್ನೊಂದು ನಿದರ್ಶನ:— ಪುಟ ೭೩ರಲ್ಲಿ ಕಾಲ್ಡ್‌ವೆಲ್ಲರು, ಗುರುವಂ ಎಂಬುದರ ಬದಲಾಗಿ ಗುರುಮಂ ಎಂದು ಹಳೆಗನ್ನಡದಲ್ಲಿ ಪ್ರಯೋಗವಿದೆಯೆಂದು ಹೇಳುತ್ತಾರೆ. ಹೀಗೆ— ಕನ್ನಡದಲ್ಲಿಲ್ಲದ, ಎಲ್ಲಿಯಾದರೂ ಇದ್ದರೆ ಲಿಪಿಕಾರರ ತಪ್ಪೇ ಆಗಿರಬೇಕಾದ ಈ ಮ ಕಾರದ ಆಧಾರದಿಂದ, ಯಾವ ಎರಡು ಸ್ವರಗಳ ಮಧ್ಯದಲ್ಲಿಯೂ ಸಂಧಿವಶಾತ್ ಮಕಾರಾಗಮವುಂಟೆಂದು ಸಾಧಿಸಿ, ಸಾರ್ಥಕವಾಗಿ ಇರತಕ್ಕ ಎಷ್ಟೋ ಮಕಾರಗಳನ್ನು ನಿರರ್ಥಕವಾದ ಆಗಮಗಳೆಂದು ಪ್ರತಿಪಾದಿಸಿದ್ದಾರೆ. ಕನ್ನಡದಲ್ಲಿ ಮಕಾರ ವಕಾರಗಳು ವಿನಿಮಯಗೊಳ್ಳುತ್ತವೆಂಬುದು ನಿಜ. ಉದಾ:— ತಾವರೆ, ತಾಮರೆ; ಆವೆ, ಆಮೆ; ತವರೂರ್, ತಮರೂರ್; ಆದರೆ ತಲೆ + ಮಣಿ ತಲೆವಣಿಯಾದಂತೆ ತಾವರೆ ಇತ್ಯಾದಿಗಳಲ್ಲಿ ಮಕಾರವೇ ಪೂರ್ವ ರೂಪವೆನ್ನುವುದಕ್ಕೆ ಆಧಾರ ಹೆಚ್ಚು. ಹೀಗಿದ್ದರೂ ವಕಾರವು ಸಾನುನಾಸಿಕವಾಗಿಯೂ ಇರುವುದರಿಂದ, ಕೆಲವೆಡೆ ಅದು ಖಂಡಿತವಾಗಿ ಮಕಾರವಾಗುವುದಿದೆ. ಉದಾ:— ಸರ್ಷಪ ಎಂಬುದರ ತದ್ಭವರೂಪವು ಸಾಸವೆ. ಇದು ಸಾಸಮೆ ಎಂದೂ ರೂಪುಗೊಂಡಿದೆ.[೧೪] ಷಕಾರವು ನೆಟ್ಟಗೆ ಮಕಾರವಾಗಲಾರದಾದುದರಿಂದ ಈ ಉದಾಹರಣದಲ್ಲಿ ವಕಾರವೇ ಪೂರ್ವರೂಪ, ಮಕಾರವು ಉತ್ತರರೂಪ, ಎನ್ನುವುದರಲ್ಲಿ ಸಂದೇಹವಿಲ್ಲ. ಹೀಗೆ ವಕಾರವು ಮಕಾರವಾಗಬಲ್ಲುದಾದರೂ ಆಗಮ ವಕಾರವು ಮಕಾರವಾದ ಸಂದರ್ಭವಿದೆಯೆ ? ಇರಲಾರದು. ಹಾಗಾಗುವುದು ಅಸಂಭವ. ಏಕೆಂದರೆ, ವಕಾರಾಗಮವಾಗಬೇಕಾದರೆ, ಮೊದಲು ಉಕಾರ ಅಥವಾ ಯಾವುದಾದರೂ ಓಷ್ಠ್ಯಸ್ವರವಿರುತ್ತದೆ.[೧೫] ಅದು ಸಹಜವಾಗಿ ವಕಾರವನ್ನೇ ಆಗಮ

ವಾಗಿ ಹುಟ್ಟಿಸಬಲ್ಲುದು ಹೊರತು, ಮಕಾರವನ್ನಲ್ಲ. ಮಕಾರಾಗಮವಾಗುವ ಎಡೆಗಳು ಕನ್ನಡದಲ್ಲಿ ಇಲ್ಲವೆಂದಲ್ಲ; ಅದರ ಸಂನಿವೇಶ ಮಾತ್ರ ಬೇರೆ. ಮುಂದೆ ಓಷ್ಠ್ಯವ್ಯಂಜನವಿರುವುದಾದರೆ, ಹಿಂದೆ ಪದಾಂತ್ಯದಲ್ಲಿ ಸ್ವರವಿದ್ದರೆ, ಆಡುವೊಬ್ಬಲ, ಮಿಂಚುಮ್ಬುಳು— ಎಂಬಿತ್ಯಾದಿಗಳಂತೆ (ನಿರರ್ಥಕವಾದ), ಮಕಾರಾಗಮವಾಗುವುದಿದೆ. (ಇವು ಕೂಡ ಆಗಮವಲ್ಲವೆಂದು ಕೆಲವರ ಪ್ರತಿಪಾದನವಿದೆ.) ಇಂತಹ ಆಗಮಗಳಿಗೆ ಸರ್ವವ್ಯಾಪ್ತಿಯನ್ನು ಸಾಧಿಸತೊಡಗಿ,— ಮುಂದೆ ಓಷ್ಠ್ಯವ್ಯಂಜನವಿರಲಿ ಬೇರೊಂದು ವ್ಯಂಜನವಿರಲಿ, ಅಥವಾ ಮುಂದೆ ಸ್ವರವೇ ಇರಲಿ ಅದು ಯಾವ ಸ್ವರವಾದರೂ ಆಗಿರಲಿ— ಮಕಾರಾಗಮವುಂಟೆಂದು ಸಿದ್ಧಾಂತ ಮಾಡಿಕೊಂಡರೆ ಹೇಗಾದೀತೆಂಬುದಕ್ಕೆ ಒಂದು ನಿದರ್ಶನವನ್ನು ಕಲ್ಪಿಸೋಣ:— 'ಆರುಮಿಲ್ಲ' ಎಂಬುದನ್ನು ಆರುಮ್+ಇಲ್ಲ= ಆರ್ + ಉಮ್ + ಇಲ್ಲ ಎಂದು ಛೇದಿಸದೆ, ಮಧ್ಯದಲ್ಲಿ ಕಾಣುವ ಮಕಾರವು ಆಗಮವೆಂದು ಭಾವಿಸಿದರೆ, ಆರು + (ಮ್)+ಇಲ್ಲ ಎಂದು ವಿಂಗಡಿಸಬೇಕಾಗುತ್ತದೆ. ಮತ್ತೆ 'ಆರು' ಎಂಬುದರಲ್ಲಿರುವ **ಉ**ಕಾರವು **ನಾನು** ಎಂಬುದರಲ್ಲಿರುವ ಉಕಾರದಂತೆಯೇ ಸ್ವಾರ್ಥಪ್ರತ್ಯಯ ಅಥವಾ ನಿರರ್ಥಕವೆಂದು ಕಳೆದುಹಾಕಿದರೆ, ಆರ್+ಇಲ್ಲ ಎಂಬ ಎರಡು ಪದಗಳ ಸಂಯೋಗ ಮಾತ್ರವು ಅದಾಗಿದೆ ಎಂಬ ನಿಗಮನಕ್ಕೆ ನಾವು ಬರಬೇಕಾಗುತ್ತದೆ. ಪರಿಣಾಮವಾಗಿ ಉಮ್ ಎಂಬ ಸಾರ್ಥಕವಾದ ಸಮುಚ್ಚಯವು ನಮ್ಮ ಕಣ್ಮರೆಯಾಗಿ ನಾವು ಎಲ್ಲಿಯೋ ಒಂದು ಅಪಾರ್ಥದ ಗರ್ತದಲ್ಲಿ ಬೀಳುತ್ತೇವೆ. ಈ ಕಲ್ಪಿತ ನಿದರ್ಶನದಂತೆಯೇ, ಕಾಲ್ಡ್ವೆಲ್ಲರು ಅನೇಕ ಸಂದರ್ಭಗಳಲ್ಲಿ, ಸಾರ್ಥಕವಾಗಿದ್ದಿರಬೇಕಾದ ಎಷ್ಟೋ ಅಂಶಗಳನ್ನು ಸಂಧಿವಶಾತ್ ಬಂದ ಆಗಮಗಳೆಂದು ಭ್ರಮಿಸಿದಂತೆಯೂ, ಸಾರ್ಥಕವಾದುದನ್ನು ನಿರರ್ಥಕವೆಂದು ತಿಳಿದು ಯಥಾರ್ಥವಲ್ಲದ ನಿರ್ಣಯಗಳಿಗೆ ಕೆಲವು ಬಾರಿ ಮುಟ್ಟಿದಂತೆಯೂ ನನ್ನ ಅಲ್ಪಮತಿಗೆ ಭಾಸವಾಗುತ್ತದೆ. ಉದಾ:— ವಿಣ್ಣವರ್ (ಪುಟ ೧೬) ಇದನ್ನವರು ವಿಣ್ಣ+(ವ್)+ಅರ್ = ವಿಣ್ಣೋರ್ ಹೀಗೆ ವಿಂಗಡಿಸಿ ಸಮೀಕರಿಸಿಕೊಂಡಿದ್ದಾರೆ. 'ವಿಣ್ಣವರ್' ಎಂದರೆ ತಮಿಳಿನಲ್ಲಿ 'ಸ್ವರ್ಗದವರು' ಎಂದರ್ಥ. 'ವಿಣ್' ಎಂದರೆ ಸ್ವರ್ಗ. ಆದುದರಿಂದ ಅಲ್ಲಿರುವ ವಕಾರವು **ಅವರ್** ಎಂಬುದರಲ್ಲಿರುವ ವಕಾರವೆಂದೇ ಹೇಳಬೇಕು. ಹಾಗಾದರೆ ಅದನ್ನು ವಿಂಗಡಿಸಬೇಕಾದುದು ಹೀಗೆ:— ವಿಣ್ + ಅವರ್ ಅಥವಾ ವಿಣ್ಣ+ ಅವರ್=ವಿಣ್+(ಅ)+ಅವರ್. 'ಅವರ್' ಎಂಬುದು ಓರ್ ಎಂದಾಗುವುದು

ದ್ರಾವಿಡ ಭಾಷೆಗಳಲ್ಲಿ ಸಹಜ. ಕೆಲವರು ಮಲಯಾಳಿಗಳು ಸ್ವತಂತ್ರವಾದ ಎಂದರೆ ಪ್ರತ್ಯಯೀಭೂತವಾದುದಲ್ಲದ ಅವರು ಎಂಬರ್ಥದ ಸರ್ವನಾಮವನ್ನು ' ಓರ್ ' ಎಂದೇ ಉಚ್ಚರಿಸುವುದನ್ನು ನಾವು ಕೇಳಬಹುದು. ಹವೀಕರ ಕನ್ನಡ ನುಡಿಯಲ್ಲಿಯೂ ಬಂದವರು ಎಂಬುದು ಬಂದೋರು ಎಂದೇ ಇರುತ್ತದೆ. ಹಾಗೆಯೇ ವಿಣ್ಣವರ್ ಎಂಬುದರಲ್ಲಿ ಅಡಕವಾದ ಅವರ್ ಎಂಬುದು ಓರ್ ಎಂದಾಗಿರುತ್ತದೆ. ಪರಿಸ್ಥಿತಿ ಹೀಗಿರುವಾಗ, ವಿಣ್ಣವರ್ ಎಂಬುದನ್ನು ಬರಿಯ ' ವಿಣ್ಣ ' ಮತ್ತು ' ಅರ್ ' ಗಳ ಸಂಯೋಗವೆಂದೂ, ಮಧ್ಯದಲ್ಲಿ ನಿರರ್ಥಕವಾದ ವಕಾರಾಗಮವೆಂದೂ, ಮಾತ್ರವಲ್ಲ ವಿಣ್ಣ ಎಂಬುದರ ಅಂತ್ಯದ ಅಕಾರವೂ ಅರ್ ಎಂಬುದರ ಆದಿಯಲ್ಲಿರುವ ಅಕಾರವೂ ಸೇರಿ ' ಆ ' ಎಂದು ದೀರ್ಘವಾಯಿತೆಂದೂ, ಮತ್ತೆ ' ಆ ' ಕಾರವು ' ಓ ' ಎಂದಾಯಿತೆಂದೂ ಕಾಲ್ಡ್‌ವೆಲ್ಲರು ಹೇಳುತ್ತಾರೆ! ಈ ತೆರದ ಪ್ರತಿಪಾದನವು ನಮ್ಮನ್ನು ಎಲ್ಲಿಗೆ ಮುಟ್ಟಿಸಬಹುದು ? ಹೀಗೆ ಸ್ವರಗಳ ಮಧ್ಯದಲ್ಲಿ ಕಾಣುವ ಅಂಶಗಳೆಷ್ಟನ್ನೋ ಅವರು ವ್ಯರ್ಥಗಳೆಂದು ತಿಳಿದುದರಲ್ಲಿ ಆಶ್ಚರ್ಯವಿಲ್ಲ. ಪುಟ ೪೮ ರಲ್ಲಿ ಅವರು "........euphonic refinements which have been tabulated and perhaps in part invented by grammarians " ಎಂಬ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಅವರು ಹೀಗೆ ಹೇಳುವುದಕ್ಕೆ ಸಂಧಿವಿಕಾರಗಳು ಹೆಚ್ಚಾಗಿ ಇಲ್ಲದಿರುವ, ಕೆಲವೆಡೆ ಉಚ್ಚಾರದಲ್ಲಿ ಇದ್ದರೂ ಬರವಣಿಗೆಯಲ್ಲಿ ಅದರ ಕುರುಹೇ ಕಾಣದಿರುವ, ಭಾಷೆಯ ಆವರಣದಲ್ಲಿ ಅವರು ಹುಟ್ಟಿ ಬೆಳೆದು ವಿದ್ಯಾವಂತರಾದುದೇ ಕಾರಣವೆಂದು ಹೇಳಬೇಕಾಗುತ್ತದೆ. ನಮ್ಮ ದೇಶದ ವೈಯಾಕರಣರು ಭಾಷೆಯಲ್ಲಿಲ್ಲದ ಸಂಧಿಗಳನ್ನು ಹುಟ್ಟಿಸಿದ ಸಂದರ್ಭವೆಲ್ಲಿಯೂ ತೋರಿ ಬರುವುದಿಲ್ಲ; ಅಥವಾ ಅದರಿಂದ ಅವರಿಗೆ ಲಾಭವೇನೂ ಇಲ್ಲ. ಅಥವಾ ಅವರು ( ಪುಟ ೬೪) ಹೇಳುವಂತೆ, ಸಂಸ್ಕೃತದ ಅನುಕರಣವಾಗಿ ಕೆಲವು ಸಂಧಿನಿಯಮಗಳನ್ನು ದ್ರಾವಿಡಭಾಷಾವ್ಯಾಕರಣ ಗ್ರಂಥಗಳಲ್ಲಿ ಸೇರಿಸಿದ್ದ ಪಕ್ಷದಲ್ಲಿ–ಇದಕ್ಕೇನೂ ಅವರು ಆಧಾರ ಕೊಡುವುದಿಲ್ಲ; ಅದು ಅವರ ಬರಿಯ ಊಹೆ.— ಜನರ ' ನುಡಿ ' ಯಲ್ಲಿ ಆ ಸಂಧಿಗಳು ರೂಢಿಗೆ ಬರುತ್ತಿರಲಿಲ್ಲ. ಏಕೆಂದರೆ, ವ್ಯಾಕರಣವನ್ನು ಕಲಿತು ಸ್ವಭಾಷೆಯಲ್ಲಿ ಮಾತಾಡುವುದನ್ನು ಯಾರೂ ಮತ್ತೆ ಕಲಿಯುವುದಲ್ಲ. ಅದು ಕೂಡ, ಅಕ್ಷರಾಭ್ಯಾಸವು ಸಾರ್ವತ್ರಿಕವಾಗಿ ಇಲ್ಲದಿದ್ದ ಪುರಾತನ ಕಾಲದಲ್ಲಿ ಎಂದೂ ಸಂಭಾವ್ಯವಲ್ಲ. ಮತ್ತು ನಮ್ಮ ಪುರಾತನ ವ್ಯಾಕರಣ ಗ್ರಂಥಗಳೆಲ್ಲ, ಭಾಷೆ

ಯಲ್ಲಿಯೂ ಸಾಹಿತ್ಯದಲ್ಲಿಯೂ ವ್ಯುತ್ಪನ್ನರಾದವರಿಗಾಗಿಯೇ ಬರೆಯಲ್ಪಟ್ಟವುಗಳೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯ. ಏಕೆಂದರೆ, ಈಗ ಶಾಲೆಗಳಲ್ಲಿ ಸಣ್ಣ ವಿದ್ಯಾರ್ಥಿಗಳಿಗೂ ವ್ಯಾಕರಣನಿಯಮಗಳನ್ನು ಹೇಳಿಕೊಡುವಂತೆ, ಆಗ ಭರತಖಂಡದ ಯಾವ ಭಾಗದಲ್ಲಿಯೂ, ದೇಶಭಾಷೆಗಳ ಅಭ್ಯಾಸ ಮಾಡುವಾಗ ಹೇಳಿಕೊಡುತ್ತಿರಲಿಲ್ಲ. ಆದರೆ ಆಡುನುಡಿಯಾಗಿಲ್ಲದಿದ್ದ ಸಂಸ್ಕೃತದ ಸಾಮಾನ್ಯ ನಿಯಮಗಳನ್ನು ಸಂಸ್ಕೃತ ವಿದ್ಯಾರ್ಥಿಗಳು ಸ್ವಲ್ಪಮಟ್ಟಿಗೆ ಆರಂಭದಲ್ಲಿಯೇ ಕಲಿಯುವುದಿತ್ತು. ಅವರು ಸಹ ಸಾಹಿತ್ಯಪಾಠ ಮುಗಿಸಿದ ಮೇಲೆಯೇ ವ್ಯಾಕರಣಶಾಸ್ತ್ರವನ್ನು ಕಲಿಯುತ್ತಿದ್ದರು. ದೇಶಭಾಷೆಯಲ್ಲಿಯೂ ವ್ಯಾಕರಣವಿರುವ ಒಂದು ಸಂಗತಿ ಬಹು ಸ್ವಲ್ಪ ಮಂದಿಗೆ ಮಾತ್ರ ಗೊತ್ತಿದ್ದಿರಬಹುದು. ನಮ್ಮ ಅನೇಕ ಕವಿಗಳ ಮಾತು ಇದಕ್ಕೆ ಸಾಕ್ಷಿ. ಉದಾ:—"ಶಬ್ದಮಣಿ ಮೊದಲಾದ ಶಾಸ್ತ್ರದ ಹೊದ್ದಿಗೆಯು ಸಾಹಿತ್ಯಕಲ್ಲದೆ ಶುದ್ಧ ಷಟ್ಪದಿ ಹಾಡುಗಬ್ಬಗಳಿಂಗೆ ಬೇಡೆಂದು" (ಆದಿತ್ಯಪುರಾಣ). ಹೀಗೆ ಸಾಮಾನ್ಯರಿಗೂ ವ್ಯಾಕರಣ ಗ್ರಂಥಗಳಿಗೂ ಸಂಬಂಧವು ಹೆಚ್ಚಿನಮಟ್ಟಿಗೆ ಇಲ್ಲದಿದ್ದ ಕಾಲದಲ್ಲಿ, ನಮ್ಮ ವ್ಯಾಕರಣ ಪುಸ್ತಕದ ಸಂಧಿನಿಯಮಗಳಿಂದಾಗಿ ಜನತೆಯ ನುಡಿಯ ಉಚ್ಚಾರಸ್ವರೂಪವು ಬೇರಾಗುವ ಸಂಭವವಿಲ್ಲ.

ಕಾಲ್ಡ್‌ವೆಲ್ಲರ ಈ ಮಾತಿನಿಂದ ನಿಷ್ಪನ್ನವಾಗುವ ತಥ್ಯವೇನೆಂದರೆ, ಅವರು ತಮ್ಮ ವಿವೇಚನೆಯಲ್ಲಿ ಯಥಾರ್ಥ ನಿರ್ಣಯಕ್ಕೆ ಅವಶ್ಯವಿರುವಷ್ಟು ಮಟ್ಟಿಗೆ ಜನರಾಡುವ ಮಾತಿನ ಸ್ವರೂಪಕ್ಕೆ ಗಮನವನ್ನುಕೊಡಲಿಲ್ಲವೆಂದೂ, ಸಾಹಿತ್ಯ ಗ್ರಂಥಗಳನ್ನು — ಮುಖ್ಯವಾಗಿ ಆಯಾ ಭಾಷೆಗಳ ವ್ಯಾಕರಣ ಗ್ರಂಥಗಳನ್ನೇ, ಹೆಚ್ಚಾಗಿ ಪರಿಶೀಲಿಸಿ ಆಯಾ ಭಾಷಾಸ್ವರೂಪವನ್ನು ಅನುಮಾನಿಸಿರುವರೆಂದೂ ಆಗಿದೆ; ಹೀಗೆ ಅರಿಕೆ ಮಾಡಿಕೊಳ್ಳದೆ ನಿರ್ವಾಹವಿಲ್ಲ. ಸಾಮಾನ್ಯವಾಗಿ ಭಾಷಾವಿಜ್ಞಾನಿಗಳು ಅನುಸರಿಸುವ ಮಾರ್ಗವೇ ಇದಾಗಿದೆ. ಈ ಮಾರ್ಗದಿಂದ ಹಲವು ಬಾರಿ ನಾವು ತಪ್ಪಾದ ನಿರ್ಣಯಕ್ಕೆ ಬರುತ್ತೇವೆ. ಕಾರಣವೇನೆಂದರೆ, ವೈಯಾಕರಣರು ಭಿನ್ನ ಭಿನ್ನ ಕಾಲದವರು; ಭಾಷೆಯ ಭಿನ್ನ ಭಿನ್ನ ಅವಸ್ಥೆಗಳಲ್ಲಿ ಉಂಟಾದ ವ್ಯಾಕರಣಗಳು ಕೆಲಕೆಲವು ಸಂದರ್ಭಗಳಲ್ಲಿ ಬೇರೆ ಬೇರೆ ನಿಯಮಗಳನ್ನು ಸಹಜವಾಗಿ ಹೇಳುತ್ತವೆ.[೧೬] ಹಾಗೆ ಹೇಳುವಾಗ ಆಯಾ ಪ್ರಸ್ತಾವದ ಅಥವಾ ಆ ಶಬ್ದತತ್ತ್ವದ ಇತಿಹಾಸವನ್ನೇನೂ ಅವು ನಿರೂಪಿಸುವುದಿಲ್ಲ. ಒಂದು ಭಾಷೆಯ

ಭಿನ್ನ ಭಿನ್ನ ಕಾಲದ ಇಂತಹ ಹಲವು ವ್ಯಾಕರಣ ಗ್ರಂಥಗಳನ್ನು ಕಣ್ಣ ಮುಂದಿಟ್ಟುಕೊಂಡು ಆ ನಿಯಮಗಳ ಸಮಷ್ಟಿಯಿಂದ ಆ ಭಾಷೆಯ ಸ್ವರೂಪವನ್ನು ಊಹಿಸಿದರೆ, ಆ ಭಾಷೆಯ ನಿಜವಾದ ಯಾವ ಅವಸ್ಥೆಯೂ ದೃಗ್ಗೋಚರವಾಗದೆ, ಹೊಳೆಯ ಆಳದ ಸರಾಸರಿ ಅಳತೆಯನ್ನು ಕಂಡು ಹಿಡಿದು ಧೈರ್ಯ ಮಾಡಿ ದಾಟತೊಡಗಿದ ಗಣಿತಸಿದ್ಧಾಂತಿಯ ಅವಸ್ಥೆ ನಮಗೆ ಬರುವುದು. ಆದುದರಿಂದ ಆಡುನುಡಿಯ ಸ್ವರೂಪವನ್ನು, ಗ್ರಂಥಭಾಷೆಗಿಂತಲೂ ಹೆಚ್ಚಾಗಿ, ಆದರೆ ವಿವೇಕದಿಂದ ಗಮನಿಸುವುದು ಭಾಷಾವಿಜ್ಞಾನಿಗೆ ಅವಶ್ಯಕಾರ್ಯವಾಗಿದೆ. ಆಡುನುಡಿಯಲ್ಲಿ ಕಾಣುವ ರೂಪಗಳನ್ನೂ ಸಾಹಿತ್ಯದಲ್ಲಿರುವ ರೂಪಗಳನ್ನೂ ವ್ಯಾಕರಣ ಗ್ರಂಥಗಳ ನಿಯಮ ಪ್ರಕಾರ ಸಿದ್ಧವಾಗುವ ರೂಪಗಳನ್ನೂ ಹೋಲಿಸಿ, ವಿಮರ್ಶಿಸಿ, ಅನಂತರ ನಾವು ಒಂದು ಸಿದ್ಧಾಂತಕ್ಕೆ ಬಂದರೆ ಅದು ಬಹಳಮಟ್ಟಿಗೆ ಸತ್ಯವಾಗಬಹುದು; ಬಹಳಮಟ್ಟಿಗೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ ಭಾಷಾವಿಜ್ಞಾನವು ಪೂರ್ಣವಾಗಿ ಪ್ರತ್ಯಕ್ಷ ಶಾಸ್ತ್ರವಲ್ಲ; ಹೆಚ್ಚಿನಮಟ್ಟಿಗೆ ಅನುಮಾನಶಾಸ್ತ್ರ; ಎಂದರೆ ಊಹೆಯ ಬಲದಿಂದ ಮಾಡುವ ಸಿದ್ಧಾಂತಗಳ ಸಮೂಹ. ಆದುದರಿಂದ ಇದರಲ್ಲಿ ಎಷ್ಟು ಎಚ್ಚರವಿದ್ದರೂ ಸಾಲದು. ಪ್ರಾಮಾಣಿಕತೆಯಂತೂ, ಇತಿಹಾಸದಂತೆಯೇ, ಇದರ ಪ್ರಾಣ. ಅದೊಂದು ಇಲ್ಲದೆ ಹೋದರೆ ನಾವು ನಮ್ಮನ್ನು ಎಂದರೆ ನಮ್ಮ ನಿಗಮನಗಳನ್ನು ಕೆಡಿಸುವುದು ಮಾತ್ರವಲ್ಲ, ನಮ್ಮ ಮಾತನ್ನು ಆಧರಿಸುವ ಇತರ ಸಹಶಾಸ್ತ್ರಕಾರರನ್ನೂ ನಮ್ಮೊಡನೆ ದೋಷಕೂಪಕ್ಕೆ ಇಳಿಸಿ, ಜ್ಞಾನದ ಬದಲಾಗಿ ಭ್ರಾಂತಿಯನ್ನೇ ಲೋಕದಲ್ಲಿ ಹೆಚ್ಚಿಸುವೆವು. ಆದುದರಿಂದ ಭಾಷಾವಿಜ್ಞಾನಿಗೆ ಯಾವ ಪೂರ್ವಾಭಿನಿವೇಶವಾಗಲಿ, ಪ್ರತಿನಿವೇಶವಾಗಲಿ, ಇಲ್ಲದಿರಬೇಕು; ಎಲ್ಲಿಯಾದರೂ ಹೃದಯಕಂದರದಲ್ಲಿ ಅಡಗಿದೆಯೋ ಎಂದು ತನ್ನನ್ನು ಪರೀಕ್ಷಿಸುತ್ತಲೇ ಇದ್ದುಕೊಂಡು ವಿಚಾರಗಳನ್ನು ಮುಂದೊತ್ತಬೇಕು. ಹಾಗಿಲ್ಲದಿದ್ದರೆ ಅದು ಶಾಸ್ತ್ರವಲ್ಲ; ಶಸ್ತ್ರವಾಗಿ ಇತರರಿಗೂ ಕೊನಗೆ ನಮಗೂ ಹಿಂಸೆಯನ್ನುಂಟುಮಾಡುವುದು.

ಹಿಂದೆಯೇ ನಿವೇದಿಸಿಕೊಂಡಂತೆ, ಭಾಷಾವಿಜ್ಞಾನವು ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ ಎಂಬುದು ಚೆನ್ನಾಗಿ ನೆನಪಿಸಲ್ಲಿಡತಕ್ಕ ವಿಷಯವಾಗಿದೆ. ಭೂಲೋಕದ ಸಕಲ ಭಾಷೆಗಳ ನಿಯಮಗಳೆಲ್ಲ ಯಾವುವೆಂದು ಯಾವನೊಬ್ಬನು ಯಥಾರ್ಥವಾಗಿ ತಿಳಿದುಕೊಳ್ಳಲು ಅನುಕೂಲ ಪರಿಸ್ಥಿತಿ

ಇನ್ನೂ ಬಂದಿಲ್ಲ. ಎಲ್ಲಾ ಭಾಷೆಗಳ ಪ್ರಾಮಾಣಿಕವಾದ ವ್ಯಾಕರಣ ನಿಯಮಗಳಾಗಲಿ, ಆಯಾ ಭಾಷೆಗಳ ಯಥಾರ್ಥವಾದ ಇತಿಹಾಸವಾಗಲಿ ಒಬ್ಬನಿಗೆ ದೊರಕುವಂತಿಲ್ಲ. ದೊರಕುವ ಕೆಲವನ್ನೂ ಸಂಪೂರ್ಣವಾಗಿ ಪ್ರಮಾಣವೆಂದು ಸ್ವೀಕರಿಸಲಾಗುವುದಿಲ್ಲ. ಏಕೆಂದರೆ, ಆಯಾ ಭಾಷೆಯ ಇತಿಹಾಸವಾಗಲಿ ವ್ಯಾಕರಣವಾಗಲಿ ಯಾವ ಅಭಿನಿವೇಶವೂ ಇಲ್ಲದಿರುವ ಆಯಾ ಭಾಷೆಗಳನ್ನಾಡುವವರಿಂದ ನಿರ್ಮಿತವಾಗಿ ನಮಗೆ ದೊರಕುವ ಸ್ಥಿತಿ ಬಂದಿರುವುದಿಲ್ಲ. ಬೇರೆ ಶಾಸ್ತ್ರವಾದರೆ ಅನ್ಯ ಭಾಷೆಯನ್ನಾಡುವ ವಿದ್ವಾಂಸರು ರಚಿಸಿದುದರಿಂದಾಗಿ ವಿಕೃತವಾಗುವ ಸಂಭವವಿಲ್ಲ. ಭಾಷಾ ನಿಯಮವನ್ನು ತಿಳಿಸುವ ಶಾಸ್ತ್ರವಾದರೆ ಹಾಗಲ್ಲ; ಏಕೆ ?— ಭಾಷೆ ಎಂದರೆ ಭಾವನೆಯ, ಆಲೋಚನೆಯ, ವ್ಯಕ್ತರೂಪ. ಯಾವುದೊಂದು ಭಾಷೆ ಯನ್ನಾಡುವವನಿಗೂ ತನ್ನ ಭಾಷೆಯ ಅಭಿಪ್ರಾಯ ಪ್ರಕಟನ ಮಾರ್ಗವೇ ಸಹಜಮಾರ್ಗವೆಂದು ಸಹಜವಾಗಿ ತೋರುತ್ತದೆ. ಆದುದರಿಂದ ಅವನು ತನ್ನ ಭಾಷೆಯ ವಿಶಿಷ್ಟಮಾರ್ಗದಲ್ಲಿಯೇ ಬೇರೊಂದು ಭಾಷೆಯ ಮೀಮಾಂಸೆ ಮಾಡುತ್ತಾನೆ; ಅನ್ಯಥಾ ಅವನು ಸಮಾಲೋಚಿಸುವುದು ಒಂದು ವೇಳೆ ಅಸಾಧ್ಯವಲ್ಲದಿದ್ದರೂ ಅತಿಕಷ್ಟಸಾಧ್ಯವೆನ್ನಲು ಯಾವ ಅಡ್ಡಿಯೂ ಇಲ್ಲ. ಏಕೆಂದರೆ ಸಾಮಾನ್ಯವಾಗಿ ತನ್ನ ಭಾಷೆಯ ವ್ಯಾಕರಣ ತತ್ವವೇ ಪ್ರತಿಯೊಬ್ಬನ ಆಲೋಚನೆಯ ತಳಹದಿಯಾಗಿರುತ್ತದೆ. ಭಾಷೆಯ ಅಂತರಾಳಕ್ಕೆ ಪ್ರವೇಶಿಸಿ ನೋಡಿದರೆ, ವ್ಯಾಕರಣವೆಂದರೆ ಭಾವನೆಯ ಸರಣಿ, ಅಥವಾ ಅದರ ನಡಿಗೆಯ ಭಂಗಿ, ಎಂಬುದು ತಿಳಿಯುವುದು. ಇದರಿಂದಾಗಿ ಸ್ವಭಾಷೆಯ ವ್ಯಾಕರಣ ಪ್ರವಾಹದ ಸೆಳೆತದಿಂದ ತನ್ನ ಆಲೋಚನೆಗಳನ್ನು ತಪ್ಪಿಸಿ ತರುವುದು ಯಾವನಿಗೂ ದುಸ್ಸಾಧ್ಯವಾಗುವುದು. ಆದುದರಿಂದ ಒಂದು ವಿದೇಶ ಭಾಷೆಯ ನಿಜರಹಸ್ಯವು ಆ ಭಾಷೆಯ ವ್ಯಾಕರಣಗ್ರಂಥ ಗಳನ್ನು ಕಲಿತ ಮಾತ್ರದಿಂದ, ಅದರ ಸಾಹಿತ್ಯವನ್ನು ಓದಿದ ಮಾತ್ರದಿಂದ, ಇಲ್ಲವೆ ಆ ಜನರು ಮಾತಾಡುವುದನ್ನು ಅರ್ಥಮಾಡಿಕೊಳ್ಳುವ ಮಟ್ಟಿಗೆ ಆ ಭಾಷೆಯ ಪರಿಚಯ ಮಾಡಿಕೊಂಡ ಮಾತ್ರದಿಂದ ನಮಗೆ ತಿಳಿದಂತಾಗ ಲಾರದು; ಆ ಭಾಷೆಯಲ್ಲಿ, ಆ ಭಾಷೆಯನ್ನಾಡುವವರೊಡನೆ, ಸಹಜ ವಾಗಿ ಮಾತಾಡುವ 'ಅನುಭವ'ವೂ ನಮಗಿದ್ದರೆ ಮಾತ್ರ ಬಹುಮಟ್ಟಿಗೆ ಅದು ಕೈವಶವಾಗುವುದು. ಅದು ಕೂಡ ಬಹುಮಟ್ಟಿಗೆ; ಸಂಪೂರ್ಣ ವಲ್ಲ. ಹಾಗೆ ಅನ್ಯಭಾಷಾಜ್ಞಾನವನ್ನು ಸಂಪಾದಿಸಿಕೊಂಡ ಮನುಷ್ಯ ನಾದರೂ ಆ ಪರಭಾಷೆಯ ಮೀಮಾಂಸೆಯನ್ನು ಮಾಡುವಾಗ, ತನಗೆ

ಹುಟ್ಟಿನಿಂದ ಬಂದಿರುವ ಕಾರಣ ಸಹಜವೆಂದು ತೋರುವ ತನ್ನ ಭಾಷಾ-ವ್ಯಾಕರಣ ಪದ್ಧತಿಯನ್ನೇ ಅನುಸರಿಸುತ್ತಾನೆ. ಭಾಷಾವಿಜ್ಞಾನದ ಮಹಾ-ರಥರೆಲ್ಲ ಪಾಶ್ಚಾತ್ಯರಾದುದರಿಂದ, ಈ ಶಾಸ್ತ್ರದಲ್ಲಿ ಅವರ ವ್ಯಾಕರಣ ಪದ್ಧತಿಯ ಪರಿಣಾಮವು ಸುವ್ಯಕ್ತವಾಗಿ ಕಂಡುಬರುತ್ತದೆ. ಆದರೆ, ಸಕಲ ಭಾಷೆಗಳೂ ಮಾನವಮನಃಪ್ರವೃತ್ತಿನಿರ್ಮಿತಗಳು; ಇಂದ್ರಿಯ ಪ್ರವೃತ್ತಿ ಹೇಗೆ ಸರ್ವತ್ರ ಹೆಚ್ಚುಕಡಿಮೆ ಒಂದೇ ಆಗಿರುತ್ತದೋ ಹಾಗೆಯೇ ಮನಃ ಪ್ರವೃತ್ತಿಯೂ ಆಗಿರಬೇಕಲ್ಲವೆ? ಆದುದರಿಂದ ಎಲ್ಲಾ ಭಾಷೆಗಳ ಸಹಜ ವ್ಯಾಕರಣ ನಿಯಮಗಳು ಹೆಚ್ಚುಕಡಿಮೆ ಒಂದೇ ಇರಬೇಕಲ್ಲವೆ?— ಎಂಬ ಪ್ರಶ್ನೆ ಹುಟ್ಟಬಹುದು. ಮೂಲಕ್ಕೆ ಇಳಿದರೆ ಇದು ಸರಿ. ಆದರೆ ವ್ಯಾಕರಣ-ಶಾಸ್ತ್ರವೆಂಬುದು ಬೇರೆ ಬೇರೆ ದೇಶಗಳ ಬೇರೆ ಬೇರೆ ಭಾಷಾವಸ್ಥೆಗಳಲ್ಲಿ ನಿರ್ಮಿತವಾಗಿ ಬೇರೆ ಬೇರೆ ರೀತಿಗಳಲ್ಲಿ ಬೆಳೆದುಬಂದಿರುತ್ತದೆ. ಬೇರೆ ಬೇರೆ ದೇಶಗಳ ಗೃಹನಿರ್ಮಾಣಕ್ರಮದಂತೆ. ಮನೆಕಟ್ಟುವುದು ಮಾನವ ಜಾತಿಗೆ ಸಹಜ. ಆದರೆ ಅದರಲ್ಲಿ ಎಷ್ಟು ರೀತಿಗಳಿಲ್ಲ? ಒಂದೊಂದು ಜನಾಂಗದ್ದು, ಒಂದೊಂದು ದೇಶದ್ದು, ಒಂದೊಂದು ಊರಿನದು ಒಂದೊಂದು ರೀತಿ. ಆದರೂ ಅವುಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳು ಖಂಡಿತವಾಗಿಯೂ ಇವೆ. ಅದು ಮಾನವನಿಗೆ ಸಹಜವಾದುದರಿಂದಲೇ ಈ ಸಾಮ್ಯವು ಕಂಡುಬರುತ್ತದೆ. ಹಾಗೆಯೇ ಪಾಶ್ಚಾತ್ಯ ಪೌರಸ್ತ್ಯ ವ್ಯಾಕರಣಗಳೂ ಮೂಲಭೂತ ವಿಷಯಗಳಲ್ಲಿ ಒಂದೇ ಆದರೂ ಪ್ರತಿಪಾದನ ಪದ್ಧತಿಯಲ್ಲಿ ಬಹಳ ಅಂತರವಿದೆ. ಈ ಅಂತರವಾದರೂ ಬೇಕೆಂದು ಮಾಡಿಕೊಂಡುದಲ್ಲ; ಆಯಾ ಭಾಷೆಯ ಆಯಾ ಕಾಲದ ಸ್ವರೂಪಕ್ಕೆ, ಪರಿಸ್ಥಿತಿಗೆ ಹೆಚ್ಚುಕಡಿಮೆ ಸಹಜವೇ ಆಗಿರುತ್ತದೆ. ಹೀಗಿರುವಾಗ ಅನ್ಯವ್ಯಾಕರಣ ಪದ್ಧತಿಯ ಮರ್ಮದ ಪರಿಜ್ಞಾನವಿಲ್ಲದೆ, ಇದ್ದರೂ ಅದನ್ನು ಕೃತ್ರಿಮವೆಂದೋ ಅನೈಸರ್ಗಿಕವೆಂದೋ ಅಲಕ್ಷಿಸುವ ಪ್ರವೃತ್ತಿಯೊಡಗೂಡಿ, ಸ್ವಭಾಷಾವ್ಯಾಕರಣ ಪದ್ಧತಿಯಿಂದ ಮಾತ್ರ ಆ ಪರಭಾಷೆಯ ಪರೀಕ್ಷೆಯನ್ನು ಮಾಡಿದರೆ ಆ ಭಾಷೆಯ ನಿಜವಾದ ತತ್ವಗಳ, ಹಾಗೂ ಭಾಷಾವಿಜ್ಞಾನಿಗಳ ಗುರಿಯಾಗಿರುವ 'ಮಾನವಭಾಷೆ'ಯ ಮೂಲತತ್ವಗಳ ಯಥಾರ್ಥ ಜ್ಞಾನಕ್ಕೆ ಆಘಾತವಾಗದಿರದು. ಆದುದರಿಂದ ವಿಭಿನ್ನ ವ್ಯಾಕರಣಮಾರ್ಗಗಳ ಚೆನ್ನಾದ ಪರಿಚಯವು ತುಲನಾತ್ಮಕ ಭಾಷಾವಿಜ್ಞಾನಿಗೆ ಅವಶ್ಯವಾಗಿದೆ. ಇಲ್ಲದಿದ್ದರೆ, ಅಡಿಗೆಗೂ ಊಟಕ್ಕೂ ಒಂದೇ ಕೋಣೆಯನ್ನು ('ಅಟ್ಟುಂಬೊಳ'ವನ್ನು) ಬಳಸಿಕೊಳ್ಳುವ ಒಂದು ಮನೆಗೆ ಹೋಗಿ, ಅಲ್ಲಿ

ಅಡಿಗೆಯ ಉಪಕರಣಗಳನ್ನು ಕಂಡು ಪಾಕಶಾಲೆಯೆಂದು ನಿಶ್ಚಯಿಸಿ, ಅಲ್ಲಿ ಅವರು ಉಣ್ಣುವಾಗ ನೋಡದೆ, ಊಟಕ್ಕಾಗಿ ಪ್ರತ್ಯೇಕಿಸಿರುವ ಭೋಜನಶಾಲೆಯನ್ನು ಆ ಮನೆಯಲ್ಲಿ ಕಾಣದೆ, "ಈ ಮನೆಯವರು ಅಡಿಗೆ ಮಾಡುವುದರಿಂದಲೇ ಬದುಕುತ್ತಾರೆ, ಹೊರತು ಉಣ್ಣುವುದ ರಿಂದಲ್ಲ."— ಎಂದು ಸಿದ್ಧಾಂತ ಮಾಡಿಕೊಂಡು ಬರುವಂತಹ ಸಂನಿವೇಶ ಗಳು ಒದಗದಿರವು; ಒದಗಿವೆ. ಕೆಲಕೆಲವು ಭಾಷೆಗಳಲ್ಲಿ, ಪರಿಪುಷ್ಟ ಭಾಷೆಗಳಲ್ಲಿ, ಹೀಗೆ ಕೆಲಕೆಲವು ಪದಭೇದಗಳೇ ಇಲ್ಲವೆಂದು 'ಏಕಾಏಕಿ' ತೀರ್ಪುಗಳೂ ಆಗಿವೆ.

ಹಾಗಾದರೆ ಬೇರೆ ಬೇರೆ ಭಾಷೆಗಳ, ಆಯಾ ಸಾಹಿತ್ಯಗಳ ಮಾತ್ರವಲ್ಲ, ಆಯಾ ಆಡುನುಡಿಗಳ, ಸಮಗ್ರ ಪರಿಚಯವಾಗಿ ಅಂತಹದೊಂದು ಅನು ಕೂಲ ಪರಿಸ್ಥಿತಿ ಬರುವವರೆಗೆ ನಾವು ಸುಮ್ಮನಿರಬೇಕೆ? ದೊರಕಿದಷ್ಟು ಸಾಮಗ್ರಿಗಳಲ್ಲಿ ವಿಶ್ವಾಸಾರ್ಹವೆಂದು ತೋರುವಷ್ಟನ್ನು ಬಳಸಿಕೊಂಡು, ಯಥಾಮತಿಯಾಗಿ, ಭಾಷೆಗಳ ಭಿನ್ನ ಭಿನ್ನ ಅವಸ್ಥಾವಿಶೇಷಗಳನ್ನೂ ಮೂಲ ಸ್ವರೂಪವನ್ನೂ ಊಹಿಸುತ್ತ ಹೋಗುವುದೇ ಶ್ರೇಯಸ್ಕರವಲ್ಲವೆ? ಹೀಗ ಲ್ಲದೆ ಸುಮ್ಮನಿದ್ದರೆ ಜ್ಞಾನವು ಬೆಳೆದೀತೆ? — ಎಂದರೆ, ಈ ಪ್ರಶ್ನೆಗೆ ಒಪ್ಪಿಗೆ ಕೊಡಬೇಕಾಗುತ್ತದೆ. ಮತ್ತು ಈವರೆಗೆ ಭಾಷಾವಿಜ್ಞಾನವು ಬೆಳೆದು ದಾದರೂ ಇದೇ ಮಾರ್ಗದಲ್ಲಿ. ಅಲ್ಲಲ್ಲಿ ಹಲವರು ಸಂಶೋಧಕ ಮತಿ ಗಳಾದ ವಿದ್ವಾಂಸರು ಯಾವುದೊಂದು ಗುಂಪಿನ ಕೆಲವು 'ನುಡಿ'ಗಳನು ಆರಿಸಿಕೊಂಡು, ತಮಗೆ ಕಂಡ ನಿದರ್ಶನಗಳಿಂದ 'ಅನುವಾಹ' (Induction) ಕ್ರಮದಲ್ಲಿ ಅನುಮಾನಗಳನ್ನು ಕಟ್ಟುತ್ತ ಬರುತ್ತಾರೆ, ಬಂದಿ ದ್ದಾರೆ. ಅವುಗಳನ್ನವಲಂಬಿಸಿ ಮತ್ತೆ ಕೆಲವರು, ಸಾಧ್ಯವಾದರೆ ತಮ್ಮ ಪ್ರತ್ಯಕ್ಷ ಜ್ಞಾನವನ್ನೂ ಕೂಡಿಸಿಕೊಂಡು ಆ ಅನುಮಾನಗಳ ಸಾಹಾಯ್ಯದಿಂದ ಬೇರೆ ಕೆಲವು ಅನುಮಾನಗಳನ್ನು ಕಟ್ಟುತ್ತಾರೆ. ಇದೇನೋ ಸರಿ. ಆದರೆ ಅಂತಹ ಯಾವುದೊಂದು ಅನುಮಾನವನ್ನು ಅಥವಾ ಇನ್ನಷ್ಟು ಯಥಾರ್ಥ ವಾಗಿ ಹೇಳುವುದಾದರೆ ಊಹವನ್ನು, ತ್ರಿಕಾಲಾಬಾಧಿತ ಸತ್ಯಸಿದ್ಧಾಂತವೆಂದು ಭಾವಿಸಿ ಅದರಿಂದ ಯಥೇಚ್ಛವಾಗಿ 'ಅಪವಾಹ' (deduction) ಗಳನ್ನು ಮಾಡತೊಡಗಿದರೆ ಸತ್ಯದ ಸಮೀಪಕ್ಕೆ ಹೋಗುವುದು ಕಷ್ಟತರವಾಗ ಬಹುದು. ಭಾಷಾವಿಜ್ಞಾನದ ಪ್ರಯೋಜನವು ಭಾಷೆಯ ಅವಸ್ಥಾ-ವಿಶೇಷಗಳನ್ನು ತಿಳಿಯುವುದರಲ್ಲಿ ಮಾತ್ರ ಪರ್ಯವಸಾಯಿಯಾಗುವು

ದಾಗಿದ್ದರೆ, ಎಂದರೆ ಉದಾಹರಣೆಗಾಗಿ ಅಲಂಕಾರ ಶಾಸ್ತ್ರದಂತೆ ಇದೂ ವಾಙ್ಮಯಕ್ಷೇತ್ರದಿಂದ ಹೊರಗೆ ಹೋಗಲಾರದುದಾಗಿದ್ದರೆ, ಒಂದು ವೇಳೆ ಇದರ ಅಪಸಿದ್ಧಾಂತಗಳಿಂದಾದರೂ ಲೋಕಕ್ಕೆ ಹೆಚ್ಚಿನ ಹಾನಿಯಾಗುತ್ತಿರಲಿಲ್ಲವೆನ್ನಬಹುದು. ಆದರೆ ಇತಿಹಾಸಸಂಶೋಧನದಲ್ಲಿ ಹಾಗೂ ನಿರ್ಮಾಣದಲ್ಲಿ ಇದರ ಉಪಯೋಗವು ಬಹಳವಾಗಿ ಆಗುತ್ತಿರುವುದರಿಂದ, ಇತಿಹಾಸವು ಮಾನವಸಮಾಜಕ್ಕೆ ನವೀನ ಪ್ರೇರಣೆಯೀಯುವ ಮಹಾಶಕ್ತಿಯಾದುದರಿಂದ, ಭಾಷಾವಿಜ್ಞಾನದ ದೋಷದಿಂದ ಲೋಕಕ್ಕೆ ದೊಡ್ಡ ದೊಡ್ಡ ಅನ್ಯಾಯಗಳಾಗುವ ಸಂಭವವಿದೆ. ಹೀಗೆ ಆರ್ಯ ಅನಾರ್ಯ ವಿಚಾರಗಳಲ್ಲಿ ಅಸಮಗ್ರವಾದ ಜ್ಞಾನದ ಎಂದರೆ ಜ್ಞಾನಾಭಾಸದ ಫಲವಾಗಿ ನಮ್ಮ ಜನತೆಯೊಳಗೆ ಎಷ್ಟೋ ಭೇದಭಾವಗಳೂ ವೈಮನಸ್ಯಗಳೂ ಹುಟ್ಟಿವೆಯೆಂದು ವ್ಯಸನಪೂರ್ವಕವಾಗಿ ಹೇಳಬೇಕಾಗುತ್ತದೆ. ಆದಕಾರಣ ಯಾವ ಮಹಾಭಾಷಾವಿಜ್ಞಾನಿಯ ಅಭಿಪ್ರಾಯಗಳನ್ನಾದರೂ ತೀಕ್ಷ್ಣವಾದ ವಿಮರ್ಶಕ ದೃಷ್ಟಿಯಿಂದಲೇ ಪ್ರತಿಯೊಬ್ಬ ಶಬ್ದವಿದ್ಯಾಸಕ್ತನೂ ಇತಿಹಾಸಸಂಶೋಧಕನೂ ನೋಡಿ ಅಳೆದು ಎಣಿಸಿ ತೂಗಿ ಮತ್ತೆ ಸ್ವೀಕರಿಸಬೇಕಾಗಿದೆ.

ಸಾಮಾನ್ಯವಾಗಿ ಆರ್ಯಭಾಷೆಗಳೆಂದು ಕರೆಯಲ್ಪಡುವ ಭಾರತದ ಹಾಗೂ ವಿಲಾಯತಿಯ ಭಾಷೆಗಳ (Indo-European Languages) ಮೂಲಭಾಷಾಸ್ವರೂಪವನ್ನು ಭಾಷಾವಿಜ್ಞಾನಿಗಳು ತಮ್ಮ ತೀಕ್ಷ್ಣವಾದ ಊಹನ ಶಕ್ತಿಯಿಂದ ಸಂಭಾವಿಸಿರುವರಷ್ಟೆ. ಈ ವಿಷಯದಲ್ಲಿ ಬಹಳ ಭಯದಿಂದ ಮಾತಾಡುತ್ತಿದ್ದೇನೆ. ಏಕೆಂದರೆ, ಪ್ರಪಂಚದ ಮಹಾಮಹಾ ಭಾಷಾವಿಜ್ಞಾನಿಗಳ ಮತದ ವಿಮರ್ಶನ ಮಾಡುವುದು ಧಾರ್ಷ್ಟ್ಯವೆನ್ನಿಸಬಹುದು. ಆದರೆ ವಿಜ್ಞಾನದ ಮೂಲವೆಂದರೆ ಪರೀಕ್ಷೆ, ಸ್ವತಂತ್ರಪರೀಕ್ಷೆ; ತನಗೆ ಪ್ರಾಮಾಣಿಕವಾಗಿ ಕಂಡುದನ್ನು ಇದ್ದುದಿದ್ದಂತೆ ಪ್ರಕಟಪಡಿಸುವ ಸತ್ಯಸಂಧತೆ; ತನ್ನ ಅಭಿಪ್ರಾಯವು ತಪ್ಪೆಂದು ತೋರಿದೊಡನೆ ಪ್ರಾಂಜಲವಾಗಿ ಒಪ್ಪಿಕೊಳ್ಳುವ ನಿರಭಿಮಾನಿತೆ; ತಿದ್ದಿಕೊಳ್ಳುವ ನಿರಹಂಕಾರಿತೆ. ಈ ಬುದ್ಧಿಯನ್ನು ಅವಲಂಬಿಸಿಕೊಂಡು ಈ ಸಾಹಸವನ್ನು ಮಾಡುತ್ತಿದ್ದೇನೆ. ಏಕೆಂದರೆ ವಿಜ್ಞಾನಿಗಳಿಗಿಂತ ವಿಜ್ಞಾನವೇ ಮಹತ್ತರವಾದುದೆಂದು ನನ್ನ ಭರವಸೆ. ಆದ ಕಾರಣ ಹೇಗೂ ಧೈರ್ಯ ಮಾಡಿ ಹೇಳುತ್ತೇನೆ:— ಆ ಮೂಲಭಾಷೆಯನ್ನು ನಿರ್ಮಿಸಿದ ರೀತಿ ಕಲ್ಪನೆಯೊಳಗೆ ಬರುವುದಕ್ಕಾಗಿ ಒಂದು

ಹೋಲಿಕೆಯನ್ನು ಕೊಡಬಹುದು:—ಹತ್ತುಮಂದಿ ಮಕ್ಕಳಿದ್ದಾರೆ; ಅವರ ತಂದೆ ತೀರಿಹೋಗಿದ್ದಾನೆ. ಮಕ್ಕಳೆಲ್ಲರ ದೇಹಲಕ್ಷಣಗಳನ್ನು ಸೂಕ್ಷ್ಮಮತಿಯಾದೊಬ್ಬ ಚಿತ್ರಕಾರನು ನಿರೀಕ್ಷಿಸಿ, ಅವರ ತಂದೆಯ ಸ್ವರೂಪವನ್ನು ಊಹಾಬಲದಿಂದ ಚಿತ್ರಿಸಿದನೆನ್ನುವ. ಆ ಚಿತ್ರವು ನಿಜವಾಗಿಯೂ ಆ ತಂದೆಯ ಯಥಾವತ್ತಾದ ಪ್ರತಿಕೃತಿಯಾಗಬಲ್ಲುದೆ? ಹತ್ತು ಮಂದಿಗಳೊಳಗೆ ಹೆಚ್ಚಿನವರಲ್ಲಿ ಕಾಣುವ ಸಮಾನಲಕ್ಷಣವನ್ನು ಅವರ ತಂದೆಯ ಲಕ್ಷಣವಾಗಿರಬೇಕೆಂದು ಆ ಚಿತ್ರಕಾರನು ಊಹಿಸಿರಬಹುದು. ಆದರೆ ವಾಸ್ತವವಾಗಿ ಕೆಲವೇ ಮಕ್ಕಳಲ್ಲಿ ಅಥವಾ ಒಬ್ಬನೇ ಮಗನಲ್ಲಿ ಕಾಣುವ ವಿಶಿಷ್ಟ ಲಕ್ಷಣಗಳೇ ಆ ತಂದೆಯ ದೇಹಲಕ್ಷಣವಾಗಿರುವುದೂ ಸಂಭಾವ್ಯ. ಅಥವಾ ಆ ಮಕ್ಕಳೊಳಗೆ ಒಬ್ಬರಲ್ಲಿಯೂ ಕಾಣದಿರುವ ವಿಶಿಷ್ಟತೆ ಅವನಲ್ಲಿರುವುದೂ ಅಸಂಭವವಲ್ಲ. ಆ ತಂದೆಯು ಜೀವಿಸಿದ್ದಾಗ ತೆಗೆದ ನಿಜವಾದ ಚಿತ್ರವು ನಮ್ಮಲ್ಲಿದ್ದರೆ, ಈ ಚಿತ್ರಕಾರನ ಕೃತಿಯು ಎಷ್ಟರಮಟ್ಟಿಗೆ ಸಾಧುವೆಂದು ನಾವು ಪರೀಕ್ಷಿಸಬಹುದಿತ್ತು. ಅದು ಇಲ್ಲದಿರುವಾಗ ಈ ಕಲ್ಪಿತ ಚಿತ್ರವನ್ನು ತಂದೆಯ ಯಥಾರ್ಥ ರೂಪವೆಂದು ಭಾವಿಸುವುದು ಸರಿಯೆ? ಇಂತಹ ಸಂದರ್ಭದಲ್ಲಿ ಆ ಚಿತ್ರಕ್ಕೆ ಪೂಜ್ಯತೆಯನ್ನು ತೋರಿಸುವುದರಲ್ಲಿ ಆ ಮಕ್ಕಳೂ, ಆ ಚಿತ್ರಕಾರನ ಕೌಶಲವನ್ನು ಕೊಂಡಾಡುವುದರಲ್ಲಿ ಎಲ್ಲರೂ ತೃಪ್ತರಾದರೆ ದೋಷವಿಲ್ಲ; ಅದಕ್ಕೂ ಮುಂದೆ ಹೋಗಿ, ಆ ಚಿತ್ರದಲ್ಲಿ ತೋರುವಂತೆಯೇ ಅವನಿದ್ದನೆಂದಿಟ್ಟುಕೊಂಡು, ಅದರ ಆಯಾ ಅಂಗಸ್ವರೂಪಗಳು ಜನಕಗಳು; ಮಕ್ಕಳಲ್ಲಿ ಮಾತ್ರವಲ್ಲ, ಮೊಮ್ಮಕ್ಕಳಲ್ಲಿಯೂ ಕಾಣುವ ಈಯೀ ಸ್ವರೂಪಗಳು ಜನ್ಯಗಳು ಎಂದು ಮುಂತಾಗಿ ಊಹಿಸುತ್ತ, ನಂಬುತ್ತ ಹೋಗುವುದೆಂದರೆ ಎಷ್ಟರಮಟ್ಟಿಗೆ ಅದು ಸಾಧುವೆನ್ನಿಸಬಹುದು? ಎಷ್ಟರಮಟ್ಟಿಗೆ ಯಥಾರ್ಥಸ್ಥಿತಿಯ 'ಜ್ಞಾನ'ಲಾಭವಾಗಬಹುದು? ನಿಜವಾದ 'ಜಾತಕ' ಗೊತ್ತಿಲ್ಲದಿರುವಾಗ, 'ನಷ್ಟಜಾತಕ'ವೆಂದು ನಮ್ಮ ಜೋಯಿಸರು ನಿರ್ಮಿಸುತ್ತಾರಲ್ಲ, ಇದೂ ಅದರಷ್ಟೇ ಶಾಸ್ತ್ರೀಯವಲ್ಲವೆ? ಅಷ್ಟೇ ವೈಜ್ಞಾನಿಕವಲ್ಲವೆ?—ಎಂದು ನಮ್ರತೆಯಿಂದ ಕೇಳುತ್ತೇನೆ.

ಬರಿಯ ಹೋಲಿಕೆಯಿಂದ ವಿಷಯ ಪ್ರತಿಪಾದನವು ಆಗುವುದಿಲ್ಲ. ಅದಕ್ಕಾಗಿ ವಾಸ್ತವಿಕ ನಿದರ್ಶನವೊಂದನ್ನು ನಿರೂಪಿಸುತ್ತೇನೆ:— ಕನ್ನಡದಲ್ಲಿ 'ಅಯ್ದು' ಅಥವಾ 'ಐದು' ಎಂದಿರುವ ಸಂಖ್ಯಾವಾಚಕವು

ತಮಿಳಲ್ಲಿ ಐಂದು ಎಂದೂ, ಮಲಯಾಳದಲ್ಲಿ ಅಂಜ್' ಅಥವಾ ಅಂಜು ಎಂದೂ, ತುಳುವಿನಲ್ಲಿ ಅಯ್‌ನ್' ಎಂದೂ ಇರುವುದು. ಯಕಾರವು ಸಾನುನಾಸಿಕವಾಗಿಯೂ ಉಚ್ಚರಿಸಲ್ಪಡುವುದರಿಂದಾಗಿ ಹೀಗೆಲ್ಲ ವಿಕೃತಿಗಳಾಗಿವೆಯೆಂಬುದು ಮನದಟ್ಟಿದರೆ ಅಯ್ದು (=ಐದು) ಎಂಬುದೇ ಇವುಗಳೊಳಗೆ ಹಳೆಯ ರೂಪ ಎಂದು ತಿಳಿಯುವುದು. ಈ ಸಾನುನಾಸಿಕತೆಯ ವಿಚಾರದ ಹೊರತಾಗಿಯೂ ಡಾ. ಕಾಲ್ಡ್‌ವೆಲ್ಲರು, ಬೇರೆ ಕಾರಣಗಳಿಂದ, ಐದು ಎಂಬುದೇ ಮೂಲರೂಪವಾಗಿರಬೇಕೆಂದು ಊಹಿಸಿದ್ದಾರೆ. ಹೀಗೆಯೇ ಕನ್ನಡದಲ್ಲಿ 'ಮಂಜು'(ಹಿಮ-fog) ಎಂಬುದನ್ನು ತುಳುವಿನಲ್ಲಿ ಮೈಂದ್' ಎನ್ನುತ್ತಾರೆ. ಅಂಜು = ಐಂದು ಎಂಬುದರೊಡನೆ ಮಂಜು = ಮೈಂದ್' ಎಂಬುದನ್ನು ಹೋಲಿಸುವಾಗ, ಮಂಜು ಎಂಬುದಕ್ಕಿಂತ ಮೈಂದ್' ಎಂಬುದೇ ಪ್ರಾಚೀನತರವೆಂದು ಹೊಳೆಯುತ್ತದೆ. ಹಾಗಾದರೆ ಮೈಂದ ಎಂಬುದಕ್ಕೆ 'ಮೈದು' ಎಂಬ ಪೂರ್ವತರರೂಪವಿದ್ದಿರಬೇಕೆಂದು — ನಿದರ್ಶನವಿಲ್ಲ, ಆದರೂ — ಊಹಿಸಬಹುದಾಗುತ್ತದೆ. ಐದು ಮೈದು (=ಅಯ್ದು ಮಯ್ದು) ಗಳ ಕೊನೆಯಲ್ಲಿರುವುದು (ದು) ನಪುಂಸಕ ಪ್ರತ್ಯಯವಾಗಿ ತೋರುವುದರಿಂದ ಅದನ್ನು ಕಳೆದು ಹಾಕಿದರೆ ಅಯ್ ಮಯ್ ಎಂಬ ರೂಪಗಳು ಉಳಿಯುತ್ತವೆ. ಇವುಗಳೊಳಗೆ ಮಯ್ ಎಂದರೆ ತುಳುವಿನಲ್ಲಿ (ಕಜ್ಜಲ) ಕಾಡಿಗೆ ಎಂದರ್ಥ.[೧೭] ಹಾಗಾದರೆ ಕನ್ನಡದಲ್ಲಿ ಮಸಿ ಎನ್ನುವ ಶಬ್ದವೂ ಈ ಮಯ್ ಎಂಬ ಶಬ್ದವೂ ಒಂದೇ ಮೂಲದವೆ? ಪೆಸರ್ ಎಂದು ಕನ್ನಡದಲ್ಲಿ ನುಡಿಯುವ ಶಬ್ದವು ತಮಿಳಿನಲ್ಲಿ ಪೆಯರ್ ಎಂದಾಗುವುದರಿಂದ,[೧೮] ಈ 'ಮಸಿ' ಎಂಬುದೇ ಮಯ್ ಎಂಬುದರ ಮೂಲವಾಗಿರಬೇಕಲ್ಲವೆ? — ಆಗಿರಬಹುದು; ಆಗಿರಬೇಕು; ಆಗಿದೆ ಎನ್ನೋಣ. ಈ ಊಹವನ್ನು ಇಲ್ಲಿಗೇ ನಿಲ್ಲಿಸದೆ ಮುಂದೊತ್ತಿ, ಇದೇ ತತ್ವವನ್ನು ಅಯ್ ಎಂಬುದಕ್ಕೂ ಅನ್ವಯಿಸಿದರೆ ಅದರ ಮೂಲವು 'ಅಸಿ' ಎಂದು ಭಾವಿಸುವಂತಾಗುತ್ತದೆ. ಹಾಗಾದರೆ 'ಮೂಲ ದ್ರಾವಿಡದಲ್ಲಿ ಪಂಚಾರ್ಥಕವಾದ ಸಂಖ್ಯಾವಾಚಕವು 'ಅಸಿ' ಎಂದು ರೂಢವಾಗಿತ್ತು' ಎಂದು ನಾವು ಸಿದ್ಧಾಂತ ಮಾಡಿದರೆ ಅದು ಸತ್ಯವೆನ್ನುವುದಕ್ಕೆ ನಿದರ್ಶನವೆಲ್ಲಿದೆ? ಆಧಾರವೆಲ್ಲಿದೆ? ಹೆಚ್ಚೆಂದರೆ ಅದೊಂದು ಊಹಾವಸ್ಥೆಯಲ್ಲಿಯೇ ಇರಲು ತಕ್ಕುದಾದ ವಸ್ತು ಹೊರತು ವ್ಯವಹಾರ ಪ್ರಪಂಚಕ್ಕೆ ಬರಲು ತಕ್ಕುದಾದ, ಬೇರೆ ಅನುಮಾನಗಳಿಗೆ ಆಧಾರವಾಗಬಹುದಾದ, ಸತ್ಯದರ್ಶನವಲ್ಲ.[೧೯] ಭಾಷಾ-ವಿಜ್ಞಾನದ ಅನುಮಾನಪರಂಪರೆ ಹೇಗೆ ನಮ್ಮನ್ನು ಕಲ್ಪನಾಪ್ರಪಂಚಕ್ಕೆ

ಒಯ್ಯುತ್ತಿದೆಯೆಂಬುದನ್ನೂ, ಆ ಅನುಮಾನಪರಂಪರೆಯ ಫಲಗಳನ್ನು ವ್ಯವಹಾರ ಪ್ರಪಂಚಕ್ಕೆ ತರುವ ಮೊದಲು, ಯಾವನೊಬ್ಬ ಮಹಾ ವಿದ್ವಾಂಸನ ಮತವನ್ನಾದರೂ ಎಷ್ಟರಮಟ್ಟಿಗೆ ಸೂಕ್ಷ್ಮವಾದ ಮತ್ತು ನಿರ್ದಾಕ್ಷಿಣ್ಯವಾದ ವಿಮರ್ಶೆಗೆ ಒಳಪಡಿಸುವುದು ಅವಶ್ಯ ಎಂಬುದನ್ನೂ ಗ್ರಹಿಕೆಗೆ ತರುವುದಕ್ಕಾಗಿ ಈ ವಿವರಗಳನ್ನು ಇಷ್ಟು ಲಂಬಿಸಿರುತ್ತೇನೆ; ಹೊರತು, ಅವರ ಪ್ರಯತ್ನಗಳು ಲಘುವೆಂದಲ್ಲ. ಆ ಮಹನೀಯರೆಲ್ಲ ಪೂಜ್ಯರು.— "ನಮಃ ಪೂರ್ವೇಭ್ಯಃ"

ಹೀಗೆ ವಿಜ್ಞಾಪಿಸಿಕೊಂಡಂತೆ, ಈ ಭಾಷಾವಿಜ್ಞಾನವೆಂಬುದು ಒಂದು ಘೋರವಿಷಯಾರಣ್ಯ; ಅನುಮಾನಪ್ರಪಂಚ. ಇದರೊಳಗೆ ಪ್ರವೇಶಿಸುವಾಗ ನನಗೆ ಅತ್ಯಂತ ಭೀತಿಯುಂಟಾಗುತ್ತದೆ. ಆದರೂ ನನ್ನ ಅಲ್ಪಮತಿಗೆ ಗೋಚರವಾದುದನ್ನು, ಬುದ್ಧಿಗೆ ಯುಕ್ತಿಯುಕ್ತವೆಂದು ಕಂಡುದನ್ನು, ನನ್ನ ಮನಃಸಾಕ್ಷಿ ಒಪ್ಪಿದುದನ್ನು ಸಾರಾಸಾರ ವಿಚಾರಶೀಲರ ಮುಂದೆ ನಿವೇದಿಸಿಕೊಳ್ಳುತ್ತೇನೆ. ಇದರಲ್ಲಿ ಸಹಜವಾಗಿಯೂ ಇರಬಹುದಾದ ದೋಷಗಳನ್ನು ಕಿತ್ತುಹಾಕಿ ಸ್ವೀಕಾರ್ಯವಾದುದನ್ನು ಮಾತ್ರ ಆರಿಸಿಕೊಳ್ಳುವ ಹೊಣೆಗಾರಿಕೆ ನಿರ್ಮತ್ಸರರಾದ ವಿದ್ವಾಂಸರದಾಗಿದೆ.

# ಅಡಿಟಿಪ್ಪಣಿಗಳು

೧. ಕನ್ನಡ ಸಾಹಿತ್ಯದ ಪ್ರಾಚೀನತೆ – ಶ್ರೀ ಗೋವಿಂದ ಪೈ.

೨. ಇನ್ನು ಕೆಲವರು ಕನ್ನಡದಲ್ಲಿ ಈ ಶಾಸ್ತ್ರವನ್ನು 'ನಿರುಕ್ತ' ಎಂದು ವ್ಯವಹರಿಸತೊಡಗಿರುವುದಕ್ಕೂ ಇದೇ ಕಾರಣವಾಗಿರಬಹುದು.

೩. 'ನುಡಿ' ಎಂಬುದನ್ನು ಇಲ್ಲಿ Dialect ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ.

೪. ಸಂಶ್ಲೇಷಕ = Synthetical, ವಿಶ್ಲೇಷಕ = Analytical,

೫. ದಿವಂಗತ ಆರ್. ನರಸಿಂಹಾಚಾರ್ಯರ ಭಾಷಾತುಲನಾತ್ಮಕ ಪ್ರಯತ್ನಗಳು, ಕನ್ನಡ ಕೈಪಿಡಿಯಲ್ಲಿರುವ ತಮಿಳು ಛಂದಸ್ಸಿನ ಕೆಲವು ವಿಶೇಷಗಳ ದಿಗ್ದರ್ಶನ ಇತ್ಯಾದಿ ಕೆಲವು ಶ್ಲಾಘ್ಯ ಪ್ರಯತ್ನಗಳು ಕನ್ನಡದಲ್ಲಿ ಆಗಿರುವುವಾದರೂ ತಮಿಳಿನಲ್ಲಿ ಕನ್ನಡದ ಕುರಿತು ಏನೂ ನಡೆದಿಲ್ಲವೆನ್ನಬಹುದು.

೬. ಇದಕ್ಕೆ ಆಧಾರಗಳಿವೆ. ಉದಾ:— ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪು........ (ಪಂಪಭಾರತ ೪–೨೯). ಅಲ್ಲದೆ ಕಾಳಸ, ಕುಣಿಕೆ ಇತ್ಯಾದಿಯಾಗಿ, ಲಕ್ಷಣಗ್ರಂಥಗಳಲ್ಲಿ ಕಂಡುಬಾರದ, ಸಾಹಿತ್ಯಮೀಮಾಂಸೆಯ ಪಾರಿಭಾಷಿಕ ಶಬ್ದಗಳು ಕಾವ್ಯಗಳಲ್ಲಿವೆ. ಉದಾ:—ಗದಾಯುದ್ಧ (೧–೩೯)

೭. ಇದನ್ನು ಅವನಿಗಿಂತ ಮೊದಲಿನವರೂ ಹೇಳಿದ್ದಾರೆ. ಈ ಸಾನುನಾಸಿಕ ಯ ವ ಲ ಗಳು ನಮ್ಮ ದೃಷ್ಟಿಯಲ್ಲಿದ್ದರೆ ಪಯ್, ಪಯಿನ್, ಪನ್; ಅಯ್ದು, ಐದು', ಐಂದು, ಐನ್', ಅಂಜ್'— ಇತ್ಯಾದಿಗಳೊಳಗೆ ಮೂಲರೂಪ ಯಾವುದು, ಆಯಾ ಭಿನ್ನಸ್ವರೂಪಗಳು ಹೇಗುಂಟಾದವು ಇತ್ಯಾದಿ ಅನೇಕ ಜಟಿಲ ಸಮಸ್ಯೆಗಳು ಸುಲಲಿತವಾಗಿ ಬಗೆಹರಿಯುತ್ತವೆ.

೮. ಇಂತಹದೊಂದು ಭಾವವನ್ನು ನಿರಸನ ಮಾಡುವುದಕ್ಕಾಗಿಯೆ 'ಪೇರಗತ್ತಿಯಂ' ಎಂಬ ತಮಿಳು ವ್ಯಾಕರಣ ಗ್ರಂಥದಲ್ಲಿ,-(ಲಕ್ಷ್ಯವಾದ) ಭಾಷೆಯಿಂದಲೇ (ಲಕ್ಷಣವಾದ) ವ್ಯಾಕರಣವುಂಟಾಗುವುದೆಂದು ಪ್ರತಿಪಾದನ ಮಾಡುವ ಪ್ರಸಂಗ ಬಂತೆಂದು ತಿಳಿಯಬೇಕಾಗುತ್ತದೆ:—

ಇಲಕ್ಕಿಯ ಮಿನ್ರಿಯಿಲಕ್ಕಣಮಿನ್ರೇ। ಇಲಕ್ಕಣಮಿನ್ರಿ
ಇಲಕ್ಕಿಯಮಿನ್ರೇ॥
ಎಳ್ಳಿನಿನ್ರೆಣ್ಣೆಯೆಡುಪ್ಪದು ಪೋಲ। ಎಲಕ್ಕಿಯತ್ತಿನಿನ್ರೆಡು
ಪಡುಮಿಲಕ್ಕಣಂ॥

Page 31. History of Kannada Language —
R. Narasinhachar

೯. ಯ ರ ಲ ಣ ನ ಳ ಱ ೞ ವರ್ಣೋತ್ಕರಮೆ ವಲಂ ಪದದ ಕಡೆಯೊಳಸ್ವರವಿಧಿಯಂ ಪಿರಿದುಂ ತಾಳ್ದುಗುಂ (ಸೂ-೪೮) ಎಂಬ ಸೂತ್ರ ಭಾಗದ— "ಯಕಾರ.......ೞಕಾರಂಗಳ್ ಕನ್ನಡದೊಳ್ ಪಿರಿದುಂ ವ್ಯಂಜ ನಾಂತಗಳಾದ ಪದಂಗಳಾಗಿರ್ಪುವು." — ಎಂಬ ವೃತ್ತಿ, ಸೂತ್ರಾರ್ಥವನ್ನು ಸಂಪೂರ್ಣವಾಗಿ ತೋರಿಸುವುದಿಲ್ಲ. ಆ "....... ವರ್ಣೋತ್ಕರಮೆ" ಎಂಬ ಅವಧಾರಣದಿಂದ ಆ ವರ್ಣಾಂತಗಳಾದ ಪದಗಳು ಹೊರತು ಉಳಿದು ವೆಲ್ಲ ಸ್ವರಾಂತಗಳೇ ಸರಿ, ಎಂಬರ್ಥವೂ ಸೂತ್ರದ್ದಾಗಿದೆ.

೧೦ ಪಿರಿಯರ್ ಸಲಿಪರ್ ದಡ್ಡ-
ಕ್ಕರದ ಱೞಕ್ಕೈದೆ ರೇಫೆವೆರಸಿದ ದಡ್ಡ-
ಕ್ಕರಮಂ ಱೞನಾಗದನು-
ಚ್ಚರಿಸಲ್ಕಾಗ+ಇರ್ದ ತೆಱದಿನುತದು ಶುದ್ಧಂ (ಸೂತ್ರ-೨೪)

ಅವರ್ಗೀಯ ವರ್ಗೀಯ ವ್ಯಂಜನಸಂಯೋಗಗಳಲ್ಲಿ ದಡ್ಡಕ್ಕರ (ದ್ವಿತ್ವ) ವಾಗುವುದು ವರ್ಗೀಯವಾದುದರಿಂದ, ಆ ಅವರ್ಗೀಯ ವ್ಯಂಜನಕ್ಕೆ ಪ್ರಾಸದ ಮಟ್ಟಿಗೆ ಪ್ರಾಧಾನ್ಯವಿಲ್ಲದಿದ್ದರೂ, ಅಂತಿರುವೆಡೆಗಳಲ್ಲಿಯೂ ಮೊದಲನೆಯ ಪಾದದಲ್ಲಿ ಬಂದ ಅವರ್ಗೀಯವನ್ನೇ ಉಳಿದ ಪಾದಗಳಲ್ಲಿಯೂ ನಮ್ಮ ಕವಿಗಳು ಪ್ರಾಯಃ ಪ್ರಯೋಗಿಸಿದ್ದಾರೆ. ಆದರೆ ರೇಫ ೞಕಾರಗಳ ಕುರಿತು 'ಪಿರಿಯರ್' ಭಿನ್ನಮಾರ್ಗವನ್ನನುಸರಿಸಲು, ೞಕಾರದ ಕನ್ನಡ ಉಚ್ಚಾರದಲ್ಲಿ ರತ್ವವು ಮೊದಲು ಹೆಚ್ಚಿದ್ದುದೇ ಕಾರಣವೆನ್ನಬೇಕು. ವೊಡ್ಡಾರಾಧಣ ಎಂಬ ಪುರಾತನ ಗ್ರಂಥದಲ್ಲಿ ರಕಾರ ೞಕಾರಗಳ ವಿನಿಮಯವು ಹೆಚ್ಚಾಗಿ ತೋರುತ್ತದೆ. ಇರ್ದು=ಇೞ್ದು ಹೀಗೆ ಎರಡು ರೂಪಗಳೂ ಅದರಲ್ಲಿ ಕಾಣುತ್ತವೆ. ಅಲ್ಲದೆ ಕನ್ನಡದ ೞಕಾರವೆಲ್ಲ, ಅದರ ನೆರೆಯ ತುಳುವಿನಲ್ಲಿ ರಕಾರ. ಉದಾ: — (ಕನ್ನಡ) ಬಾೞೆ = (ತುಳು) ಬಾರೆ.

(ಕ) ಕೊೞೆ= (ತು) ೧ ಕುರೆ (ನಾಮ), ೨ ಕುರಿ (ಧಾತು). (ಕ)ಪೊೞ್ತು= (ತು) ಪೊರ್ತು. ಇತ್ಯಾದಿ. ಇದರಿಂದ ಕನ್ನಡ ನುಡಿಯಲ್ಲಿ ಮೊದಲು ೞಕಾರೋಚ್ಚಾರದಲ್ಲಿ ರತ್ವಾಂಶವು ಹೆಚ್ಚಿದ್ದು ಳತ್ವಾಂಶವು ಕಡಿಮೆಯಿತ್ತೆಂದೂ, ಬರಬರುತ್ತಾ ಳತ್ವಾಂಶವು ಹೆಚ್ಚಿ ಕೊನೆಗೆ ಳಕಾರವೇ ಆಗಿ ಪರಿಣಮಿಸಿತೆಂದೂ ಊಹಿಸಬೇಕಾಗುತ್ತದೆ.

೧೧. ಕನ್ನಡದ ಆರಂಭದ ಬೆಳವಣಿಗೆಗೆ ಪ್ರಾಕೃತವು ಹೆಚ್ಚುಕಡಿಮೆ ಸಂಸ್ಕೃತದಷ್ಟೇ ಸಹಾಯವಾಗಿತ್ತು. ಕವಿರಾಜಮಾರ್ಗದಲ್ಲಿ ಸಂಸ್ಕೃತ ಪ್ರಾಕೃತಗಳನ್ನು ಭಾಷಾವ್ಯವಸ್ಥೆಯ ವಿಷಯದಲ್ಲಿ ಸಮಾನವಾಗಿ ಗೌರವಿಸಲಾಗಿದೆ:—

ಸಕ್ಕದಮುಂ ಪಾಗದಮುಮ-
ದಕ್ಕುಂ ಬಗೆದಂತೆ ಸಮಱೆ ಪೇೞಲ್ ಮುನ್ನಂ
ನಿಕ್ಕುವನೊಳವಪ್ಪುದಱಿಂ
ತಕ್ಕಂತಪ ಱಪಱ ಲಕ್ಷ್ಯಮುಂ ಲಕ್ಷಣಮುಂ (೧-೪೧)

೧೨. ಪದಾರಂಭದ ಏಕಾರ ಅಥವಾ ಎಕಾರವನ್ನು ಸಹ ಕೆಲವರು ಯಕಾರ ಸಹಿತವಾಗಿ ಯೇ ಅಥವಾ ಯಾ, ಯೆ ಅಥವಾ ಯ ಎಂದು ಉಚ್ಚರಿಸುವುದು ಕನ್ನಡ ನಾಡಿನಲ್ಲಿ ತುಂಬ ಕಂಡುಬರುತ್ತದೆ. ಇದನ್ನು ಹಿಡಿದುಕೊಂಡು, ಆ ಶಬ್ದಗಳು ಮೊದಲು ಯಕಾರಾದಿಯಾಗಿದ್ದುವು ಎಂದು ಅನುಮಾನಿಸುವುದು ಸರಿಯಾಗಲಾರದು. ಅಂತಹ ಸಂದರ್ಭಗಳನ್ನು ನಾವು ಪರೀಕ್ಷಿಸುತ್ತ ಹೋದರೆ ಅಲ್ಲೆಲ್ಲ ಮೂಲವು ಕೇವಲ ಸ್ವರ (ಏ ಅಥವಾ ಎ) ಎಂದು ಗೊತ್ತಾಗದಿರದು. ಉದಾ:— ಏತ— ಯಾತ, ಏಲಕ್ಕಿ— ಯಾಲಕ್ಕಿ, ಏನು— ಯೇನು, ಏಕೆ— ಯಾಕೆ; ಎಮ್ಮೆ— ಯೆಮ್ಮೆ, ಎರಡು— ಯೆರಡು — ಯಡ್ಡು. ಇಲ್ಲೆಲ್ಲ ಯಾವುದು ಮೂಲರೂಪ? (ಹೀಗೆಯೇ ಓಷ್ಠ್ಯಸ್ವರಾರಂಭಶಬ್ದಗಳನ್ನು ವಕಾರ ಸಹಿತವಾಗಿ ಉಚ್ಚರಿಸುವುದೂ ಕೆಲವು ಬಾರಿ ಕೇಳಿಬರುವುದು. ಉದಾ: — ಓಲೆ — ವಾಲೆ, ಒಂದು— ವೊಂದು — ವಂದು.) ಇದಕ್ಕೆಲ್ಲ ಕೇವಲ ಸ್ವರೋಚ್ಚಾರಕ್ಕಿಂತ ಯಕಾರ ಸಹಿತವಾದ ಉಚ್ಚಾರದಲ್ಲಿ ಶ್ರಮ ಕಡಿಮೆಯಾಗುವುದೇ ಕಾರಣವಾಗಿದೆ. ಹೀಗೆಯೇ ನಿಷೇಧಾರ್ಥಕವಾದ 'ಬೇಡ' ಎಂಬುದರಲ್ಲಿರುವ ಏಕಾರವನ್ನು, ಇಂಗ್ಲಿಷಿನ bad ಎಂಬುದರಲ್ಲಿರುವ ಸ್ವರದಂತೆ ಉಚ್ಚರಿಸು

ವವರು ಬಹುಮಂದಿ. ಇನ್ನು ಕೆಲವರು ಇದರಿಂದಲೂ ಮುಂದೊತ್ತಿ, ಸುಮಾರು 'ಬ್ಯಾಡ' ಎಂದೂ ಉಚ್ಚರಿಸುವುದುಂಟು. ಇಲ್ಲಿ ಮೂಲ ರೂಪದ ಕುರಿತು ಸಂದೇಹವಿಲ್ಲವಷ್ಟೆ? ವಾಸ್ತವವಾಗಿ ನೋಡಿದರೆ, ದಾಕ್ಷಿಣ್ಯಕ್ಕೋ ನಗೆಗೂಡಿದ ಮಾತಾಗಿಯೋ, ಬಾಯನ್ನು ಚಪ್ಪಟೆಯಾಗಿ ಅಗಲಿಸಿ 'ಬೇಡ' ಎಂಬುದನ್ನು ಉಚ್ಚರಿಸಿದಾಗ ಆ **ಏ** ಕಾರವು bad ಎಂಬುದರಲ್ಲಿರುವ ಸ್ವರದಂತಾಗುತ್ತದೆ. ಬಾಯಿ ಮತ್ತಷ್ಟು ಚಪ್ಪಟೆಯಾದಾಗ ನಾಲಗೆಗೆ ತಾಲು ಸ್ಪರ್ಶವಾಗಿ **ಯ** ಕಾರವು ಹುಟ್ಟಿಬಿಡುತ್ತದೆ. ಆಗ ಅದು 'ಬ್ಯಾಡ' ಎಂಬಂತಾಗುತ್ತದೆ. ಇದರಂತೆಯೇ 'ಹೇಗೆ' ಎಂಬುದು ಕೊನೆಗೆ 'ಹ್ಯಾಗೆ' ಆಗಿದೆ. (ಹಾಗೆಯೇ ಓಷ್ಠ್ಯ ಸ್ವರವಿರುವಲ್ಲಿ ವಕಾರ ಹುಟ್ಟಿ 'ಕೋಟ'— ಕ್ವಾಟ, ದೋಣಿ — ದ್ವಾಣಿ ಎಂದೂ ಕೆಲವು ಕಡೆಗಳಲ್ಲಿ ಕೇಳಿಬರುತ್ತದೆ.) ಇದೇ ಕ್ರಮದಲ್ಲಿ **ಏನ್** ಎಂಬ ಸರ್ವನಾಮವು **ಯಾನ್** ಎಂದಾಗಿದೆ. ತುಳುವಿನಲ್ಲಿ ಏನ್' ಯಾನ್' ಎಂಬ ಎರಡು ರೂಪಗಳೂ ಕೇಳಿಬರುತ್ತವೆಯಾದರೂ, ಉಚ್ಚಾರಗಳು ಸ್ಫುಟವಾಗಿರುವ ಒಳನಾಡಿನಲ್ಲಿ ಏನ್' ಎಂಬುದೇ ಹೆಚ್ಚಾಗಿ ಕೇಳುತ್ತದೆ. ಕರೆನಾಡಿನಲ್ಲಿ, ಉಚ್ಚಾರಗಳು ಬಹುಧಾ ವಿಕೃತವಾಗಿರುವಲ್ಲಿ ಮಾತ್ರ, ಯಾನ್' ಎಂಬುದು ಅಧಿಕವಾಗಿದೆ. [ಆನುಷಂಗಿಕವಾಗಿ,— ಹಳಗನ್ನಡದ ಆರ್ ಎಂಬ ಪ್ರಶ್ನಾರ್ಥಕ ಸರ್ವನಾಮವು ಹೊಸಗನ್ನಡದಲ್ಲಿ ಯಾರು ಎಂದಾಗಲು, ಪ್ರಶ್ನಾರ್ಥಕವಾದ ಮೂಲಶಬ್ದದಲ್ಲಿ ಏಕಾರವಿದ್ದಿರಬಹುದಾದುದೇ ಕಾರಣವೆ? ಎಂಬ ಪ್ರಶ್ನೆ ಹುಟ್ಟುತ್ತದೆ. ತುಳುವಿನಲ್ಲಿ ಸಮಾನಾರ್ಥಕವಾದ ಶಬ್ದವು ಏರ್'. ಇದರ ಏಕವಚನ ನಪುಂಸಕ ರೂಪವು ತಮಿಳಿನಲ್ಲಿ **ಎದು**. ಕನ್ನಡದ ಏನ್ ಅಥವಾ ಏನು ಎಂಬುದೂ ಈ ಊಹೆಗೆ ಪುಷ್ಟಿ ಕೊಡುತ್ತದೆ. ದಕ್ಷಿಣ ಕನ್ನಡದ ಹವೀಕರಲ್ಲಿ ಹಳೆಯ ಹೆಂಗುಸರು ಇಂದೂ, ಯಾವುದು ಎಂಬರ್ಥದಲ್ಲಿ 'ಏವದು' ಎಂದು ಹೇಳುವುದನ್ನು ಕೇಳಬಹುದು. ಕನ್ನಡದಲ್ಲಿ ಪ್ರಶ್ನಾರ್ಥಕ ನಿಪಾತಗಳು **ಏ** ಮತ್ತು ಓ ಎಂದು ಎರಡು (ಇವುಗಳಿಗೆ ಹ್ರಸ್ವರೂಪಗಳೂ ಇವೆ.) ಇರುವುವಾದರೂ, ಉದಾ:— ರಾಮನು ಬಂದನೇ?— ಬಂದನೋ? ಎಂಬಿವುಗಳೊಳಗೆ **ಏ** ಕಾರ ರೂಪವೇ ಪ್ರಾಚೀನತರವೆಂದು, ಕೊನೆಯ ಪಕ್ಷ ಬಹುರೂಢವೆಂದು, ಹಳೆಯ ಕಾವ್ಯಗಳ ಪರಿಶೀಲನದಿಂದ ತಿಳಿದು ಬರುವುದು. (ಭಾಷೆಯಲ್ಲಿ ನಿಪಾತ ಸ್ವರಗಳು ಅತ್ಯಂತ ಪೂರ್ವಾವಸ್ಥೆಯ ಅವಶೇಷಗಳು; ವೈಖರೀಭಾಷೆ ವಿಕಾಸಗೊಳ್ಳುವುದಕ್ಕೆ ಮೊದಲು,

ಮಧ್ಯಮಾಕಾಲದಲ್ಲಿಯೇ ಇದ್ದಿರಬಹುದಾದುವುಗಳು.) ಇದರಿಂದಾಗಿ ಪ್ರಶ್ನಾರ್ಥಕವಾದ ಮೂಲಶಬ್ದದಲ್ಲಿ ಏಕಾರವಿದ್ದಿರಬೇಕೆಂದು ಹೇಳಬಹುದಾಗಿದೆ.]

೧೩. ಕಾಲ್ಡ್‌ವೆಲ್ಲರ ಈ ಮಾತಿಗೆ ಆಧಾರ ಕಾಣುವುದಿಲ್ಲ. ಕನ್ನಡದಲ್ಲಿ ಅವರಿಗಿಂತ ಖಂಡಿತವಾಗಿಯೂ ಅಧಿಕ ಪರಿಶ್ರಮ ಮಾಡಿದ ಕಿಟ್ಟೆಲರ ಕೋಶದಲ್ಲಿ **ಯಾನ್** ಎಂಬುದು ಕನ್ನಡ ರೂಪವಾಗಿ ಕಾಣುವುದಿಲ್ಲ; 'ಯಾನು' – ಎಂಬ ಒಂದು ರೂಪವನ್ನು – ಗ್ರಂಥಾಧಾರದಿಂದಲ್ಲ—ರೀವ್ ಎಂಬವರು ರಚಿಸಿದ ಕನ್ನಡ ಕೋಶದ ಆಧಾರದಿಂದ ತೆಗೆದುಕೊಡಲಾಗಿದೆ. ವಸ್ತುತಃ 'ಯಾನು'— ಎಂಬ ರೂಪವನ್ನು ಉತ್ತರ ಕನ್ನಡ ಜಿಲ್ಲೆಯ ಹವೀಕರಲ್ಲಿ ಕೆಲವರು ಉತ್ತಮಪುರುಷ ಸರ್ವನಾಮವಾಗಿ ಬಳಸುತ್ತಾರೆ. ಆದರೆ ಇದು ಪುರಾತನ ರೂಢಿ ಎನ್ನಲಾಗುವುದಿಲ್ಲ. ಏಕೆಂದರೆ ಅನೇಕ ಶತಮಾನಗಳಿಂದ ಮೊದಲುಗೊಂಡು ೧೮ನೆಯ ಶತಮಾನದ ಮಧ್ಯದ ವರೆಗೆ ಉತ್ತರ ಕನ್ನಡ ಜಿಲ್ಲೆಯಿಂದ ದಕ್ಷಿಣ ಕನ್ನಡಕ್ಕೆ ಆಗಾಗ ವಲಸೆ ಬಂದು ನೆಲಸಿರುವ ಹವೀಕ ಸಮುದಾಯದಲ್ಲಿ ಈ 'ಯಾನು' ಇಲ್ಲವೇ ಇಲ್ಲ. ಸರ್ವತ್ರ ಅದು 'ಆನು' ಎಂದೇ ಇದೆ. ಆದುದರಿಂದ 'ಆರು' ಯಾರು ಆದಂತೆ ಉತ್ತರ ಕನ್ನಡದಲ್ಲಿ 'ಯಾನು' ಇತ್ತೀಚೆಗೆ ಬಳಕೆಗೆ ಬಂದುದಾಗಿರಬೇಕು; ಅಥವಾ ಕೇವಲ ಪ್ರಾದೇಶಿಕ ವೈಚಿತ್ರ್ಯವಾಗಿ ಇದ್ದಿರಬೇಕು.

೧೪. ಹವೀಕರ ನುಡಿಯಲ್ಲಿ 'ಸಾಸಮೆ' ಎಂದೇ ರೂಢಿ. ಕಿಟ್ಟೆಲರ ಕೋಶದಲ್ಲಿ ಈ ರೂಪವಿಲ್ಲವಾದರೂ 'ಸಾಸಿಮೆ' ಎಂಬ ರೂಪವಿದೆ. ಅಲ್ಲದೆ ತುಳುವಿನಲ್ಲಿ ಇದು 'ದಾಸಿಮೆ' ಎಂದೇ ಇದೆ. ಈ ವಿಕಾರಗಳಲ್ಲಿರುವ ಮಕಾರಗಳಿಗೆಲ್ಲ ಸಾಸವೆ ಅಥವಾ ಸಾಸಿವೆ ಇತ್ಯಾದಿಗಳಲ್ಲಿರುವ ವಕಾರವು ಸಾನುನಾಸಿಕವಾಗಿ ಉಚ್ಚಾರಕ್ಕೆ ಬಂದುದೇ ಕಾರಣವೆಂಬುದರಲ್ಲಿ ಸಂದೇಹವಿರಲಾರದು.

೧೫. ಹಿಂದೆ ಓಷ್ಠ್ಯಸ್ವರವಿಲ್ಲದೆ ಮುಂದೆ ಓಷ್ಠ್ಯಸ್ವರವಿದ್ದರೂ ಒಮ್ಮೊಮ್ಮೆ ವಕಾರಾಗಮವಾಗುವುದಿದೆ. ಉದಾ: — ಆ + ಊರಲ್ಲಿ = ಆವೂರಲ್ಲಿ. ಹೀಗುಂಟಾದ ಆಗಮ ವಕಾರಗಳಿಗೆ ಮಕಾರಾದೇಶವು ಕನ್ನಡದಲ್ಲಿ ಎಲ್ಲಿಯೂ ತೋರುವುದಿಲ್ಲ.

೧೬. ಉದಾ:— **ಗುಂ ಕುಂ** ಪ್ರತ್ಯಯಗಳು ಕೇವಲ ಭವಿಷ್ಯತ್ ಕಾಲಸೂಚಕವೆಂದು, ಪ್ರಾಯಃ ಪುರಾತನ ಮತವನ್ನನುಸರಿಸಿ, ನಾಗವರ್ಮನು "ಗುಂ ಕುಮೌ ಸರ್ವತ್ರ ಭವಿಷ್ಯಂತ್ಯಾಃ" (ಭಾಷಾಭೂಷಣ ಸೂ. ೨೧೪) ಎಂದು ಹೇಳಿರುತ್ತಾನೆ. ಆದರೆ ಕೇಶಿರಾಜನು ಪರೀಕ್ಷಿಸಿ ಮೂರು ಕಾಲಗಳಲ್ಲಿಯೂ ಅದಕ್ಕೆ ವ್ಯಾಪ್ತಿಯನ್ನು ಹೇಳಿದ್ದಾನೆ. ಹವೀಕರ ನುಡಿಯಲ್ಲಿ ಇಂದಿಗೂ **ಗು ಕು** ಗಳು ಭವಿಷ್ಯತ್ ಸಂಭಾವನಾರ್ಥಕವಾಗಿ ಮಾತ್ರ ಪ್ರಯುಕ್ತವಾಗುತ್ತವೆ. ಈ ನುಡಿಯಲ್ಲಿ ಅತಿಪುರಾತನ ಲಕ್ಷಣಗಳು ತುಂಬ ಇರುವುದರಿಂದಲೂ, ನಾಗವರ್ಮನ ಮಾತಿನಿಂದಲೂ, ಅವು ಆದಿಯಲ್ಲಿ ಅಷ್ಟೇ ಅರ್ಥವನ್ನು ಕೊಡುತ್ತಿದ್ದುವೆಂದು ಊಹಿಸಬೇಕಾಗಿದೆ. ಹೀಗೆ ಭಾಷೆಯ ಬೇರೆ ಬೇರೆ ಅವಸ್ಥೆಗಳಲ್ಲಿ ಅರ್ಥಪ್ರಕಾಶನವಿಧಾನವು ಬೇರೆ ಬೇರಾಗಿರುವುದರಿಂದ ಆಯಾ ಕಾಲಗಳ ವ್ಯಾಕರಣ ನಿಯಮಗಳೂ ಬೇರೆ ಬೇರಾಗಬೇಕಾಗುತ್ತವೆ.

೧೭. ಮುದ್ದಣಕವಿ ಈ ಶಬ್ದವನ್ನು ಕನ್ನಡಕ್ಕೂ ತಂದಿದ್ದಾನೆ. 'ಎಚ್ಚರ ಮಯ್ಗಣ್ಣ ಪೆಣ್ಣೆ' ಎಂದು 'ರಾಮಾಶ್ವಮೇಧ' ದಲ್ಲಿ ಮನೋರಮೆಯನ್ನು ಕರೆದಿದ್ದಾನೆ.

೧೮. ಮುಂದೆ ಇದೇ ನಿಬಂಧದ 'ವ್ಯಂಜನ ಪ್ರಕರಣ' ದಲ್ಲಿ ಇದರ ವಿವೃತಿಯನ್ನು ಕಾಣಬಹುದು.

೧೯. 'ಕನ್ನಡ' ಎಂಬ ಶಬ್ದದ ಮೂಲದ ಕುರಿತು ನಡೆದಿರುವ ಪ್ರಯತ್ನಗಳಲ್ಲಿ ಕೆಲವು ಇದೇ ಬಗೆಯುವುಗಳಾಗಿವೆ ಎಂದು ನನ್ನ ನಮ್ರ ಮತ.

## ೨. ಸ್ವರಪ್ರಕರಣ

ಒಂದು ಭಾಷೆಯಲ್ಲಿ ಇರುವ ಎಲ್ಲಾ ಏಕಧ್ವನಿಗಳ ಎಂದರೆ ಮೂಲ ಧ್ವನಿಗಳ ಸಮುಚ್ಚಯವನ್ನು ಆ ಭಾಷೆಯ 'ವರ್ಣಮಾಲೆ' ಎಂದು ಕರೆಯುತ್ತೇವೆ. ಆ ಧ್ವನಿಗಳನ್ನು ಬರೆದು ತಿಳಿಸುವುದಕ್ಕಾಗಿ ನಾವು ನಿರ್ಮಿಸಿಕೊಂಡಿರುವ ಮೂಲಲಿಪಿಗಳ ಸಮುಚ್ಚಯವನ್ನೂ ವರ್ಣಮಾಲೆ ಯೆಂದೇ ಕರೆಯುತ್ತೇವೆ. ಮೊದಲನೆಯದು 'ಶ್ರಾವಣ' ಎಂದರೆ ಕಿವಿಗೆ ಕೇಳುವ ರೂಪ; ಎರಡನೆಯದು 'ಚಾಕ್ಷುಷ' ಎಂದರೆ ಕಣ್ಣಿಗೆ ಕಾಣುವ ರೂಪ. ಆದುದರಿಂದ ವರ್ಣಮಾಲೆಯ ಈ ಎರಡು ರೂಪಗಳನ್ನು ಅನುಕ್ರಮವಾಗಿ 'ಶ್ರಾವಣ ವರ್ಣಮಾಲೆ' ಮತ್ತು 'ಚಾಕ್ಷುಷ ವರ್ಣಮಾಲೆ' ಎಂದು ವಿಶೇಷಿಸಿ, ವಿಭಾಗಿಸಿ, ಹೇಳುವ ಸಂಪ್ರದಾಯವನ್ನನುಸರಿಸುವುದು° ವರ್ಣಗಳ ವಿವೇಚನೆಗೆ ಬಹಳ ಸಹಾಯಕವಾಗುತ್ತದೆ. ಅಲ್ಲದೆ ಕೆಲವು ಭಾಷೆಗಳಲ್ಲಿ ವರ್ಣಮಾಲೆಯ ಈ ಎರಡು ರೂಪಗಳೊಳಗೆ ಸಾಮ್ಯ-ವಿರುವುದಿಲ್ಲ. ಉದಾ :– ಇಂಗ್ಲಿಷ್. ಅಲ್ಲಿ ಒಂದು 'ವರ್ಣ'ವನ್ನು ಎಂದರೆ ಒಂದು ಧ್ವನಿಯನ್ನು ಕೆಲವು ವೇಳೆ ಒಂದಕ್ಕಿಂತ ಹೆಚ್ಚು ಲಿಪಿಗಳು ಸೂಚಿಸುತ್ತವೆ. (ಉದಾ:—c, k.) ಕೆಲವು ವೇಳೆ ಒಂದೇ ಲಿಪಿ ಅನೇಕ ವರ್ಣಗಳನ್ನು ಎಂದರೆ ಧ್ವನಿಗಳನ್ನು ಸೂಚಿಸುತ್ತದೆ. (ಉದಾ:— a, g) ಆದರೆ ನಮ್ಮ ದೇಶದಲ್ಲಿ 'ಲಿಪಿಮಾಲೆ'—ಹೀಗೆನ್ನೋಣ—ಎಂದರೆ ಚಾಕ್ಷುಷ ವರ್ಣಮಾಲೆಯು, 'ಧ್ವನಿಮಾಲೆ'ಯ ಎಂದರೆ ನಿಜವಾದ ವರ್ಣಮಾಲೆಯ ಎಂದರೆ ಶ್ರಾವಣವರ್ಣಮಾಲೆಯ ಪ್ರತಿಬಿಂಬವೆಂಬಂತೆ, ಹೆಚ್ಚಾಗಿ ಅದಕ್ಕೆ ಸಮಾನವಾಗಿರುತ್ತದೆ. ಹೆಚ್ಚಾಗಿ ಎಂದುದೇಕೆಂದರೆ ಕೆಲವೆಡೆ ಸಾಮ್ಯವಿಲ್ಲದಿರುವುದೂ ಉಂಟು. ಉದಾ:— ತಮಿಳು ವರ್ಣಮಾಲೆ.

ಕನ್ನಡ ಹಾಗೂ ದ್ರಾವಿಡ ಶಬ್ದಶಾಸ್ತ್ರಜ್ಞರ ಪರಿಶ್ರಮದಿಂದ, ನಾವೀಗ ಕನ್ನಡದಲ್ಲಿ ಉಚ್ಚರಿಸುತ್ತಿರುವ ವರ್ಣಗಳೆಲ್ಲ ಮೂಲ ದ್ರಾವಿಡ ವರ್ಣಗಳಲ್ಲ; ಸಂಸ್ಕೃತ ಶಬ್ದಗಳೊಡನೆ ಮತ್ತೆ ಬಂದು ಸೇರಿದವುಗಳೂ ಕೆಲವು ಇವೆ ಎಂದು ಗೊತ್ತಾಗಿದೆ. ಕಾಲ್ಡ್‌ವೆಲ್ಲರು, ಮುಖ್ಯವಾಗಿ ತಮಿಳನ್ನು ಆಧರಿಸಿ, ಇವಿಷ್ಟು ದ್ರಾವಿಡ ವರ್ಣಗಳೆಂದು ನಿರ್ಧರಿಸಿ ದಂತಿದೆ: —

ಅ ಆ ಇ ಈ ಉ ಊ ಎ ಏ ಒ ಓ ಐ.

| | | | | |
|---|---|---|---|---|
| ಕ್ | [ಗ್] | ಙ್ | | ಯ್ ರ್ ಲ್ ವ್ |
| ಚ್ (ಶ್) | | ಞ್ | } | ಱ್ ೞ್ ಳ್. |
| ಟ್ | [ಡ್] | ಣ್ | | |
| ತ್ | [ದ್] | ನ್ | | |
| ಪ್ | [ಬ್] | ಮ್ | | |

ತಮಿಳಿನಲ್ಲಿ ಗ್ ಡ್ ದ್ ಬ್ ಎಂಬ ನಾಲ್ಕು ವರ್ಣಗಳಿಗೆ ಸ್ವಂತ ಲಿಪಿರೂಪವಿಲ್ಲ. ಎಂದರೆ ತಮಿಳಿನ ಚಾಕ್ಷುಷ ವರ್ಣಮಾಲೆಯಲ್ಲಿರುವುದಕ್ಕಿಂತ ಶ್ರಾವಣ ವರ್ಣಮಾಲೆಯಲ್ಲಿ ಈ ನಾಲ್ಕು ಅಧಿಕವಾಗಿವೆ.೨

ನಮ್ಮ ಪುರಾತನ ಶಬ್ದಶಾಸ್ತ್ರಜ್ಞರಲ್ಲಿ, ಕನ್ನಡ ವರ್ಣಮಾಲೆಯ ಸಂಶೋಧನೆಯಲ್ಲಿ ಹೆಚ್ಚು ಶ್ರಮಪಟ್ಟ ಕೇಶಿರಾಜನ ಮತದಂತೆ ಕನ್ನಡದಲ್ಲಿ ೪೭ ವರ್ಣಗಳು. ಆದರೆ ಇವುಗಳೊಳಗೆ ಹತ್ತು ಮಹಾಪ್ರಾಣಗಳೂ ಅವರ್ಗೀಯದ ಹಿಂದಣ ಶುದ್ಧಾನುಸ್ವಾರವೂ ಕನ್ನಡಕ್ಕೆ ಸಹಜವಲ್ಲವೆಂದು ಈಗ ಸರ್ವಸಮ್ಮತವಾಗಿ ನಿರ್ಧಾರವಾಗಿರುವುದರಿಂದ ಅವುಗಳನ್ನು ಕಳೆದು ಹಾಕಿದರೆ, ಉಳಿಯುವವು ಇವು:—

ಅ ಆ ಇ ಈ ಉ ಊ ಎ ಏ ಐ ಒ ಓ ಔ.

| | | | | |
|---|---|---|---|---|
| ಕ್ | ಗ್ | ಙ್ | | ಯ್ ರ್ ಲ್ ವ್ |
| ಚ್ | ಜ್ | ಞ್ | } | ಸ್ ಹ್ |
| ಟ್ | ಡ್ | ಣ್ | | |
| ತ್ | ದ್ | ನ್ | | ಳ್ ಱ್ ೞ್. |
| ಪ್ | ಬ್ | ಮ್ | | |

ಇವುಗಳೊಳಗೂ ಔಕಾರವು ದ್ರಾವಿಡ ಭಾಷೆಗಳಿಗೆ ಬಹಿರ್ಭೂತವೆಂದು ಸಕಲ ವಿದ್ವಾಂಸರ ಮತವಾಗಿದೆ. ಎಲೌ, ಮಾಡೌ ಎಂಬಿತ್ಯಾದಿ ಶಬ್ದಗಳಲ್ಲಿ ಅದು ಕನ್ನಡಕ್ಕೆ ಅವಶ್ಯವಾದರೂ— ಏಕೆಂದರೆ, ಅದನ್ನು ಎಲವ್, ಮಾಡವ್ ಎಂದು ಯಾರೂ ಉಚ್ಚರಿಸುವುದಿಲ್ಲ; ಮೊದಲು ಉಚ್ಚರಿಸುತ್ತಿದ್ದಿರಬಹುದೆಂದು ಹೇಳುವುದಕ್ಕೆ ಆಧಾರವೂ ಇಲ್ಲ. ಅಲ್ಲದೆ ನಿರ್ವಿವಾದವಾಗಿ ಅಭಿಮುಖೀಕರಣಾರ್ಥಕವಾಗಿರುವ ಏ ಓ ಎಂಬ

ನಿಪಾತಗಳು (ಉದಾ:—ಏ ಹೆಣ್ಣೆ! ಏ ಮಾವ! ಓ ರಾಮ! ಓ ತಾಯಿ!) ಸ್ಥಾನಾಂತರ ಹೊಂದಿ ಪ್ರಯುಕ್ತವಾಗಿ (ಉದಾ:— ಬಾರೇ! ಬಾರೋ!) ಲಿಂಗಾರ್ಥವನ್ನೂ ಅಳವಡಿಸಿಕೊಂಡಂತೆ, ಔ ಎಂಬ ನಿಪಾತವೂ ಸ್ತ್ರೀಲಿಂಗ ಸೂಚಕವಾಗಿ ವಾತ್ಸಲ್ಯಯುಕ್ತವಾದ ಅಭಿಮುಖೀಕರಣಾರ್ಥದಲ್ಲಿ ಕ್ರಿಯಾಪದಕ್ಕೆ ಸೇರಿ ಮಾಡೌ ಎಂಬಿತ್ಯಾದಿಯಾಗಿಯೂ, ಎಲೌ ಎಂಬಲ್ಲಿ ಪ್ರಾಯಃ ಸಂಯುಕ್ತನಿಪಾತವಾಗಿಯೂ ಪ್ರಯುಕ್ತವಾಗುವುದರಿಂದ, ಇದರ ಜನ್ಮದಿಂದಲೇ ಇದು ಬೇರೆ ಸಜಾತೀಯ ನಿಪಾತಗಳಂತೆ ಏಕಸ್ವರ ರೂಪವಾಗಿಯೇ, ಔ ಎಂದು, ಇದ್ದಿರಬೇಕು ಎಂದು ಹೇಳಬೇಕಾಗುತ್ತದೆ. ಆದರೆ ಕನ್ನಡದಲ್ಲಿ ಕವುಂಕುಳ್, ಕವುಂಗು ಇತ್ಯಾದಿ ಶಬ್ದಗಳು ಕೌಂಕುಳ್, ಕೌಂಗು ಎಂಬಿತ್ಯಾದಿ ರೂಪಗಳನ್ನು ಧರಿಸಿ, ಔಕಾರವು ಚೆನ್ನಾಗಿ ರೂಢವಾದ ಮೇಲೆಯೇ ಎಲೌ ಮಾಡೌ ಇತ್ಯಾದಿ ರೂಪಗಳುಂಟಾಗಿರಬಹುದೆಂದು ಊಹಿಸಲು ಎಡೆಯಿರುವುದರಿಂದ—ಮೂಲಶಬ್ದಗಳಲ್ಲಿ, ಧಾತುಗಳಲ್ಲಾಗಲಿ ನಾಮಗಳಲ್ಲಾಗಲಿ ಎಲ್ಲಿಯೂ ಸಹಜವಾಗಿ ಕಾಣುವುದಿಲ್ಲವಾದುದರಿಂದ, ಔಕಾರವು 'ಮೂಲ ಕನ್ನಡ ವರ್ಣಮಾಲೆ'ಗೆ ಹೊರಗಿನದೆಂದು ಹೇಳಿದರೆ ಪ್ರಾಯಃ ತಪ್ಪಾಗಲಾರದು. ಇದರಂತೆಯೇ ಐಕಾರವನ್ನೂ ಅಚ್ಚ ಕನ್ನಡಕ್ಕೆ ಅವಶ್ಯವಿಲ್ಲವೆಂದು ಕೆಲವರು ಕಳೆದು ಹಾಕುತ್ತಾರೆ. ಉದಾ:—ಕನ್ನಡ ಕೈಪಿಡಿ (ದ್ವಿತೀಯ ಮುದ್ರಣ) ಪುಟ ೩೮೪.

ಐಕಾರವನ್ನು ಕಳೆದುಹಾಕಲು ಕೈಪಿಡಿಕಾರರು ಕೊಡುವ ಕಾರಣ ಹೀಗಿದೆ— "ಪದಮಧ್ಯದ **ಯ**ಕಾರಕ್ಕೆ ಐಕಾರವು ಬರುವುದೆಂದು ಕೇಶಿರಾಜಾದಿಗಳೇ ಹೇಳಿದ್ದಾರೆ (ಶ. ದರ್ಪಣ. ಸೂ. ೧೫೭). ಕೈಗ್ಯೆ, ಮ್ಯೆ ಇವುಗಳನ್ನು ಕೆಯ್ಗ್ಗೆಯ್, ಮೆಯ್ ಎಂಬುದಾಗಿ ಬರೆಯಬಹುದು."[೩] ಆದರೆ ಇಲ್ಲಿ ಬರೆಯುವ ವಿಚಾರ ಮುಖ್ಯವಲ್ಲ ಪ್ರಕರಣದ ಆದಿಯಲ್ಲಿಯೇ ನಿವೇದಿಸಿಕೊಂಡಂತೆ, ವರ್ಣವೆಂದರೆ ಮುಖ್ಯವಾಗಿ ಧ್ವನಿ, ಉಚ್ಚಾರ. ಅದನ್ನು ಸೂಚಿಸುವ ಲಿಪಿರೂಪಕ್ಕೂ ಅದೇ ಹೆಸರಿನ 'ಉಪಚಾರ.'[೪] ಆದುದರಿಂದ ವರ್ಣಗಳ ನಿರ್ಧಾರ ಮಾಡುವಾಗ ಉಚ್ಚಾರವನ್ನೇ ಲಕ್ಷಿಸಬೇಕಾದ್ದು ಮುಖ್ಯವಾಗಿದೆ. ಹಾಗಾದರೆ ಕೈ, ಮೈ ಎಂದು ಬರೆಯಲ್ಪಡುವ ಶಬ್ದಗಳ ಉಚ್ಚಾರವು ಹೇಗಿದೆಯೆಂದು ಮೊದಲು ಪರೀಕ್ಷಿಸೋಣ. ಈಗ ಉದಾಹರಿಸಿದ ಸಂದರ್ಭದಲ್ಲಿ ಕೈ ಗ್ಯೆ=ಕೈಯ್ಗ್ಗೆಯ್, ಮ್ಯೆ=ಮೆಯ್ ಎಂದು ಸಮಾನಿಸಿರುವ ಕಾರಣ ಆ ಶಬ್ದಗಳನ್ನು ಹಾಗೆಯೇ ಉಚ್ಚರಿಸುವು

ದೆಂಬ ಅಭಿಪ್ರಾಯವು ಕೈಪಿಡಿಕಾರರದೆಂದು ವ್ಯಂಜಿತವಾಗುತ್ತದೆ. ಶಬ್ದಮಣಿದರ್ಪಣದ ಏತದ್ವಿಷಯಕವಾದ ೧೫೭ನೆಯ ಸೂತ್ರಭಾಗದ ಉದಾಹರಣ ಪ್ರಯೋಗಗಳಲ್ಲಿ, "ಕಯ್ವಾರಂ, ಕೈವಾರಂ"[೫] ಎಂದಿದೆ. ಹಾಗಾದರೆ ದರ್ಪಣಕಾರನ ಅಭಿಪ್ರಾಯದಲ್ಲಿ ಕೈ ಎಂಬುದರ ಉಚ್ಚಾರವು **ಕಯ್** ಎಂಬಂತಿದೆಯೆಂದು ಅನುಮಾನಿಸಬೇಕಾಗುತ್ತದೆ. ಮಾತ್ರವಲ್ಲ, ಕನ್ನಡನಾಡಿನಲ್ಲೆಲ್ಲ ನನ್ನ ತಿಳಿವಿನ ಮಟ್ಟಿಗೆ ಹಸ್ತಾರ್ಥದಲ್ಲಿ **ಕಯ್** ಎಂಬ ಉಚ್ಚಾರವೇ ಕೇಳಿಬರುತ್ತದೆ. ಯಾರೂ ಇದನ್ನು **ಕೆಯ್** ಎಂದು ಉಚ್ಚರಿಸುವುದನ್ನು ನಾನು ಕೇಳಿಲ್ಲ. ಕೆಯ್ ಎಂದರೆ ಭತ್ತದ ಸಸಿ ಅಥವಾ ಪಯಿರು ಎಂಬರ್ಥವು ಪ್ರಸಿದ್ಧವಾಗಿದೆ. ಹಳೆಯ ಒಳ್ಳೆಯ ಹಸ್ತಪ್ರತಿಗಳಲ್ಲಿ **ಕಯ್** ಎಂದೇ ಹೆಚ್ಚಾಗಿರುತ್ತದೆಂದೂ, ಈ ರೂಪವೇ ಮೂಲವಾಗಿರಬೇಕೆಂದೂ ಕಿಟ್ಟೆಲರು ತಮ್ಮ ನಿಘಂಟುವಿನಲ್ಲಿ ಹೇಳುತ್ತಾರೆ (ಪುಟ ೩೬೯). ಕೈಪಿಡಿಕಾರರಾದರೂ ಮೊದಲಾಗಿ ತಮಗೆ ಹೊಳೆದಿರಬಹುದಾದ ಕೈ ಎಂಬ ಪ್ರಸಿದ್ಧವಾದ ಏಕಾಕ್ಷರ ಶಬ್ದವನ್ನು ತಮ್ಮ ಪ್ರತಿಪಾದನಕ್ಕೆ ನಿದರ್ಶನವಾಗಿ ಕೊಡದೆ, ಕೈಗೈ=ಅಲಂಕಾರ ಮಾಡು ಎಂಬರ್ಥವುಳ್ಳ, ಅದರಷ್ಟು ಪ್ರಸಿದ್ಧವಲ್ಲದ ಸಂಯುಕ್ತ ಶಬ್ದವನ್ನು ಕೊಟ್ಟಿರುವುದಕ್ಕೆ, ಕೈ (hand) ಎಂಬ ಶಬ್ದದ ಉಚ್ಚಾರವು **ಕೆಯ್** ಎಂಬಂತಿಲ್ಲವೆಂದು ಅವರಿಗೆ ಕಂಡುಬಂದುದೇ ಕಾರಣವಾಗಿರಬೇಕು. ಈ ನನ್ನ ಊಹವು ನಿರಾಧಾರವಲ್ಲ. ಅದೇ ಪುಸ್ತಕದ ೩೬೮ ನೆಯ ಪುಟದಲ್ಲಿ ದ್ರಾವಿಡ ಭಾಷೆಗಳು ಸಂಸ್ಕೃತ ಜನ್ಯವಲ್ಲವೆಂದು ಸಮರ್ಥಿಸುವ ಪ್ರಕರಣದಲ್ಲಿ ಕನ್ನಡ, ತಮಿಳು, ತೆಲುಗು ಈ ಮೂರು ಭಾಷೆಗಳಲ್ಲಿಯೂ ಹಸ್ತಾರ್ಥಕವಾದ ಶಬ್ದವು **ಕಯ್** ಎಂದೇ (ತೆಲುಗಿನಲ್ಲಿ ಚೇಯಿ ಎಂಬ ಇನ್ನೊಂದು ರೂಪವನ್ನೂ ಕೊಡಲಾಗಿದೆ.) ಮೂರು ಬಾರಿ ಸ್ಪಷ್ಟವಾಗಿ ಮುದ್ರಿಸಲ್ಪಟ್ಟಿದೆ. ಹಾಗಾದರೆ ಕೆಯ್ ಎಂಬಿತ್ಯಾದಿ ಲಿಪಿರೂಪದಿಂದಲೇ ಕೈ ಇತ್ಯಾದಿ ಐಕಾರಾಂತವೆಂದು ಕರೆಯಲ್ಪಡುವ ಶಬ್ದಗಳನ್ನೆಲ್ಲ ಬರೆಯತೊಡಗಿದರೆ ಉಚ್ಚಾರದ ವ್ಯವಸ್ಥೆ ಹೇಗೆ?

ಇನ್ನು 'ಮೈ' ಎಂಬುದರ ವಿಚಾರ ಮಾಡೋಣ. ದೇಹ ಎಂಬ ಅರ್ಥದ ಈ ಶಬ್ದವನ್ನು ಮೆಯ್ ಮಯ್ ಎಂದು ಎರಡು ರೀತಿಗಳಲ್ಲಿಯೂ ಉಚ್ಚರಿಸುವುದು ಕನ್ನಡದಲ್ಲಿ ಕಿವಿಗೆ ಬೀಳುತ್ತಿರುವುದಾದರೂ, ನನ್ನ ತಿಳಿವಿನ ಮಟ್ಟಿಗೆ ಬೇರೆ ದ್ರಾವಿಡ ಭಾಷೆಗಳಲ್ಲಿ ಇದು **ಮೆಯ್** ಎಂದೇ ಉಚ್ಚರಿಸಲ್ಪಡುತ್ತದೆ. ಮತ್ತು ತಮಿಳಿನಲ್ಲಿ ಇದನ್ನು **ಮೆಯ್** ಎಂದು ವ್ಯಂಜನಾಂತ

ವಾಗಿಯೇ ಬರೆಯುತ್ತಾರೆ. ತುಳುವಿನಲ್ಲಿ ಈ ಎರಡು ಅತಿಪರಿಚಿತವಾದ ಶಬ್ದಗಳನ್ನು **ಕಯ್ ನೆಯ್** ಎಂದೇ ಉಚ್ಚರಿಸುತ್ತಾರೆ. ದ್ರಾವಿಡ ಭಾಷೆಗಳ ಪುರಾತನ ವಿಶಿಷ್ಟತೆಗಳಲ್ಲಿ ಹಲವನ್ನು ಉಳಿಸಿಕೊಂಡಿರುವ ಕನ್ನಡದ ಒಂದು 'ನುಡಿ'ಯಾದ ಹವೀಕರ ಮಾತಿನಲ್ಲಿಯೂ ಇವು **ಕಯ್, ನೆಯ್** ಎಂದೇ ನಿರಪವಾದವಾಗಿ ಉಚ್ಚರಿಸಲ್ಪಡುತ್ತವೆ. ದೇಹಾರ್ಥಕವಾದ ಈ **ನೆಯ್** ಎಂಬ ಶಬ್ದವನ್ನು **ಮಯ್** ಎಂದು ಉಚ್ಚರಿಸುವ ಅಭ್ಯಾಸವು, ಕನ್ನಡವನ್ನು ಕಲಿತು ನುಡಿಯುವವರಲ್ಲಿ ಹೆಚ್ಚಾಗಿ ನನಗೆ ಕಂಡುಬಂದಿದೆ.೬ **ಕೈ** ಎಂದು ಬರೆಯುವ ಹಸ್ತಾರ್ಥಕವಾದ ಆ ಶಬ್ದವನ್ನು ಎಲ್ಲರೂ **ಕಯ್** ಎಂದೇ ಉಚ್ಚರಿಸುವುದರಿಂದ, ಅದನ್ನು ಹಾಗೆಯೇ ಎಂದರೆ **ಕಯ್** ಎಂದೇ ಉಚ್ಚರಿಸಬೇಕೆಂದು ಸಹಜವಾಗಿ ಕಲಿತ ಮೇಲೆ, **ಮೈ** ಎಂದು ಬರೆದುದನ್ನು **ಮಯ್** ಎಂದೇ ಉಚ್ಚರಿಸುವುದು ಸಾಧುವೆಂದು, ಕಲಿತ ಕನ್ನಡಿಗನಿಗೆ ಕಾಣುವುದು ಸಹಜವಾಗಿದೆ. ಪಂಚಾರ್ಥಕವಾದ ಐದು (five) ಎಂಬ ಶಬ್ದವನ್ನು ಯಾರೂ 'ಎಯ್ದು'ಎಂದು ನುಡಿಯುವುದನ್ನು ನಾನು ಕೇಳಿಲ್ಲ.೭ ಇತರ ದ್ರಾವಿಡ ಭಾಷೆಗಳಲ್ಲಿಯೂ ಈ ಸಂಖ್ಯಾವಾಚಕದ ಆದ್ಯಕ್ಷರವು **ಅಯ್** ಎಂದೇ ಕಿವಿಗೆ ಬೀಳುತ್ತದೆ. ತೆಲುಗು– ಅಯ್‌ದು, ತುಳು— ಅಯ್‌ನ್' ಅಥವಾ ಅಯಿನ್' ತಮಿಳು—ಅಯ್‌ನ್ತು, ಮಲಯಾಳ— ಅಂಜ್. ಹೀಗೆ ಆದಿಯಲ್ಲಿ ಕೇಳುವ ಧ್ವನಿ ಅಕಾರವೇ ಆಗಿರುತ್ತದೆ; ಹೊರತು " ಎಯ್‌ದು, ಎಯ್‌ನ್, ಎಯ್‌ನ್ದು " ಇತ್ಯಾದಿ ಯಾರೂ ನುಡಿಯುವುದಿಲ್ಲವೆಂದು. ಪರೀಕ್ಷಿಸಿದವರಿಗೆಲ್ಲ ನಿಸ್ಸಂದಿಗ್ಧವಾಗಿ ತಿಳಿಯುವುದು. ಆದರೆ ಡಾ. ಕಾಲ್ಡ್‌ವೆಲ್ಲರು ಮಾತ್ರ ಇವನ್ನೆಲ್ಲ **ಎಯ್** ಎಂದು ಉಚ್ಚಾರ ಪಡೆಯುವ ರೀತಿಯಲ್ಲಿ (ei) ೮ ಬರೆದಿದ್ದಾರೆ. ಮತ್ತು ಅದೇ ಸರಿ ಎಂದು ಕೊನೆಯತನಕ ಪ್ರತಿಪಾದಿಸಿದ್ದಾರೆ.

ಡಾ. ಕಾಲ್ಡ್‌ವೆಲ್ಲರು ತಮ್ಮ ಘನವಾದ ಗ್ರಂಥದಲ್ಲಿ (ಪುಟ ೧೩) ಮಾಡಿದ ಪ್ರತಿಪಾದನದ ಸಾರವಿದು :—

" ತಮಿಳಿನಲ್ಲಿ ಪದಾಂತದಲ್ಲಿ ಕಾಣುವ ಐ ಎಂಬ ಸಂಯುಕ್ತಸ್ವರ ಅಥವಾ ' ಸಂಧಿಸ್ವರ 'ವು (Dipthong) ಸಂಸ್ಕೃತ ವರ್ಣಮಾಲೆಯಲ್ಲಿರುವ ai ಅ͡ಇ ಅಲ್ಲ, ಎ͡ಇ. ಗ್ರಂಥಾಕ್ಷರದಲ್ಲಿಯೂ ಮಲಯಾಳ ಲಿಪಿಯಲ್ಲಿಯೂ ಎರಡು ಎಕಾರಗಳನ್ನು ಜೋಡಿಸಿ ಆ ವರ್ಣವು

ಲಿಖಿಸಲ್ಪಡುತ್ತದೆ; ತೆಲುಗು ಕನ್ನಡಗಳಲ್ಲಿ ಎಕಾರ ಇಕಾರಗಳ ಸಂಕರದಿಂದ (ಐ=ಐ) ಅದು ರೂಪಿತವಾಗುತ್ತದೆ. ತಮಿಳಿನ ಈ ಎಇ ಕಾರವು ಮಲಯಾಳ ಭಾಷೆಯ ದ್ವಿತೀಯಾ ವಿಭಕ್ತಿಯ ಎ ಕಾರದ, ಮತ್ತು ಆ ತಮಿಳು ನಾಮಗಳ ಕನ್ನಡ ರೂಪಗಳ ಕೊನೆಯ ಎ ಕಾರದ ಪ್ರತಿರೂಪವಾಗಿದೆ. ಕುಮಾರಿಲಭಟ್ಟನು ತಮಿಳಿನ 'ನಡೈ' ಎಂಬ ಶಬ್ದವನ್ನು ಸಂಸ್ಕೃತದಲ್ಲಿ ಬರೆಯುವಾಗ (nadai) ನಡೈ ಎಂದು ಬರೆಯದೆ (nade) 'ನಡೆ' ಎಂದೇ ಬರೆದಿರುವುದು ಲಕ್ಷಿಸತಕ್ಕದ್ದಾಗಿದೆ. ದ್ರಾವಿಡ ಐಕಾರವು (ಎಂದರೆ ಎಇ) ಅಇ ಎಂಬುದಕ್ಕಿಂತ ಎ ಎಂಬುದಕ್ಕೇ ಸಮೀಪತರವೆಂದು ಅವನು ಭಾವಿಸಿದುದು ಇದರಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಅದು ei ಎಇ ಹೊರತು ಅಇ ಅಲ್ಲ ಎಂದು ನಾನು ನಿರ್ಣಯಿಸುತ್ತೇನೆ."

ತಮಿಳಿನಲ್ಲಿ ಐಕಾರಾಂತವಾಗಿ ಬರೆಯಲ್ಪಡುವ ಪದಗಳನ್ನು ತಮಿಳರು ಸಹಜವಾಗಿ ಉಚ್ಚರಿಸುವುದನ್ನು ಕಿವಿಗೊಟ್ಟು ಕೇಳಿದರೆ ಅದು ಎಇ ಅಲ್ಲವೆಂದೇ ತಿಳಿದುಬರುವುದು. ನಡೆ, ತಲೆ, ಮಲೆ ಎಂದು ನಾವು ನುಡಿಯುವ ಶಬ್ದಗಳನ್ನು ಅವರೂ ಮಾತಾಡುವಾಗ ನಮ್ಮಂತೆಯೇ ನಡೆ, ತಲೆ, ಮಲೆ ಇತ್ಯಾದಿಯಾಗಿ ಎಕಾರಾಂತವಾಗಿಯೇ ಉಚ್ಚರಿಸುತ್ತಾರೆ. ಆವೊಂದು ಶಬ್ದದ ಉಚ್ಚಾರವನ್ನು ಸ್ಪಷ್ಟೀಕರಿಸಿ ನುಡಿಯಲು ನಾವು ಕೇಳಿದಾಗ ನಡಯ್, ತಲಯ್, ಮಲಯ್ ಎಂದು ಹೇಳುತ್ತಾರೆ. ಬರೆದುದನ್ನು ನಡಯ್, ತಲಯ್, ಮಲಯ್ ಎಂದೇ ಓದುತ್ತಾರೆ. ಹೊರತು "ನಡೆಯ್ ಅಥವಾ ನಡೆಇ, ತಲೆಯ್ ಅಥವಾ ತಲೆಇ" ಎಂದು ಒಮ್ಮೆಯೂ ಅವರು ಉಚ್ಚರಿಸುವುದಿಲ್ಲ. ಉದಾಹರಿಸಿದ ಈ ಕೆಲವು ಶಬ್ದಗಳು ಮಾತ್ರ ಹೀಗೆಂದಲ್ಲ, ಐಕಾರಾಂತವೆನ್ನಿಸುವವುಗಳ ಸ್ಥಿತಿಯೆಲ್ಲ ಹೀಗೆಯೆ. 'ಮದುರೆ' ಎಂದು ನಾವು ಕರೆಯುವ ಪಾಂಡ್ಯರ ರಾಜಧಾನಿಯನ್ನು ಅವರೂ ಮಾತಾಡುವಾಗ ನಮ್ಮಂತೆಯೇ 'ಮದುರೆ' ಎಂದು ನುಡಿಯುತ್ತಾರೆ; 'ಮತುರೈ' ಎಂದು ಬರೆಯುತ್ತಾರೆ. ಇದರಲ್ಲಿರುವ ಐ, ಅಯ್ ಅಥವಾ ಅಇ (ai) ಹೊರತು, ಎಇ (ei) ಅಲ್ಲ. Madura ಎಂದು ಮೊನ್ನೆ ಮೊನ್ನೆಯ ವರೆಗೆ ಇಂಗ್ಲಿಷಿನಲ್ಲಿ ಬರೆಯುತ್ತಿದ್ದ ಈ ಶಬ್ದವನ್ನು, ತಮಿಳಿನ ಉಚ್ಚಾರವನ್ನನುಲಕ್ಷಿಸಿ, ಸ್ವಾತಂತ್ರ್ಯಾನಂತರದಲ್ಲಿ Mathurai ಅಥವಾ Madurai

ಎಂದು ತಿದ್ದಿರುವುದು ಇಂಗ್ಲಿಷ್ ಪತ್ರಿಕೆಗಳನ್ನು ಓದಿದವರಿಗೆಲ್ಲ ತಿಳಿದಿರಬಹುದು. ಇಲ್ಲಿ ei ಎಂದು ಮಾಡದೆ ai ಎಂದೇ ಮಾಡಿರುವುದು ಲಕ್ಷಿಸತಕ್ಕ ವಿಷಯವಾಗಿದೆ. ಇದರಿಂದ ತಮಿಳಿನ ಆ ಐಕಾರಾಂತಗಳೆಂಬ ಶಬ್ದಗಳ ಕೊನೆಯ ಧ್ವನಿ ಎ͡ಇ ಅಲ್ಲವೆಂಬುದರಲ್ಲಿ ಸಂದೇಹವಿದೆಯೆ ? ಹಾಗಾದರೆ ತಮಿಳಿನಲ್ಲಿ ನಿಷ್ಣಾತರೆನ್ನಿಸಿದ ಘನವಿದ್ವಾಂಸರಾದ ಕಾಲ್ಡ್‌ವೆಲ್ಲರು ಅದನ್ನು ಏಕೆ ಎ͡ಇ ಎಂದೇ ಹೇಳಿದರು ? ಇದಕ್ಕೆ ಅವರ ಗ್ರಂಥಗಳಲ್ಲಿಯೇ ಕಾರಣಗಳು ದೊರಕುತ್ತವೆ.

ಕನ್ನಡ ಹಾಗೂ ತೆಲುಗು ಲಿಪಿಗಳಲ್ಲಿ ಐ ಸ್ವರಯುಕ್ತವಾದ ವ್ಯಂಜನಗಳನ್ನು ಬರೆಯುವ ಪದ್ಧತಿಯೇ ಕಾಲ್ಡ್‌ವೆಲ್ಲರ ಅಭಿಪ್ರಾಯಕ್ಕೆ ಮೂಲ ಕಾರಣವೆನ್ನಬಹುದು. ಕೈ ಎಂದು ಬರೆಯುವಾಗ, ಮೊದಲು ಕೆ ಎಂಬುದನ್ನು ರೂಪಿಸಿಕೊಂಡು, ಅನಂತರ ಐಕಾರದ ಚಿಹ್ನವನ್ನು ಅದರ ಅಡಿಯಲ್ಲಿ ಬರೆಯುವುದು ಕನ್ನಡ ತೆಲುಗು ಲಿಪಿಗಳ ವೈಶಿಷ್ಟ್ಯವಾಗಿದೆ; ಹೀಗೆ– ಕೈ–కై. ಇದರಿಂದಾಗಿ ಕಲಿತೋದುವವನಿಗೆ ಪಕ್ಕನೆ ಹೊಳೆಯುವ ಅದರ ಉಚ್ಚಾರವೆಂದರೆ ಹೆಚ್ಚು ಕಡಿಮೆ ಕೆಯ್ kei ಕೆ͡ಇ ಎಂಬುದೇ. ಉಚ್ಚಾರಗಳ ವಿಮರ್ಶಾವಸರದಲ್ಲಿ ತಮ್ಮ ಮತಕ್ಕೆ ಆಧಾರವಾಗಿ ಕಾಲ್ಡ್‌ವೆಲ್ಲರು ಡಾ. ಗುಂಡರ್ಟರ ಅಭಿಪ್ರಾಯವೊಂದನ್ನು ಉದಾಹರಿಸಿದ್ದಾರೆ. "Foreigners led more by the written sign than by the spoken sound (ಪುಟ ೧೮)." ಕಾಲ್ಡ್‌ವೆಲ್ಲರಾದರೂ ಇದಕ್ಕೆ ಅಪವಾದವಾಗಲಿಲ್ಲವೆಂದು ಹೇಳುವ ಪ್ರಸಂಗ ಬಂದಿದೆ.[೯] ನಾನು ಈ ಹಿಂದೆ ಅನುವಾದಿಸಿದ ಅವರ ಐಕಾರ ವಿಮರ್ಶೆಯ ಮಾತುಗಳಿಂದ ಇದು ಚೆನ್ನಾಗಿ ಸ್ಫುಟವಾಗುತ್ತದೆ. ಅವರು ಅದರಲ್ಲಿ "ತೆಲುಗು ಕನ್ನಡಗಳಲ್ಲಿ ಎಕಾರ ಇಕಾರಗಳ ಸಂಕರದಿಂದ ಐಕಾರವು ರೂಪಿತವಾಗುತ್ತದೆ." ಎಂದು ಹೇಳುತ್ತಾರೆ. ಈ ಲಿಪಿರೂಪವನ್ನೇ ಮುಖ್ಯವಾಗಿ ಅವಲಂಬಿಸಿ ಅದರ ಉಚ್ಚಾರದ ನಿರ್ಣಯವನ್ನು ಅವರು ಮಾಡಿರುತ್ತಾರೆಂದು ಹೇಳುವುದಕ್ಕೆ ಅವರ ಗ್ರಂಥದಲ್ಲಿ ಬೇರೆಡೆಯಲ್ಲಿಯೂ ಬೇಕಾದಷ್ಟು ಆಧಾರಗಳು ದೊರೆಯುತ್ತವೆ. ಉದಾ:— ಪುಟ ೨೩೪ ರಲ್ಲಿ ಐದು ಎಂಬ ಸಂಖ್ಯಾವಾಚಕದ ಮೀಮಾಂಸೆಯಲ್ಲಿ ಈ ಮಾತುಗಳಿವೆ.

"Mr. Kittel agrees with me in considering the Dravidian word for five independent of the Sanskrit

panchan .......................Mr. Kittel writes the word as ay, this being one of the ways in which the word is written in Canarese. ei is more common in Canarese and the only form in the other dialects. " 'ಐ' ಎಂಬುದನ್ನು ಕನ್ನಡ ಅಕ್ಷರಗಳಲ್ಲಿ ಬರೆಯುವಾಗ ay (ಅಯ್) ಎಂದು ಬರೆಯುವುದಕ್ಕಿಂತ ei (ಎಇ) ಎಂದು ಬರೆಯುವುದು ಹೆಚ್ಚು ಎಂಬುದು ಉದಾಹರಿಸಿದ ಮಾತುಗಳ ತಾತ್ಪರ್ಯ. ಕನ್ನಡದಲ್ಲಿ ಹೆಚ್ಚಾಗಿ ಬರೆಯುವ ಇವರ ei (ಎಇ) ಎಂದರೆ **ಐದು** ಎಂಬುದರಲ್ಲಿ ಕಾಣುವ ಐ ಯೇ ಆಗಿದೆ. ಆದರೆ ಕನ್ನಡ ನುಡಿಯಲ್ಲಿ ಯಾರಾದರೂ ಐದು ಎಂಬ ಸಂಖ್ಯೆಯನ್ನು ಎಇದು (ಅಥವಾ ಎಯ್‌ದು) ಎಂಬಂತೆ ಉಚ್ಚರಿಸುವರೇ ? 'ಅಯ್ದು' ಎಂದೂ ಇದನ್ನು ಬರೆಯುವ ರೂಢಿ ಇರುವ ಕನ್ನಡದಲ್ಲಿ ಮಾತ್ರವಲ್ಲ, ಆ ರೂಢಿ ಸುತರಾಂ ಇಲ್ಲವೆಂದು ಅವರು ಹೇಳುವ ಇತರ ದ್ರಾವಿಡ ನುಡಿಗಳಲ್ಲಾದರೂ ಈ ಸಂಖ್ಯಾವಾಚಕದ ಮೊದಲಕ್ಷರವನ್ನು ಎಇ ಎಂದು ಉಚ್ಚರಿಸುವುದುಂಟೆ ? ಹಾಗಾದರೆ ಅದರ ಉಚ್ಚಾರವು ಎಇ ಎಂದು ಕಾಲ್ಡ್‌ವೆಲ್ಲರಿಗೆ ಬೋಧಿಸಿದುದು ಯಾವುದು? **ಐ** ಎಂಬ ಆ ಲಿಪಿರೂಪವು ಮಾತ್ರ; ಬೇರಾವುದೂ ಅಲ್ಲ.

ಕನ್ನಡ ತಮಿಳು ತೆಲುಗುಗಳಲ್ಲಿ **ಐದು** ಎಂಬ ಸಂಖ್ಯಾವಾಚಕವನ್ನು ನುಡಿಯುವ ಪ್ರಕಾರದಿಂದಲೂ, ಉಚ್ಚಾರವನ್ನು ಬರಹದಲ್ಲಿ ಇದ್ದಂತೆ ಪ್ರತಿಬಿಂಬಿಸುವ ಪ್ರವೃತ್ತಿ ಇತರ ದ್ರಾವಿಡ ಭಾಷೆಯವರಿಗಿಂತ ಹೆಚ್ಚಾಗಿರುವ ಕನ್ನಡಿಗರಲ್ಲಿಂ **ಅಯ್ದು** ಎಂದೂ ಆ ಶಬ್ದವನ್ನು ಬರೆಯುವ ರೂಢಿ ಇದೆ ಎಂಬುದು ಸರ್ವಸಮ್ಮತವಾದುದರಿಂದಲೂ, ಆ ಸಂಖ್ಯಾವಾಚಕದಲ್ಲಿರುವ ಐ ಎಂಬುದರ ಉಚ್ಚಾರವು ಅಯ್ (ಅಥವಾ ಅಇ) ಎಂದೇ ಸಿದ್ಧವಾಗುತ್ತದೆ. ಹಾಗಾದರೆ ಐದು ಎಂಬ ಶಬ್ದದಲ್ಲಿರುವ ಐಕಾರಕ್ಕೂ ಬೇರೆಡೆಯಲ್ಲಿ ಕಾಣುವ ಐಕಾರಕ್ಕೂ ಸಹಜವಾಗಿ ಉಚ್ಚಾರ ಭೇದವಿದ್ದೀತೆ ?

ಡಾ. ಕಾಲ್ಡ್‌ವೆಲ್ಲರಿಗೆ ತಮಿಳಿನ ಪ್ರತ್ಯಕ್ಷ ಪರಿಚಯವಿದ್ದರೂ ಅವರು ಆ ಭಾಷೆಯ ಐಕಾರದ ಧ್ವನಿಸ್ವರೂಪ ನಿರ್ಣಯಕ್ಕೆ ಲಿಪಿರೂಪ

ವನ್ನೇ ಅವಲಂಬಿಸಲು ಇನ್ನೊಂದು ಕಾರಣವೂ ಇತ್ತೆಂದು ಅವರ ಬೇರೊಂದು ಮಾತಿನಿಂದ ಹೊಳೆಯುತ್ತದೆ. ತಮಿಳು ಮಲಯಾಳಗಳ (ಇವು ತಾಯಿಮಕ್ಕಳಂತಿರುವ ಭಾಷೆಗಳು) ಆಡುನುಡಿಗಳ ಸ್ವರಗಳ ಉಚ್ಚಾರ ವಿಕಲ್ಪಗಳನ್ನು ವಿಮರ್ಶಿಸಿ,ಕೊನೆಗೆ ಅವರು ಹೀಗೆ ಹೇಳುತ್ತಾರೆ. " After all, vowels except ō and ū it is hardly possible to catch the sound." (ಪುಟ ೧೮) ಎಂದರೆ, ಮಾತಾಡುವುದನ್ನು ಕೇಳಿ ಓ ಊ ಎಂಬೆರಡು ಸ್ವರಗಳ ಹೊರತು ಉಳಿದ ಸ್ವರಗಳ ಉಚ್ಚಾರವು ಇಂತಹದೇ ಎಂದು ಗ್ರಹಿಸಿಕೊಳ್ಳುವುದಕ್ಕಾಗುವುದಿಲ್ಲ, ಎಂದಾಯಿತು. ತಮಿಳರು ಮಾತಾಡುವಾಗ ಅತಿ ವೇಗದಿಂದ ಅಕ್ಷರೋಚ್ಚಾರಗಳನ್ನು ಮಾಡುವ ಕಾರಣ ಇಂತಹ ಅನುಭವವಾಗುವುದು, ಅದೂ ಅನ್ಯ ದೇಶೀಯರಿಗೆ, ಸ್ವಾಭಾವಿಕವೇ ಸರಿ.೧೧ ಆದುದರಿಂದ ಧ್ವನಿನಿರ್ಣಯಕ್ಕೆ ಅವರು ಬರಹವನ್ನು ಎಂದರೆ ಲಿಪಿರೂಪಗಳನ್ನು ಅವಲಂಬಿಸಿದರೆಂದು ಹೇಳಬೇಕು.

ಧ್ವನಿ ಅಥವಾ ಉಚ್ಚಾರ ನಿರ್ಣಯಕ್ಕೆ 'ಬರಹ'ವನ್ನು ಎಷ್ಟರ ಮಟ್ಟಿಗೆ ಅವಲಂಬಿಸಬಹುದು ಎಂಬುದು ವಾದಾಸ್ಪದವಾಗಬಹುದು. ಉಚ್ಚಾರ ಸ್ವರೂಪವು ಅಲಭ್ಯವಾಗಿರುವಲ್ಲಿ ಅಥವಾ ನಾನಾಪ್ರಕಾರವಾಗಿರುವಲ್ಲಿ ಅವುಗಳೊಳಗೆ ಲಿಪಿರೂಪದಿಂದ ಅನುಮಾನಿಸಲ್ಪಡುವ ಉಚ್ಚಾರವು ಸಾಧುವೆಂದು ಸಾಧಿಸಬಹುದು. ಉದಾಹರಣವಾಗಿ **ಜ್ಞ**.— ನನಗೆ ತಿಳಿದಂತೆ, ಉತ್ತರ ಹಿಂದುಸ್ಥಾನದಲ್ಲಿ ಸುಮಾರು **ಗ್ಯ** ಎಂಬಂತೆಯೂ, ಮಹಾರಾಷ್ಟ್ರದಲ್ಲಿ **ದ್ನ್ಯ** ಎಂಬಂತೆಯೂ, ತಮಿಳು ನಾಡಿನಲ್ಲಿ ಹಾಗೂ ಮೈಸೂರು ಸಂಸ್ಥಾನದ ದಕ್ಷಿಣ ಪ್ರದೇಶಗಳಲ್ಲಿ **ಗ್ನ್ಯ** ಎಂಬಂತೆಯೂ, ಮಲೆಯಾಳಿಗಳ ಬಾಯಲ್ಲಿ **ಞ್ಞ** ಎಂಬಂತೆಯೂ, ಶಿವಮೊಗ್ಗ ಜಿಲ್ಲೆಯ ಬಹುಭಾಗದಲ್ಲಿಯೂ ಧಾರವಾಡ ಜಿಲ್ಲೆಯ ಕೆಲವೆಡೆಗಳಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಹೆಚ್ಚುಕಡಮೆ ಇಡೀ ಉತ್ತರ ಕನ್ನಡ ಜಿಲ್ಲೆಯಲ್ಲಿಯೂ **ಜ** ಕಾರ **ಞ** ಕಾರ ಸಂಯೋಗವಾಗಿಯೂ—ಹೀಗೆ ನಾನಾ ರೂಪದಲ್ಲಿ ಉಚ್ಚರಿಸಲ್ಪಡುವ, ಮತ್ತು ज्ञ ಎಂದು ನಾಗರಿಯಲ್ಲಿಯೂ, **ಜ್ಞ** ಎಂದು ಕನ್ನಡದಲ್ಲಿಯೂ ಬರೆಯಲ್ಪಡುವ ಈ ಸಂಯುಕ್ತ ವ್ಯಂಜನದ ಶುದ್ಧೋಚ್ಚಾರವಾವುದೆಂದು ನಿರ್ಣಯಿಸುವುದಕ್ಕೆ ಆ ಲಿಪಿರೂಪವು ಸಹಾಯಕವಾಗುತ್ತದೆ ಎಂದು ಹೇಳಬಹುದು. ಅದರ ಕನ್ನಡ ಲಿಪಿರೂಪವು ಜಕಾರ ಞಕಾರಗಳ ಸಂಯೋಗವೆಂಬುದು ಸುವ್ಯಕ್ತವಾಗಿದೆ. ನಾಗರೀಲಿಪಿ ರೂಢವಾಗಿರುವ

ಪ್ರದೇಶದವರು ಅದನ್ನು ಗಕಾರಯುಕ್ತವಾಗಿಯೋ ದಕಾರಯುಕ್ತವಾಗಿಯೋ ಹೆಚ್ಚಾಗಿ ಉಚ್ಚರಿಸುವರಾದರೂ, ಆ ಲಿಪಿರೂಪದಲ್ಲಿ ಗಕಾರ ದಕಾರಗಳ ಲೇಶವೂ ತೋರುವುದಿಲ್ಲ. ಅಲ್ಲಿ ಕೂಡ ಅದು ಜ ಞ ಎಂಬ ಲಿಪಿಗಳ ಸಂಯೋಗವಾಗಿಯೇ ಕಾಣಿಸಿಕೊಳ್ಳುತ್ತದೆ. ಈ ಲಿಪಿಗಳ ಪೂರ್ವ ರೂಪಗಳನ್ನು ಪರೀಕ್ಷಿಸಿದರೂ ಇದೇ ನಿಗಮನಕ್ಕೆ ನಾವು ಮುಟ್ಟುತ್ತೇವೆ. ಕ್ರಿ. ಶ. ಆರನೆಯ ಶತಮಾನದಷ್ಟು ಹಿಂದಕ್ಕೆ ಹೋದರೂ, ಆಗಲೂ ಇದು ಜಕಾರ ಞಕಾರ ಸಂಯೋಗವಾಗಿಯೇ ಇದ್ದುದು ಸ್ಪಷ್ಟವಾಗಿ ಕಾಣುತ್ತದೆ [೧೨] ಹೆಚ್ಚೇಕೆ ? ನಮ್ಮ ಎಲ್ಲ ಲಿಪಿಗಳ ಮೂಲವಾದ ಬ್ರಾಹ್ಮೀಲಿಪಿಯು ಪರಿಶೀಲನ ಮಾಡಿದರೂ ನಾವು ಇದೇ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಆದುದರಿಂದ ಜ್ಞಾನ, ಪ್ರತಿಜ್ಞೆ, ಯಜ್ಞ ಇತ್ಯಾದಿ ಶಬ್ದಗಳಲ್ಲಿರುವ ಆ ಸಂಯುಕ್ತವ್ಯಂಜನವನ್ನು, ಕನ್ನಡದಲ್ಲಿ ಇಂದೂ ಬರೆಯುವಂತೆಯೇ, ಜಕಾರ ಞಕಾರಗಳ ಸಂಯೋಗವಾಗಿ ಉಚ್ಚರಿಸುವುದೇ ಶುದ್ಧವೆಂದೂ ಇದರ ಪುರಾತನ ಕಾಲದ ಎಂದರೆ ಸಂಸ್ಕೃತದ ಉಚ್ಚಾರವು ಹೀಗೆಯೇ (ಜ್+ಞ್+(ಅ) = ಜ್ಞ) ಇತ್ತೆಂದೂ; ಈ ಲಿಪಿಮೀಮಾಂಸೆಯಿಂದ ಸಿದ್ಧವಾಗುತ್ತದೆ.[೧೩]

ಆದರೆ ಐಕಾರದ ಉಚ್ಚಾರ ಸ್ವರೂಪವು ai ಅಇ ಅಥವಾ ಅಯ್ ಎಂದು ಸರ್ವತ್ರ ಲಭ್ಯವಾಗುತ್ತಿರುವಾಗ, ಕನ್ನಡ ತೆಲುಗು ಲಿಪಿಗಳಲ್ಲಿ— ಎಲ್ಲಾ ದ್ರಾವಿಡ ಲಿಪಿಗಳಲ್ಲಲ್ಲ,— ಅದು ಎ ಎಂಬುದಕ್ಕೆ ಇ ಎಂಬುದನ್ನು ಸೇರಿಸಿ ಬರೆದಂತೆ **ಕಾಣುವ ಮಾತ್ರದಿಂದ** ಅದರ ಉಚ್ಚಾರವನ್ನು ಎಇ ಅಥವಾ ಎಯ್ ಎಂದು ನಿರ್ಧರಿಸುವುದು ಸರಿಯೆ ? ವಾಸ್ತವವಾಗಿ ನೋಡಿದರೆ, ಐ ಎಂಬ ಕನ್ನಡ ತೆಲುಗು ಲಿಪಿರೂಪವಾದರೂ ಎ ಮತ್ತು ಇ ಎಂಬ ಲಿಪಿಗಳ ಸಂಯೋಗವಲ್ಲ. ಇದು ಬ್ರಾಹ್ಮೀಲಿಪಿಯ ನಾನಾಶಾಖೆಗಳಾದ ಭರತಖಂಡದ ಸಕಲ ಲಿಪಿಗಳ ವಿಕಾಸಕ್ರಮವನ್ನು ಪರಿಶೀಲಿಸಿದರೆ ಸ್ಫುಟವಾಗುವುದು. ಕನ್ನಡದ ಹಾಗೂ ತೆಲುಗಿನ ಐ ಲಿಪಿಯ ಮೇಲುಭಾಗವು ನಾಗರಿ ಮೊದಲಾದ ಲಿಪಿಗಳಲ್ಲಿ ` ಹೀಗೆ ಎರಡಾಗಿ ಮೇಲ್ಗಡೆ ಗುರುತಿಸಲ್ಪಡುವ (ಉದಾ:—ಕೈ) ಸ್ವರಚಿಹ್ನವಾಗಿದೆ. ಐಕಾರವು ಕೇವಲ ಸ್ವರಾಕ್ಷರವಾಗಿರುವುದಕ್ಕಿಂತ ಎಷ್ಟೋ ಮಡಿ ಹೆಚ್ಚಾಗಿ ವ್ಯಂಜನಪೂರ್ವಕವಾಗಿರುತ್ತದೆ. ಆದುದರಿಂದ 'ಬರಹಗಾರ'ನ ದೃಷ್ಟಿಯಲ್ಲಿ ಅತಿ ಪರಿಚಿತವಾಗುವ ಐಕಾರಸೂಚಕ ಲಿಪಿರೂಪಗಳು ಗೈ ಜೈ ತೈ ಎಂಬಿತ್ಯಾದಿಗಳೇ ಆಗಿರುತ್ತವೆ.

ಆದುದರಿಂದ ಆ ವ್ಯಂಜನಾಕ್ಷರಗಳ ಲಿಪಿರೂಪಗಳಲ್ಲಿ ಕಾಣುವ ಐಕಾರ ಚಿಹ್ನವನ್ನೇ ಕೇವಲ ಸ್ವರಾಕ್ಷರ ಸೂಚಕವಾದ ಲಿಪಿಗೂ ಕಾಲಾಂತರದಲ್ಲಿ ಬಳಸುವುದು ಸ್ವಾಭಾವಿಕವಾಗಿದೆ. ನಾಗರಿಯ ऐ ಕಾರವನ್ನು ನೋಡಿದರೂ ಇದೇ ಹೊಳೆಯುತ್ತದೆ के ಎಂಬುದನ್ನು कै ಎಂದು ಮಾಡುವಾಗ ಇನ್ನೊಂದು ಅದೇ ತರದ ಚಿಹ್ನವನ್ನು ಕೂಡಿಸಿ ಪಳಗಿದ ಬರಹಗಾರನ ಕೈ (ಹಸ್ತ) ए ಎಂಬುದಕ್ಕೂ ಅಂತಹನೇ ಒಂದು ಚಿಹ್ನವನ್ನು ಕೂಡಿಸಿ ऐ ಎಂಬುದನ್ನು ನಿರ್ಮಿಸಿದೆ ಎಂದು ಹೇಳಿದರೆ ಸತ್ಯಕ್ಕೆ ದೂರವಾಗದು[೧೪] ಹೆಚ್ಚು ಕಡಮೆ ಇದೇ ರೀತಿಯಲ್ಲಿ ಕನ್ನಡ ತೆಲುಗುಗಳ ಐಯೂ ನಿರ್ಮಿತವಾಗಿದೆ ಎಂಬುದನ್ನು ತೋರಿಸುವ ಪ್ರಬಲ ಸಾಕ್ಷ್ಯಗಳು ಇವೆ.

ಎಡದಿಂದ ಬಲಕ್ಕೆ ಬರೆಯುವ ಭರತಖಂಡದ ಎಲ್ಲಾ ಲಿಪಿಗಳ ಮೂಲವೂ ಒಂದೇ ಗ್ರಂಥ ಲಿಪಿಯಲ್ಲಿಯೂ ಹಳೆಯ ತಮಿಳು ಲಿಪಿಯಲ್ಲಿಯೂ ವ್ಯಂಜನಗಳಿಗೆ ಐತ್ವವನ್ನುಂಟು ಮಾಡುವ ಚಿಹ್ನ ൈ ಹೀಗಿದೆ.[೧೫] 'ವಟ್ಟೆಏುತ್ತು' ಎಂಬ ಪುರಾತನ ಲಿಪಿಯಲ್ಲಿಯೂ ಈಗಣ ತಮಿಳು ಲಿಪಿಯಲ್ಲಿಯೂ ಅದೇ ಹೀಗೆ ை ಜೋಡಿಸಲ್ಪಟ್ಟಿದೆ. ವಟ್ಟೆಏುತ್ತುವಿನಲ್ಲಿ ವ್ಯಂಜನ ಚಿಹ್ನಕ್ಕೆ ಈ ಐ ಚಿಹ್ನವು ಜೋಡಿಸಲ್ಪಡುತ್ತದೆ. ಆ ಲಿಪಿಕ್ರಮದಲ್ಲಿ[೧೬] ಕೆ ಎಂಬುದನ್ನು ಬರೆಯುವುದು ಹೀಗೆ — ೨; ಕೈ ಎಂಬುದನ್ನು ಬರೆಯುವುದು ಹೀಗೆ— ೨೨. ಈಗ ನಮಗೆ ನಮ್ಮ ಐ ಲಿಪಿಯ ಶಿರೋಭಾಗವು ಇಕಾರದ ಗುರುತಲ್ಲವೆಂದೂ, ಇಂತಹ ಐ ಚಿಹ್ನದ ಒಂದು ರೂಪಾಂತರವೆಂದೂ ಸ್ಫುಟವಾಗಬಹುದು; ಮತ್ತು ನಾಗರಿಯ ऐ ಯ ವಿಕಾಸವು ಹೇಗೆ ಉಂಟಾಯಿತೋ, ಹೆಚ್ಚು ಕಡಮೆ, ಅದೇ ಕ್ರಮದಲ್ಲಿ ಕನ್ನಡ ತೆಲುಗುಗಳ ಐಯೂ ವಿಕಾಸಹೊಂದಿತೆಂದು ತಿಳಿಯುವುದು. ಈ ಐಕಾರದ ಲಿಪಿರೂಪದಿಂದಾಗಿ ಅದರ ಧ್ವನಿ ಅ͡ಇ ಎಂದು ಸಾಧಿಸುವುದು ಸರಿಯಾಗಲಾರದೆಂಬುದು ಈಗ ಸ್ಪಷ್ಟವಾಗದಿರದು.

ನಾಗರೀಲಿಪಿಯನ್ನು ಬಳಸುವ ಭಾಷೆಗಳಲ್ಲಿಯೂ ದಾಕ್ಷಿಣಾತ್ಯ ಲಿಪಿಗಳನ್ನು ಬಳಸುವ ಭಾಷೆಗಳಲ್ಲಿಯೂ ಐಕಾರವು ಲಿಪಿಸ್ವಭಾವದಲ್ಲಿ ಒಂದೇ ವಿಧವಾಗಿರುವುದೆಂಬುದರಿಂದ, ಉಚ್ಚಾರದಲ್ಲಿಯೂ ಹಾಗೆ ಏಕರೂಪವಾಗಿರಲೇಬೇಕೆಂದು ಸಿದ್ಧವಾದಂತಾಗುವುದಿಲ್ಲ. ಒಂದೇ ಲಿಪಿರೂಪಕ್ಕೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಉಚ್ಚಾರಗಳಿರುವುದುಂಟು.

ಉದಾ:— ಇಂಗ್ಲಿಷರ t d ಗಳು, ವಾಸ್ತವವಾಗಿ ನೋಡಿದರೆ, ಶುದ್ಧ ದಂತ್ಯವರ್ಣಗಳಾಗಿ ಉಚ್ಚರಿಸಲ್ಪಡುವುದಿಲ್ಲ; ಅವು ದಂತ್ಯ ಮತ್ತು ಮೂರ್ಧನ್ಯ ವರ್ಣಗಳ ಮಧ್ಯಸ್ಥಾನದಲ್ಲಿವೆ. ನಾವು ಅವುಗಳನ್ನು ಕಲಿತು ನುಡಿಯುವಾಗ ಹೆಚ್ಚಾಗಿ ಮೂರ್ಧನ್ಯ (ಟ್, ಡ್) ಗಳಾಗಿಯೇ ಪರಿಣಮಿಸುತ್ತವೆ ಆದರೆ ಹಾಗೆಯೇ ಬರೆಯಲ್ಪಡುವ ಆ t d ಗಳನ್ನು ಇತಲಿ (Italy) ಯವರು ಶುದ್ಧ ದಂತ್ಯವರ್ಣಗಳಾಗಿ ಉಚ್ಚರಿಸುವರು. ಹಾಗೆಯೇ ನಮ್ಮ ದೇಶದಲ್ಲಿ ಐಕಾರದ ಉಚ್ಚಾರದಲ್ಲಿ ಭೇದವಿದೆ. ಹಿಂದೀ ಭಾಷೆಯಲ್ಲಿ ऐ ಯನ್ನು ನಾವು ಐಯನ್ನು ಉಚ್ಚರಿಸುವಂತೆ ಎಂದರೆ ai ಅಇ ಅಥವಾ ಅಯ್ ಎಂದು ಉಚ್ಚರಿಸುವುದಿಲ್ಲ; ಸುಮಾರು ae ಅಎ ಎಂಬಂತೆ ಉಚ್ಚರಿಸುತ್ತಾರೆ.[೧೭] ಇತರ ಗೌಳಭಾಷೆಗಳಲ್ಲೂ ಹಿಂದೀ ಭಾಷೆಯವರ ಸಂಸ್ಕೃತೋಚ್ಚಾರದಲ್ಲಿಯೂ, ಇದು ai ಅಇ ಎಂದೇ ಉಚ್ಚಾರವನ್ನು ಪಡೆಯುತ್ತದೆ. ಆದುದರಿಂದ ದ್ರಾವಿಡ ಭಾಷೆಗಳಲ್ಲಿ ಇದನ್ನು ಉಚ್ಚರಿಸುವ ಪ್ರಕಾರವನ್ನು ಸೂಕ್ಷ್ಮವಾಗಿ ಪರೀಕ್ಷಿರುವುದು ಅವಶ್ಯವಾಗಿದೆ.

ದಾಕ್ಷಿಣಾತ್ಯರು, ಎಂದರೆ ದ್ರಾವಿಡ ಭಾಷೆಗಳನ್ನಾಡುವವರು, ತಮ್ಮ ವರ್ಣಗಳನ್ನು ಎಂದರೆ ಧ್ವನಿಗಳನ್ನು ಸ್ವಲ್ಪ ಒತ್ತಿ ಉಚ್ಚರಿಸುವರೆಂಬುದು ಪ್ರತ್ಯಕ್ಷ ಮತ್ತು ಪ್ರಸಿದ್ಧ.[೧೮] ಉತ್ತರದವರು ಹಾಗೂ ದಕ್ಷಿಣದವರು ವೇದ ಪಾಠ ಮಾಡುವುದನ್ನು ಹೋಲಿಸಿರಿ. ಉತ್ತರದವರು ಸಂಯುಕ್ತ ವ್ಯಂಜನಗಳನ್ನು ತೇಲಿಸಿ ಎಂದರೆ ಸ್ವಲ್ಪ ಶಿಥಿಲವಾಗಿ ಉಚ್ಚರಿಸುವಂತೆಯೂ, ದಕ್ಷಿಣದವರು ಚೆನ್ನಾಗಿ ಒತ್ತಿ ಉಚ್ಚರಿಸುವಂತೆಯೂ ಕಿವಿಗೆ ಭಾಸವಾಗುತ್ತದೆ. ಸಂಗೀತಾಭ್ಯಾಸ ಕ್ರಮಗಳಲ್ಲಂತೂ ಈ ಪ್ರವೃತ್ತಿಭೇದಗಳು ಪರಮಾವಧಿಗೆ ಮುಟ್ಟಿದಂತಿವೆ. ದಕ್ಷಿಣದ ಭಾಷೆಗಳಲ್ಲಿ ಮಾತ್ರ ಇರುವ ಱಕಾರವೆಂದರೆ ಒತ್ತಿ ಉಚ್ಚರಿಸಲ್ಪಡುವ ರೇಫವೆಂದೇ ಹೇಳಬೇಕು. ನಾಗವರ್ಮ, ಕೇಶಿರಾಜಾದಿ ಧ್ವನಿಮೀಮಾಂಸಕರು ಹಾಗೆಯೇ ಹೇಳಿದ್ದಾರೆ (ಅತಿಪೀಡನದಿಂ ರೇಫಾಶ್ರಿತಮಾದ ಱಕಾರಮುಂ ....ಶ. ದ. ಸೂತ್ರ, ೧೮). ಹ್ರಸ್ವೋಪಧೆಯಾದ ವ್ಯಂಜನವು ಕೊನೆಯಲ್ಲಿರುವ ಎಷ್ಟೋ (ಇದಕ್ಕೆ ಅಪವಾದ ಅತ್ಯಲ್ಪ) ಶಬ್ದಗಳಿಗೆ ಸ್ವರವು ಪರವಾದಾಗ ಆ ವ್ಯಂಜನಕ್ಕೆ ದ್ರಾವಿಡ ಭಾಷೆಗಳಲ್ಲಿ ದ್ವಿತ್ವವು ಬರುತ್ತದೆ ಎಂಬುದು ಸಕಲಶಾಬ್ದಿಕ ಸಮ್ಮತವಾದ ಮಾತು. ಉದಾ:— ಕಲ್+ಇಂ=ಕಲ್ಲಿಂ. ಸಂಸ್ಕೃತದಲ್ಲಾದರೆ ಇಂತಹ ಸಂದರ್ಭದಲ್ಲಿ ದ್ವಿತ್ವವು ಎಂದೂ ಬರುವುದಿಲ್ಲ; ಮಾತ್ರವಲ್ಲ, ಅಘೋಷ (surd) ವ್ಯಂಜ

ನವು ಪದಾಂತ್ಯವಾಗಿದ್ದರೆ ಮುಂದೆ ಸ್ವರ ಸೇರಿದೊಡನೆ ಘೋಷ (sonant) ವ್ಯಂಜನವಾಗಿ ಪರಿಣಮಿಸುತ್ತದೆ. ಉದಾ:— ಯಥಾವತ್ + ಏವ = ಯಥಾವದೇವ. ಇದನ್ನೇ ಕನ್ನಡದಲ್ಲಿ ಪ್ರಯೋಗಿಸುವಾಗ ಯಥಾವತ್+ ಆಗಿಯೇ = ಯಥಾವತ್ತಾಗಿಯೇ ಎಂದಾಗಿಬಿಡುತ್ತದೆ; ಎಂದರೆ ಕನ್ನಡದಲ್ಲಿ ಅದು ಘೋಷವರ್ಣವಾಗಿ ಮಾರ್ಪಡುವುದಿಲ್ಲ, ಅಲ್ಲದೆ ದ್ವಿತ್ವವೂ ಬರುತ್ತದೆ. ಇದಕ್ಕೇನು ಮೂಲ ಕಾರಣ ? ಪದಾಂತ್ಯವನ್ನು ಒತ್ತಿ ಹೇಳುವುದು ದಾಕ್ಷಿಣಾತ್ಯರ ಉಚ್ಚಾರದ ವೈಶಿಷ್ಟ್ಯ; ಹಾಗೆ ಮಾಡದಿರುವುದು ಮಾತ್ರವಲ್ಲ, ಪದಾಂತ್ಯವನ್ನು ಮೃದು ಮಾಡುವುದೂ ಉತ್ತರದವರ ವೈಶಿಷ್ಟ್ಯವೆನ್ನಬೇಕು. ಈ ಮೃದು ಮಾಡುವುದರ ಪರಿಣಾಮವಾಗಿಯೇ ಸ್ವರವು ಪರವಾದಾಗ ಪದಾಂತ್ಯದ ಅಘೋಷವರ್ಣವು ಘೋಷವಾಗಿ ಮಾರ್ಪಡುವುದೆಂದು ಹೇಳಬಹುದು.[೧೯]

ಐಕಾರದ ಉಚ್ಚಾರದಲ್ಲಿಯೂ ಈ ಕಾರಣದಿಂದಾದ ಭೇದವುಂಟೆಂದು ನನಗೆ ತೋರುತ್ತದೆ. ಬಹುಕಾಲದಿಂದ ಸಂಸ್ಕೃತವನ್ನು ಕಲಿತು ಆ ಕ್ರಮದಲ್ಲಿ ಐಕಾರವನ್ನು ಉಚ್ಚರಿಸುತ್ತ ಬಂದಿರುವುದರಿಂದ, ಯಕಾರದ ಲೇಶವೂ ಕಿವಿಗೆ ಬೀಳದಂತೆ ನಾವಿಂದು ಅದನ್ನು ಉಚ್ಚರಿಸಬಲ್ಲೆವಾದರೂ ಅಚ್ಚಗನ್ನಡದ ಆ ಶಬ್ದಗಳನ್ನು ಪ್ರಾಯಃ ನಾವು ಹಾಗೆ ಉಚ್ಚರಿಸುವುದಿಲ್ಲ. ಈ ಕಾರಣದಿಂದ ನಮ್ಮ 'ಅಕಾರಪೂರ್ವವಾದ ಪದಮಧ್ಯಯತ್ವ'ವೂ (ಅಂದರೆ **ಅಯ್** ) ಐತ್ವವೂ ವಿನಿಮಯಿಸಿಕೊಳ್ಳುತ್ತವೆ. ಉದಾ: ಕಯ್ವಾರ=ಕೈವಾರ; ಕೈಯಲ್ಲಿ=ಕಯ್ಯಲ್ಲಿ. ಅಯ್ಯಂಗಾರ್=ಐಯಂಗಾರ್. ಈ ದ್ವಂದ್ವಗಳನ್ನು ನಾವು ಪ್ರಾಯಃ ಏಕರೂಪದಲ್ಲಿ ಉಚ್ಚರಿಸುತ್ತೇವೆ; ಮತ್ತು ಹಾಗೆ ಬರೆದರೂ ಸರಿ, ಹೀಗೆ ಬರೆದರೂ ಸರಿ ಎಂಬ ನಿರ್ಣಯಕ್ಕೆ ಮುಟ್ಟುತ್ತೇವೆ. ನಮ್ಮಲ್ಲಿ ಹಲವರು ಸಂಸ್ಕೃತದ ( नैयायिक ) ನೈಯಾಯಿಕ ಎಂಬ ಪದವನ್ನು 'ನಯ್ಯಾಯಿಕ' ಎಂದೇ ಉಚ್ಚರಿಸುವರು ಹೊರತು ಅನ್ಯಥಾ ಉಚ್ಚರಿಸಲಾರರೆಂಬುದು ಪರೀಕ್ಷಾಂತದಲ್ಲಿ ತಿಳಿದುಬಾರದಿರದು. 'ಕೈಯಲ್ಲಿ' ಎಂದು ಬರೆಯುವಾಗಲೂ ಕೆಲವರು 'ಕೈಯ್ಯಲ್ಲಿ' ಎಂದು ಒತ್ತು ಹಾಕಿ ತಪ್ಪು ಬರೆಯಲೂ ನಮ್ಮ ಉಚ್ಚಾರವೇ ಮೂಲ ಹೇತುವೆಂದು ನನಗೆ ತೋರುತ್ತದೆ ಆದುದರಿಂದ ನಮ್ಮ **ಐ**ಗಳೆಲ್ಲ ಸಹಜವಾಗಿ **ಅಯ್**ಗಳೆಂದೇ ಹೇಳಬೇಕಾಗುತ್ತದೆ. ಕಿಟ್ಟೆಲರ ಅಭಿಪ್ರಾಯವಾದರೂ ಸುಮಾರು ಹೀಗೆಯೇ ಇದೆ. " The initial ಐ in

Kannada words has arisen from ಅಯ್, ಅಯಿ" (ಕಿಟ್ಟೆಲರ ಕೋಶ. ಪುಟ ೨೯೫) ೨೦

ನಮಗೆ ಸಹಜವಾದ 'ಒತ್ತಾಟ'ದಿಂದೊಡಗೂಡಿ ಕೇವಲ ಐಕಾರವನ್ನಾಗಲಿ ಐಕಾರಾಂತವಾದ ಶಬ್ದವನ್ನಾಗಲಿ ಉಚ್ಚರಿಸಿದರೆ ಅದು ಅಯ್ ಆಗಿ ಪರಿಣಮಿಸುತ್ತದೆ.(ಜೈ=ಜಯ್, ಬೈ=ಬಯ್, ಕೈ=ಕಯ್,ಐ=ಅಯ್) ವಸ್ತುತಃ ಐ ಎಂಬುದು ಮೂಲ ಸ್ವರವಲ್ಲ, ಸಂಧಿಸ್ವರ. ಯಕಾರವಾದರೂ ಕತಪಾದಿ ವರ್ಗೀಯ ವ್ಯಂಜನಗಳಂತೆ ಒಂದು 'ಸ್ಪರ್ಶ' ವ್ಯಂಜನವಲ್ಲ; ಪಾಶ್ಚಾತ್ಯರು ಇದನ್ನು (semi vowel) 'ಅರ್ಧಸ್ವರ' ಅಥವಾ 'ಸ್ವರಕಲ್ಪ' ಎಂದೇ ವ್ಯವಹರಿಸುತ್ತಾರೆ. ಸಂಸ್ಕೃತ ಶಬ್ದಶಾಸ್ತ್ರಜ್ಞರು **ಯ ವ** ಗಳ ಮೂಲವನ್ನು ಪರಿಶೋಧಿಸಿ ಇವು ಕ್ರಮವಾಗಿ ಇ **ಉ** ಎಂಬ **ಮೂಲ** ಸ್ವರಗಳೇ ಅವಸ್ಥಾನ ವಿಶೇಷಗಳಲ್ಲಿ ಪಡೆಯುವ ರೂಪಗಳೆಂಬ ಅಭಿಪ್ರಾಯಕ್ಕೆ ಮುಟ್ಟಿದಂತಿದೆ. ಆದುದರಿಂದ, ಐಯನ್ನು **ಅಯ್** ಎಂದು ಉಚ್ಚರಿಸುವಾಗ ಆಗುವ ಧ್ವನಿವ್ಯತ್ಯಾಸವು ಅತ್ಯಲ್ಪವಾದುದರಿಂದ, ಚೆನ್ನಾಗಿ ಪಳಗಿರುವ ಸೂಕ್ಷ್ಮವಾದ ಕಿವಿಗೆ ಹೊರತು, ಸಾಮಾನ್ಯವಾದ ಕಿವಿಗೆ ಅರಿವಾಗುವುದು ಕಷ್ಟ. ಇದರಿಂದ ನಮ್ಮ ದ್ರಾವಿಡ ಭಾಷೆಗಳ ಉಚ್ಚಾರವು **ಅಯ್** ಎಂದಾಗಿದ್ದರೂ ಸಂಸ್ಕೃತ ವಿದ್ವಾಂಸರು ನಿರ್ಮಿಸಿದ ಐ ಎಂಬ ಲಿಪಿಯನ್ನೇ ನಮ್ಮ ವಿಶಿಷ್ಟ ಧ್ವನಿಯನ್ನು ಚಿಹ್ನಿಸುವುದಕ್ಕೂ ನಮ್ಮ ಪುರಾತನರು ಒಪ್ಪಿ ಬಳಸಿಕೊಂಡರು ಎಂದು ಹೇಳಿದರೆ ಸತ್ಯಕ್ಕಿಂತ ಬಹಳ ದೂರವಾಗಲಾರದೆಂದು ನಂಬಿದ್ದೇನೆ.೨೧

ಐ ಎಂಬ ಲಿಪಿಯ ರೂಪವಿಕಾಸದ ಮೀಮಾಂಸೆಯಿಂದ ಅದರ ಉಚ್ಚಾರವು ei ಎ͡ಇ ಎಂದು ಸಿದ್ಧವಾಗದಿರುವುದು ಮಾತ್ರವಲ್ಲ, ai ಅ͡ಇ (ಅಥವಾ ಅಯ್) ಎಂದೇ ಸಿದ್ಧವಾಗುತ್ತದಾದರೂ, ಕೈ ಜೈ ಬೈ ಮೊದಲಾದ ಲಿಪಿರೂಪಗಳಲ್ಲಿ ಕೆ ಜೆ ಬೆ ಮೊದಲಾದ ಎಕಾರ ರೂಪಗಳು ಸ್ಪಷ್ಟವಾಗಿ ಗೋಚರಿಸುತ್ತವಲ್ಲಾ? ಆದುದರಿಂದ ಇವುಗಳಲ್ಲಿ ಎ͡ಇ (ಅಥವಾ ಎಯ್) ಎಂಬ ಉಚ್ಚಾರವೇ ಸೂಚಿತವಾಗುವುದಿಲ್ಲವೇ ? — ಎಂಬ ಶಂಕೆ ಉಳಿಯಲೂ ಬಹುದು. ಇದಕ್ಕೆ ಸಮಾಧಾನವೇನೆಂದರೆ—

ಮೊದಲನೆಯದು:— ಲಿಪಿರೂಪವು ಸರ್ವಾತ್ಮನಾ ಉಚ್ಚಾರಾನುರೂಪವಾಗಿ ಇರುವುದಿಲ್ಲ. ಹಾಗಿರುತ್ತಿದ್ದರೆ 'ಅರ್ಕ' ಎಂದು ಬರೆಯುವ

ದನ್ನು 'ಅಕರ್' ಎಂದು ಉಚ್ಚರಿಸುವುದೇ ಸಾಧುವೆಂದಾಗಬೇಕಿತ್ತು. ಅಥವಾ 'ವಾಕ್ಯ' ಎಂದು ಕನ್ನಡ ಲಿಪಿಯಲ್ಲಿ ಬರೆದುದನ್ನು 'ವಾಕಯ್' ಎಂದು ಉಚ್ಚರಿಸುವ ಪ್ರಸಂಗವೂ ಬರುತ್ತಿತ್ತು. ಏಕೆಂದರೆ **ಕ್ಯ** ಎಂಬ ಸಂಯೋಗದಲ್ಲಿ ಸ್ವರಚಿಹ್ನವಾದ 'ತಲೆಕೊಟ್ಟು' ಇರುವುದು ಕಕಾರ ಚಿಹ್ನಕ್ಕೆ ಹೊರತು ಯಕಾರ ಚಿಹ್ನಕ್ಕಲ್ಲ. ಆದುದರಿಂದ **ಜೈ** ಎಂಬ ಲಿಪಿರೂಪದಲ್ಲಿ ಎಕಾರ ಚಿಹ್ನವು ಗೋಚರಿಸುವ ಮಾತ್ರದಿಂದ ಅದು **ಜೆಯ್** ಎಂಬ ಉಚ್ಚಾರ ಸೂಚಕವೆಂದಾಗಲಾರದು. ನಮ್ಮ ಲಿಪಿಪದ್ಧತಿ **ಅಕ್ಷರಾತ್ಮಕವಾಗಿದೆ, ವರ್ಣಾತ್ಮಕವಾಗಿಲ್ಲ**ವೆಂಬುದನ್ನು ನಾವು ಲಿಪಿ ಮೀಮಾಂಸೆ ಮಾಡುವಾಗ ಚೆನ್ನಾಗಿ ನೆನಪಿನಲ್ಲಿಡಬೇಕು [೨೨] ಉದಾ:— **ಕ** ಎಂಬ 'ಸಂಕೇತ'ದಲ್ಲಿ **ಕ್**+**ಅ** ಎಂಬ ವ್ಯಂಜನ+ಸ್ವರಸಂಯೋಗವನ್ನು ನಾವು ಕಾಣುತ್ತೇವೆ. ಈ ಕ ಎಂಬ ಸಂಕೇತಕ್ಕೇ **ಉ**ಕಾರ ಚಿಹ್ನವನ್ನು ಕೂಡಿಸಿ **ಕು** ಎಂದು ವ್ಯವಹರಿಸುತ್ತೇವೆ. ವಾಸ್ತವವಾಗಿ ನೋಡಿದರೆ **ಕು** ಎಂಬ ಲಿಪಿಯೊಳಗೆ 'ಕ್ ಅ ಉ' ಎಂಬ ಮೂರು ವರ್ಣ ಚಿಹ್ನಗಳು ಅಡಕವಾಗಿವೆ. ಆದರೆ ಉಚ್ಚಾರದಲ್ಲಿ **ಕ್** + **ಉ** ಎಂಬ ಎರಡೇ ವರ್ಣಗಳ ಯೋಗವಿದೆ. ಪಾಶ್ಚಾತ್ಯ ಲಿಪಿ ವರ್ಣಾತ್ಮಕವಾಗಿದೆ. ಅಲ್ಲಿ **ಕ** ಎಂದಾಗಲು ka ಹೀಗೆ, **ಕು** ಎಂದಾಗಲು ku ಹೀಗೆ ಬರೆಯಬೇಕು. ನಮ್ಮ **ಕು** ಎಂಬ ಲಿಪಿರೂಪದಲ್ಲಿರುವ ಎಲ್ಲಾ ಚಿಹ್ನಗಳನ್ನು ಅಲ್ಲಿ ತೋರಿಸಿದರೆ ಅದು kau ಎಂದಾಗುವುದು. ಆಗ ಅದನ್ನು **ಕು** ಎಂದು ಓದಲಿಕ್ಕಾಗದು. ಹೀಗೆ ವರ್ಣಾತ್ಮಕವಾದ ತಮ್ಮ ಲಿಪಿಪದ್ಧತಿಯಲ್ಲಿ ರೂಪುಗೊಂಡ ಮನೋವೃತ್ತಿಯ ಪಾಶ್ಚಾತ್ಯ ವಿದ್ವಾಂಸರು, ನಮ್ಮ ಅಕ್ಷರಾತ್ಮಕವಾದ ಲಿಪಿಯ ಸ್ವರೂಪವನ್ನವಲಂಬಿಸಿ ಅದರ ಉಚ್ಚಾರವನ್ನು ನಿರ್ಣಯಿಸುವಾಗ ಭ್ರಮಿಸಿದರೆ ಆಶ್ಚರ್ಯವೇನೂ ಇಲ್ಲ.

ಎರಡನೆಯದು:—'ಕೈ' ಮೊದಲಾದ ಐ ಸ್ವರಯುಕ್ತವಾದ ವ್ಯಂಜನಾಕ್ಷರ ಸಂಕೇತಗಳಾದ ಲಿಪಿಗಳ ರೂಪವಿಕಾಸದ ಮೀಮಾಂಸೆಯಿಂದಲೂ ಅವು ಕೆಯ್ ಅಥವಾ ಕೆಇ ಇತ್ಯಾದಿ ಉಚ್ಚಾರಗಳನ್ನು ಕೊಡುವ ಸಂಕೇತಗಳೆಂದು ಸಿದ್ಧವಾಗುವುದಿಲ್ಲ. ಕೈ ಜೈ ಇತ್ಯಾದಿ ಲಿಪಿರೂಪಗಳ ಅಧೋಭಾಗದಲ್ಲಿರುವ 'ೖ' ಈ ಗುರುತು ಇಕಾರ ಸೂಚಕವೆಂದು ಅಥವಾ ಯಕಾರ ಸೂಚಕವೆಂದು ಯಾರೂ ಸಾಧಿಸಿರುವುದಿಲ್ಲ, ಸಾಧಿಸಲು ಬರುವಂತೆಯೂ ಇಲ್ಲ. ಅಶೋಕ ಲಿಪಿಯಲ್ಲಿ[೨೩] **ಕೆ ಕೈ**ಗಳು

[illegible] [illegible] ಹೀಗಿವೆ ( History of Kannada Language - R Narasinhachar ). ಆರನೆಯ ಶತಮಾನದ ಚಾಲುಕ್ಯರ ಶಾಸನದಲ್ಲಿ ( South Indian Palaeography-plate III ) ಅವು [illegible] ಹೀಗಾಗಿವೆ. ಹಳೆಯ ತಮಿಳಿನಲ್ಲಿ கை கை ಈ ರೂಪಗಳನ್ನು ತಳೆದಿವೆ. ಅನಂತರದ ಕನ್ನಡ-ತೆಲುಗು ರೂಪಗಳಲ್ಲಿ ಐ ಸೂಚಕವಾದ [illegible] ಈ ಎರಡು ಚಿಹ್ನಗಳಲ್ಲಿ ಒಂದು ಮೆಲ್ಲಮೆಲ್ಲಗೆ ಕೆಳಗಿಳಿದಿದೆ [ ಭಾಷಾಭೂಷಣದ ಪ್ರಥಮ ಮುದ್ರಣದಲ್ಲಿ ರೈಸರು ( Rice ) ಅನುಷಂಜಿಸಿದ 'ಹಾಳೆ'ಯನ್ನು ನೋಡಿರಿ ]. ಇದರ ಪರಿಣಾಮವಾಗಿ ಈಗ ತೆಲುಗಿನಲ್ಲಿ ಒಂದು ಮೇಲೆ ಎಡಗಡೆಯಲ್ಲಿಯೇ ಉಳಿದು ಮತ್ತೊಂದು ಅಡಿಗೆ ಬಂದು ಕುಳಿತಿದೆ— కై ಹೀಗೆ. ಕನ್ನಡದಲ್ಲಿ ಒಂದು ಮೇಲೆ ಬಲಗಡೆ ಸರಿದು, ಮತ್ತೊಂದು ಅಪ್ರದಕ್ಷಿಣವಾಗಿ ಕೆಳಕೆಳಗಿಳಿದು, ಈಗ ಬಲಗಡೆಯ ಕೆಳಮೂಲೆಗೆ ಬಂದು ಬಿದ್ದಿದೆ— **ಕೈ** ಹೀಗೆ. ( ಇದರ ಕೆಳಗಿನ ಗುರುತನ್ನೂ ಕೃ ಎಂಬುದರಲ್ಲಿ ನಾವು ಬರೆಯುವ ಋಕಾರ ಚಿಹ್ನವನ್ನೂ ಭೇದಿಸುವುದಕ್ಕಾಗಿ ಮೊದಲಿನದಕ್ಕೆ ಒಂದು ಗೊಣಸನ್ನು ಇತ್ತೀಚೆ ಹೆಚ್ಚಿಸಿದ್ದೇವೆ. ಕೈ— ಹೀಗೆ. ) ಇಂದಿನ ತಮಿಳಿನಲ್ಲಿ ಐ ಸೂಚಕವಾದ ಆ ಎರಡು ಚಿಹ್ನಗಳು ಸಂಧಿಸಿ, ಕೈ ಎಂಬುದು **கை** ಹೀಗೆ ಬರೆಯಲ್ಪಡುತ್ತದೆ. ನಾಗರೀಲಿಪಿಯಲ್ಲಿ ಹೆಚ್ಚುಕಡಮೆ ಅಶೋಕ ಲಿಪಿಯಲ್ಲಿದ್ದಂತೆಯೇ ಆಯೆರಡು ಚಿಹ್ನಗಳು ಮೇಲೆಯೇ ಉಳಿದು कै ಎಂಬುದು ಉಂಟಾಗಿದೆ. ಹೀಗೆ ನಮ್ಮ ಯಾವ ಲಿಪಿಗಳನ್ನು ಪರೀಕ್ಷಿಸಿದರೂ ಐ ಸ್ವರಯುಕ್ತ ವ್ಯಂಜನಾಕ್ಷರಗಳೆಲ್ಲ **ಎರಡು ಏಕಾರಚಿಹ್ನ**ಗಳಿಂದಲೇ ರೂಪಿತವಾಗುತ್ತವೆಂದು ತಿಳಿದುಬರುವುದು. ಆದುದರಿಂದ ಕನ್ನಡದ **ಕೈ**ಯಲ್ಲಿಯೂ ತೆಲುಗಿನ కై ಯಲ್ಲಿಯೂ ಕ ಕಾರ ಸಂಕೇತಕ್ಕೆ ಮೇಲೊಂದು ಅಡಿಯಲ್ಲೊಂದು —ಹೀಗೆ ಹೊಂದಿಸಿದ ಎರಡು ಚಿಹ್ನಗಳೂ **ಏ**ಕಾರ ಚಿಹ್ನಗಳೆಂಬುದರಲ್ಲಿ ಸಂದೇಹವಿಲ್ಲ.[೨೪] ಹಾಗಾದರೆ ನಾಗರಿಯ कै जै ಗಳೂ ಕನ್ನಡದ ಕೈ ಜೈಗಳೂ ಭಿನ್ನೋಚ್ಚಾರ ಸೂಚಕಗಳೆಂದು ಹೇಳುವುದು ಸರಿಯಾಗಲಾರದು. ಆದುದರಿಂದ ನಾವು ಕೆ ಎಂಬುದಕ್ಕೆ ಸ್ವಲ್ಪ ಕೂಡಿಸಿ ಕೈ ಎಂದು ಬರೆಯುವುದರಿಂದ, ಅದನ್ನು ಕೆಇ ಅಥವಾ ಕೆಯ್ ಎಂದು ಉಚ್ಚರಿಸಬೇಕೆನ್ನುವುದು **ಕು** ಎಂಬುದರಲ್ಲಿ ಕ ಅಡಕವಾಗಿರುವುದರಿಂದ ಅದನ್ನು ಕಉ ಎಂದು ಉಚ್ಚರಿಸಬೇಕೆನ್ನುವಷ್ಟೇ ಅ ಸ ಮ ಂ ಜ ಸ ವಲ್ಲವೇ ? ಈ ಸವಿಸ್ತರವಾದ ಪ್ರತಿಪಾದನದಿಂದ ದ್ರಾವಿಡ ಐಕಾರದ

ಉಚ್ಚಾರವು ei ಎಇ ಎಂಬಂತಿದೆಯೆಂದು ಲಿಪಿರೂಪದಿಂದ ಸಿದ್ಧವಾಗುವು ದರ ಬದಲಾಗಿ ai ಅಇ (ಅಥವಾ ಅಯ್) ಎಂಬಂತೆಯೇ ಇರಬೇಕೆಂದು ಲಿಪಿಮೀಮಾಂಸೆಯಿಂದಲೇ ನಿಸ್ಸಂದಿಗ್ಧವಾಗಿ ಸಿದ್ಧವಾಗುತ್ತದೆಂದು ತೋರಿಸಲಾಯಿತೆಂದು ನಂಬುತ್ತೇನೆ.

ಈಗ ಕೈ ಮೈ ಗೈ ಇತ್ಯಾದಿಯಾಗಿ ಬರೆಯಲ್ಪಡುವ ಆ ಧ್ವನಿಗಳ ಸ್ವರೂಪ ನಿರ್ಣಯಕ್ಕೆ ಅವುಗಳ ಉಚ್ಚಾರವು ಹೇಗಿದೆಯೆಂದು ಪರೀಕ್ಷಿಸುವ ಒಂದು ಮಾರ್ಗವು ಮಾತ್ರ ಉಳಿದಂತಾಯಿತು. ಇದು ನಮಗೆ ಎರಡು ವಿಧಾನವಾಗಿ ಗೋಚರವಾಗುತ್ತವೆ; ಎಂದರೆ ಕೆಲವು ಶಬ್ದಗಳಲ್ಲಿ **ಅಯ್** ಎಂಬ ಧ್ವನಿಯೂ, ಮತ್ತೆ ಕೆಲವು ಶಬ್ದಗಳಲ್ಲಿ ಎಯ್ ಎಂಬ ಧ್ವನಿಯೂ ಕೇಳಿಬರುತ್ತವೆ. ಉದಾ:- ಕೈ=ಕಯ್ ( ಹಸ್ತ ), ಮೈ=ಮೆಯ್ (ದೇಹ). ಗೈ=ಗೆಯ್ [ಗಯ್] (ಮಾಡು), ಬೈ=ಬಯ್ (ನಿಂದಿಸು), ಸೈ=ಸಯ್ (ಸರಿ), ಇವುಗಳೆಲ್ಲ ಏಕಾಕ್ಷರ ಶಬ್ದಗಳು. ಸರಿಗೈ= ಸರಿಗೆಯ್ ( ಸರಿಗಯ್ ? ), ಎಲ್ಕೈ=ಎಲಯ್, ಬಂದೈ=ಬಂದಯ್,— ಹೀಗೆ ಪರೀಕ್ಷಿಸುತ್ತಾ ಹೋದರೆ, ಐಕಾರಚಿಹ್ನ ( ೈ) ಯುಕ್ತವಾದ ವ್ಯಂಜನಾಕ್ಷರ ಸಂಕೇತದಿಂದ ಹೆಚ್ಚಾಗಿ ಅಯ್ ಎಂಬ ಧ್ವನಿಯೂ, ಕೆಲವೆಡೆ ಮಾತ್ರ **ಎಯ್** ಎಂಬ ಧ್ವನಿಯೂ ಸೂಚಿತವಾಗುತ್ತವೆಂದು ಕಂಡುಬರುವುದು ಮತ್ತು ಎಲ್ಲೆಲ್ಲಿ **ಅಯ್** ಧ್ವನಿ ಕೇಳುತ್ತದೋ ಅಲ್ಲೆಲ್ಲ ಕಯ್, ಬಯ್, ಬಂದಯ್ ಎಂಬಂತೆ ಬರೆದರೆ ತಪ್ಪಲ್ಲವೆಂದೂ, ಹಾಗೆ ಬರೆಯುವ ರೂಢಿಯೂ ಉಂಟೆಂದೂ, **ಎಯ್** ಧ್ವನಿ ವಿಶಿಷ್ಟವಾದ ಕೆಲವು ಶಬ್ದಗಳನ್ನು ಉದಾ:— ಕೆಯ್=ಭತ್ತದ ಗಿಡ; ಸೆಯ್=ತುಪ್ಪ; ಮುಳ್ಳುಹಂದಿ ಎಂಬರ್ಥದ 'ಎಯ್' ಎಂಬ ಶಬ್ದ ಇತ್ಯಾದಿಗಳನ್ನು - ಕೈ, ಸೈ, ಐ ಎಂದು ಮುಂತಾಗಿ ಬರೆಯುವ ರೂಢಿ ಇಲ್ಲವೇ ಇಲ್ಲವೆಂದೂ ಗೊತ್ತಾಗುವುದು. ತಮಿಳಿನಲ್ಲಿ ದೇಹವಾಚಿಯಾದ ಆ ಶಬ್ದವನ್ನು **ಮೆಯ್** ಎಂದು ಯಾವಾಗಲೂ ವ್ಯಂಜನಾಂತವಾಗಿಯೇ ಬರೆಯುತ್ತಾರೆ. ಹಾಗಾದರೆ ಐ ಎಂಬುದಕ್ಕೆ **ಅಯ್** ಎಂಬ ಉಚ್ಚಾರವೇ ಸಾಧು; **ಎಯ್** ಎಂಬ ಉಚ್ಚಾರವನ್ನದು ಹುಟ್ಟಿಸುವುದಿಲ್ಲ ಎಂದಾಯಿತು. ಇದನ್ನೇ ಇನ್ನೊಂದು ರೀತಿಯಲ್ಲಿ ಇನ್ನಷ್ಟು ಯಥಾರ್ಥವಾಗಿ ಹೀಗೆ ಹೇಳಬಹುದು— **ಅಯ್** ಎಂದು ಉಚ್ಚರಿಸಲ್ಪಟ್ಟು, ಹಾಗೆಯೇ ( ಅಯ್ ಎಂದೂ ) ಬರೆಯಲ್ಪಡುವ ಧ್ವನಿಯನ್ನು (ಕನ್ನಡಿಗರಾದ ನಾವು, ಕನ್ನಡ ಶಬ್ದಗಳಲ್ಲಿ ) **ಐ** ಎಂಬ ಇನ್ನೊಂದು ಲಿಪಿರೂಪದಲ್ಲಿಯೂ ಬರೆದು ತೋರಿಸುತ್ತೇವೆ. **ಎಯ್** ಎಂದು ಉಚ್ಚರಿಸಲ್ಪ

ಡುವುದನ್ನು ಎಯ್ ಎಂದೇ ಯಾವಾಗಲೂ ಬರೆಯಬೇಕಾಗುತ್ತದೆ.[೨೫]

ಹಾಗಾದರೆ ತಮಿಳಿನಲ್ಲಿ (ை) ಈ ರೀತಿಯ ಐಕಾರಚಿಹ್ನಸಹಿತವಾಗಿಯೇ ಬರೆಯಲ್ಪಡುವ--- ಎಂದೂ ಎಯ್ ಎಂದು ವ್ಯಂಜನಾಂತವಾಗಿ ಬರೆಯಲ್ಪಡದ--- ಶಬ್ದಗಳ ಕೊನೆಯ ವರ್ಣದ ಉಚ್ಚಾರವು ಹೇಗಿರಬೇಕು? ಸಹಜವಾಗಿಯೂ ಅದು ತಲೈ=ತಲಯ್, ನಡೈ=ನಡಯ್, ಮಲೈ=ಮಲಯ್ ಎಂದೇ ಇರಬೇಕೆಂದು ಲಿಪಿಮೀಮಾಂಸೆಯಿಂದಲೂ ಸಿದ್ಧವಾದಂತಾಯಿತು. ಅವರು ಅದನ್ನು ತಲಯ್ ಎಂಬಿತ್ಯಾದಿಯಾಗಿಯೇ ಉಚ್ಚರಿಸುತ್ತಾರೆಂಬುದನ್ನು ಹಿಂದೆಯೇ ತಿಳಿಸಿರುತ್ತೇವೆ. ಮಾತ್ರವಲ್ಲ; ಮೆಯ್, ನೆಯ್ ಇತ್ಯಾದಿಗಳನ್ನು ಅವರು (ை) ಇಂತಹ ಐಕಾರಚಿಹ್ನಸಹಿತವಾಗಿ ಎಂದೂ ಬರೆಯದೆ, ಉಚ್ಚಾರ ಸ್ವರೂಪವನ್ನು ಇದ್ದಂತೆ ತೋರಿಸುವ ರೀತಿಯಲ್ಲಿ ಎಕಾರೋಪಧೆಯಾದ ಯಕಾರಾಂತ (—ಎಯ್) ವಾಗಿಯೇ ಬರೆಯುವುದರಿಂದಲೂ ಅದು ಮತ್ತಷ್ಟು ಸ್ಫುಟವಾಗುತ್ತದೆ.

ಕಾಲ್ಡ್‌ವೆಲ್ಲರು ಅದನ್ನು · ei ಎ͡ಇ ಎಂದು ಪ್ರತಿಪಾದಿಸುವುದಕ್ಕೆ ಮುಂದೊಡ್ಡಿದ ಕಾರಣಗಳಲ್ಲಿ ಇದೊಂದು:— "ತಮಿಳಿನ ತಲೈ, ನಡೈ ಮೊದಲಾದ ಐಕಾರಾಂತಗಳೆಂಬ ಶಬ್ದಗಳು ಮಾತಾಡುವಾಗಲೆಲ್ಲ— (ಕೆಲವೆಡೆ ಪ್ರತ್ಯಯ ಸೇರಿ ಕೊನೆಯಲ್ಲಿದ್ದ ವರ್ಣವು ಮಧ್ಯಗತವಾದಾಗಲೂ; ಉದಾ:— ಉಡೈ+ಮೈ= ಉಡೆಮೈ ಪುಟ ೧೯ )— ತಲೆ, ನಡೆ ಎಂದು ಮೊದಲಾಗಿ ಎಕಾರಾಂತಗಳಾಗಿಯೇ ಕೇಳುತ್ತವೆ. ಆಡುಮಾತಿನಲ್ಲಿ ಆ ಸಂಧಿಸ್ವರವು ( diphthong ) ಹ್ರಸ್ವವಾಗಿ ಉಳಿದಿರುವುದೆಂದು ತೋರುತ್ತದೆ. ಹಾಗೆ ಉಳಿದಿರುವ ಭಾಗವು ಎ ಕಾರವಾಗಿರುವುದರಿಂದ ಅದರ ಪೂರ್ಣರೂಪವು ei ಎ͡ಇ ಎಂದೇ ಆಗಿರಬೇಕು. ಹೊರತು, ai ಅ͡ಇ ಎಂದಲ್ಲ." ಇದು ಅವರ ತರ್ಕಸರಣಿ. ಮತ್ತು "ಕುಮಾರಿಲಭಟ್ಟನು ತಮಿಳಿನ ನಡೈ ಎಂಬ ಶಬ್ದವನ್ನು ಸಂಸ್ಕೃತದಲ್ಲಿ ಉದ್ಧರಿಸಿ ಬರೆಯುವಾಗ ನಡೆ ಎಂದೇ ಬರೆದಿರುವುದು" ತಮ್ಮ ಊಹೆಯನ್ನು ಪುಷ್ಟೀಕರಿಸುವುದೆಂದೂ ಅವರು ವಾದಿಸುತ್ತಾರೆ.

ಇವುಗಳೊಳಗೆ ಮೊದಲಾಗಿ ಕುಮಾರಿಲಭಟ್ಟನ ಪ್ರಸಂಗವನ್ನೆತ್ತಿಕೊಳ್ಳೋಣ. ಅವನು ತಮಿಳು ಗ್ರಂಥಗಳನ್ನು ನೋಡಿ, ಆ ಶಬ್ದವನ್ನು ಹೆಕ್ಕಿ ಅದನ್ನು ಸಂಸ್ಕೃತದಲ್ಲಿ ಲಿಪ್ಯಂತರ ( Transliteration ) ಗೊಳಿಸಿದನು ಎಂದೇನೂ ತಿಳಿದುಬಂದಿಲ್ಲ. ಅಥವಾ ಅವನು ತಮಿಳನ್ನು ಕಲಿತಿದ್ದನು ಎಂಬುದಕ್ಕೂ ಆಧಾರವಿಲ್ಲ. ಸಹಜವಾಗಿ ಅವನು ತಾನು

ಕೇಳಿದ ರೂಪಗಳಲ್ಲಿಯೇ ಅವುಗಳನ್ನು ಬರೆದಿರುವನೆನ್ನಬೇಕು. ಮತ್ತು ಗ್ರಂಥಾನುಸಾರವಾಗಿ ಬರೆಯುತ್ತಿದ್ದರೆ, ಪ್ರಾಯಃ ಅವನು ಅಲ್ಲಿ **ಡ** ಕಾರವನ್ನು ಪ್ರಯೋಗಿಸುತ್ತಿರಲಿಲ್ಲ ಏಕೆಂದರೆ ತಮಿಳಿನಲ್ಲಿ **ಟ** ಕಾರವೇ ಅವ ಸ್ಥಾನ ವಿಶೇಷದಲ್ಲಿ ಡ ಕಾರವಾಗಿ ಉಚ್ಚರಿಸಲ್ಪಡುತ್ತದೆ; ಬರೆಯುವಾಗ ಟ ಡ ಗಳೆರಡರ ಸ್ಥಾನದಲ್ಲಿಯೂ **ಟ** ಎಂಬ ಲಿಪಿರೂಪವೇ ಇರುತ್ತದೆ. ಆದುದರಿಂದ ಅವನು ಉಚ್ಚಾರವನ್ನೇ ಅನುಲಕ್ಷಿಸಿ ಆ ಶಬ್ದವನ್ನು ಸಂಸ್ಕೃತದಲ್ಲಿ ಬರೆದನು ಎಂದು ಹೇಳುವುದು ಯುಕ್ತವಾಗಿದೆ. **ನಟೈ** ಎಂದು ಬರೆಯಲ್ಪಡುವ **ನಡೈ** ಎಂಬ ಶಬ್ದವನ್ನು ತಮಿಳರು **ನಡೆ** ಎಂದೇ ನುಡಿಯುವುದರಿಂದ, ಅವನು ಅದನ್ನು **ನಡೆ** ಎಂಬ ರೂಪದಲ್ಲಿಯೇ ಸಂಸ್ಕೃತದಲ್ಲಿ ಉದ್ಧರಿಸಿರಬೇಕು. ಆದುದರಿಂದ ಕುಮಾರಿಲಭಟ್ಟನ ಬರವಣಿಗೆಯು, "ಆ ಸಂಧಿಸ್ವರವು ei ಎಇ ಆಗಿದೆ" ಎಂದು ಊಹಿಸುವುದಕ್ಕೆ ಆಧಾರವಾಗಲಾರದು.

ಹಾಗಾದರೆ ಆಡುನುಡಿಯಲ್ಲಿ ಎಕಾರವಾಗಿ ಪರಿಣಮಿಸುವ ಆ ಪದಾಂತ್ಯದ ನಿಜರೂಪವು ಯಾವುದು? ai ಅಇ ಅಯ್—ಎಂದಾಗಿದ್ದರೆ ಅದು 'ಹ್ರಸ್ವವಾಗುವಾಗ' ಎಕಾರವು ಹುಟ್ಟುವುದು ಹೇಗೆ?— ಎಂದರೆ, ಮೊದಲನೆಯದಾಗಿ, ಅದು ಉಚ್ಚಾರದಲ್ಲಿ ಹ್ರಸ್ವವಾಗುವುದೆಂದು ಭಾವಿಸುವುದೇ ಸರಿಯಲ್ಲ. ಏಕೆಂದರೆ ai ಐ ಯಲ್ಲಿ ( ವಾದಕ್ಕಾಗಿ ಹೇಳುವುದಿದ್ದರೆ ei ಎಇ ಯಲ್ಲಿ ಕೂಡ ) ಹ್ರಸ್ವ ದೀರ್ಘಭೇದವಿಲ್ಲ, ಅದು ನಿತ್ಯ ದೀರ್ಘ. ಆದುದರಿಂದ ಆ ಸಂಧಿಸ್ವರವು (ಐ) ಹ್ರಸ್ವರೂಪವನ್ನು ಹೊಂದಲಾರದು. ಅದನ್ನು ಹ್ರಸ್ವಮಾಡತೊಡಗಿದರೆ, ಅದರ ರೂಪವೇ ನಾಶವಾಗಿ ಬೇರೊಂದು ರೂಪವು ಸಿದ್ಧಿಸುವುದು. ೨೬

ತಮಿಳಿನ ಐಕಾರಾಂತವೆನ್ನಿಸುವ ಪದಗಳ ನಿಜಸ್ವರೂಪವನ್ನು ನಿರ್ಧರಿಸುವುದಕ್ಕೆ, ಅದರ ಸೋದರೀ ಭಾಷೆಗಳಿಂದ ಏನಾದರೂ ನೆರವು ದೊರಕುವುದೋ ನೋಡೋಣ.

ಹಳಗನ್ನಡ ಕ್ರಿಯಾಪದದ ಮೂರೂ 'ಕಾಲಿಕ' ರೂಪಗಳ ಮಧ್ಯಮ ಪುರುಷೈಕವಚನದ ಪ್ರತ್ಯಯವು '**ಅಯ್**' ಎಂದು ನಮ್ಮ ಪುರಾತನ ವೈಯಾಕರಣರೆಲ್ಲ ಏಕಕಂಠತೆಯಿಂದ ಹೇಳಿರುವರು. ಅವರು ಅದನ್ನು ಐ ಎಂಬ ಏಕಸ್ವರರೂಪವೆನ್ನದೆ, **ಅಯ್** ಎಂದು ಅಕಾರವು ಉಪಧೆಯಾಗಿರುವ ಯಕಾರವೆಂದೇ ನಿರೂಪಿಸಿರುವರು—

**ನಾಗವರ್ಮ**— ತಸ್ಮಾತ್ ಅಮರ**ಯಿ**ರೆನೆವೋ ವಿಭಕ್ತಯಃ
( ಭಾ. ಭೂ. ಸೂತ್ರ ೨೦೦ )
ಅವ್+ಅರ್+**ಅಯ್**+ಇರ್+ಎನ್+ಎವ್ ( ? )

**ಕೇಶಿರಾಜ**— ಅಮುರ**ಯಿ**ರೆನೆವುಗಳಕ್ಕುಂ ( ಶ. ದ. ಸೂತ್ರ ೨೧೭ )
ಅಮ್+ಅರ್+**ಅಯ್**+ಇರ್+ಎನ್+ಎವು.

**ಭಟ್ಟಾಕಳಂಕ**— ಧಾತೋರೇಕಾನೇಕತ್ವೇ+ಅಮರ**ಯಿ**ರೆನೆವವಃ+ ಅನ್ಯ
ಯುಷ್ಮದಸ್ಮಾಸು ಕರ್ತರಿ ( ಶ. ಶಾ. ಸೂತ್ರ ೪೪೨ )
ಅಮ್+ಅರ್+**ಅಯ್**+ ಇರ್+ಎನ್+ಎವು.

ಈ **ಅಯ್** ಪ್ರತ್ಯಯವು ಕೂಡಿ ಸಿದ್ಧವಾಗುವ ಕ್ರಿಯಾಪದ ರೂಪಗಳು ಬಂದಯ್, ಬಂದಪಯ್, ಬರ್ಪಯ್ ಇತ್ಯಾದಿ. ಆದರೆ ಈ ರೂಪಗಳೆಲ್ಲ ಬಂದೆ, ಬಂದಪೆ, ಬರ್ಪೆ ಇತ್ಯಾದಿಯಾಗಿ ಸಾಹಿತ್ಯಗ್ರಂಥಗಳಲ್ಲೆಲ್ಲ ಮಾರ್ಪಟ್ಟು ಕಾಣಿಸಿಕ್ಕೊಳ್ಳುತ್ತವೆ. ಉದಾ— ಪುರಾತನ ಮಹಾಕವಿಗಳನ್ನೇ ಕೇಳೋಣ.

**ಪಂಪ**— ಮುರನಡಸಿ ಪಿಡಿದು ಕಟ್ಟಿದ
ಪರಿಭವಮಂ ಮಱಿದೆ ನಿನ್ನ ಪೆಡಗೆಯ್ಗುಟ್ಟಿಂ.೨೭
( ವಿಕ್ರ. ವಿ. ೬—೫೩ )

.......................................................ಪಯೋಧಿಯಂ
ಪೊಸೆದೊಡೆ ಪುಟ್ಟಿದೈ, ಮುರವಿರೋಧಿಯ ಪತ್ನಿಯ ಮಿಂಚು-
ತಿರ್ಪ ಕೂ-
ರಸಿಗಳ ಮೇಲೆ ಸಂಚರಿ**ಪೆ**, ವೈರಿನರಾಧಿಪ ಸೈನ್ಯವಾರ್ಧಿಯಂ
ಪೊಸೆದೊಡೆ ಪುಟ್ಟಿದೀ ನಿನಗೆ ಪಕ್ಕಿಸಲೆನ್ನನದೆಂತು ತೀರ್ಗುಮೋ.
( ವಿಕ್ರ. ವಿ. ೧೩-೧೦೧ )

**ರನ್ನ**— ಕುರುಕುಲಮಂ ನುಂಗಿ**ದೆ**ಯಿ-
ನ್ನರೆಬರುಮಂ ನುಂಗಲಿರ್ಪೆ ಕುರುಪತಿಯುಮನಿ-
ನ್ನೆರಡನೆಯ ಹಿಡಿಂಬಿಯನೆ-
ಮ್ಮರಸಂ ರಕ್ಕಸಿಯನೆಲ್ಲಿ ತಂದನೊ ನಿನ್ನಂ ||
( ಗದಾಯುದ್ಧ ೨-೯ )

ಎಮಗಂಥಯುಷ್ಟಿಯಾಗಿ-
**ಗಿರ್ದೆ** ಮಗನೆ ............................ ( ಗದಾಯುದ್ಧ ೩-೭೯ )

ಪರೀಕ್ಷಿಸಿ ನೋಡಿದರೆ **ಅಯ್** ಎಂಬುದರಂತೆ, ಎ ಎಂಬುದೂ ಮಧ್ಯಮ ಪುರುಷೈಕ ವಚನ ಕ್ರಿಯಾಪದ ಪ್ರತ್ಯಯವಾಗಿ ಬಹಳ ರೂಢಿಯಲ್ಲಿದ್ದುದು ತಿಳಿದುಬರುವುದು. ಆದರೆ ನಾಗವರ್ಮನಿಗಾಗಲಿ, ಸೂಕ್ಷ್ಮದರ್ಶಿಯಾದ ಕೇಶಿರಾಜನಿಗಾಗಲಿ ಇದು ಕಣ್ಣಿಗೆ ಬೀಳದಿದ್ದುದು ಆಶ್ಚರ್ಯಕರ. ಅವರಿಗಿಂತಮೊದಲೇ ಇಂತಹಪ್ರಯೋಗಗಳು ಸರ್ವಸಾಮಾನ್ಯವಾಗಿದ್ದುವು. ತಮಿಳಿನಲ್ಲಿ ಐ ಎಂದುಪದಾಂತಗಳನ್ನುಬರೆದು ಎ ಎಂದು ನುಡಿಯುವುದು ರೂಢವಾಗಿರುವಂತೆಯೇ, ಅಂದು ಕನ್ನಡದಲ್ಲಿ ಬಂದಯ್ ಪೋದಯ್ ಎಂದು ಬರೆಯುವುದು; ಬಂದೆ ಪೋದೆ ಎಂದು ನುಡಿಯುವುದು ಪ್ರಾಯಃ ನಿತ್ಯ ನಿಯಮವಾಗಿ ಹೋಗಿದ್ದಿರಬೇಕು. ಕೆಲವು ಬಾರಿ ಅತಿ ಪರಿಚಿತವಾದುವುಗಳು ಅವಜ್ಞೆಗೊಳಗಾಗುತ್ತವೆ! ಇರಲಿ; ಅನಂತರದ ಭಾಷೆಯಲ್ಲಿ **ಅಯ್** ಕಡಮೆಯಾಗಿ, ಕೊನೆಗೆ ಹೊಸಗನ್ನಡಕ್ಕಾಗುವಾಗ ಅದು ಸಂಪೂರ್ಣವಾಗಿ ಅಳಿದುಹೋಗಿ,— ನೀನು ಬಂದೆ, ಬರುವೆ, ಮಾಡುವೆ, ಮಾಡಿದೆ ಇತ್ಯಾದಿ ಎಕಾರಾಂತರೂಪಗಳು ಮಾತ್ರ ಉಳಿದಿವೆ. ಹೊಸಗನ್ನಡದ ಕೆಲವು ಆಡುನುಡಿಗಳಲ್ಲಿ ಅದೀಗ ಬಂದಿ, ಬರುವಿ, ಮಾಡುವಿ, ಮಾಡಿದಿ,— ಹೀಗೆ ಇಕಾರಾಂತವೂ ಆಗಿದೆ. **ಅಯ್** ಅಥವಾ ಐ ಎಂಬುದು **ಎ** ಕಾರವಾಗುವುದು ಹೇಗೆ ಎಂದು ಕೇಳುವವರಿಗೆ, ಎಕಾರವು ಇಕಾರವಾದುದು ಹೇಗೆ? ಅವುಗಳೊಳಗೆ ಸಾಮ್ಯವಿಲ್ಲವಷ್ಟೇ?— ಎಂದು ಕೇಳಬೇಕಾಗಿದೆ. ತಮಿಳಿನಲ್ಲಿ **ತಲೈ** ಎಂದಿರುವ ಶಬ್ದವು ತಮಿಳು 'ನುಡಿ'ಯಲ್ಲಿಯೂ, ಕನ್ನಡದಲ್ಲಿಯೂ **ತಲೆ**ಯಾಗಿಯೇ ಇದೆಯಾದರೂ, ಕನ್ನಡಿಗರಲ್ಲಿ ಕೆಲವರ ಬಾಯಲ್ಲಿ ಅದು **ತಲಿ** ಎಂದಾದುದು ಹೇಗೆ? ಇದೂ ಹಾಗೆಯೇ. "ವಿಚಿತ್ರಾಹಿ ಶಬ್ದಗತಿಃ." ಇರಲಿ. ಕೇಶಿರಾಜನಿಗಿಂತ ಆಧುನಿಕನಾದ **ಭಟ್ಟಾಕಳಂ**ಕನು **ಅಯ್** ಎಂಬುದಕ್ಕೆ ಎ ಎಂಬ ವಿಕಲ್ಪವು ಮೊದಲಿಂದಲೇ ಇತ್ತೆಂದು ಕಂಡುಕೊಂಡಿದ್ದನೆಂದು ಹೇಳಬಹುದು. ಅವನು ಈ ಎಕಾರ ವಿಕಲ್ಪಕ್ಕೆ ಕೊಡುವ ನಿದರ್ಶನವು ಹಳಗನ್ನಡದ್ದೆ ಆಗಿದೆ.

ಕಂತುವನೆಂತಳಜಿಸಿದೆ ಕೃ
ತಾಂತನನುರದೆಂತು ಗೆಲ್ದೆ ಮುಕ್ತ್ಯಂಗನೆಯಂ ||
ಎಂತೊಲಿಸಿದೆ ನಿರವಧಿಸುಖ
ಸಂತತಿಯನದೆಂತು ಪಡೆದೆ ಪೇಳ್ ಜಿನಗರ್ಹಾ ||

(ಶ. ಶಾ ಸೂತ್ರ ೪೪೨ ರ ವ್ಯಾಖ್ಯೆ)

ಕ್ರಿಯಾಪದದಲ್ಲಿ ಮಾತ್ರ ಈ ವಿಕಲ್ಪವಲ್ಲ ಉದಾ— ಅಭಿಮುಖೀಕರಣಕ್ಕಾಗಿ ಪ್ರಯೋಗಿಸುವ ನಿಪಾತಗಳಲ್ಲಿ **ಎಲಯ್** ಅಥವಾ **ಎಲೈ** ಎಂಬುದೂ ಒಂದು. **ಎಲೆ** ಎಂಬ ಇನ್ನೊಂದು ನಿಪಾತರೂಪಕ್ಕೂ ಇದೇ ಅರ್ಥವಿರುವುದರಿಂದ ಇವು ಕೂಡ 'ಬಂದಯ್' 'ಬಂದೆ' ಗಳಂತೆ ಮೂಲವಲ್ಲಿ ಒಂದೇ ಎಂದು ಊಹಿಸುವುದು ತಪ್ಪೆಂದಾಗಲಾರದು. ಹಾಗೆಯೇ 'ಉದಯಕಾಲ' ಎಂಬುದು 'ಉದೆಕಾಲ' ಎಂದು ಹವೀಕರಲ್ಲಿ ಗ್ರಾಮ್ಯವಾಗಿರುವುದೂ ಹೀಗಾಗುವ ಬದಲಾವಣೆಗೆ ಒಂದು ಸಾಕ್ಷಿ. ಅವಸರದಲ್ಲಿ ನುಡಿಯುವಾಗ ಉದಯಕಾಲವೆಂಬುದು, 'ಪ್ರಲಯಭಾನು' ವಜ್ರಭಾಷೆಯಲ್ಲಿ 'ಪ್ರಲೈಭಾನು' ವಾದಂತೆ, 'ಉದಯ್‌ಕಾಲ' ವೆಂದಾಗಿ, ಮತ್ತೆ 'ಬಂದಯ್' ಎಂಬುದು 'ಬಂದೆ' ಎಂದಾದಂತೆ 'ಉದೆಕಾಲ' ವಾಗಿದೆಯೆಂಬುದು ಸ್ಪಷ್ಟ.

ಕನ್ನಡ ತಾಯಿಗೆ ಹೀಗೆ ಪದಾಂತದ **ಅಯ್** ಗಳನ್ನು ಎ ಕಾರಗಳನ್ನಾಗಿ ಮಾಡುವುದು ಅತ್ಯಂತ ಸಾಮಾನ್ಯವಾದ ಕೆಲಸವಾಗಿರುವಾಗ, ಅವಳ ಸೋದರಿಯಾದ ತಮಿಳು ತಾಯಿಗೆ ಅದು ಕಷ್ಟವಾದೀತೆ? ಕನ್ನಡದಲ್ಲಿ ಎಕಾರವಾಗಿ ಪರಿಣಮಿಸುವ ಪೂರ್ವರೂಪವು **ಅಯ್** ಎಂಬುದರಲ್ಲಿ ಯಾವ ಸಂದೇಹಕ್ಕೂ ಎಡೆಯಿಲ್ಲವಷ್ಟೆ? ಹಾಗಾದರೆ ತಮಿಳಿನಲ್ಲಿಯೂ, ಹಿಂದೆ ಮಾಡಿದ ಸುದೀರ್ಘವಾದ ಪ್ರತಿಪಾದನದಂತೆ **ಅಯ್** ಎಂದೇ ಉಚ್ಚಾರವುಳ್ಳ ಐ ಸ್ವರ ಚಿಹ್ನವನ್ನು ಪದಾಂತ್ಯವಾಗಿ ಬರೆಯುವುದು ಮಾತ್ರವಲ್ಲ, **ತಲಯ್ ಮಲಯ್** ಎಂದೇ ತಮಿಳರು ಉಚ್ಚರಿಸುತ್ತಲೂ ಇರುವಾಗ, ಅದು ಸಹ ಕನ್ನಡದ **ಅಯ್** ಎಕಾರವಾದಂತೆಯೇ, ನುಡಿಯಲ್ಲಿಯೂ ಕೆಲವೆಡೆಗಳಲ್ಲಿ ಬರಹದಲ್ಲಿಯೂ ( ಉದಾ— **ಉಡೈಮೈ**=**ಉಡೆಮೈ** ) ಎ ಕಾರವಾಗಿ ರೂಪಾಂತರ ಹೊಂದುತ್ತಿರುವಾಗ, ಆ ಧ್ವನಿಯ ನಿಜರೂಪವು ei ಎಇ ಅಲ್ಲ, ai = ಅಇ=ಐ=ಅಯ್ ಎಂದೇ ಸಿದ್ಧವಾಗಲಿಲ್ಲವೇ ?

ಹಳೆಗನ್ನಡದಲ್ಲಿ ನೆಯ್, ಗೆಯ್ ಎಂದಿದ್ದ ಧಾತುಗಳು ( ನೆಯ್- ವಸ್ತ್ರ ಕ್ರಿಯಾಯಾಂ; ಗೆಯ್- ಶಿಲ್ಪೇ. ಶಬ್ದಮಣಿದರ್ಪಣ ಧಾತುಪಾಠ) ಹೊಸಗನ್ನಡದಲ್ಲಿ ನೇ, ಗೇ ಎಂದಾಗಿವೆ. ಉದಾ— ನೇಕಾರ, ನೇಯುವವನು; ಗೇಯುವ ಹೊಲ; ಗೇದು ಬಳಲಿದ. ಇತ್ಯಾದಿ ೨೮ ದರ್ಪಣಕಾರನ ಧಾತುಪಾಠದಲ್ಲಿ **ಬೇ** ಎಂಬ ರೂಪವುಳ್ಳ ( ಬೇ–ದಾಹೇ ) ಧಾತುವಿನ ಮೂಲರೂಪವು **ಬೆಯ್** ಎಂದಿರಬೇಕೆಂದು ಶಬ್ದಶಾಸ್ತ್ರಜ್ಞರು ಊಹಿಸುತ್ತಾರೆ. ( ಕನ್ನಡ ಕೈಪಿಡಿ-ದ್ವಿತೀಯ

ಮುದ್ರಣ ಪುಟ (೪೩೫) ತುಳುವಿನಲ್ಲಿ ಈ ಧಾತು **ಬೆಯ್** ಎಂದೇ ಇಂದಿಗೂ ಇದೆ. ಉದಾ— ದಿಕ್ಕೆಲ್'ಡ್' ಉಣ್ಪು ಬೆಯ್ಪುಂಡು (ಒಲೆಯಲ್ಲಿ ಅನ್ನವು ಬೇಯುತ್ತದೆ.) ಈ ಧಾತು ತಮಿಳು ಮಲಯಾಳಗಳಲ್ಲಿ **ವೇ** ಎಂದಿದೆಯೆಂದು ಕಿಟ್ಟೆಲರ ಕೋಶದಲ್ಲಿರುವುದಾದರೂ, **ಬೆಂದು ಬೆಂದ** ಇತ್ಯಾದಿ ಹ್ರಸ್ವರೂಪಗಳೂ ಇದಕ್ಕೆ ಕನ್ನಡದಲ್ಲಿ ಹೆಚ್ಚಾಗಿ ಬರುವುದರಿಂದ ಬೆಂದ ಎಂಬುದರಲ್ಲಿರುವ ಅನುನಾಸಿಕೋಚ್ಚಾರವು ಮೂಲದಲ್ಲಿದ್ದಿರಬಹುದಾದ (ಬೆಯ್) ಸಾನುನಾಸಿಕ ಯಕಾರದ ಪರಿಣಾಮವೆಂದು ತೋರುವುದರಿಂದ, ತುಳುವಿನಲ್ಲಿ ಈಗಲೂ ಇರುವಂತೆ, ಆರಂಭದಲ್ಲಿ ಬೆಯ್ ಎಂದೇ ಇದ್ದಿರಬಹುದೆಂಬ ಊಹೆಗೆ ಬಲವಿದೆ. ಹಾಗಾದರೆ ( ನೆಯ್, ಗೆಯ್, ಬೆಯ್ ಎಂಬಿವು ನೇ, ಗೇ, ಬೇ ಎಂದಾದಂತೆ ) ಪದಾಂತದ **ಎಯ್** ಎಂಬ ಧ್ವನಿ ಕಾಲಾಂತರದಲ್ಲಿ **ಏ** ಎಂಬ ರೂಪವನ್ನು ತಾಳುವುದೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆಯೆಂದಾಯಿತು. ಕಾಲ್ಡ್ವೆಲ್ಲರ ಅಭಿಪ್ರಾಯದಂತೆ, **ನೆಯ್** ಎಂಬ ಶಬ್ದವು ಸಂಸ್ಕೃತದ ಸ್ನೇಹದ ಪ್ರತಿರೂಪವಾಗಿದೆ. ಇದು ಯಥಾರ್ಥವಾದ ಪಕ್ಷದಲ್ಲಿ, ಇಲ್ಲಿಯೂ **ಏ ಎಯ್**ಗಳು ಒಂದಕ್ಕೊಂದು ಆದೇಶವಾಗುವ ಲಕ್ಷಣವೇ ತೋರುತ್ತದೆ. ಆದುದರಿಂದ **ಎಯ್** ( ಅಥವಾ ಎ͡ಇ ) ಎಂಬುದು ಕಾಲ್ಡ್ವೆಲ್ಲರು ಭಾವಿಸುವಂತೆ ಏಕಾರವಾಗುವುದು ಅಸಂಭವವೆಂದೇ ಇವುಗಳಿಂದಲೂ ತಿಳಿದುಬರುತ್ತದೆ.

ಆದರೆ **ಗೆಯ್** ಎಂಬುದಕ್ಕೆ ಸಾಧಾರಣವಾಗಿ ಮಾಡು ಎಂಬ ಅರ್ಥವು ಕನ್ನಡ ಸಾಹಿತ್ಯದಲ್ಲಿ ರೂಢವಾಗಿದೆಯಷ್ಟೆ. ಇದು **ಕೆಯ್** ಎಂಬ ರೂಪದಲ್ಲಿಯೂ ಕಾಣಿಸಿಕೊಳ್ಳುತ್ತದೆ—ಇಂಬುಕೆಯ್ ಇತ್ಯಾದಿ. ಈ ಧಾತು ಹಸ್ತಾರ್ಥಕವಾದ **ಕೈ** ಎಂಬ ಶಬ್ದವೇ ಎಂದು ಕಾಲ್ಡ್ವೆಲ್ಲರು ಹೇಳುತ್ತಾರೆ. ಕೆಲಸ ಮಾಡುವ ಮುಖ್ಯವಾದ ಇಂದ್ರಿಯವು ಕೈಯಷ್ಟೆ. ಇದಕ್ಕೆ ಅವರು ಸಂಸ್ಕೃತದ ' ಮಾಡು ' ಎಂಬರ್ಥದ **ಕೃ** ಎಂಬ ಧಾತುವಿಗೂ, ಹಸ್ತಾರ್ಥಕವಾದ **ಕರ** ಎಂಬ ನಾಮಕ್ಕೂ ಇರುವ ಸಂಬಂಧದ ಸಾಮ್ಯವನ್ನು ದೃಷ್ಟಾಂತಿಸುತ್ತಾರೆ. ಪ್ರತಿಪಾದನವಿದು ಸಮಂಜಸವೆಂದೇ ತೋರುವಂತಿದೆ. ಆದರೆ ನಾವು ಮಾಡಿದ ಮೀಮಾಂಸೆಯ ಫಲವಾಗಿ, ಹಸ್ತಾರ್ಥಕವಾದ ಶಬ್ದವು **ಕಯ್** ಹೊರತು **ಕೆಯ್** ಅಲ್ಲವೇ ಅಲ್ಲ ಎಂದು ನಿಸ್ಸಂದಿಗ್ಧವಾಗಿ ಸಿದ್ಧವಾಗಿರುವಾಗ ಈ ಕೆಯ್ ಅಥವಾ ಗೆಯ್ ಎಂಬ ಧಾತುವನ್ನು ಆ ನಿಗಮನಕ್ಕೆ ಹೊಂದಿಸುವುದು ಹೇಗೆ ?

ಮೊದಲನೆಯದಾಗಿ—**ಕಯ್** ಎಂಬ ಕರಣ ನಾಮವೇ **ಕೆಯ್** ಎಂಬ ಧಾತುವಾಗಿ ಎಂದರೆ ಕ್ರಿಯೆಯಾಗಿ ಪರಿಣಮಿಸಿರಬಹುದೆಂದಾದರೂ, ಅದು ಕ್ರಿಯೆಯಾಗುವಾಗ ಮೊದಲಿನ ರೂಪವೇ ಉಳಿಯಬೇಕೆಂದೇನೂ ಇಲ್ಲ. **ಕಣ್** ಎಂಬ ಕರಣನಾಮದಿಂದ **ಕಾಣ್** ಎಂಬ ಕ್ರಿಯೆ ರೂಪುಗೊಳ್ಳುವಾಗ ಸ್ವರವ್ಯತ್ಯಾಸವಾದಂತೆಯೇ **ಕಯ್** ಎಂಬುದರ ಸ್ವರವ್ಯತ್ಯಾಸವಾಗಿ **ಕೆಯ್**, ಮತ್ತೆ **ಗೆಯ್** ಎಂದಾದರೆ ಏನೂ ಆಶ್ಚರ್ಯವಿಲ್ಲ; ಅಥವಾ ಅಸಮಂಜಸತೆ ಇಲ್ಲ. ಅರ್ಥ ಬದಲಾಗದೆ ಇರುವಾಗಲೂ ಧಾತುಗಳ ಸ್ವರದಲ್ಲಿ ಹೀಗೆ ವ್ಯತ್ಯಾಸವಾಗುವುದಿದೆ. ಉದಾ:— ಮೊದಲು ನಡು, ನಕ್ಕು ಎಂದೇ (ನಡು–ಸಂಸ್ಥಾಪನೇ; ನಕ್ಕು–ಲೇಹನೇ. ಶಬ್ದಮಣಿದರ್ಪಣ ಧಾತುಪಾಠ) ಇದ್ದ ಧಾತುಗಳು ಈಗೀಗ ನೆಡು, ನೆಕ್ಕು ಎಂದಾಗಲಿಲ್ಲವೇ? ಕೋಲ್, ಕೊಲ್ ಎಂಬಿವುಗಳೂ ಅನುಕ್ರಮವಾಗಿ ಕರಣ-ಕ್ರಿಯೆಗಳು; ಇಲ್ಲಿಯೂ ಸ್ವರವ್ಯತ್ಯಾಸವಿದೆಯೆಂಬುದು ಲಕ್ಷಿಸತಕ್ಕದ್ದಾಗಿದೆ.

ಎರಡನೆಯದಾಗಿ— ಹೊಸಗನ್ನಡದಲ್ಲಿ **ಗೇ** ಎಂದು ರೂಪಾಂತರ ಹೊಂದಿದ–ಆದುದರಿಂದ **ಗೆಯ್** ಎಂದೇ ಮೊದಲಿಂದಲೂ ಇದ್ದಿರಬೇಕಾದ ಧಾತುವಿಗೆ, ಮುದ್ರಿತವಾದ ಹಳೆಗನ್ನಡ ಗ್ರಂಥಗಳಲ್ಲಿ ಕಾಣುವ 'ಗೆಯ್' ಧಾತುವಿನ ವಿಶಾಲಾರ್ಥವಿಲ್ಲ. ಮುದ್ರಿತ ಗ್ರಂಥಗಳಲ್ಲಿ ಕಾಣುವ 'ಗೆಯ್' ಎಂಬುದು 'ಮಾಡು' ಎಂಬುದಕ್ಕೆ ಸಮಾನಾರ್ಥಕವೆಂಬಂತೆಯೇ ಪ್ರಯುಕ್ತವಾದುದು ಕಂಡುಬರುತ್ತದೆ. ಆದರೆ ಹೊಸಗನ್ನಡದ ಆ (ಗೇ) ಧಾತುರೂಪಕ್ಕೆ ಕೃಷಿಮಾಡು, ಕಾಯಕಮಾಡು, ಸಂಪಾದನೆಗಾಗಿ ಶ್ರಮಿಸು ಎಂಬರ್ಥವು ಮಾತ್ರ ಇರುತ್ತದೆ. ಹವೀಕರ ನುಡಿಯಲ್ಲಿ ಇದು ಹಳೆಗನ್ನಡದಲ್ಲಿರುವಂತೆ **ಗೆಯ್** ಎಂದೇ ಇರುವುದಾದರೂ ಇದರ ಪ್ರಯೋಗವು **ಗೇ** ಎಂಬುದರಂತೆಯೇ ಕೃಷಿಕರ್ಮಾದಿ ಹಿಂದೆ ಹೇಳಿದ ಅರ್ಥಗಳಲ್ಲಿ ಮಾತ್ರ ಪರಿಮಿತವಾಗಿದೆ ಹೊರತು, 'ಮಾಡು' ಎಂಬುದಕ್ಕೆ ಸಮಾನವಾಗಿಲ್ಲ. ದರ್ಪಣಕಾರನಾದರೂ ಇದಕ್ಕೆ ತನ್ನ ಧಾತುಪಾಠದಲ್ಲಿ "ಗೆಯ್ (ಕೆಯ್)—ಶಿಲ್ಪೇ" ಎಂದು ಸಂಕುಚಿತವಾದೊಂದು ಅರ್ಥವನ್ನೇ ಕೊಟ್ಟಿದ್ದಾನೆ. ಇಲ್ಲಿ ಶಿಲ್ಪವೆಂದರೆ ಕಾಯಕವೆಂಬೇ ಅರ್ಥ. ಹಾಗಾದರೆ ಮೂಲದಲ್ಲಿ ವಿಶಿಷ್ಟವಾದ ಕ್ರಿಯೆಗೆ ಪ್ರಯುಕ್ತವಾಗುತ್ತಿದ್ದ ಈ ಧಾತು, ಅನಂತರ ಲಾಕ್ಷಣಿಕವಾಗಿ ಅಥವಾ 'ಉಪಚಾರ' ವನ್ನು ಹೊಂದಿ (secondary) ಇತರ ಕ್ರಿಯಾರ್ಥ

ಗಳಲ್ಲಿಯೂ ಪ್ರಯೋಗ ಹೊಂದತೊಡಗಿ, ಕೊನೆಗೆ ಕ್ರಿಯಾಸಾಮಾನ್ಯಾರ್ಥದಲ್ಲಿ ವ್ಯಾಪ್ತಿಯನ್ನು ಪಡೆದುದಾಗಿರಬಹುದೆ? ಅಪ್ಪುಕೆಯ್, ಇಂಬುಕೆಯ್, ತುೞಿಲ್‌ಗೆಯ್, ಒಳ್‌ಕೆಯ್, ಕಡುಕೆಯ್ ಇತ್ಯಾದಿ ಸಂಯುಕ್ತ ಧಾತುಗಳಲ್ಲೆಲ್ಲ ಕೆಯ್ ಗೆಯ್ ಗಳಿಗೆ ಮಾಡು ಎಂಬರ್ಥವೇ ಸ್ಪಷ್ಟವಾಗಿ ತೋರುತ್ತಿದ್ದರೂ, ಅವುಗಳೊಡನೆಯೇ **ಗೆಯ್** ಎಂಬ ಕೇವಲ ಧಾತುವನ್ನು ಬರೆದ ಕೇಶಿರಾಜನು ಅದರ ಅರ್ಥಕ್ಕೆ **ಕಾಯಕ** ಎಂಬಿಷ್ಟೇ ಪರಿಮಿತಿಯನ್ನು ಹಾಕಿದುದೇಕೆ? ಕಯ್ಗೆಯ್ (ಭೂಷಣೋದ್ವಹನೇ) ಎಂಬ ಸಂಯುಕ್ತ ಧಾತುವಿನಲ್ಲಂತೂ ಅದರ ಎರಡು ಅವಯವಗಳಿಗೂ ಲಾಕ್ಷಣಿಕವಾದ ಅರ್ಥವೇ ಬಂದಂತಿದೆ. ಹಾಗಾದರೆ **ಗೆಯ್** ಧಾತುವಿನ ಮೂಲವೆಲ್ಲಿ?

**ಗೆಯ್** ಎಂಬುದರ ಇನ್ನೊಂದು ರೂಪವಾದ **ಕೆಯ್** ಎಂಬ ಶಬ್ದವು ನಾಮವಾಗಿರುವಾಗ 'ಬತ್ತದ ಸಸಿ' ಎಂದರ್ಥ. ನಮ್ಮ ಕನ್ನಡ ಕವಿಗಳು ವರ್ಣನೆಗಾಗಿ ಯಾವ ದೇಶಕ್ಕೆ ಹೋದರೂ ಅಲ್ಲಿ ಭತ್ತವನ್ನೇ ಬೆಳೆಯಿಸಿದ್ದಾರೆ. ಇದು ನಮ್ಮವರಿಗೆ ಆ ಬೆಳಸಿನಲ್ಲಿದ್ದ ಪ್ರೀತಿಯನ್ನೂ ಪರಿಚಯವನ್ನೂ ತೋರಿಸುತ್ತದೆ. ಪಂಪನು ತನ್ನ ಭಾರತದ 'ಕುರುಜಾಂಗಣ ವಿಷಯ'ದ ವರ್ಣನದಲ್ಲಿ " . . . . . . ಶಾಳಿಗೆ ಪಾಯ್ವ ಶುಕಾಳಿ ತೋಱೆ ಕೆಯ್ವೊಲಗಳಿನೊಪ್ಪಿತೋಱೆ ಸಿರಿ ನೋಡುಗುಮಾ ವಿಷಯಾಂತರಾಳದೊಳ್" (೧-೫೨) ಎಂದಿದ್ದಾನೆ. 'ಕೆಯ್ವೊಲ' ಎಂಬ ಶಬ್ದದಿಂದ, ಕೆಯ್ ಎಂದರೆ 'ಬತ್ತದ ಸಸಿ' ಅಥವಾ 'ಆ ಸಸಿಗಳ ಗುಂಪು' ಎಂದರೆ ಪಯಿರು ಎಂದೇ ಅರ್ಥವು ನಿಷ್ಪನ್ನವಾಗುವುದಾದರೂ, ಕಿಟ್ಟೆಲರು ತಮ್ಮ ಕೋಶದಲ್ಲಿ ನಾಚಿರಾಜೀಯ ಮತ್ತು ಹಲಾಯುಧ ನಿಘಂಟುಗಳ ಅರ್ಥವನ್ನು ಉದ್ಧರಿಸಿ field ( ಹೊಲ ) ಎಂಬರ್ಥವನ್ನೇ ಕೊಟ್ಟಿದ್ದಾರೆ; ಬತ್ತದ ಸಸಿ ಎಂಬರ್ಥವನ್ನು ಕೊಡಲಿಲ್ಲ. ತುಳುವಿನಲ್ಲಿ **ಕೆಯ್** ಎಂದರೆ ಹೊಲವಲ್ಲ; ಬತ್ತದ ಸಸಿಯೇ. ದಕ್ಷಿಣ ಕನ್ನಡದಲ್ಲೆಲ್ಲ, ಹವೀಕರ ನುಡಿಯಲ್ಲಿಯೂ, ಕೆಯ್ ಎಂದರೆ ಬತ್ತದ ಸಸಿ. ಸಹಜವಾಗಿ ಬತ್ತದ ಸಸಿಯ ಹೆಸರು ಆ ಸಸಿಗಳ ಸಮೂಹಕ್ಕೆ ಸಲ್ಲುವುದು; ಆದುದರಿಂದ ಹೊಲದಲ್ಲಿರುವ ಪಯಿರು ಎಂಬರ್ಥವೂ ಇದಕ್ಕೆ ಸಹಜ. ನಮ್ಮ ಕವಿಗಳೆಲ್ಲರೆಂಬಂತೆ 'ಕೆಯ್+ಪೊಲ' ಎಂದೇ ಪ್ರಯೋಗಿಸಿರುವುದರಿಂದ ಇದರ ಮೂಲಾರ್ಥವು ಆ ಸಸಿಯೇ ಎಂಬುದರಲ್ಲಿ ಸಂದೇಹ ಪಡಬೇಕಾಗಿಲ್ಲ. ಸಸಿಯಿಂದ ಆ ಪಯಿರಿಗೂ ಅದರಿಂದ ಮತ್ತೆ ಆ

ಹೊಲಕ್ಕೂ ಆ ಶಬ್ದವು **ಸಂಕ್ರಾಂತವಾಗಿ,** ಮತ್ತೆ ಸಾಮಾನ್ಯವಾದ 'ಹೊಲ' ಎಂಬರ್ಥವೇ ರೂಢವಾಗಿ ನಾಚಿರಾಜೀಯ ಹಲಾಯುಧಗಳಲ್ಲಿ ಹಾಗೆ ಕಾಣಿಸಿಕೊಂಡಿತೆಂದರೆ ಒಪ್ಪಬಹುದು. ತುಳುವಿನಲ್ಲಿ ಎಂದೂ ನೀರಾರದ ಜವುಗು ಗದ್ದೆಯನ್ನು **ಕೇದೆಲ್** ಎಂದು ವಿಶೇಷಿಸುತ್ತಾರೆ. ಇಲ್ಲಿ ಕಾಣುವಂತೆ **ಕೇ** ಎಂಬುದು **ಕೆಯ್** ಎಂಬುದರ ರೂಪಾಂತರವಾಗಿರಲೂ ಬಹುದು. ಏಕೆಂದರೆ **ಕೆಯ್ಯ** ಬೆಳೆಗೆ ನೀರು ಸದಾ ಬೇಕೇ ಬೇಕಷ್ಟೆ.[೨೯] ಇದು ಹೇಗೂ ಇರಲಿ; ಇದು **ಗೆಯ್** ಎಂಬುದಕ್ಕೆ ಕೃಷಿಮಾಡು, ಕಾಯಕಮಾಡು ಎಂಬುದೇ ಮೂಲಾರ್ಥವಾದರೆ ದಕ್ಷಿಣಭಾರತದ ಪ್ರಧಾನ ಕೃಷಿಯಾದ, ಮುಖ್ಯ ಕಾಯಕವಾದ ಬತ್ತದ ಸಸಿ ಅಥವಾ ಬತ್ತದ ಪಯಿರು ಎಂಬರ್ಥವುಳ್ಳ **ಕೆಯ್** ಎಂಬುದರಿಂದ ಅದು ಹುಟ್ಟಿರಬೇಕು; ಹೊರತು **ಕಯ್** ಎಂದೇ ಸರ್ವತ್ರ ನಿರಪವಾದವಾಗಿ[೩೦] ಧ್ವನಿಸುವ ಹಸ್ತಾರ್ಥಕವಾದ ಶಬ್ದದಿಂದಲ್ಲವೆನ್ನಬೇಕಾಗುತ್ತದೆ. ಅಥವಾ **ಕಯ್** ಎಂಬ ಹಸ್ತಾರ್ಥಕವಾದ ಶಬ್ದದಿಂದ ಹುಟ್ಟಿ ಇದ್ದಿರಬಹುದಾದ **ಕಯ್** ಅಥವಾ ಗಯ್ ಎಂಬ ಕರಣಾರ್ಥಕವಾದ (ಮಾಡು ಎಂಬರ್ಥದ) ಇನ್ನೊಂದು ಧಾತು ಈ ಧಾತುವಿನೊಡನೆ ಸಂಕರಿಸಿ ಕೆಯ್ ಅಥವಾ ಗೆಯ್ ಎಂಬ ಉಚ್ಚಾರವನ್ನೇ ಪಡೆದು 'ಕಾಯಕಮಾಡು' ಮತ್ತು (ಎಲ್ಲವನ್ನು) 'ಮಾಡು' ಎಂಬ ಎರಡು ಅರ್ಥಗಳನ್ನೂ ಒಂದೇ ರೂಪವು ಹುಟ್ಟಿಸುವಂತಾಗಿದ್ದಿರಲೂಬಹುದು. ಗಯ್ ಗೆಯ್ ಎಂಬವುಗಳೊಳಗೆ ಉಚ್ಚಾರಭೇದವು ಅತ್ಯಲ್ಪವಾಗಿರುವುದರಿಂದ ಹೀಗೆ ಸಂಕರಿಸುವುದು ಅಸಂಭಾವ್ಯವೇನೂ ಅಲ್ಲ. **ಬಳೆ ಬೆಳೆ** ಎಂಬ ಎರಡು ಧಾತುಗಳು ಹೀಗೆಯೇ ಸಂಕರಿಸಿ, ಇಂದು **ಬೆಳೆ** ಎಂಬ ಒಂದೇ ಧಾತುವಾಗಿ ಪರಿಣಮಿಸಿದಂತೆ, **ಈ ಗಯ್ ಗೆಯ್** ಧಾತುಗಳೂ ಒಂದಾಗಿ **ಗೆಯ್** ಎಂಬ ಒಂದೇ ಧಾತುವಾಗಿ ಪರಿಣಮಿಸಿರಲೂ ಬಹುದು. ಈ ಊಹೆಯು ನಿರಾಧಾರವೇನೂ ಅಲ್ಲ; ಕಿಟ್ಟೆಲರ ಕೋಶದಲ್ಲಿ 'ಮಾಡು' ಎಂಬರ್ಥದ ಆ ಧಾತುವಿಗೇ **ಕಯ್, ಗಯ್, ಗೈ** ಎಂಬ ರೂಪಗಳೂ ಹಸ್ತಪ್ರತಿಗಳಲ್ಲಿ ಇವೆಯೆಂದು ತೋರಿಸಲಾಗಿದೆ; ಮಾತ್ರವಲ್ಲ, ಬಸವಪುರಾಣದಿಂದ 'ಬಿಜಯಂ**ಗಯಿಸು**' ಎಂಬ ರೂಪವನ್ನೂ ಉದ್ಧರಿಸಲಾಗಿದೆ.[೩೧] ಹಾಗಾದರೆ 'ಗೆಯ್-ಶಿಲ್ಪೇ' ಎಂದಿರುವಂತೆ, 'ಗಯ್-ಕರಣೇ' ಎಂಬೊಂದು ಧಾತುವೂ ಇದ್ದಿರಬೇಕೆನ್ನಬಹುದಾಗುತ್ತದೆ. ಸಾರಾಂಶವೇನೆಂದರೆ, ನಮ್ಮ ಮೀಮಾಂಸೆಗೆ ನಿಲುಕುವಷ್ಟು ಅಡಿಗಿಳಿದು ನೋಡಿ

ದರೂ, **ಕಯ್ ಕೆಯ್**ಗಳು ಬೇರಾಗಿಯೇ ಇರುವುದು ಕಂಡುಬರುತ್ತದೆ.

ಕನ್ನಡದಲ್ಲಿ (ಹಾಗೂ ತಮಿಳಿನಲ್ಲಿ) ಅಯ್ ಎಕಾರವಾಗಿಯೂ, ಎಯ್ ಏಕಾರವಾಗಿಯೂ ಪರಿಣಮಿಸುತ್ತದೆಂಬ ಸಾಮಾನ್ಯ ನಿಯಮಕ್ಕೆ 'ಬೆಣ್ಣೆ' ಎಂಬೊಂದು ಶಬ್ದವು ಅಪವಾದವಾಗಿ ತೋರುತ್ತದೆ. ಇದನ್ನು ತಮಿಳಿನಲ್ಲಿ 'ವೆಣ್ಣೈ' ಎಂದು ಬರೆಯುತ್ತಾರೆ, 'ವೆಣ್ಣೆ' ಎಂದು ನುಡಿಯುತ್ತಾರೆ. ಈ ಶಬ್ದವು 'ಏಕಪ್ರಕೃತಿ'ಯಲ್ಲ; **ಬೆಳ್+ನೆಯ್** ಎಂಬವುಗಳ ಸಮಸ್ತರೂಪ. ತುಳುವಿನಲ್ಲಿ ಇದು ಇಂದಿಗೂ ಮೂಲಾರ್ಥಪ್ರದರ್ಶಕವಾಗಿ **ಬೊಳ್‌ನೆಯ್** ಎಂದೇ ನುಡಿಯಲ್ಪಡುತ್ತದೆ. ಹಾಗಾದರೆ ಇದರ ರೂಪವು ತಮಿಳಿನಲ್ಲಿ 'ವೆಣ್ಣೆಯ್' ಎಂದೂ ಕನ್ನಡದಲ್ಲಿ (ಎಯ್ ಏ ಎಂದಾಗಿ) 'ಬೆಣ್ಣೇ' ಎಂದೂ ಇರಬೇಕಾಗಿತ್ತಲ್ಲವೆ? ಹಾಗಿರದೆ ತಮಿಳಿನಲ್ಲಿ ಐಕಾರಾಂತ–ಎಕಾರಾಂತವಾಗಿಯೂ ಕನ್ನಡದಲ್ಲಿ ಎಕಾರಾಂತವಾಗಿಯೂ ಪರಿಣಮಿಸಿತೇಕೆ? —ಎಂದರೆ, ಅನೇಕಾಕ್ಷರ ಪ್ರಕೃತಿಗಳು ದೀರ್ಘಾಂತವಾಗಿರುವುದು ಕನ್ನಡ ಧ್ವನಿಮರ್ಯಾದೆಗೆ ಸರ್ವಥಾ ಒಪ್ಪದಿರುವುದರಿಂದ, ಕನ್ನಡದಲ್ಲಿ ಅದು 'ಬೆಣ್ಣೆ' ಎಂಬ ರೂಪವನ್ನೇ, ರೂಪಾಂತರ ಕಾಲದಲ್ಲಿ, ತಾಳದೆ ನಿರ್ವಾಹವಿಲ್ಲ. ಆದರೆ ತಮಿಳಿನಲ್ಲಿ 'ಬೆಣ್ಣೆಯ್' ಎಂಬ ರೂಪವೇ ನಿಲ್ಲಬಹುದಿತ್ತು. ಆದರೆ ಐಕಾರಾಂತ ಶಬ್ದಗಳು ಸಾಮಾನ್ಯ ನಾಮಗಳಾಗಿ ಅದರಲ್ಲಿ ವಿಪುಲವಾಗಿರುವುದರಿಂದ, [ಎಯ್ ಎಂಬುದು ಅಂತದಲ್ಲಿರುವ ನಾಮಗಳ ಸಂಖ್ಯೆ ತುಲನಾತ್ಮಕವಾಗಿ ಅತ್ಯಲ್ಪವಾದುದರಿಂದ ಅಥವಾ ಅವು (ಚೆಜ್ಜಾಗಿ?) ಮೆಯ್, ನೆಯ್ ಎಂಬಂತೆ ಏಕಾಕ್ಷರವಾಗಿರುವುದರಿಂದ] 'ವೆಣ್ಣೆಯ್' ಎಂಬುದೂ ಅವುಗಳೊಳಗೆ ಸಜಾತೀಯವೆಂದಾಗಿಹೋಗಿ, 'ವೆಣ್ಣೈ–ವೆಣ್ಣೆ' ಎಂದಾಗಿರಬೇಕೆಂದು ಹೇಳಬಹುದು. ಎಳ್+ನೆಯ್ ಕೂಡಿ ಆದ 'ಎಣ್ಣೆ' ಎಂಬ ಶಬ್ದದ ಅವಸ್ಥೆಯೂ 'ಬೆಣ್ಣೆ'ಯ ಸಾಹಚರ್ಯದಿಂದ ಹಾಗಾಗಿರಬೇಕೆಂದು ಹೇಳಬಹುದು.[೩೨] 'ಬೊಳ್‌ನೆಯ್' ಎಂದು ಅವಿಕೃತವಾಗಿ ನುಡಿಯುವ ತುಳುವಿನಲ್ಲಿಯೂ, ಇದು (ಎಣ್ಣೆ) ಅತಿ ರೂಢಿಯಿಂದ ಸವೆದೋ ಯೋಗಾರ್ಥ ವಿಸ್ಮೃತಿಯಿಂದಲೋ, ಕನ್ನಡದಲ್ಲಿರುವಂತೆಯೇ 'ಎಣ್ಣೆ' ಎಂದೇ ಆಗಿದೆ. ಹೇಗೂ ಇದೊಂದು ಹೊಟ್ಟೆಗಿಂದಾಗಿ, ನಮ್ಮ ಬಳ್ಳತುಂಬಿರುವ ಬತ್ತವೆಲ್ಲಾ ಜಳ್ಳಾಗಬಾರದೆಂದು ನಂಬುತ್ತೇನೆ.

ನಿಗಮನವಿದು:— ಕನ್ನಡದ ಹಾಗೂ ಇತರ ದ್ರಾವಿಡ ಭಾಷೆಗಳ **ಚಾಕ್ಷುಷ** ವರ್ಣಮಾಲೆಯಲ್ಲಿ ತೋರುವ **ಐ** ಗೆ **ಅಯ್** ಎಂಬುದೇ **ಉಚ್ಚಾರ.** **ಎಯ್** ಎಂಬ ಇನ್ನೊಂದು ಧ್ವನಿಯನ್ನು ಐ ಎಂದು ಲಿಪಿಸುವುದು ಸರಿಯಲ್ಲ. ಆದುದರಿಂದ ದ್ರಾವಿಡ ಭಾಷೆಗಳ ಶ್ರಾವಣ ವರ್ಣಮಾಲೆಗೆ ಐ ಎಂಬ ಶುದ್ಧ ಸಂಧಿಸ್ವರವು ಹೊರಗಾಗಿದೆ. **ಅಯ್** ಎಂಬ ಧ್ವನಿಯನ್ನು ಸ್ವರವೆಂದು 'ಭಾವಿಸಿದರೆ' **ಎಯ್** ಎಂಬುದನ್ನೂ, ಹಾಗೆಯೇ **ಉಯ್ ಒಯ್** ಎಂಬವುಗಳನ್ನೂ (ಇವು ಭಾಷೆಯಲ್ಲಿ ತುಂಬ ಇವೆ.) ಸ್ವರಗಳೆಂದು ಭಾವಿಸಬೇಕಾಗುವುದು. ಆಗ ಅಯ್ ಎಯ್ ಉಯ್ ಒಯ್ ಎಂಬೀ ನಾಲ್ಕನ್ನೂ ದ್ರಾವಿಢ ಭಾಷೆಗಳ ಸಂಧಿಸ್ವರ (diphthong) ಗಳೆಂದು ಹೇಳುವ ಪ್ರಸಂಗವುಂಟಾಗುವುದು. ಆದರೆ ಸ್ವರವ್ಯಂಜನಗಳ ಸೂಕ್ಷ್ಮ ವಿವೇಕದಿಂದ ಹೇಳುವುದಾದರೆ, ಅವು ಸ್ವರಗಳಲ್ಲ; ಕೇವಲ ವರ್ಣಗಳೂ ಅಲ್ಲ; ಸವ್ಯಂಜನಾಕ್ಷರಗಳು. ಆದುದರಿಂದ, ಇಂದಿನವರೆಗೆ ಆದ ವರ್ಣಮೀಮಾಂಸೆಯ ಪರಿಣಾಮದ ಮಟ್ಟಿಗೆ ಹೇಳುವುದಾದರೆ, ದ್ರಾವಿಡ ಭಾಷೆಗಳಲ್ಲಿ, ತಮಿಳಿನಲ್ಲಿಯೂ ಕೂಡ, ಸಹಜವಾಗಿರುವುವು ಹತ್ತೇ ಸ್ವರಗಳು. ಆದುದರಿಂದ 'ಮೂಲ ಕನ್ನಡ ವರ್ಣಮಾಲೆ'ಯಲ್ಲಿ ಇರತಕ್ಕ ಸ್ವರಗಳು ಎಷ್ಟು ಎಂದರೆ, ಈ ಹತ್ತು ಮಾತ್ರ; ಈ ಐದು ದ್ವಂದ್ವಗಳು ಮಾತ್ರ:—

ಅ ಆ, ಇ ಈ, ಉ ಊ, ಎ ಏ, ಒ ಓ.[೩೩]

# ಅಡಿಟಿಪ್ಪಣಿಗಳು

೧. ಈ ವಿಭಾಗ ಕ್ರಮವು ನಮ್ಮ ಪೂರ್ವಪರಂಪರೆಗೆ ಅವಿರುದ್ಧ ಮಾತ್ರವಲ್ಲ, ಅನುಗುಣವೇ ಆಗಿದೆ.

ಉದಾ:— " . . . . ಶ್ರಾವಣಂ ಸ್ವನೈಕಾಕಾರಂ,
ವಿವಿಧಾಕಾರಂ ಲಿಪಿಭೇ-
ದವೃತ್ತಿಯಿಂ ಚಾಕ್ಷುಷಂ, ಪುರಾತನ ಮತದಿಂ.
( ಶಬ್ದಮಣಿದರ್ಪಣ —ಸೂತ್ರ, ೩ )

೨. ತಮಿಳಿನ ಶ್ರಾವಣ ಚಾಕ್ಷುಷವೆಂಬ ಎರಡು ವರ್ಣಮಾಲೆಗಳಲ್ಲೂ ನಕಾರಕ್ಕೆ ಎರಡು ರೂಪಗಳಿವೆ. ಆದರೆ ಅದು ಅವಸ್ಥಾನ ಭೇದದಿಂದ ಆಗುವ ರೂಪಾಂತರವಾದುದರಿಂದಲೂ, ಇತರ ದ್ರಾವಿಡ ಭಾಷೆಗಳಲ್ಲಿ ಹಾಗೆ ಭೇದ ಇಲ್ಲದಿರುವುದರಿಂದಲೂ, ನಮಗೆ ಇಲ್ಲಿ ಮುಖ್ಯವಲ್ಲ. ತಮಿಳಿನಲ್ಲಿ ಙಕಾರಕ್ಕೆ ದ್ವಿತ್ವವುಂಟಾಗುವಾಗಲೂ ನಕಾರವು ಸಂಧಿಸುವಾಗಲೂ, ಬೇರೆ ಬೇರೆ ಧ್ವನಿಗಳುಂಟಾಗುತ್ತವೆ. ಆದರೆ ಅವೆಲ್ಲ 'ಪ್ರಾಸಂಗಿಕ' ವಾದುದರಿಂದ ಗಣನೀಯವಲ್ಲ. ಹಾಗೆಯೇ ತಮಿಳಿನಲ್ಲಿ **ಗ**ಕಾರಕ್ಕೆ ಸುಮಾರು **ಘ** ಅಥವಾ **ಹ** ಎಂಬಂತೆಯೂ, **ಚ**ಕಾರಕ್ಕೆ **ಶ**ಕಾರದಂತೆಯೂ ಬೇರೆ ಬೇರೆ ಉಚ್ಚಾರಗಳಿದ್ದರೂ ಅರ್ಥದಲ್ಲಿ ಭೇದವಿಲ್ಲದುದರಿಂದ ಅವನ್ನು ಶ್ರಾವಣವರ್ಣಮಾಲೆಯಲ್ಲಿಯೂ ಇಲ್ಲಿ ಎಣಿಸಬೇಕಾಗಿಲ್ಲ.

೩. ಕನ್ನಡ ಕೈಪಿಡಿಯಲ್ಲಿ ಐ ಔ ಗಳನ್ನು ಒಟ್ಟಿಗೆ ವಿಮರ್ಶಿಸಿದ್ದಾರೆ. ಔಕಾರ ವಿಷಯವು ಇಲ್ಲಿ ನಮಗೆ ಪ್ರಸ್ತುತವಲ್ಲದುದರಿಂದ, ಐಕಾರಕ್ಕೆ ಸಂಬಂಧಿಸಿದ ಮಾತುಗಳನ್ನು ಮಾತ್ರ ಅನುವಾದಿಸಿಕೊಂಡಿದ್ದೇನೆ.

೪. 'ಉಪಚಾರ' ಎಂಬುದು ಇಲ್ಲಿ ಪಾರಿಭಾಷಿಕವಾಗಿ ಪ್ರಯುಕ್ತವಾಗಿದೆ; ರೂಢಿಯ ಅರ್ಥದಲ್ಲಲ್ಲ.

೫. ಶಬ್ದಮಣಿದರ್ಪಣದಲ್ಲಿ ಸೂತ್ರಭಾಗಕ್ಕೆ ಕೊಟ್ಟ ಇತರ ಉದಾಹರಣೆಗಳೆಲ್ಲ—ಲಿಪಿಕಾರರ ದೋಷದಿಂದಲೋ ಏನೋ—ಅಷ್ಟು ಸರಿಯಾಗಿ ಹೊಂದುವಂತೆ ತೋರುವುದಿಲ್ಲ. ಅವಾವುವೆಂದರೆ ತೇರಯಿಸು,

ತೇರೈಸು; ಹೊಲ್ಲಯಿಸು, ಹೊಲ್ಲೈಸು ಇತ್ಯಾದಿ. ಕಯ್ವಾರಂ ಎಂಬ ಉದಾಹರಣವನ್ನನುಲಕ್ಷಿಸಿದರೆ ಅವು ಹೀಗಿರಬೇಕೆಂದು ತೋರದಿರದು— ತೇರಯ್ಸು, ತೇರೈಸು; ಹೊಲ್ಲಯ್ಸು, ಹೊಲ್ಲೈಸು ಇತ್ಯಾದಿ. **ಅಥವಾ** ಈ ಸೂತ್ರದ 'ವಾಚಕ'ವು ಸ್ವಲ್ಪ ಮಟ್ಟಿಗೆ ಸದೋಷವೆಂದು ಹೇಳಬಹುದು. ವಾಸ್ತವವಾಗಿ ನೋಡಿದರೆ, **ಅಯ್** ಎಂಬ ಹಾಗೂ **ಅಯಿ** ಎಂಬ ಪಿಂಡಗಳಿಗೆ **ಐ**ಕಾರವು ಆದೇಶವಾಗುತ್ತದೆಂದೂ, **ಅವು** ಎಂಬ ಪಿಂಡಕ್ಕೆ **ಔ**ಕಾರವು ಆದೇಶವಾಗುತ್ತದೆಂದೂ ಹೇಳಿದ್ದರೆ, ಕೊಟ್ಟ ಉದಾಹರಣಗಳೆಲ್ಲವೂ ಸರಿಯಾಗಿ ಹೊಂದುತ್ತಿದ್ದುವು. ಹೇಗೆಂದರೆ, 'ಕಯ್ವಾರಂ' ಎಂಬುದು 'ಕೈವಾರಂ' ಎಂದಾಗುವಾಗ, 'ಅಯ್' ಎಂಬ ಪಿಂಡಕ್ಕೆ **ಐ**ಕಾರವು ಆದೇಶ; 'ತೇರಯಿಸು' ಎಂಬುದು 'ತೇರೈಸು' ಎಂದಾಗುವಾಗ 'ಅಯಿ' ಎಂಬ ಪಿಂಡಕ್ಕೆ ಐಕಾರವು ಆದೇಶ. ಸೂತ್ರದ ವಾಚಕದಂತೆ ಬರಿಯ 'ಪದಮಧ್ಯ**ಯತ್ವ**'ಕ್ಕೆ ಐಕಾರಾದೇಶ ಎಲ್ಲಿಯೂ ಕಾಣುವುದಿಲ್ಲ; ಹಾಗೆಯೇ ಬರಿಯ 'ಪದಮಧ್ಯವತ್ವ'ಕ್ಕೆ ಔಕಾರಾದೇಶವೂ ಇಲ್ಲ.

೬. ಕಿಟ್ಟೆಲರ ಕೋಶದಲ್ಲಿ **ಮಯ್** ಎಂಬ ಉಚ್ಚಾರವು ಪ್ರಾದೇಶಿಕವೆಂದು ಸೂಚಿತವಾಗಿದೆ.

೭. ಮುದ್ರಿತವಾದ ಕೆಲವು ಹಳಗನ್ನಡ ಗ್ರಂಥಗಳಲ್ಲಿ **ಎಯ್ದು** ಎಂದೂ ಇದಕ್ಕೆ ರೂಪುಕೊಟ್ಟುದು ಕಂಡುಬರುತ್ತದೆ.
ಉದಾ:— "ಬರೆ**ದೆಯ್ದ** ಐ ಲೆಕ್ಕಮುವಾದರದಿಂ"
(ಛಂದೋಂಬುಧಿ ೧–೩೩, ಮೈಸೂರ ಪ್ರತಿ).

೮. ei ಎಂದು ಬರೆದರೆ ಸುಮಾರು ಎಯ್ ಎಂದೇ ಉಚ್ಚರಿಸಬೇಕಾಗುತ್ತದೆ. ಆದರೂ ಅವರು ಬರೆದಂತೆಯೇ ಅದನ್ನು ಬರೆಯುವುದಾದರೆ, ಎ͡ಇ ಎಂದು ಲಿಪಿಸಬೇಕಾಗುತ್ತದೆ. ಏಕಾಕ್ಷರವೆಂದು ತೋರಿಸುವುದಕ್ಕಾಗಿ 'ತೋರಣ' ಚಿಹ್ನ.

೯. ಕಿಟ್ಟೆಲರು ತಮ್ಮ ಕೋಶದಲ್ಲಿ ಕೈ ಸೈ ಪೈ ಇತ್ಯಾದಿ ಐ ಸ್ವರಯುಕ್ತ ವ್ಯಂಜನಗಳು ಕನ್ನಡ ಶಬ್ದಗಳಲ್ಲಿರುವಾಗ, ಅವುಗಳನ್ನು kei, sei pei ಎಂದೂ ಅವೇ ಅಕ್ಷರಗಳು ಸಂಸ್ಕೃತ ಶಬ್ದಗಳಲ್ಲಿರು

ವಾಗ kai, sai, pai, ಎಂದೂ ಉಚ್ಚಾರ ದರ್ಶಕವಾಗಿ ಲಿಪಿಸಿಪ್ಪಾರೆ. ಇದರಿಂದ ಅವರೂ ಕಾಲ್ಡ್‌ವೆಲ್ಲರಂತೆಯೇ ದ್ರಾವಿಡ ಐಕಾರವು ei ಎಂದೂ ಸಂಸ್ಕೃತ ಐಕಾರವು ai ಎಂದೂ ಭಾವಿಸಿದುದು ಗೊತ್ತಾಗುತ್ತದೆ.

೧೦. ಇದಕ್ಕೆ ಬೇಕಾದಷ್ಟು ಸಾಕ್ಷ್ಯಗಳನ್ನು ಕೊಡಬಹುದು. ಕನ್ನಡದ ಉಚ್ಚಾರದಲ್ಲಿ ಐಕಾರವೂ ಔಕಾರವೂ ಅಳಿದುಹೋದೊಡನೆ ಅವನ್ನು ನಮ್ಮವರು ಬರವಣಿಗೆಯಿಂದಲೂ ತಳ್ಳಿಹಾಕಿರುವುದು; f, z ಗಳನ್ನು ಕನ್ನಡ ಲಿಪಿಯಲ್ಲಿಯೂ ತೋರಿಸುವುದಕ್ಕಾಗಿ, ಇಷ್ಟರೊಳಗೇ ಪ್‌ ಸ್‌ ಎಂದು ಸಂಕೇತಗಳನ್ನು ( ಕೆಲವರು ) ಮಾಡಿಕೊಂಡಿರುವುದು ಇತ್ಯಾದಿಯೆಲ್ಲ ಆ ಪ್ರವೃತ್ತಿಯ ದ್ಯೋತಕವಾಗಿವೆ.

೧೧. ಈ ಉಚ್ಚಾರದೋಷವೇ ಆ ಭಾಷೆಯಲ್ಲಿ ಅಷ್ಟು ಸ್ವರ-ವಿಕಲ್ಪಗಳನ್ನು ಮಾತ್ರವಲ್ಲ, ವ್ಯಂಜನ-ವಿಕಲ್ಪಗಳನ್ನೂ ತಂದೊಡ್ಡಿರ ಬೇಕೆಂದು ಕಾಣುತ್ತದೆ.

12. Elements of South Indian Paleography by A. C. Burnel.

೧೩. ಹಿಂದೀ ಭಾಷೆಯುವರು ಇದನ್ನು ಗ್ಯ ಎಂದೂ ಮರಾಠಿ ಮಾತಾಡುವವರು ದ್ನ್ಯ ಎಂದೂ ಉಚ್ಚರಿಸುವರಾದರೂ, ಮೂಲೋಚ್ಚಾರವು ಜ್ಞ ಎಂದೇ ಇತ್ತೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ('ಜ್ಞಾ' ಧಾತುವಿನ ಸಾಧಿತ ರೂಪಗಳನ್ನು ಪರೀಕ್ಷಿಸಿರಿ.) ಅವುಗಳ ಸವಿಸ್ತರ ಪ್ರತಿಪಾದನಕ್ಕೆ ಇದು ಸ್ಥಳವಲ್ಲ. ಆರ್ಯ ಭಾಷೆಗಳಲ್ಲಿ ಜಕಾರ ಗಕಾರ ಗಳ ಪಲ್ಲಟವು ಬಹಳ ನಡೆಯುತ್ತದೆ. ( ಇಂಗ್ಲೀಷಿನ g ಗೆ ಗಕಾರೋಚ್ಚಾರ ಬಂದುದು ಇದರಿಂದಲೇ. ಸಂಸ್ಕೃತದ ಗಮ್ ಧಾತುವಿನ ನಾನಾ ರೂಪಗಳೂ ಇದಕ್ಕೆ ಸಾಕ್ಷಿ.) ಹೀಗೆಯೇ ಹಿಂದೀ ಭಾಷೆಯುನ್ನಾಡುವವರ ಜ್ಞತ್ವದಲ್ಲಿ ಗಕಾರವು ಜಕಾರಸ್ಥಾನವನ್ನಾಕ್ರಮಿಸಿತು. ಗ ಞ ಗಳ ಸಂಯೋಗವು ಅನುಚ್ಚಾರ್ಯವೆಂಬಷ್ಟು ಕ್ಲಿಷ್ಟವೂ ಭಾಷೆಯಲ್ಲಿ ಅನ್ಯತ್ರ ಅನುಪಲಭ್ಯವೂ ಆದುದರಿಂದ, ಞಕಾರ ಸ್ಥಾನವಲ್ಲಿ ಅದರ ಸಮಾನ ಸ್ಥಾನಿಯಾದ ಎಂದರೆ ತಾಲವ್ಯವಾದ ಯಕಾರವು, ಪ್ರಾಯಃ ಸಾನುನಾಸಿಕ

ಯಕಾರ ( ಯ಼ ) ವಾಗಿ ಆದಿಷ್ಟವಾಯಿತು. ಮತ್ತೆ ಕೆಲವು ಬಾರಿ ಆ ಯ಼ ಕಾರವು ನಿರನುನಾಸಿಕವಾಗಿಯೂ ಪ್ರಯುಕ್ತವಾಗತೊಡಗಿತು. ಹೀಗೆ ಜ್ಞ ಎಂಬುದಕ್ಕೆ ಗ್ಯ ಎಂಬ ಉಚ್ಚಾರಸಂಪ್ರಾಪ್ತಿ. ಮರಾಠಿಯು ಜಕಾರದಲ್ಲಿ ( ಮುಂದೆ ವ್ಯಂಜನ ಪ್ರಕರಣದಲ್ಲಿ ವಿವೃತವಾಗುವಂತೆ ) ದಕಾರಾಂಶವಿರುವುದರೀದ, ಎಂದರೆ ಅದು 'ದಂತ್ಯ' ವೇ ಆಗಿ ಉಚ್ಚರಿಸಲ್ಪಡುವುದರಿಂದ ( ಡ್ಝ ), ಆ ಭಾಷೆಯವರ ಜ್ಞತ್ವದಲ್ಲಿರುವ ಞಕಾರವು ಇದ್ದಂತೆ ಅದರೊಡಗೂಡಿ ಉಚ್ಚಾರಕ್ಕೆ ಬರುವುದು ಅಸಾಧ್ಯವಾಗಿ, ( ಗ ಞ ಗಳ ಸಂಯೋಗದಂತೆಯೇ ದ ಞ ಗಳ ಸಂಯೋಗವೂ ಅನುಚ್ಚಾರ್ಯ ) ಉಪಧೆಯಾದ ದಂತ್ಯದ ಅನುನಾಸಿಕವಾದ ನಕಾರದ ಮತ್ತು ಞಕಾರಕ್ಕೆ ಸಮಾನ ಸ್ಥಾನಿಯಾದ ಎಂದರೆ ತಾಲವ್ಯವಾದ ಯಕಾರದ ಸಂಯೋಗರೂಪವಾಗಿ ನ್ಯ ಎಂದಾಗಿ 'ದ್ನ್ಯ' ಎಂಬ ಉಚ್ಚಾರವು ರೂಢವಾಯಿತು. ಹೀಗೆ ಈ ಉಚ್ಚಾರಗಳ ವ್ಯುತ್ಪತ್ತಿಯನ್ನು ಶೋಧಿಸಿದರೂ ಜ್ಞ ಎಂಬುದು ಆದಿಯಲ್ಲಿ ಜಕಾರ ಞಕಾರಗಳು ಸಂಯೋಗವಾಗಿಯೇ ಉಚ್ಚರಿಸಲ್ಪಡುತ್ತಿತ್ತೆಂಬುದು ಸಿದ್ಧವಾಗುತ್ತದೆ.

೧೪. ಈಗಿನ ಲಿಪಿಸುಧಾರಕರು अ अे अै ಇತ್ಯಾದಿಯಾಗಿ ರೂಪಿಸುವ ಕ್ರಮವನ್ನು ಮೇಲಿನ ಪ್ರತಿಪಾದನಕ್ಕೆ ಹೋಲಿಸಿದರೆ, ಅದರ ಸಮಂಜಸತೆ ಮತ್ತಷ್ಟು ಮನದಟ್ಟದಿರದು.

೧೫. History of Kannada Language– R. Narasimha char, Page 54.

೧೬. ಬ್ರಾಹ್ಮೀಲಿಪಿ ಆರ್ಯಭಾಷೆಗಾಗಿ ನಿರ್ಮಿತವಾದುದು. ಆದುದರಿಂದ ಎ ಒ ಎಂಬ ಹ್ರಸ್ವಸ್ವರಗಳಿಗೆ ಅದರಲ್ಲಿ ಸ್ವತಂತ್ರ ರೂಪಗಳಿಲ್ಲ. ಅದೇ ಪರಂಪರೆಯಿಂದ ನಮ್ಮ ದಾಕ್ಷಿಣಾತ್ಯ ಲಿಪಿಗಳಲ್ಲಿಯೂ ಇತ್ತೀಚೆಯವರೆಗೆ ಎ ಏ, ಒ ಓ ಎಂಬೆರಡಕ್ಕೂ ಒಂದೊಂದೇ ಲಿಪಿ ರೂಪವು ಬಳಕೆಯಲ್ಲಿತ್ತು. ಇದು ಶಬ್ದಮಣಿ ದರ್ಪಣದ ೮ ನೆಯ ಸೂತ್ರದಿಂದಲೂ ವಿದಿತವಾಗುತ್ತದೆ.

೧೭. ಅಲ್ಲಿ ನಾವು ಆ ಸಂಧಿಸ್ವರದ ( diphthong ) ಮೂಲಾಂಶಗಳನ್ನೇ ಕಾಣುವಂತಿದೆ. ( ಅ+ಏ=ಐ—ವೃದ್ಧಿ. ಲೋಕ+ಏಕ=

ಲೋಕೈಕ ಇತ್ಯಾದಿ.) ಇದರಿಂದ ಸಂಸ್ಕೃತದಲ್ಲಿ ಐಯ ಉಚ್ಚಾರವು ಮೂಲದಲ್ಲಿ ಹಾಗಿದ್ದಿರಬೇಕೆಂದು ಹೇಳಲಾಗುವುದಿಲ್ಲ; ಅದಕ್ಕೆ ಈ ಒಂದು ಆಧಾರವು ಸಾಲದು. ಬಂಗಾಳಿಯಲ್ಲಿ ಅಕಾರವು ಒಕಾರವೆಂಬಂತೆ ಉಚ್ಚರಿಸಲ್ಪಡುವ ಹಾಗೆ, ಹಿಂದಿಯ ಐಕಾರೋಚ್ಚಾರ ಸ್ವರೂಪವೂ ಪ್ರಾದೇಶಿಕ ವೈಶಿಷ್ಟ್ಯವಾಗಿರಬೇಕೆಂದು ಊಹಿಸುವುದಕ್ಕೇ ಆಧಾರ ಹೆಚ್ಚು.

೧೮. 'ಸರ್ವಕಾರ್ಣಾಟಾಃ ಟಂಕಾರೋತ್ತರಪಾಠಿನಃ'–ಎಂದು ರಾಜಶೇಖರನು ಹೇಳಲು ಇದೂ ಕಾರಣವಾಗಿರಬಹುದೇ?

೧೯. ಪದಾಂತ್ಯವನ್ನು ದಕ್ಷಿಣದವರು ಒತ್ತಿ ಉಚ್ಚರಿಸುವರೆಂಬುದಕ್ಕೆ ಬೇಕಾದಷ್ಟು ಆಧಾರಗಳನ್ನು ಕೊಡಬಹುದು. ಸಾಮಾನ್ಯವಾಗಿ ದ್ರಾವಿಡ ಭಾಷೆಗಳಲ್ಲಿ ಕಾಲಹೋದಂತೆ ಪದಾಂತ್ಯವು ವೃದ್ಧಿಹೊಂದುತ್ತ ಹೋಗುತ್ತದೆ. ಉದಾ:— ಮೊದಲು ವ್ಯಂಜನಾಂತವಾಗಿದ್ದುವೆಲ್ಲ ಉಕಾರವನ್ನು ಪಡೆದು ಕನ್ನಡದಲ್ಲಿ ಸ್ವರಾಂತವಾಗಿವೆ. ದ್ರಾವಿಡ ಪದಗಳ ಇತಿಹಾಸವನ್ನು ಶೋಧಿಸಿದರೆ, ಪ್ರತ್ಯಯದಮೇಲೆ ಪ್ರತ್ಯಯವು ಪದರು ಪದರಾಗಿ ಸೇರಿರುವುದು ಗೋಚರಿಸದಿರದು. ವ್ಯರ್ಥವಾಗಿ ಅವಧಾರಣಾದಿ ನಿಪಾತಗಳು ಸೇರುತ್ತಹೋಗುವುದಕ್ಕೆ ಕನ್ನಡನಾಡಿನ ಕೆಲವೆಡೆಗಳಲ್ಲಿ 'ಹಾಗಿದ್ದರೂನೂವೇ' ಎಂದು ಮಾತಾಡುವುದು ಒಂದು ಭೀಷಣ ಸಾಕ್ಷಿ. ತುಳುವಿನ ಕರೆನಾಡಿನ (ಮಂಗಳೂರು) ನುಡಿಯಲ್ಲಿ ಶಬ್ದಗಳಿಗೆ ಆದಿಹ್ರಾಸವುಂಟಾಗಿದೆ. ಉದಾ— ನುಪ್ಪು, ದಪ್ಪು, ದಾಂತೆ ಇತ್ಯಾದಿ. ಇವೇ ಶಬ್ದಗಳು ಬೇರೆ ಕಡೆಗಳಲ್ಲಿ ಊಣ್ಪು (ಉಣಿಸು=ಅನ್ನ), ಅಡಪ್ಪು (ಉಳು), ಇದ್ದಿಯಾಂತೆ (ಇಲ್ಲದೆ)—ಹೀಗೆ ಅನುಕ್ರಮವಾಗಿ ಪೂರ್ಣರೂಪದಲ್ಲಿ ಕೇಳಿಬರುತ್ತವೆ. ಇಲ್ಲಿ 'ವರ್ಣನಾಶ' ವಾದುದು ಪದಾಂತದಲ್ಲಿ ಅಲ್ಲವೇ ಅಲ್ಲವೆಂಬುದು ಲಕ್ಷಿಸತಕ್ಕವಿಷಯ. ದ್ರಾವಿಡ ಭಾಷೆಗಳಲ್ಲಿ ಸ್ಪರ್ಶವ್ಯಂಜನಗಳ ಪ್ರಾಬಲ್ಯವಿರುವುದಕ್ಕೂ ಉಚ್ಚಾರದ 'ಒತ್ತಡ'ವೇ ಕಾರಣ; ಹ್ರಸ್ವಾಧಿಕ್ಯಕ್ಕೂ ಅದೇ ಕಾರಣ; ಸವರ್ಣಗಳು ಸೇರಿದಾಗ ದೀರ್ಘವಾಗದಿರುವುದಕ್ಕೂ ಈ ಅಭ್ಯಾಸವೇ ಕಾರಣ. ದ್ರಾವಿಡ ಶಬ್ದಗಳು, ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಕಾಲದಲ್ಲಿಯೂ, ಬಹಳ ಬದಲಾವಣೆ ಹೊಂದದಿರುವುದನ್ನು ಕಂಡು

ಕಾಲ್ಡ್‌ವೆಲ್ ಮೊದಲಾದವರು ಆಶ್ಚರ್ಯಪಡುತ್ತಾರೆ. ಹೀಗೆ ಬದಲಾಗದಿರುವುದಕ್ಕೂ ಸ್ಫುಟೋಚ್ಚಾರವನ್ನುಂಟುಮಾಡುವ ಸ್ಪರ್ಶವ್ಯಂಜನಗಳ ಪ್ರಾಬಲ್ಯವೂ, ಅದಕ್ಕೆ ಈ ಒತ್ತಡವೂ ಕಾರಣ. ಪರಿಣಾಮವಾಗಿ ಸಂಸ್ಕೃತದ **'ಭವತಿ'** ಎಂಬುದು **ಹೈ** (ಹಿಂದಿ) **ನೈ** (ಕೊಂಕಣಿ) ಎಂಬಷ್ಟು—ಗುರುತುಸಿಕ್ಕದಷ್ಟು—ರೂಪಾಂತರ ಹೊಂದಿರುವಾಗ, ಹೆಚ್ಚು ಕಡಮೆ ಅಷ್ಟೇಕಾಲದಲ್ಲಿ ನಮ್ಮ 'ಅಪ್ಪುದು' ಎಂಬ ಪದವು 'ಅಹುದು'—ಹವುದು—ಹೌದು ಎಂದಿಷ್ಟೇ ರೂಪಾಂತರ ಹೊಂದಿದೆ. ಸಂಸ್ಕೃತದ **ಅಂಬಾ** ಎಂಬುದು ಮ್ಮಾ (ಹಿಂದಿ) ಎಂಬಷ್ಟು ಕ್ಷೀಣವಾಗುವಾಗ, ನಮ್ಮ ಅಮ್ಮ, ಅಪ್ಪ, ಅಬ್ಬೆ (ಹವೀಕ), ಅಪ್ಪೆ (ತುಳು) ಎಲ್ಲ ಇದ್ದಂತೆಯೇ ಇದ್ದಾರೆ. ಈ ಒತ್ತಡವು ನಮ್ಮ ನುಡಿಗಳ ಚಿರಯೌವ್ವನದ ಮರ್ಮ.

೨೦. ನಮ್ಮಲ್ಲಿ ಕೆಲವರಿಗೆ ಕೈ ಮೊದಲಾದವುಗಳಲ್ಲಿ ಕಾಣುವ 'ಕೆಳಗೈತ'ವು (ಮೊದಲಿನವರು ಈ ಚಿಹ್ನವನ್ನು ಹಾಗೆ ಕರೆಯುತ್ತಿದ್ದರು) **ಯ**ಕಾರ ಚಿಹ್ನವೆಂದೇ ಭ್ರಾಂತಿಯುಂಟೆಂಬುದಕ್ಕೆ, ನಮ್ಮ 'ವ್ಯವಹಾರ'ದ ಬರವಣಿಗೆಗಳಲ್ಲಿ, —ಎಂದರೆ ಅಂಗಡಿ ಲೆಕ್ಕಪತ್ರಗಳ, ಕೋರ್ಟು-ಕಚೇರಿಗಳ ಬರವಣಿಗೆಗಳಲ್ಲಿ, —ರೂಪಾಯಿ, ಕೊಯ್ಲು ಅಥವಾ ಕೊಯಿಲು, ಶಿವಾಯ್ ಮುಂತಾದುವನ್ನು ರೂಪ್ಯಾ, ಕೈಲು ಶಿವ್ಯಾ —ಎಂದು ಮುಂತಾಗಿ ಬರೆಯುವ ವಾಡಿಕೆ ಉತ್ತಮ ಸಾಕ್ಷ್ಯವಾಗಿದೆ.

೨೧. ಅಯ್ ಎಂಬುದನ್ನು ಐ ಎಂದು ಮಾಡಿಕೊಂಡವರು ನಾವು ಮಾತ್ರವಲ್ಲ; ಉತ್ತರದ ನುಡಿಗಳಲ್ಲಿಯೂ ಇದು ಕಾಣುತ್ತದೆ. 'ಪ್ರಲಯ' ಎಂಬ ಶಬ್ದವನ್ನು, ಪದಾಂತದ ಅಕಾರವನ್ನು (ಉಚ್ಚಾರದಲ್ಲಿ) ಕಳೆಯುವ ಹಿಂದೀ ಭಾಷೆಯಲ್ಲಿ 'ಪ್ರಲಯ್' ಎಂದು ಉಚ್ಚರಿಸುವರಷ್ಟೆ. ಅದುವೇ ವ್ರಜಭಾಷೆ ಎಂಬ ಅದರ ಒಂದು 'ನುಡಿ' ಯಲ್ಲಿ **ಪ್ರಲೈ** ಎಂದಾಗಿಬಿಡುತ್ತದೆ. ಉದಾ:— ಛತ್ರಪತಿ ಶಿವಾಜಿಯ ಕಾಲದಲ್ಲಿದ್ದ 'ಭೂಷಣ' ಕವಿಯ ಒಂದು 'ಕವಿತ್ತ ದಲ್ಲಿ—ಇದೊಂದು ಛಂದೋಬಂಧದ ಹೆಸರು— ಹೀಗಿದೆ :—

निकसत म्यानतैं मयूखैं प्रलै भानु कैसी
फारैं तम तोमसे गयंदनको जाल को।

೨೨. ವರ್ಣ=ಕೇವಲ ಧ್ವನಿ, ಏಕ-ಧ್ವನಿ 'letter'. ಅಕ್ಷರ= ಒಂದು ಉಚ್ಚಾರ. 'syllable', ನಾವು ಕೆಲವು ವೇಳೆ ವರ್ಣ, ಅಕ್ಷರ ಎಂಬೆರಡನ್ನೂ ಪರ್ಯಾಯ ಪದಗಳೆಂಬಂತೆ ವ್ಯವಹರಿಸುವೆವಾದರೂ, ಪುರಾತನ ಗ್ರಂಥಗಳನ್ನು ಪರಿಶೀಲಿಸಿದರೆ ಆ ಭೇದವು ಅವುಗಳೊಳಗೆ ಇರುವುದು ತೋರಿಬರುತ್ತದೆ. ಪಂಚಾಕ್ಷರಿ, ಅಷ್ಟಾಕ್ಷರಿ ಎಂಬವುಗಳನ್ನು ಪಂಚವರ್ಣಿ, ಅಷ್ಟವರ್ಣಿ ಎಂದು ನಾವು ಹೇಳುವುದಿಲ್ಲ. ಹಾಗೆಯೇ ವರ್ಣಸಮಾಮ್ನಾಯ, ಮೂಲವರ್ಣ ಇತ್ಯಾದಿಗಳನ್ನು ಅಕ್ಷರಸಮಾಮ್ನಾಯ, ಮೂಲಾಕ್ಷರ ಎಂದು ಶಬ್ದ ಶಾಸ್ತ್ರಗಳಲ್ಲಿ ವ್ಯವಹರಿಸಿದಂತೆ ಕಾಣುವುದಿಲ್ಲ. ಅಲ್ಲದೆ ಆ ಭೇದವು ಅರ್ಥದಲ್ಲೇನೋ ನಿರ್ವಿವಾದವಾಗಿ ಇರುತ್ತಿರುವಾಗ, ಆ ಅರ್ಥಗಳನ್ನು, ನಿಶ್ಚಿತಾರ್ಥವುಂಟಾಗುವಂತೆ, ಭಿನ್ನ ಶಬ್ದಗಳಿಂದಲೇ ವ್ಯಕ್ತಪಡಿಸುವ ಸಂಪ್ರದಾಯವನ್ನವಲಂಬಿಸುವುದು ಅವಶ್ಯವೂ ಲಾಭಕರವೂ ಆಗಿದೆ.

೨೩. ಕೆ ಎಂಬ ಲಿಪಿರೂಪವು ಕೇ ಎಂಬ ಧ್ವನಿಗಾಗಿಯೇ ನಿರ್ಮಿತವಾದದ್ದು ; ಮತ್ತೆ ಕೆ ಕೇ ಎಂಬೆರಡು ಧ್ವನಿಗಳಿಗೂ ಆ ಒಂದನ್ನೇ (ಕೆ) ನಾವು ಬಹುಕಾಲ ಬಳಸಿದೆವು.

೨೪. ದಕ್ಷಿಣ ಕನ್ನಡದ ಹವೀಕರಲ್ಲಿ ಕೇವಲ ಅರ್ಧ ಶತಮಾನದಷ್ಟು ಹಿಂದಿನ ಕಾಲದವರೆಗೂ ಬಳಕೆಯಲ್ಲಿದ್ದ 'ಕಾಗುಣಿತ' ಪಾಠಪದ್ಧತಿಯಿಂದಲೂ, ಆಯೆರಡು ಚಿಹ್ನಗಳೂ ಏಕರೂಪದವೇ ಆಗಿದ್ದುವೆಂದು ದೃಢವಾಗುತ್ತದೆ. 'ಬಳ್ಳಿ' ಬರೆಯುವಾಗ ಹೀಗೆ ಪಠಿಸುತ್ತಿದ್ದರು :— ಕ। ಇಳಿಯಾಂ ತೆಗೆದರೆ ಕಾ। ಗುಡುಸು ಕೊಟ್ಟರೆ ಕಿ। ಗುಡುಸಿಂದೊಳಗೆ ಸುಳಿದರೆ ಕೀ। ಕೊಂಬು ಕೊಟ್ಟರೆ ಕು। ಕೊಂಬಿಂದಿಳಿಯಾಂ ತೆಗೆದರೆ ಕೂ। ಮೇಲಯಿತ ಕೊಟ್ಟರೆ ಕೆ। ಕೆಳಗಯಿತಕೊಟ್ಟರೆ ಕೈ। ಇತ್ಯಾದಿ. ಇಲ್ಲಿ ನಾವೀಗ ಪರೀಕ್ಷಿಸುತ್ತಬಂದ **ಆಯೆರಡು ಚಿಹ್ನಗಳಿಗೂ** ಅಯಿತ>ಅಯ್ತು>ಐತ ಎಂಬ **ಒಂದೇ ಹೆಸರು** ಇದೆ. ಒಂದಾನೊಂದು ಕಾಲದಲ್ಲಿ ಇವು ಏಕರೂಪವಾಗಿ ಇದ್ದುದರಿಂದ ಬಂದ ಪರಂಪರೆಯ ಪರಿಣಾಮವೇ ಇದಲ್ಲವೆ? ಆ ಪರಂಪರೆಯಾದರೂ ಎಷ್ಟು ಪುರಾತನವೆಂಬುದು **ಇಳಿಯಾಂ** ಎಂಬ ಪದರೂಪದಿಂದ ತಿಳಿಯುವುದು ಮಾತ್ರವಲ್ಲ, ಕಿ ಕೀ ಗಳ ರೂಪವನ್ನು ಹೇಳುವ 'ವಾಚಕ' ಗಳಿಂದಲೂ

ಗೊತ್ತಾಗುತ್ತದೆ. 'ಗುಡುಸು' ಕೊಟ್ಟು ಆಗುವ ಕಿ ಇದು—ಕಿ 'ಗುಡುಸಿಂದೊಳಗೆ ಸುಳಿದರೆ' ಆಗುವ ಕೀ ಹೀಗಿರುತ್ತದೆ— ಕೀ. ಹದಿನೈದನೆಯ ಶತಮಾನಕ್ಕಾಗುವಾಗ ಇವು ಈ ರೂಪಗಳನ್ನು ಕಳೆದು ಕೊಂಡಿವೆ ಎಂಬುದು ಲಕ್ಷಿಸತಕ್ಕ ವಿಷಯ. (South Indian Palaeography Palate X)

೨೫. ಆದುದರಿಂದ ದೇಹವಾಚಿಯಾದ ಆ ಕನ್ನಡ ಶಬ್ದವನ್ನು **ಮೈ ಎಂದು ಬರೆಯುವುದು ಸರಿಯಲ್ಲ; ಮೆಯ್, ಮೆಯ್ಯನ್ನು, ಮೆಯ್ಗೆ, ಮೆಯ್ಯಿಂದ, ಮೆಯ್ಯ, ಮೆಯ್ಯಲ್ಲಿ; ಮೆಯ್ಗಳು**— ಇತ್ಯಾದಿ ಯಾಗಿಯೇ ಬರೆಯಬೇಕು ಎಂದು ಸಿದ್ಧವಾಗುತ್ತದೆ. **ಮೆಯ್** ಎಂಬುದು ವ್ಯಂಜನಾಂತ ಶಬ್ದವಾದುದರಿಂದ, ಹಳೆಯ ವ್ಯಂಜನಾಂತಗಳೆಲ್ಲ ಹೊಸ ಗನ್ನಡದಲ್ಲಿ ಸ್ವರಾಂತವಾಗುವುದರಿಂದ, **ಮೈ ಎಂದು ಅದನ್ನು ಬರೆಯುವ ತಪ್ಪುರೂಢಿ** ಬಂತೆಂದು ತೋರುತ್ತದೆ. ಹೊಸಗನ್ನಡದ ಬೇರೆ ಶಬ್ದ ಗಳನ್ನು ನೋಡಿದರೆ (ಕಾಯ್ >ಕಾಯಿ, ಬಾಯ್ >ಬಾಯಿ) ಇದು **ಮೆಯಿ** ಎಂದಾಗುವುದೇ ಸಾಧುವೆನ್ನಬೇಕಾಗುತ್ತದೆ. ಹಾಗೆ ಬರೆಯುವ ರೂಢಿಯೂ ಕೆಲವು ಕಾಲ ಇತ್ತು. ಕೆಲವು ಹಳೆಯ 'ಕೋಶ'ಗಳಲ್ಲಿ ಹಾಗಿದೆ. ಈ ಶಬ್ದಕ್ಕೆ ಪ್ರತ್ಯಯಗಳು ಅಂಟುವಾಗ ಉಂಟಾಗುವ ರೂಪಗಳನ್ನು ಹೊಸಗನ್ನಡದ ಉಚ್ಚಾರ ಮರ್ಯಾದೆಗೆ ಹೊಂದಿಸಿದರೆ ಅವು ಹೀಗಾಗುವವು:— ಮೆಯಿ, ಮೆಯ್ಯನ್ನು, ಮೆಯಿಗೆ, ಮೆಯ್ಯಿಂದ, ಮೆಯ್ಯ, ಮೆಯ್ಯಲ್ಲಿ; ಮೆಯ್ಯಿಗಳು ಇತ್ಯಾದಿ.

೨೬. ಕಾಲ್ಡ್‌ವೆಲ್ಲರು ಸಂಸ್ಕೃತದ ಏಕಾರದ ವಿಷಯದಲ್ಲಿಯೂ ಭ್ರಮಿಸಿದ್ದಾರೆಂದು ಅವರ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ:—

The Sanskrit admits of the modulation of *i* into *e* by the addition of an *a* sound, but it does not include with in the range of its phonetic system the process of flattening *a* into *e* by the appendage of an *i* sound (ಪುಟ ೧೭). ಅವರು ಸಂಸ್ಕೃತದ ಏಕಾರವು=ಇ+ಅ ಎಂದೂ, ಅ+ಇ=ಏ ಎಂಬುದು ಸಂಸ್ಕೃತದಲ್ಲಿ ಎಂದೂ ಆಗಲಾರದೆಂದೂ ಹೇಳಿದ್ದಾರೆ! ವಸ್ತುಸ್ಥಿತಿಗೆ ಸಂಪೂರ್ಣ ವಿಪರೀತ'

೨೭. ಇಲ್ಲಿ 'ಪೆಡಗೆಯ್' ಎಂದು ಮುದ್ರಿತವಾಗಿರುವುದು ಸರಿಯಾದ ರೂಪವಲ್ಲವೆಂಬುದು ಸ್ಪಷ್ಟ.

೨೮. ದಕ್ಷಿಣ ಕನ್ನಡದಲ್ಲಿಯೂ, ಕಿಟ್ಟೆಲರ ಕೋಶದಲ್ಲಿ ಕಾಣುವಂತೆ ಮೈಸೂರಲ್ಲಿಯೂ ಪ್ರಚಲಿತವಾಗಿರುವ 'ಗೇಣಿ' (ಒಕ್ಕಲು ಧನಿಗೆ ಕೊಡುವ **ಹೊಲದ** ಉತ್ಪನ್ನಾಂಶ) ಎಂಬುದೂ **ಗೇ** ಎಂಬುದರಿಂದಲೇ ಹುಟ್ಟಿರುವಂತೆ ತೋರುತ್ತದೆ.

೨೯. ಸಂಸ್ಕೃತದ 'ಕೇದಾರ' ಶಬ್ದದ ಮೂಲವೇನು? ಕೇದಾರವೆಂದರೆ 'ಜಲಾರ್ದ್ರವಾದ ಹೊಲ' ವೆಂಬರ್ಥವು ನಿಘಂಟುಗಳಲ್ಲಿದೆ. 'ದಾರ' ಎಂಬುದಕ್ಕೆ 'ಉತ್ತಹೊಲ' ಎಂಬರ್ಥವೂ ಇದೆ. ಸಂಸ್ಕೃತದಲ್ಲಿ 'ಕೇ' ಎಂದರೆ 'ನೀರಿನಲ್ಲಿ' ಎಂಬರ್ಥವೂ ಉಂಟು. ಅವೆರಡರಿಂದ ಅದು ಉಂಟಾಗಿರಬಹುದೆ? ಅಥವಾ 'ಕೇದಾರ' ದಲ್ಲಿರುವ **'ಕೇ'** ಎಂಬುದು **ಕೆಯ್** ಎಂಬುದರ ರೂಪಾಂತರವೆ? ರೂಪಾಂತರವೆಂದಾದರೆ ಎಯ್ ಎಂಬ ಧ್ವನಿ ಏ ಎಂದಾಗುವುದೆಂಬುದಕ್ಕೆ ಇದು ಇನ್ನೊಂದು ನಿದರ್ಶನ. ಅಥವಾ ತುಳುವಿನ ಕೇದೆಲ್ [—ಎಲ್, ಎಂಬುದು ಸಂಸ್ಕೃತದ ಆಲು ಪ್ರತ್ಯಯದಂತೆ (ಉದಾ:— ದಯಾಲು) ಶೀಲಾರ್ಥಕ ; ಆದರೆ ಕನ್ನಡದ 'ಆಳಿ' ಯಂತೆ (ಉದಾ:— ಮಾತಾಳಿ) ತಿರಸ್ಕಾರವನ್ನು ಸೂಚಿಸುವುದು —ಕುರಿತ್ತೆಲ್ ಇತ್ಯಾದಿ.] ಎಂಬುದಕ್ಕೆ ಸಂಸ್ಕೃತವೆ ಮೂಲವೆ? ದ್ರಾವಿಡ ಸಂಸ್ಕೃತಗಳ ಬೇರುಗಳನ್ನು ಅನುಸರಿಸುತ್ತಾ ಅತಿ ಆಳಕ್ಕೆ ಇಳಿದರೆ, ಒಂದಕ್ಕೊಂದು ಹೆಣೆದಂತೆ ಅಥವಾ ಒಂದೆಯೋ ಎಂಬಂತೆ ತೋರತೊಡಗುತ್ತದೆ. ಕಾಲ್ಡ್ವೆಲ್ಲರಾದರೂ ಈ ಅಭಿಪ್ರಾಯಕ್ಕೇ ಮುಟ್ಟಿದ್ದಾರೆ (ಪುಟ ೪೭೦).

೩೦. ತೆಲುಗಿನಲ್ಲಿ **ಕಯ್** ಎಂದೂ ಇದೆ: ಇದರ ವಿಕಲ್ಪವೆಂಬಂತೆ 'ಚೆಯ್ಯಿ' ಅಥವಾ 'ಚೇಯಿ' ಎಂಬುದೂ ಹಸ್ತಾರ್ಥಕವಾಗಿದೆ. ಆದರೆ ಈ 'ಚೇಯಿ' ಯ ಮೂಲವು ಚೆನ್ನಾಗಿ ಶೋಧಿತವಾಗಿದೆಯೆ? 'ಮಾಡು' ಎಂಬ ಅರ್ಥವನ್ನೂ ಪಡೆದಿರುವ ಕೆಯ್-ಗೆಯ್ ಧಾತುಗಳ ತೆಲುಗು ರೂಪವಾದ 'ಚೇ' ಎಂಬುದರಿಂದ ಹಸ್ತಾರ್ಥಕವಾದ ಆ ಚೇಯಿ, ಚೆಯ್ಯಿಗಳು ಮತ್ತೆ ಹುಟ್ಟಿರಲಾರವೆ?

೩೧. ಹಳೆಯ ಹಸ್ತಪ್ರತಿಗಳಲ್ಲಿ (ಎಂದರೆ ಮುದ್ರಿತ ಪುಸ್ತಕಗಳ ಮಾತೃಕೆಗಳಲ್ಲಿ) ಕರಣಾರ್ಥವಾಗಿ ಗೈ ಎಂಬ ರೂಪವಿರುವ ಕಡೆಗಳಲ್ಲಿ, ಕಾಲ್ಡ್ವೆಲ್ ಮೊದಲಾದ ಮಹನೀಯರ ಮತಾನುಸಾರವಾಗಿ, ಅದರ ಶುದ್ಧ ರೂಪವು **ಗೆಯ್** ಎಂದಿರಬೇಕೆಂದು ಭಾವಿಸಿ, ಹಳೆಗನ್ನಡ ಗ್ರಂಥಗಳನ್ನು 'ಸಂಪಾದಿಸಿ' ಮುದ್ರಿಸುವಾಗಲೂ ದೋಷಗಳುಂಟಾಗಿ ಇದು ಮತ್ತಷ್ಟು ಗೊಂದಲಿಸಿದಂತೆ ತೋರುತ್ತದೆ.

೩೨. ತಮಿಳಿನಲ್ಲಿ ಇದನ್ನು 'ಎಣ್ಣೆಯ್' ಎಂದೂ ಬರೆಯುವರೆಂದು ತೋರುವುದಾದರೂ (History of Kannada Language –R. Narasinhachar –Page 112) ಹಿಂದೆ ನಾನು ಅದೇ ಪುಸ್ತಕದಿಂದ ಉದ್ಧರಿಸಿದ 'ಪೇರಗತ್ತಿಯಂ' ಗ್ರಂಥಭಾಗದಲ್ಲಿ ಅದು 'ಎಣ್ಣೆ' ಎಂಬಂತೆಯೇ ಇರುವುದೆಂದು ಹೇಳಬೇಕಾಗುತ್ತದೆ (ಎಳ್ಳಿನಿನ್ರೆಣ್ಣೆಯೆಡುಪ್ಪದುಪೋಲ —Page 31). ಅಲ್ಲಿ ಅದು '**ಎಣ್ಣೆಯ್**+ಎಡುಪ್ಪದು' ಎಂದು ಕೂಡಿ ಉಂಟಾಗಿದ್ದುದಾಗಿದ್ದರೆ, **ಯ**ಕಾರಕ್ಕೆ ದ್ವಿತ್ವ ಬರುತ್ತಿರಲಿಲ್ಲವೆ ?

೩೩. ಐ ಯನ್ನಾಗಲಿ **ಔ** ವನ್ನಾಗಲಿ ಇಂದಿನ ನಮ್ಮ ಚಾಕ್ಷುಷ 'ವರ್ಣಮಾಲೆ' ಯಿಂದ ತೆಗೆದುಹಾಕುವುದು ಅವ್ಯವಹಾರ್ಯ, ಅನವಶ್ಯ, ಅನರ್ಥಕ, ಸಂಸ್ಕೃತ ಶಬ್ದಗಳಲ್ಲಿ ಅವು ನಮಗೆ ಅನಿವಾರ್ಯವಾಗಿ ಬೇಕಾಗಿರುವುವು. ಮಾತ್ರವಲ್ಲ; ನಮ್ಮ ಇಂದಿನ 'ಹೌದು', ಹಿಂದಿನ 'ಕೌಂಗು' 'ಎಲೌ' 'ಮಾಡೌ' ಇತ್ಯಾದಿಗಳನ್ನೆಲ್ಲ ಬರೆಯಲು **ಔ** ಬೇಕು. ಅವುಗಳನ್ನೆಲ್ಲ 'ಹವುದು' ಎಂಬಿತ್ಯಾದಿಯಾಗಿ ನಾವು ಬರೆಯತೊಡಗಿದರೆ, ಬಹು ಜನರು ಅಕ್ಷರಜ್ಞರಾಗಿರುವ ಈ ಕಾಲದಲ್ಲಿ, ನಮ್ಮ ಉಚ್ಚಾರ ವ್ಯವಸ್ಥೆಯನ್ನೇ ಕೆಡಿಸಿಹಾಕಿದಂತಾಗದಿರದು. ಹಾಗೆಯೇ ಐ ಕೂಡ, ಕನ್ನಡ ಶಬ್ದಗಳಲ್ಲೂ ಇಂದು ನಮಗೆ ಬೇಕಾಗುತ್ತದೆ. ಪ್ರಾಸಸ್ಥಾನದಲ್ಲಿ ಸಂಸ್ಕೃತದ **ಐ** ಧ್ವನಿಯೊಂದು ಬಂದಾಗ ಕನ್ನಡದ **ಅಯ್** ಕೂಡ ಐ ಎಂಬ ರೂಪವನ್ನೇ ಪಡೆಯುವುದು ವಿಹಿತ. ಉದಾ:—'ಕೈತವ........' ಇತ್ಯಾದಿಯಾಗಿ ಒಂದು ಪಾದದಲ್ಲಿರುವಾಗ ಇನ್ನೊಂದು ಪಾದದಲ್ಲಿ 'ಕಯ್ತೊಳೆದು........' ಇತ್ಯಾದಿ ಬರೆದುಚ್ಚರಿಸಿದರೆ ಸೊಗಸದು; ಅದನ್ನಲ್ಲಿ 'ಕೈತೊಳೆದು........' ಎಂದೇ

ಬರೆಯುವುದು ಸೊಗಸು. ಅಲ್ಲದೆ **ಅಯ್** ಎಂಬ ಉಚ್ಚಾರ ಬರುವಲ್ಲೆಲ್ಲ ಐ ಚಿಹ್ನವನ್ನು ಬರೆದುದರಿಂದ ಯಾವ ಹಾನಿಯೂ ಇಲ್ಲ. **ಎಯ್** ಎಂದು ಧ್ವನಿಯುಂಟಾಗಬೇಕಾದಾಗ ಮಾತ್ರ ಐ ಚಿಹ್ನವನ್ನು ಬರೆಯಕೂಡದು. 'ಮೈಸೂರು' ಎಂಬುದರಲ್ಲಿ **ಎಯ್** ಧ್ವನಿ ಇಲ್ಲ. ಅದನ್ನು ಮೈಸೂರು ಎಂದೇ ಬರೆಯುವುದು ಬಿಟ್ಟು, 'ಮಯ್ಸೂರು' ಎಂದು ಬರೆಯತೊಡಗಬೇಕಾಗಿಲ್ಲ. ಐ ಎಂಬುದು **ಅಯ್** ಎಂಬ ಉಚ್ಚಾರವನ್ನೇ ಕೊಡುತ್ತದೆ ಹೊರತು **ಎಯ್** ಎಂಬ ಉಚ್ಚಾರವನ್ನಲ್ಲ ಎಂಬುದು ಪ್ರತಿಪಾದಿತವಾದ ಅರ್ಥ. **ದೇಹಾರ್ಥಕವಾದ ಆ (ಮೆಯ್) ಶಬ್ದವನ್ನು ಮೈ ಎಂದು ಬರೆಯುವುದು ಸರಿಯಲ್ಲ; ಮೆಯ್ ಎಂದೇ ಬರೆಯಬೇಕು.** ( ಬೇಕಾ**ದರೆ** ಹೊಸಗನ್ನಡದಲ್ಲಿ **ಮೆಯಿ** ಎಂದೂ ಬರೆಯಬಹುದು. ) ಹಸ್ತಾರ್ಥಕವಾದ ಆ ( ಕಯ್=ಕೈ ) ಶಬ್ದವನ್ನು **ಕಯ್** ಎಂದಾಗಲಿ **ಕೈ** ಎಂದಾಗಲಿ ಬರೆಯಬಹುದು. **ಹಸ್ತಾರ್ಥಕದಲ್ಲಿ ಕೆಯ್ ಎಂದು ಬರೆಯುವುದು ತಪ್ಪು** 'ಬತ್ತದ ಸಸಿ' ಮೊದಲಾದ ಅರ್ಥದಲ್ಲಿರುವ ಆ ( ಕೆಯ್ ) ಶಬ್ದವನ್ನು **ಕೆಯ್** ಎಂದೇ ಬರೆಯಬೇಕು ( ಹೊಸಗನ್ನಡದಲ್ಲಿ ಬೇಕಾದರೆ ಕೆಯಿ ಎಂದೂ ಬರೆಯಬಹುದು. ) ಕಾಲ್ಡ್ವೆಲ್ಲರ ಪ್ರತಿಪಾದನದಲ್ಲಿ ಬಂದುಬಿಟ್ಟ ಒಂದು ದೋಷದಿಂದಾಗಿ, ನಮ್ಮ ಹಳೆಗನ್ನಡ ಗ್ರಂಥಗಳ ಮುದ್ರಣದಲ್ಲಿ, ಅಯ್, ಅಥವಾ ಅದರ ಬದಲಾಗಿ ಇರಬೇಕಾಗಿದ್ದ ಐಯ ಸ್ಥಾನಗಳಲ್ಲಿ **ಎಯ್** ಬಹಳವಾಗಿ ಆಕ್ರಮಣಮಾಡಿದೆಯೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಉತ್ತಮವಾದ ಹಳೆಯ ಓಲೆಯ ಪ್ರತಿಗಳಲ್ಲಿರುವ ರೂಪಗಳನ್ನು ಶೋಧಿಸಿನೋಡಿ ಎಲ್ಲಿ 'ಅಯ್' ಎಲ್ಲಿ ಮಾತ್ರ 'ಎಯ್' ಎಂಬುದನ್ನು ನಿರ್ಣಯಿಸಿ ಮುದ್ರಿಸುವುದು ಅವಶ್ಯವಾಗಿದೆ. ಕನ್ನಡದಲ್ಲಿ **ಅಯ್** ಉಂಟೆಂದು ತಿಳಿದಿದ್ದ ಕಿಟ್ಟೆಲರಾದರೂ, ಕೈ ಇತ್ಯಾದಿ ಲಿಪಿಗಳ ಉಚ್ಚಾರವನ್ನು, ಕಾಲ್ಡ್ವೆಲ್ಲರಂತೆಯೇ, kei ಕೆಇ ಎಂದು ಮೊದಲಾಗಿಯೇ ತಮ್ಮ ಕೋಶದಲ್ಲಿ ಬರೆದಿರುವರು. ಅಲ್ಲದೆ ಐ ಎಂಬ ಸ್ವರದ ಉಚ್ಚಾರವನ್ನು ಇಂಗ್ಲಿಷ್ ಲಿಪಿಯಲ್ಲಿ ತೋರಿಸುವಾಗ ai ಮತ್ತು ei ಎಂದು ಎರಡು ರೀತಿಯಲ್ಲಿಯೂ ಬರೆದಿರುವರು. ) ಇದರಿಂದ ಇವರೂ ಲಿಪಿಗಳ ರೂಪದಿಂದಾಗಿ ಆ ಧ್ವನಿಯ ಕುರಿತು ಭ್ರಮಿಸಿರುವರೆಂಬುದು ಸ್ಪಷ್ಟ. ಆದುದರಿಂದ ನಮ್ಮ ಹಳೆಯ ಗ್ರಂಥಗಳ ಓಲೆಯ ಪ್ರತಿಗಳನ್ನು ನಾವು ಸ್ವತಂತ್ರವಾಗಿ ಇನ್ನೊಮ್ಮೆ ತಳಮುಟ್ಟಿ ಸಂಶೋಧಿಸಿದರೆ ಕರಣಾರ್ಥವಾದ ಆ [ **ಗಯ್**= (=ಗೈ) ಅಥವಾ **ಗೆಯ್** ] ಧಾತುವಿನ ನಿಜಸ್ವರೂಪವೂ ತಿಳಿದು ಬಂದೀತು ಎಂದು ವಿಜ್ಞಾಪಿಸಿಕೊಳ್ಳುತ್ತೇನೆ.

# ೩. ವ್ಯಂಜನಪ್ರಕರಣ

ಇನ್ನು ವ್ಯಂಜನಗಳ ಕಡೆಗೆ ತಿರುಗುವ. ತಮಿಳು ವರ್ಣಮಾಲೆಯು ಅವರ್ಗೀಯ ವ್ಯಂಜನಗಳಲ್ಲಿ ಸೇರದಿರುವ ಸ್, ಹ್ ಎಂಬ ಎರಡು ವ್ಯಂಜನಗಳು ಕನ್ನಡದಲ್ಲಿ ಕಾಣುತ್ತವೆ. ಇವುಗಳೊಳಗೆ **ಹ**ಕಾರವು ತಮಿಳಿನ ಚಾಕ್ಷುಷ ವರ್ಣಮಾಲೆಯಲ್ಲಿ ಕಾಣದಿದ್ದರೂ ತಮಿಳರ ನುಡಿಯಲ್ಲಿ ಅದು ಕೇಳಿಬರುತ್ತದೆ. ಆದರೆ ಅದು, ಕಕಾರವು ಶಬ್ದಮಧ್ಯವರ್ತಿಯಾಗಿ ಗಕಾರೋಚ್ಚಾರವನ್ನು ಪಡೆಯುವಲ್ಲಿ ಮಾತ್ರ ಉಂಟಾಗುತ್ತದೆ. ಉದಾ:- 'ಮುರುಕ' ಎಂದು ತಮಿಳು ಲಿಪಿಯಲ್ಲಿ ಬರೆಯಲ್ಪಡುವ ಆ ಶಬ್ದದ ಉಚ್ಚಾರವು ಸಹಜವಾಗಿ 'ಮುರು**ಗ**' ಎಂದಾಗುತ್ತದೆ; ಕೆಲವರು ಇದನ್ನು ಹಾಗೆಯೇ ಉಚ್ಚರಿಸುತ್ತಾರೆ. ಇನ್ನು ಕೆಲವರು ಇದನ್ನೇ ಹೆಚ್ಚುಕಡಮೆ '**ಮುರುಘ**' ಎಂಬಂತೆ ಉಚ್ಚರಿಸುತ್ತಾರೆ. 'ಮುರುಘ ರಾಜೇಂದ್ರ' — ಇತ್ಯಾದಿಯಾಗಿ ಕನ್ನಡದಲ್ಲಿ ಬರೆದಿರುವುದನ್ನು ಹಲವರು ಕಂಡಿರಬಹುದು. ಇನ್ನು ಕೆಲವರು ಇದನ್ನು ನುಡಿಯುವಾಗ ಪ್ರಾಯಃ 'ಮುರು**ಹ**' ಎಂದೇ ಧ್ವನಿಯುಂಟಾಗುತ್ತದೆ. 'ಅಗನಾನೂರು' ಎಂಬ ತಮಿಳು ಗ್ರಂಥದ ಹೆಸರನ್ನು 'ಅಹನಾನೂರು' ಎಂದು ಕನ್ನಡದಲ್ಲಿ ಮುದ್ರಿಸಿರುವುದನ್ನೂ '**ಪೋಗವೇಣ್ಡಾಂ**' ಎಂಬ ತಮಿಳು ಮಾತನ್ನು '**ಪೋಹವೇಣ್ಡಾಂ**' ಎಂದು ಮಾತಾಡುವಂತೆ ಕನ್ನಡ ಕಥೆಯೊಂದರಲ್ಲಿ ಅಚ್ಚು ಮಾಡಿರುವುದನ್ನೂ ನಾನು ಓದಿರುತ್ತೇನೆ. ಇದರಿಂದ ಹೆಚ್ಚು ಕಡಮೆ ಅದನ್ನು **ಹ**ಕಾರದಂತೆಯೇ ಬಹಳ ಜನರು ಉಚ್ಚರಿಸುವರೆಂದು ತಿಳಿಯಬೇಕಾಗುತ್ತದೆ. ಹೀಗೆ ಇದು ಪ್ರಚಲಿತವಾಗಿದ್ದರೂ, ಕೆಲವರ—ಎಲ್ಲ ತಮಿಳರದಲ್ಲ—ಉಚ್ಚಾರದಲ್ಲಿ ಮಾತ್ರವಿದ್ದು, ಅದುಕೂಡ ಆದೇಶವಾಗಿಯೇ ಇರುವುದರಿಂದ, ತಮಿಳಿನಲ್ಲಿ ಹಕಾರವಿಲ್ಲವೆಂದರೆ ಸಲ್ಲುವುದು. ಕನ್ನಡದಲ್ಲಾದರೆ ಹಕ್ಕಿ, ಹಲಗೆ, ಹಗರಣ ಮೊದಲಾದ ತದ್ಭವಗಳಲ್ಲಿ ಮಾತ್ರವಲ್ಲ, 'ಹೋಗು' ಇತ್ಯಾದಿ ಸಹಜ ಧಾತುಗಳಲ್ಲಿಯೂ, 'ನೆರಹು' ಇತ್ಯಾದಿ ಸಾಧಿತ ಧಾತುಗಳಲ್ಲಿಯೂ, 'ಅಂತಹ' ಇತ್ಯಾದಿ ಸಂಯುಕ್ತ ಶಬ್ದಗಳಲ್ಲಿಯೂ ಕಾಣಬರುತ್ತದೆ. ಆದರೂ ಕನ್ನಡದಲ್ಲಿ ಕೂಡ ಇದು ಆದೇಶವೆಂದೇ ವಿಚಾರಾಂತದಲ್ಲಿ ತಿಳಿದುಬರುವುದು; ವ್ಯತ್ಯಾಸವಿಷ್ಟೆ:— ತಮಿಳಿನಲ್ಲಿ **ಕ**ಕಾರಕ್ಕೆ ಆದೇಶವಾಗುವ **ಗ**ಕಾರಕ್ಕೆ ಪುನರಾದೇಶವಾಗಿ **ಹ**ಕಾರಧ್ವನಿ ಹುಟ್ಟುತ್ತದೆ; ಕನ್ನಡದಲ್ಲಿ **ಪ**ಕಾರಕ್ಕೆ ಆದೇಶವಾಗಿ **ಹ**ಕಾರ ಉಂಟಾಗುತ್ತದೆ.

ತಮಿಳರು, ಹೀಗೆ ಆದೇಶವಾದೊಡನೆ ಲಿಪಿಯನ್ನು ಉಚ್ಚಾರಾನುರೂಪವಾಗಿ ಬದಲಿಸುವುದಿಲ್ಲ; ಹಾಗೆ ಮಾಡಲು ಸಾಕಷ್ಟು ಲಿಪಿಸಾಧನವೂ ಅವರಲ್ಲಿಲ್ಲ; ಇರುವಲ್ಲಿ ಕೂಡ ಅದು ಅವರ ಪ್ರವೃತ್ತಿಯೂ ಅಲ್ಲ.[1] ನಾವಾದರೆ ಉಚ್ಚಾರ ಬದಲಿದಂತೆ ಲಿಪಿಯನ್ನು ಬದಲಿಸುತ್ತ ಬರುತ್ತೇವೆ. ಇದು ನಮ್ಮ ಪ್ರವೃತ್ತಿ.[2] ಹೀಗೆ ಲಿಪಿಯನ್ನು ಬದಲಿಸದೆ ಇರುತ್ತಿದ್ದರೆ ಕನ್ನಡದಲ್ಲಿಂದು 'ಹೋಗು' ಎಂದು ಉಚ್ಚರಿಸುವಾಗಲೂ 'ಪೋಗು' ಎಂದೇ ನಾವು ಬರೆಯುವ ಪ್ರಸಂಗ ಬರುತ್ತಿತ್ತು. ನಮ್ಮ ಚಾಕ್ಷುಷ ವರ್ಣಮಾಲೆಯಲ್ಲಿ ಹ ಕಾರಕ್ಕೆ ಆದಿಯಿಂದಲೂ ಸ್ಥಾನವಿತ್ತೆಂದು ತಿಳಿದು ಬರುತ್ತದೆ. ಇದಕ್ಕೆ, ಕನ್ನಡದಲ್ಲಿ ಬರವಣಿಗೆ ತೊಡಗುವಾಗಲೇ ಹಕಾರವು ನಮ್ಮ ನುಡಿಯಲ್ಲಿ ರೂಪುಗೊಂಡಿದ್ದುದೇ ಕಾರಣವಾಗಿರಬೇಕು. ಈ ಕನ್ನಡ ಹ ಕಾರವು, ತಮಿಳಿನಲ್ಲಿ ಗ ಕಾರವು ಹ ಕಾರದಂತೆ, ತುಳುವಿನ ಸ ಕಾರವು ಹ ಕಾರವಾಗಿಯೂ ಪರಿಣಮಿಸುವಂತೆ (ಇದರ ವಿವರಣೆ ಮುಂದೆ ಬರುವುದು.) ಸಹಜ ವಿಕಾಸವಾಗಿರಲೂಬಹುದು; ಶಾಲಿವಾಹನ ಶಕಾರಂಭದಿಂದಲೂ —(ಕನ್ನಡ ನಾಡಿಗೆ ಅಧಿಪತಿಯಾಗಿದ್ದನೆಂದು ತಿಳಿದುಬರುವ, ಶಾಲಿವಾಹನ ಅಥವಾ ಶಾತವಾಹನನೊಬ್ಬನು 'ಗಾಥಾಸಪ್ತಶತಿ' ಎಂಬ ಪ್ರಾಕೃತ ಗ್ರಂಥವನ್ನು ಬರೆದಿರುವನಷ್ಟೆ) —ಇಲ್ಲವೆ ಅದಕ್ಕಿಂತಲೂ ಮೊದಲಿನಿಂದ —ಏಕೆ? ಅಶೋಕನ ಕಾಲದಿಂದಲೂ ಪ್ರಾಯಃ ಅದಕ್ಕಿಂತಲೂ ಹಿಂದಿನಿಂದಲೂ —ನಮಗುಂಟಾದ ಪ್ರಾಕೃತ ಭಾಷೆಗಳ ಪರಿಚಯದಿಂದಾಗಿ ನಮ್ಮ ನುಡಿಯಲ್ಲಿ ರೂಪುಗೊಂಡಿರಲೂ ಬಹುದು.

ಕ—ಗ—ಘಕಾರಗಳೂ ಹಕಾರವೂ ಕಂಠ್ಯವ್ಯಂಜನಗಳು; ಎಂದರೆ ಹೆಚ್ಚು ಕಡಮೆ ಅವು ನಾಲ್ಕೂ ಏಕಸ್ಥಾನಿಗಳು. ಆದುದರಿಂದ ತಮಿಳಿನ ಕಕಾರವು ಗಕಾರವಾಗುವಂತೆಯೋ ಆ ಕಕಾರವು ಅಥವಾ ಅದಕ್ಕೆ ಆದಿಷ್ಟವಾದ ಗಕಾರವು ಘಕಾರವಾಗಿಯೋ, ಮುಂದೆ ಹಕಾರವಾಗಿಯೋ ಮಾರ್ಪಟ್ಟರೆ ಆಶ್ಚರ್ಯವಿಲ್ಲ; ಅದು ಸಹಜ ವಿಕಾಸವೆನ್ನಬಹುದು. ಹಾಗೆಯೇ ತೆಲುಗಿನಲ್ಲಿ, ಪದಿಹೇನು ೧೫, ಪದಿಹಾರು ೧೬, ಪದಿಹೇಡು ೧೭ ಇತ್ಯಾದಿಯಾಗಿರುವ ಹಕಾರವಾದರೂ ಸ್ಥಾನವಿಶೇಷದಲ್ಲಿ ಉಂಟಾಗುವ ಆಗಮವಾಗಿ—ಆದೇಶವಲ್ಲ—ಕಾಣುವುದರಿಂದ ಅದಂತೂ ಸಹಜ ವಿಕಾಸವೇ ಎಂದು ಹೇಳಬೇಕು. ಕನ್ನಡದ ಹಕಾರವಾದರೆ ಪಕಾರಕ್ಕೆ

ಆದೇಶ. ಪಕಾರವು ಉಚ್ಚಾರ ಯಂತ್ರದ ಬಹಿರ್ ದ್ವಾರದಲ್ಲಿ ಎಂದರೆ, ಬಾಯ್ದ್ವಾರದ ಎಸಳುಗಳ ಕೊನೆಯಲ್ಲಿ ಹುಟ್ಟುವುದಾದರೆ, ಹಕಾರವು ಅದರ 'ಕರ್ಣಿಕೆ'ಯಲ್ಲಿ ( ಮುಖ್ಯ ದ್ವಾರವನ್ನು ಒಮ್ಮೆ ಮುಚ್ಚದೆ ಪಕಾರ ಹುಟ್ಟುವಂತಿಲ್ಲ; ತುಟಿಗಳನ್ನು ತೆರೆದಿಟ್ಟುಕೊಂಡೇ ಗಂಟಲಿನೊಳಗಿಂದ ಉಸಿರನ್ನು ರಭಸದಿಂದ ಹೊರತಳ್ಳದೆ ಹಕಾರವುಂಟಾಗುವಂತಿಲ್ಲ. ಪಕಾರವು ಹಕಾರವಾಗುವುದಕ್ಕೆ ಇಷ್ಟು ವಿಘ್ನವಿರುವುದಾದರೂ, ವಸ್ತುಸ್ಥಿತಿಯೇನೋ ಹಾಗೇ ಆಗಿ ಇದೆ, ಎಂಬುದು ಪ್ರತ್ಯಕ್ಷ; ನಿರ್ವಿವಾದ. "ವಿಚಿತ್ರಾ ಹಿ ಶಬ್ದಗತಿಃ" ಇತರ ದ್ರಾವಿಡ ಭಾಷೆಗಳಲ್ಲಿ ಪಕಾರವು ಹಕಾರವಾಗುವುದುಂಟೆಂದು ತೋರುವುದೂ ಇಲ್ಲ.

ಕನ್ನಡದಲ್ಲಿ ಪಕಾರವು ಹಕಾರವಾದ ಇತಿಹಾಸವು ಹೀಗೆ ನಡೆದಿರಬಹುದೆಂದು ಕೆಲವರು ವಿದ್ವಾಂಸರು ಊಹಿಸುತ್ತಾರೆ.—ಶಬ್ದಗಳ ಆರಂಭದ ಅಲ್ಪಪ್ರಾಣಗಳನ್ನು ಔಜ್ವಲ್ಯಕ್ಕಾಗಿ ಕೆಲವರು ಮಹಾಪ್ರಾಣ ಮಾಡುವುದುಂಟು. ಉದಾ :— ಧೊಡ್ಡ ಕೆಲಸ! ಘೊರೆಗಳು! ನಮ್ಮೂರ ಥೇರು! ಇತ್ಯಾದಿ. ಮಹಾಪ್ರಾಣಗಳು ಹಕಾರಗಳಾಗಿ ಪರಿಣಮಿಸುವುದುಂಟು. ಪ್ರಾಕೃತ ಭಾಷೆಗಳಲ್ಲಿ ಇದು ಸಾಧಾರಣವಾಗಿದೆ. ಉದಾ:— "..........ಸುಉಮಾರಕೇಸರಸಿಹಾಯಿಂ" (—ಶಾಕುಂತಲ ನಾಟಕ ಪ್ರಸ್ತಾವನೆ). ಇದರ ಸಂಸ್ಕೃತಚ್ಛಾಯೆ "ಸುಕುಮಾರ ಕೇಸರ ಶಿಖಾನಿ" ಹಾಗೆಯೇ ಪಕಾರವನ್ನು ಮಹಾಪ್ರಾಣವಾಗಿ ಉಜ್ವಲಗೊಳಿಸಿದ ಫಲವಾಗಿ ಕೊನೆಗೆ ಅದು ಹಕಾರವಾಗುವಂತಾಯಿತು. ಕನ್ನಡ ಕೈಪಿಡಿಯಲ್ಲಿ (ಪುಟ ೩೮೭) ಯೂ ಇದೇ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಈ ಊಹೆಗೆ ಆಧಾರವಾಗಿ ಯಾವುದೊಂದು ಪಕಾರವು ಹಕಾರವಾಗುವುದಕ್ಕೆ ಮೊದಲು ಸಹಜವಾಗಿ ಹೊಂದಬೇಕಾಗಿದ್ದ ಫಕಾರ ರೂಪದಲ್ಲಿ ಪ್ರಯೋಗಿಸಲ್ಪಟ್ಟ ಒಂದೇ ಒಂದು ಶಬ್ದದ ನಿದರ್ಶನವಾದರೂ ದೊರೆಯುವಂತೆ ತೋರುವುದಿಲ್ಲ. ಎಂದರೆ —'ಪೋಗು' ಎಂಬಿತ್ಯಾದಿ ಹಳೆಯ ಪ್ರಯೋಗಗಳು ದೊರಕುತ್ತವೆ; 'ಹೋಗು' ಎಂದು ಮೊದಲಾದ ಹೊಸ ಪ್ರಯೋಗಗಳೂ ಮಾಡಲ್ಪಡುತ್ತವೆ. ಇವುಗಳ ಮಧ್ಯವರ್ತಿಯಾಗಿದ್ದಿತೆಂದು ಹೇಳುವ 'ಫೋಗು' ಮೊದಲಾದುವು ಎಲ್ಲಿವೆ? ಅದು ದೊರಕದೆ ಈ ಊಹೆಗೆ ಬಲವಿಲ್ಲ. ಅಷ್ಟು ಮಾತ್ರವಲ್ಲ ನಾಗವರ್ಮನಿಗಿಂತಲೂ ಮೊದಲೇ ಅನುಕರಣ ಶಬ್ದಗಳಲ್ಲಿ ಔಜ್ವಲ್ಯಕ್ಕಾಗಿಯೇ

ನಿರ್ವಿವಾದವಾಗಿ ಉಂಟಾಗಿರುವ ಫಕಾರಗಳೂ ಇತರ ಮಹಾಪ್ರಾಣಗಳೂ ಇಂದಿಗೂ ಹಕಾರವಾಗದೆ ಹಾಗೆಯೇ ಉಳಿದಿವೆ. — ಉದಾ:— ಘುಣಘುಣ, ಫಳಫಳ, ಥಳಥಳ ಇತ್ಯಾದಿ. ಇವು ಮೊದಲೂ ಹೀಗೆಯೇ ಇದ್ದುವು; ಮಧ್ಯಕಾಲದಲ್ಲಿಯೂ ಹೀಗೆಯೇ ಇದ್ದುವು;[೪] ಈಗಲೂ ಹೀಗೆಯೇ ಇವೆ. **ಪಕ್ಕನೆ** ಎಂಬುದನ್ನು **'ಫಕ್ಕನೆ'** ಎಂದು ನಮ್ಮಲ್ಲಿ ಹಲವರು ಉಚ್ಚರಿಸುತ್ತಾರೆ, ಮಾತ್ರವಲ್ಲ ಕೆಲವರು ಬರೆಯುವುದೂ ಉಂಟು. ಆದರೆ ಅದು ಇನ್ನೂ 'ಹಕ್ಕನೆ' ಎಂದಾಗಲಿಲ್ಲ. ಆದುದರಿಂದ ಪ>ಫ>ಹ ಈ ಕ್ರಮದಲ್ಲಿ ಕನ್ನಡದ ಹಕಾರದ ಉತ್ಪತ್ತಿಯಾಯಿತೆನ್ನುವುದಕ್ಕೆ ಆಧಾರ ಕಾಣುವುದಿಲ್ಲ. ಪ್ರಾಕೃತ ಭಾಷೆಗಳಲ್ಲಾದರೂ ಮಹಾಪ್ರಾಣಗಳು ಹಕಾರವಾಗುವಂತೆ, ಅಲ್ಪಪ್ರಾಣ ಪಕಾರಗಳು ಎಷ್ಟರಮಟ್ಟಿಗೆ ಹಕಾರವಾಗುತ್ತವೆಂಬುದರ ಅರಿವು ನನಗಿಲ್ಲವಾದುದರಿಂದ ಆ ಕುರಿತು ನಾನೇನೂ ಹೇಳಲಾರದವನಾಗಿದ್ದೇನೆ. ಮರಾಠಿಯಲ್ಲಿ ಪಕಾರವು ಹಕಾರವಾಗುವುದುಂಟೆಂದು ಕಾಲ್ಡ್‌ವೆಲ್ಲರು ಹೇಳುತ್ತಾರೆ (ಪುಟ—೬೧). ಇದರ ಅರಿವಾದರೂ ನನಗಿಲ್ಲ. ಆದರೆ ಸಂಸ್ಕೃತದ ಹಕಾರವು ಪ್ರಾಕೃತದಲ್ಲಿ ಪಕಾರವಾಗುವುದಿರಬಹುದೆಂದು ನನಗೆ ತೋರುತ್ತದೆ. ಉದಾ:— ಸಂ. 'ಆಹ್ವಯತೇ' ಎಂಬುದು ಕೊಂಕಣಿಯಲ್ಲಿ 'ಆಪೈತ' ಎಂದಾಗಿದೆ. ಕನ್ನಡದಲ್ಲಿ ಬಾವಿ> ಬಾಮಿ ಇತ್ಯಾದಿಯಾಗಿ ವಕಾರವು ಮಕಾರವಾಗುವಂತೆ, ಮಕಾರವೂ —ಹೆಚ್ಚಾಗಿ ಪದಾಂತ್ಯದ ಮಕಾರ—ವಕಾರವಾಗುತ್ತದೆ. ಉದಾ:—ತಾಮ್— ತಾವು ಇತ್ಯಾದಿ. ಹೀಗೆಯೇ ಶಬ್ದಮಣಿದರ್ಪಣದ ೯ನೆಯ ಸೂತ್ರಭಾಗಕ್ಕೆ ಆಧಾರವಾಗಿ ಕೊಟ್ಟಿರುವ ಪದ್ಯಭಾಗವು ಇಂತಿದೆ:—

ಅವರ್ಣವಾದಕ್ಕೆಡೆಯಾಗದೊಳ್ಪಿಂ
[೫]ದವರ್ಣಕಾಮರ್ ಗುಣವೃದ್ಧಿಧಾಮರ್
ದಿವಾಕರರ್ ವ್ಯಾಕೃತಿನಾಮಿಗಳ್ವೋಲ್

(೧) ಒಳ್ಪಿಂದೆ+ಅವರ್ಣ ...... ......ಕಾಮರ್;
(೨) ಶ್ಲೇಷದಿಂದ —ಒಳ್ಪಿಂದಂ + ಅರ್ಣಕಾಮರ್ = ಒಳ್ಪಿಂದಮರ್ಣಕಾಮರ್ = ಒಳ್ಪಿಂದವರ್ಣಕಾಮರ್ —ಎಂದಾಯಿತು. ಹೀಗೆ ವ ಮಗಳು ವಿನಿಮಯಿಸಿದಂತೆ, (ತಾವರೆ=ತಾಮರೆ, ಆವೆ=ಆಮೆ, ಹೀಗೆ ಎರಡೆರಡಾದಂತೆ) ಮೊದಲು, ಆಹ್ವಯತೇ ಎಂಬಲ್ಲಿರುವಂತೆ ಓಷ್ಠಸಂಸ್ಪರ್ಶವಿರುವ ವಕಾರಕ್ಕೆ ಸಂನಿಹಿತವಾಗಿದ್ದ ಹಕಾರಗಳು ಪಕಾರವಾಗ

ತೊಡಗಿ, ಮತ್ತೆ ಕೇವಲ ಹಕಾರ ಸ್ಥಾನವನ್ನೂ ಪಕಾರವು ಆಕ್ರಮಿಸಿ, ಕೊನೆಗೆ ವಿನಿಮಯಿಸಿ, ಪಕಾರಸ್ಥಾನದಲ್ಲಿ ಹಕಾರವು ಬಂದಿರಬಹುದು ಎಂದು ಊಹಿಸಬಹುದು. ಆದರೆ ಇದು ಈಗ ಊಹಸ್ಥಿತಿಯಲ್ಲಿ ಮಾತ್ರ ಉಳಿಯಬೇಕಾದುದು. ಪ್ರಾಕೃತ ಭಾಷೆಗಳನ್ನು ಈ ದೃಷ್ಟಿಯಿಂದ ಸಂಶೋಧಿಸದೆ ನಿರ್ಣಯಕ್ಕೆ ಬರುವುದು ಅಶಾಸ್ತ್ರೀಯವಾದೀತು.

ಕೆಲವು ಕನ್ನಡ ನಿಪಾತ ಶಬ್ದಗಳಲ್ಲಿ, ಅವುಗಳ ಹುಟ್ಟಿನಿಂದಲೂ ಹಕಾರವಿತ್ತೆಂದು ತೋರುತ್ತದೆ. ಉದಾ :— ಹುಂ. ( ಹುಂ ಪೃಚ್ಛಾವಿತರ್ಕ+ ಅವಧಾರಣ+ನಿವಾರಣೇಷು. ಭಾಷಾಭೂಷಣ — ಸೂತ್ರ ೨೫೨ )

ಕತೆಯಂ ಕೇಳೆಲೆ ಕಂದ **ಹುಂ** ರಘುಜನೆಂಬಂ **ಹುಂ** ಸಕಾಂತಂ ವನ
ಸ್ಥಿತನಾದಂ ಗುರು ಪೇೞೆ ಹುಂ ದಶಶಿರಂ ಕೊಂಡೊಯ್ದನಾರಾಮನಾ
ಸತಿಯಂ ತಾನೆನೆ ಕೋಪಮಂಕುರಿಸಿ **ಹುಂ ಹುಂ** ಕೊಳ್ಳದುತ್ಕೋಪ-
ಹೂಂ
ಕೃತಿಯಂ ಮಾಡುತಮೌಂಡುಗಚ್ಚಿ ಕಿಸುಗಣ್ ಬಿಟ್ಟಚ್ಯುತಂ-
ರಂಜಿಕುಂ ॥

(ರುದ್ರಭಟ್ಟನ ಜಗನ್ನಾಥ ವಿಜಯ)

ಆಹಾ, ಓಹೋ ಇತ್ಯಾದಿಗಳಲ್ಲಿಯೂ ಈ ಹಕಾರವು ಆರಂಭದಿಂದಲೂ ಇದ್ದಿರಬೇಕೆಂಬುದರಲ್ಲಿ ಧ್ವನಿ ತತ್ವಜ್ಞರಿಗೆ ಸಂದೇಹವಿರಲಾರದು. ಆದರೆ ಇಂತಹ 'ಉದ್ಗಾರ' ಶಬ್ದಗಳು ಸಕಲ ಭಾಷೆಗಳಿಗೂ ಹೆಚ್ಚು ಕಡಮೆ ಸಾಮಾನ್ಯವಾಗಿರುವಂತೆ ತೋರುವುದರಿಂದ —ವೈಖರೀ ಭಾಷೆ ಮಾನವಜಾತಿಯಲ್ಲಿ ವಿಕಾಸಹೊಂದುವುದಕ್ಕೆ ಮೊದಲು, ಭಾವ ಪ್ರಕಟನಕ್ಕೆ ಪ್ರಧಾನ ಸಾಮಗ್ರಿಯಾಗಿದ್ದಿರಬೇಕಾದ ಮಧ್ಯಮಾ ಭಾಷೆಯ ಅವಶೇಷ[೬]ಗಳಾಗಿ ತೋರುವುದರಿಂದ, ಅವುಗಳಲ್ಲಿ ಕಂಡಮಾತ್ರಕ್ಕೆ ಯಾವುದೊಂದು ಭಾಷೆಯಲ್ಲಿ ಆಯಾ ವರ್ಣಗಳಿಗೆ ಸ್ವತಂತ್ರ ಸ್ಥಾನವುಂಟೆನ್ನತೊಡಗುವುದು ಸರಿಯಲ್ಲವೆಂದು ಹೇಳಬಹುದು.[೭] ಆದುದರಿಂದ ಸದ್ಯಕ್ಕೆ, ಹಕಾರವು ಮೂಲ ದ್ರಾವಿಡ ವರ್ಣವಲ್ಲ; ದ್ರಾವಿಡ ಭಾಷೆಗಳೊಳಗೆ ಪ್ರಾಕೃತ ಭಾಷೆಗಳ ನಿಕಟ ಸಂಪರ್ಕವಿದ್ದ ನುಡಿಯಾದುದರಿಂದ ಕನ್ನಡದಲ್ಲಿ ಅದು ಪ್ರವೇಶಗೊಂಡಿತೆಂದು ತೋರುತ್ತದೆ, ಎಂದು ಹೇಳುವುದೇ ಯುಕ್ತಿಯುಕ್ತವಾಗಿದೆ.

## ಸಕಾರ ವಿಚಾರ

ತಮಿಳಿನ ಚಾಕ್ಷುಷ ವರ್ಣಮಾಲೆಯಲ್ಲಿ ಮಾತ್ರವಲ್ಲ, ಶ್ರಾವಣ ವರ್ಣಮಾಲೆಯಲ್ಲಿಯೂ ಸಕಾರವಿಲ್ಲ. ಕನ್ನಡದಲ್ಲಿ ಸಕಾರವು ಸಾಧಾರಣವಾಗಿದೆ. ಕನ್ನಡದಲ್ಲಿ ಸಕಾರವಿರುವ ಶಬ್ದಸ್ಥಾನಗಳಲ್ಲಿ, ತಮಿಳು ಮಲಯಾಳಗಳಲ್ಲಿ, ತೆಲುಗಿನಲ್ಲಿಯೂ, ಹೆಚ್ಚಾಗಿ ಚಕಾರವಿರುತ್ತದೆ. ತುಳುವಿನಲ್ಲಿಯೂ ಕೆಲವೆಡೆಗಳಲ್ಲಿ ಚಕಾರವು ಬರುತ್ತದೆ. ಉದಾ :—

| ಕನ್ನಡ | ತಮಿಳು | ಮಲಯಾಳ | ತೆಲುಗು | ತುಳು |
|---|---|---|---|---|
| ಸಮೆ | ಚಮೈ | ಚಮೆ | — | — |
| ಸಾಲ್ | ಚಾಲ್ | ಚಾಲ್ | ಚಾಲು | ಸಾಲ್ |
| ಸದೆ | ಚದೈ | — | — | ಸದೆ, ತದೆ,– ತಜೆ,–ಹಜೆ. |
| ಸೀಗೆ(ಕಾಯಿ) | ಚೀಯಕ್ಕಾಯ್ | ಚೀಕ್ಕ | — | ಸೀಗೆ,ಚೀಗೆ. |
| ಸುಡು | ಚುಡು | ಚುಡು | ಚೂಡು | ಸುಡು |
| ಸುತ್ತಿಗೆ | ಚುತ್ತಿ | ಚುತ್ತಿ | — | ಸುತ್ತಿಯೆ |
| ಸುಮ್ಮನೆ | ಚುಮ್ಮಾ | ಚುಮ್ಮ | — | — |
| ಸೊಲ್ | ಚೊಲ್ | ಚೊಲ್ಲ್' | — | — |
| ಕೆಸರು | ಚೇಱು | — | — | ಚೇರ್' |
| ಸತ್ತನ್ | ಚತ್ತಾನ್ | — | — | ಸಯ್ತೆ. |
| | | | | –ತ. ಹ ಚ |

ಅಲ್ಲದೆ ಕನ್ನಡದಲ್ಲಿಯೇ ಕೆಲವು ಶಬ್ದಗಳಲ್ಲಿ ಸಕಾರ ಚಕಾರಗಳು ವಿನಿಮಯಿಸುವಂತೆ ಕಾಣಿಸಿಕೊಳ್ಳುವುದುಂಟು. ಉದಾ :— ಸೆಂಡು > ಚೆಂಡು. ಮತ್ತು 'ಇಸು' ಪ್ರತ್ಯಯವೇ ಅವಸ್ಥಾನ ವಿಶೇಷದಲ್ಲಿ 'ಚು' ಎಂದು ರೂಪಾಂತರ ಹೊಂದುವಂತೆ ತೋರುತ್ತದೆ. ಉದಾ :— ಅಲರ್ (=ತಾನಾಗಿ ಅರಳು), ಅಲರ್ಚು (=ಅರಳಿಸು); ಉದಿರ್— (=ಬೀಳು), ಉದಿರ್ಚು (=ಬೀಳಿಸು); 'ಕಡೆಗಣಿಸು=ಅವಜ್ಞಾಯಾಂ. (ಶ. ದರ್ಪಣ, ಧಾತುಪಾಠ) 'ಕಡೆಗಣ್ಚು=ಅವಜ್ಞಾಯಾಂ' (ಶ. ದರ್ಪಣ ಧಾತುಪಾಠ), ಅಲ್ಲದೆ ಸಮಾಸದಲ್ಲಿ ಸಕಾರವು ಉತ್ತರಪದದ ಪ್ರಥಮವರ್ಣವಾಗಿರುವಾಗಲೂ ಚಕಾರವಾಗಿ ಪರಿಣಮಿಸುವುದುಂಟು.

ಉದಾ :— ಒರ್+ಸೇರೆ=ಒಚ್ಚೇರೆ; ( ಪ್ರಯೋಗ :— ಒಚ್ಚೇರೆಗಣ್ಣಾಪೆಣ್ಣೊ-ಮುದ್ದಣ ) ಮುಚ್ಚಂಜೆ.

ಕಾಲ್ಡ್ವೆಲ್ಲರು ಹಕಾರವು ದ್ರಾವಿಡಧ್ವನಿಯಲ್ಲವೆಂದು ತೀರ್ಮಾನಿಸಿದಷ್ಟು ಖಂಡಿತೋಕ್ತಿಯಲ್ಲಿ ಅಲ್ಲದಿದ್ದರೂ, ಸಕಾರವೂ ಸಂಸ್ಕೃತಾದಿ ಭಾಷೆಗಳ ಸಂಪರ್ಕದಿಂದಲೇ ಕನ್ನಡ ಮೊದಲಾದ ದ್ರಾವಿಡ ಭಾಷೆಗಳಲ್ಲಿ ಸೇರಿಕೊಂಡಿತು ಎಂದೇ ಹೇಳಿರುವಂತಿದೆ ( ಪುಟ ೩೧ ). ಆದುದರಿಂದ ಕನ್ನಡದಲ್ಲಿಯೂ ಒಂದಾನೊಂದು ಕಾಲದಲ್ಲಿ ಸಕಾರವಿದ್ದಿರಲಾರದು; ಮತ್ತೆ — " ಈಸೀಸಿಚುಂಬಿಯಾಯಿಂ......................" ( ಶಾಕುಂತಲ ಪ್ರಸ್ತಾವನೆ ) ಎಂಬಂತೆ ಸಕಾರಬಹುಲವಾಗಿರುವ ಪ್ರಾಕೃತದ ಸಂಸರ್ಗದಿಂದ, ಪಕಾರಸ್ಥಾನದಲ್ಲಿ ಹಕಾರ ಬಂದಂತೆಯೇ ಚಕಾರಸ್ಥಾನದಲ್ಲಿ ಸಕಾರವು ಸೇರಿಕೊಂಡಿರಬೇಕು —ಎಂದು ತೀರ್ಮಾನಿಸುವುದು ಸುಲಭವಾಗಿದೆ.

ಆದರೆ ಯಾವುದೊಂದು ರೂಪವು ಅಧಿಕಸಂಖ್ಯೆಯ ಭಾಷೆಗಳಲ್ಲಿ ಗೋಚರಿಸುತ್ತದೆಂಬ ಒಂದೇ ಕಾರಣದಿಂದ, ಅದು ಮೂಲಸ್ಥಿತಿದರ್ಶಕವೆಂದಾಗಬೇಕಾಗಿಲ್ಲ. ದೃಷ್ಟಾಂತಕ್ಕಾಗಿ, ಱಕಾರವನ್ನು ತೆಗೆದುಕೊಳ್ಳೋಣ ಇಂದು ದ್ರಾವಿಡ ಭಾಷೆಗಳೊಳಗೆ ಹೆಚ್ಚಿನವುಗಳಲ್ಲಿ ಅದು ಲುಪ್ತವಾಗಿದೆ. ಸಾಮಾನ್ಯವಾಗಿ, ಕನ್ನಡದಲ್ಲಿ ಅದು ಳಕಾರವಾಗಿದೆ; ತೆಲುಗಿನಲ್ಲಿ ಡಕಾರವಾಗಿದೆ; ತುಳುವಿನಲ್ಲಿ ರಕಾರವಾಗಿದೆ. ಮಲಯಾಳದಲ್ಲಿ ಸ್ವಲ್ಪಮಟ್ಟಿಗೆ ಉಳಿದಿದೆ; ಕೆಲವೆಡೆಗಳಲ್ಲಿ ಯಕಾರವಾಗಿದೆ. ದ್ರಾವಿಡ ಭಾಷೆಗಳೊಳಗೆ ದ್ರಾವಿಡತ್ವವು ಅತಿಹೆಚ್ಚಾಗಿದೆಯೆಂದು ವಿದ್ವಾಂಸರು ಮನ್ನಿಸುವ ತಮಿಳಲ್ಲಿಯೂ ಅದು ಸರ್ವತ್ರ ಉಚ್ಚಾರದಲ್ಲಿ ಕೇಳಬರುವುದಿಲ್ಲ. ಕಾಲ್ಡ್ವೆಲ್ಲರೇ ಹೇಳುತ್ತಾರೆ – " ತಮಿಳುನಾಡಿನ ದಕ್ಷಿಣ ಭಾಗದಲ್ಲಿ ( ಇದು ಪಾಂಡ್ಯದೇಶ; ತಮಿಳಿನ ತಿರುಳು ! – ಅನುವಾದಕ ) ಭೂರಿ ಜನತೆ ಅದನ್ನು ಳಕಾರವಾಗಿಯೇ ಉಚ್ಚರಿಸುತ್ತದೆ. ಮದ್ರಾಸಿನ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದಲ್ಲಿ ಅದು ಯಕಾರದಂತೆ ಉಚ್ಚರಿಸಲ್ಪಡುತ್ತದೆ. ತಂಜಾವೂರು ಪುದುಚೇರಿಗಳ ನಡುವೆ ಷ ಎಂಬಂತೆ ಕಿವಿಗೆ ಬೀಳುತ್ತದೆ " ( ಪುಟ—೨೮ ). ಹೀಗೆ ಇಂದು ಱಕಾರವು ದ್ರಾವಿಡ ಭಾಷೆಗಳಲ್ಲಿ 'ಕ್ವಾಚಿತ್ಕ' ವೆನ್ನಿಸಿರುವುದಾದರೂ ಮೂಲ ದ್ರಾವಿಡ

ವರ್ಣಗಳೊಳಗೆ ಅದೂ ಒಂದು ಎಂಬುದರಲ್ಲಿ ವಿದ್ವಾಂಸರೊಳಗೆ ಮತ ಭೇದವಿಲ್ಲ; ಆದುದರಿಂದ ಯಾವುದೊಂದು ವರ್ಣವು ಕೆಲವೇ ಅಥವಾ ಒಂದೇ ನುಡಿಯಲ್ಲಿರುವುದೆಂಬುದರಿಂದ, ಮತ್ತು ಅದು ಬೇರೆ ನುಡಿಗಳಲ್ಲಿ ಬೇರೊಂದು ರೂಪದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದೆಂಬುದರಿಂದ, ಮೂಲ ಭಾಷೆಯಲ್ಲಿ ಅದು ಇರಬಾರದೆಂದಿಲ್ಲ.

ಕನ್ನಡದಲ್ಲಿ ಸಕಾರವಿರುವಲ್ಲಿ, ಇತರ ದ್ರಾವಿಡ ಭಾಷೆಗಳಲ್ಲಿ ಚಕಾರವಿರುವುದಲ್ಲದೆ, ಕೆಲವೆಡೆ ತಕಾರವೂ ಇನ್ನು ಕೆಲವೆಡೆ ದಕಾರವೂ, ಮತ್ತೆ ಕೆಲವೆಡೆ ಯಕಾರವೂ ಇರುತ್ತದೆ. ಜಕಾರವಾಗಲಿ, ಶಕಾರವಾಗಲಿ ಆ ಸ್ಥಾನದಲ್ಲಿ ಕಾಣುವುದೂ ಉಂಟು.

ಉದಾ :—

| ಕನ್ನಡ | ತಮಿಳು | ಮಲಯಾಳ | ತುಳು[೧೦] |
|---|---|---|---|
| ಸೋಗೆ(=ನವಿಲು) | ತೋಗೆ | — | — |
| ಸುಲಿ | — | ತೊಲಿ | ತೋಲ್ಲು |
| ಪೆಸರ್ | ಪೆಯರ್ | ಪೇರ್ | ಪುದರ್', ಪುದಾರ್' |
| ಪಸಿ | ಪೈ (=ಪಯ್) | ಪಯಿ, ಪೈ | ಪಜಿ |
| ಎಸಳ್ | ಇದಳ್ | — | ಎಸಳ್', ಎಸಲ್' |
| ಬಸಿಱು | ವಯಿಱು | ವಯರು | ಬಂಜಿ |
| ಮೊಸಳೆ | ಮುದಲೈ | ಮುದಲೆ | ಮುದಳೆ, ಮುದಲೆ |
| ನೊಸಲ್ | ನುದಲ್ | ನುದಲ್ | ನೆಸಲ್' |
| ಉಸಿರ್ | ಉಯಿರ್ | ಉಯಿರ್ | ಉಸ್'ಲ್' |
| ಬಿಸಿಲ್ | ವೆಯಿಲ್, ವೆಯ್ಯಿಲ್ | ವೆಯಿಲ್ | — |
| ಕನಸು | ಕನವು | — | ಕನ |
| ನನಸು | ನನವು | — | — |
| [೧೧]ಎಸಡಿ | ನಂಡು | ಞಂಡ್' | ಡೆಂಜಿ |

[ ಕನ್ನಡದಲ್ಲಿ —'ಇಸು' ಪ್ರತ್ಯಯವಿರುವ ಸ್ಥಾನಗಳಲ್ಲಿ ತೆಲುಗಿನ ಬರಹದಲ್ಲಿ 'ಇಂಚು' ಎಂಬುದಿರುತ್ತದೆ. ಇದರ ಉಚ್ಚಾರಮಾತ್ರ 'ಇಂತ್ಸು' —ಎಂಬಂತಿರುತ್ತದೆ. ]

ಕನ್ನಡದಲ್ಲಿ ಈ ಸಕಾರವಿರುವಲ್ಲೆಲ್ಲ, ಇತರ ನುಡಿಗಳಲ್ಲಿ ಚಕಾರವೇ ತಪ್ಪದೆ ಇರುತ್ತಿದ್ದ ಪಕ್ಷದಲ್ಲಿ, ಈ **ಸಕಾರವು** ಜನ್ಯ— ಆ **ಚಕಾರವೇ** ಜನಕ ಎಂದು ಹೇಳುವುದಕ್ಕೆ ಬಲವಿರಬಹುದಿತ್ತು. ಆದರೆ ವಸ್ತುಸ್ಥಿತಿ ಹಾಗಿಲ್ಲದೆ, ಕನ್ನಡದಲ್ಲಿ ಕ್ರಮದಂತೆ ಸಕಾರವೊಂದೇ ಇರುವೆಡೆಗಳಲ್ಲಿ, ಬೇರೆ ನುಡಿಗಳಲ್ಲಿ ವಿಭಿನ್ನ ಧ್ವನಿಗಳು ಕಾಣುವುದರಿಂದ, ಏಕರೂಪವಾಗಿರುವ ಸಕಾರವೇ ಜನಕವೆಂದೂ, ಉಳಿದುವೆಲ್ಲ ಜನ್ಯಗಳೆಂದೂ ಹೇಳಲು ಆಸ್ಪದವಾದಂತಿದೆ. ಕಾಲ್ಡ್‌ವೆಲ್ಲರಾದರೂ ಪೆಯರ್, ಪೇರ್ —ಎಂಬವುಗಳಿಗೆ ಕನ್ನಡದಲ್ಲಿರುವ **'ಪೆಸರ್'** ಮೂಲವಾಗಿರಬೇಕೆಂದೇ ಹೇಳಿದ್ದಾರೆ; ಆದರೆ ಅವರು ಅವನ್ನು **'ಪೆಶರ್'** ಎಂಬಂತೆ, ಎಂದರೆ ತಮಿಳಿನ ಅದೊಂದು ಚಕಾರ ವಿಶೇಷ ರೂಪದಲ್ಲಿ ಬರೆದಿದ್ದಾರೆ ( ಪುಟ ೫೦ ). ಹಳೆಗನ್ನಡದಲ್ಲಿ 'ಎಸಡಿ' ಎಂಬ ರೂಪದಲ್ಲಿದ್ದ ಶಬ್ದದ, ಪಂಚ ದ್ರಾವಿಡ ಭಾಷಾರೂಪಗಳನ್ನು ಪರಿಶೀಲಿಸಿದಲ್ಲಿ, ಮೂಲ ಸಕಾರವು ಅಲ್ಲಿ ಕ್ರಮವಾಗಿ ಹೇಗೆಲ್ಲ ವಿಕಾರ ಹೊಂದಿರಬಹುದೆಂಬುದು ಅವಗತವಾದೀತು.

ಕನ್ನಡದಲ್ಲಿಯೂ ಸಕಾರ ಚಕಾರಗಳು ಒಂದೇ ಸ್ಥಾನದಲ್ಲಿ ಕಾಣಿಸಿಕೊಳ್ಳುವುದಕ್ಕೆ—ಪ್ರತಿರೂಪವಾಗಿರುವುದಕ್ಕೆ ಹಿಂದೆಯೇ ನಿದರ್ಶನಗಳನ್ನು ಕೊಟ್ಟಿದ್ದೇನೆ. ಅಲ್ಲೆಲ್ಲ ಸಕಾರವೇ ಪೂರ್ವರೂಪವೆಂದೂ ಚಕಾರವು ಅನಂತರ ರೂಪವೆಂದೂ ತೋರುವುದು. ಹಳೆಗನ್ನಡದಲ್ಲಿದ್ದ 'ಸೆಂಡು' ( ಉದಾ:— ಪೊಡೆಸೆಂಡನಾಡಿದಳ್ ) ಹೊಸಗನ್ನಡದಲ್ಲಿ 'ಚೆಂಡು', ಎಂದಾಗಿದೆ. ನಮ್ಮ ಸಾಧಿತ ಧಾತುಗಳಲ್ಲಿರುವ ಇಸು—ಸು—ಚು ಗಳನ್ನು ಪರೀಕ್ಷಿಸಿದರೂ ಸಕಾರವೇ ಮೊದಲಿನದೆಂದು ತೋರುತ್ತದೆ. ಕಾಲ್ಡ್‌ವೆಲ್ಲರ ಅಭಿಪ್ರಾಯದಂತೆ ದ್ರಾವಿಡ ಭಾಷೆಗಳಲ್ಲಿ ಪ್ರೇರಣಾರ್ಥಕ ಪ್ರತ್ಯಯವು 'ಇ' ಎಂಬುದೇ ಆಗಿದೆ ( ಪುಟ ೪೪೯ ). ಅದನ್ನವಲಂಬಿಸಿದರೂ,[೧೨] ಕನ್ನಡದಲ್ಲಿ 'ಚು' ಅನಂತರರೂಪವೆಂದೂ, 'ಸು' ಎಂಬುದೇ ಮೊದಲಿನದೆಂದೂ ಹೇಳಬೇಕಾಗುತ್ತದೆ. ಏಕೆಂದರೆ, ಇಕಾರವು 'ಸು' ಎಂಬುದಕ್ಕೆ ಅಂಟಿಕೊಂಡಿರುವುದಲ್ಲದೆ 'ಚು' ವಿಗೆ ಅಲ್ಲ.[೧೩]

ಕನ್ನಡ ಶಬ್ದಗಳಲ್ಲಿಯೂ **ಸಕಾರಕ್ಕೆ ಚಕಾರವಲ್ಲದೆ** ಇತರವರ್ಣ

ಗಳೂ ಪ್ರತಿರೂಪವಾಗಿರುವುದುಂಟು. 'ಬಯಲ್' ಎಂಬೀ ಶಬ್ದಕ್ಕೆ ಮೈದಾನು, ಶೂನ್ಯಪ್ರದೇಶ, ಶೂನ್ಯ —ಎಂಬರ್ಥಗಳೇ ಬಹುರೂಢ ವಾಗಿರುವುವಾದರೂ ಇದಕ್ಕೆ ಇತರ ಭಾಷೆಗಳಲ್ಲಿ 'ಹಸುರು ಹೊಲ' 'ಪಯಿರು ತುಂಬಿದ ಹೊಲ' —ಎಂಬರ್ಥವಿದೆ. ಉದಾ:—ತುಳುವಿನಲ್ಲಿ ಬಯಿಲ್' —ಎಂದರೆ ಬತ್ತದ ಗದ್ದೆಗಳ ಬಯಲು; ಅದರಲ್ಲಿ ವರ್ಷಕ್ಕೆ ಎರಡು ಅಥವಾ ಮೂರು ಬೆಳೆಯಾಗುವ, ಪರಿಣಾಮದಲ್ಲಿ ವರ್ಷದ ಹೆಚ್ಚಿನ ಭಾಗದಲ್ಲಿ ಹಸುರಾಗಿಯೇ ಇರುವ ಗದ್ದೆಗೆ 'ಬಯಿಲ್' ಕಂಡೊ' ಎಂದು ಹೆಸರು. (ಕಂಡ, ಕಂಡೊ=ಗದ್ದೆ. ಇದು 'ಖಂಡ' ಎಂಬುದರ ಅಪಭ್ರಂಶ.) ತಮಿಳರೂ 'ವಯಲ್' ಎಂಬುದನ್ನು ಇದೇ ಅರ್ಥದಲ್ಲಿ ಬಳಸುವರೆಂದು ಸಂಭಾಷಣೆಯಿಂದ ತಿಳಿದಿರುತ್ತೇನೆ. ಕನ್ನಡದಲ್ಲಿಯೂ 'ಬಯಲ್ದಾವರೆ' —ಎಂಬಲ್ಲಿ ಬಯಲ್ ಎಂಬುದಕ್ಕೆ ಇದೇ ಅರ್ಥವು ತೋರುತ್ತದೆ.[೧೪] ಈ 'ಬಯಲ್' ಎಂಬುದರ ಮೂಲವೇನು? ಪಸಲೆ—ಹಸಲೆ ಎಂದರೆ ಹಸುರು ಹುಲ್ಲಿನ ವಿಸರವೆಂದರ್ಥ. ತುಳುವಿನಲ್ಲಿ ಪಜಿರ್' —ಎಂದರೆ ಹಸಿ ಹುಲ್ಲು ಎಂದರ್ಥ. ಹಾಗಾದರೆ (ಪೈರು=) ಪಯಿರು ಎಂಬುದರ ಮೂಲವೇನು? —ಇವೆಲ್ಲವೂ **'ಪಸಿರ್'** —ಎಂದರೆ ಹಸುರು ಎಂಬುದರ ಬೇರೆ ಬೇರೆ ರೂಪಗಳೆಂದು ಹೇಳದೆ ನಿರ್ವಾಹವಿಲ್ಲ. ಆರಂಭದ ಜನರು ಹುಲ್ಲು ಮೊದಲಾದುವುಗಳಲ್ಲೇ ಹಸುರು ಬಣ್ಣವನ್ನು ಕಂಡು ತಿಳಿದುದೆಂಬುದರಲ್ಲಿ ಸಂದೇಹವುಂಟೆ?

ಕನ್ನಡದಲ್ಲಿ ಬೆಂಕಿ ಎಂಬರ್ಥವನ್ನು ಕೊಡುವ 'ಕಿಚ್ಚು' ಎಂಬ ಶಬ್ದವು ಕಿಸು (=ಕೆಂಪು) ಎಂಬ ಶಬ್ದದಿಂದ ಹುಟ್ಟಿರಬಹುದೆಂದು ಊಹಿಸಿದರೆ ಪ್ರಾಯಃ ತಪ್ಪಾಗಲಾರದು. ಇಲ್ಲಿಯೂ ನಮಗೆ ಸಕಾರವೇ ಪೂರ್ವತರವೆಂದು ಕಂಡುಬರುವುದು. ಏಕೆಂದರೆ ಆದಿಕಾಲದವರು ಬೆಂಕಿಯನ್ನು ಕಂಡುಕೊಳ್ಳುವುದಕ್ಕೆ ಮೊದಲೇ, ಸಂಜೆಗೆಂಪನ್ನು—ಎಷ್ಟೋ ಕೆಂಪು ಬಣ್ಣದ ಹೂಗಳನ್ನೂ—ನೋಡಿ ಹೆಸರಿಟ್ಟಾಗಿದ್ದಿರಬೇಕು. ಆದರೆ ನಮ್ಮ ವೈಯಾಕರಣರು ಕೆಚ್ಚನೆ, ಬೆಚ್ಚನೆ, ಪಚ್ಚನೆ —ಎಂಬ ಶಬ್ದಗಳಿಂದ, ಅನುಕ್ರಮವಾಗಿ ಕಿಸು, ಬಿಸು, ನಿಡು —ಇತ್ಯಾದಿ ರೂಪಗಳು ಹುಟ್ಟಿದುವೆಂದು ಹೇಳುತ್ತಾರಲ್ಲ? ಎಂದರೆ —ಅವರು ಬೆಳ್, ಕರ್, ಮೆಲ್ ಕಡು, ನಿಡು —ಇತ್ಯಾದಿ ರೂಪಗಳೆಲ್ಲ ಜನ್ಯಗಳೆಂದೂ ಬಿಳಿದು, ಕರಿದು, ಮೆಲ್ಲಿತು, ಕಡಿದು, ನಿಡಿದು —ಎಂಬಿತ್ಯಾದಿಗಳು ಜನಕರೂಪಗಳೆಂದೂ

ಹೇಳಿರುವರಷ್ಟೆ? ಆದರೆ ಈ ರೂಪಗಳಲ್ಲಿ ತು–ದು ಎಂಬ ನಪುಂಸಕ ಪ್ರತ್ಯಯಗಳು ಸ್ಪಷ್ಟವಾಗಿ ಗೋಚರಿಸುವುದರಿಂದ, ಭಾಷಾ ವಿಜ್ಞಾನ ದೃಷ್ಟಿಯಿಂದ ಬೆಳ್, ಮೆಲ್, —ಇತ್ಯಾದಿಗಳೇ ಮೂಲರೂಪಗಳೆಂದು ಆಧುನಿಕಭಾಷಾಮೀಮಾಂಸಕರೆಲ್ಲ: ಏಕಕಂಠತೆಯಿಂದ ಹೇಳುತ್ತಾರೆ. ಹಾಗೆಯೇ ಕೆಚ್ಚನೆ ಪಚ್ಚನೆಗಳಲ್ಲಿಯೂ ನಮಗೆ 'ಅನೆ' ಪ್ರತ್ಯಯಾಂತ ವಾದ, ಸಾಧಿತಾವ್ಯಯ ರೂಪಗಳೇ–ಮೂಲಾವ್ಯಯವಲ್ಲ–ಕಾಣುವವಲ್ಲದೆ, ಗುಣವಾಚಕ ವಿಶೇಷಣ (adjective) ರೂಪಗಳಲ್ಲ. ಅವುಗಳಿಗೆ—ಪಸಿರ್ ಅಥವಾ ಪಸುರ್, ಕಿಸುರ್೧೫ ಎಂಬ ನಿತ್ಯನಪುಂಸಕವಾದ, ಭಾವವೂ ಆಗುವ, ರೂಪಗಳು ಹೊರತು 'ಬಿಳಿದು' ಇತ್ಯಾದಿಗಳಂತೆ —'ಬಿಳಿಯಂ, ಬಿಳಿಯಳ್, ಬಿಳಿದು' ಎಂಬಂತೆ ವಿಶೇಷ್ಯಾಧೀನ ಲಿಂಗರೂಪಗಳು ಇಲ್ಲ ದಿರುವುದರಿಂದಲೂ, ಆ ಕಿಸು--ಬಿಸು---ಪಸುಗಳಿಗೆ ಅನುಕ್ರಮವಾಗಿ ಕೆಂ--ಬೆಂ--ಪಂ ಎಂಬ ಬೇರೆ ರೂಪಗಳೂ ಕಾಣುವುದರಿಂದಲೂ, ವೈಯಾಕರಣರು ಅವುಗಳಿಗೆ ಅನ್ಯತ್ರ ಮೂಲವನ್ನು ಹುಡುಕಲಾಗಿ ಸಮಂಜಸವಾದ ಬೇರಾವ ನಾಮರೂಪವೂ ದೊರಕದೆ 'ಕೆಚ್ಚನೆ ಬೆಚ್ಚನೆ ಪಚ್ಚನೆ' ಗಳೆಂಬ ಅವ್ಯಯಗಳನ್ನೇ ವ್ಯಾಕರಣ ವಿಧಾನ ಪ್ರಯೋಜನಕ್ಕಾಗಿ ಮೂಲರೂಪಗಳೆಂದು ವ್ಯವಹರಿಸಿದರು ಹೊರತು; 'ಅನೆ' ಪ್ರತ್ಯಯಾಂತ ವಾದ ಅವ್ಯಯಗಳನ್ನೆಷ್ಟೋ ( ....ಉದಾ: ಮೆಲ್ಲನೆ, ನೆಟ್ಟನೆ ) ವಿಮರ್ಶಿಸಿ ಅವು ಸಾಧಿತ ಶಬ್ದಗಳೆಂದೇ ನಿರ್ಣಯಿಸಿದ ಅವರಿಗೆ೧೬ ಕೆಚ್ಚನೆ ಬೆಚ್ಚನೆ ಪಚ್ಚನೆಗಳು 'ನಿರುಕ್ತ' ದೃಷ್ಟಿಯಿಂದ ಮೂಲರೂಪಗಳೆಂಬ ಭ್ರಮೆ ಯುಂಟಾಗಿರಲಾರದು. ನಮ್ಮ ವೈಯಾಕರಣರು ಮೂಲವೆಂದು ಯಾವು ದನ್ನಾದರೂ ಹೇಳಿದಲ್ಲಿ ಅದು ಯಾವ ವಿವಕ್ಷೆಯಿಂದ, ಎಂದು ಪರಾಮ ರ್ಶಿಸದೆ, ನಾವು 'ಅವಸರ'ದ ನಿರ್ಣಯಗಳನ್ನು ಮಾಡಿಬಿಡಬಾರದು. ಇರಲಿ. 'ಒಂದು ತರದ ದ್ವಿರುಕ್ತಿ' ಬರುವಾಗ 'ಪಚ್ಚಪಸಿ' —ಎಂಬ ರೂಪವೂ ಇದೆ. ಉದಾ :—

> ಅಳವಱಿಯದೆಗ್ಗು ಬಳವಳ ।
> ಬಳೆವಿನೆಗಂ ಪಚ್ಚಪಸಿಯ ತುಱುಕಾಱಂಗ ॥
> ಗ್ಗಳಿಕೆಯನೆ ಮಾಡಿ ನೀನುಂ ।
> ಪಳಿ(ಱಿ ?)ಯುಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್

—ವಿಕ್ರ. ವಿ. ೬-೪೬

ಇಲ್ಲಿ 'ಪಸಿ' ಎಂಬುದು ದ್ವಿರುಕ್ತವಾಗುವಾಗ 'ಪಚ್ಚ' ಎಂಬ ರೂಪವು ಬಂದುದೆಂಬುದು ಸ್ಪಷ್ಟ. ಹಾಗಾದರೆ 'ಪಸಿ'ಯೇ ಪೂರ್ವತರವೆಂದಾಯಿತು. 'ಕೃ' ಎಂಬ ಸಂಸ್ಕೃತ ಧಾತುವಿನ 'ಚಕಾರ' ಎಂಬ 'ಲಿಟ್' ಕ್ರಿಯಾರೂಪದಲ್ಲಿ, ಕಕಾರವು ದ್ವಿರುಕ್ತವಾಗುವಾಗ ಚಕಾರವಾದುದರಿಂದ, ಆ ಚಕಾರಕ್ಕೆ ಕಕಾರವೇ ಮೂಲವೆಂದು ವ್ಯವಹರಿಸುವುದಾದರೆ, 'ಪಚ್ಚ-ಪಸಿಯ' ಎಂಬ ಪ್ರಯೋಗದ 'ಪಚ್ಚ' ಕ್ಕೆ 'ಪಸಿ'ಯೇ ಮೂಲವೆನ್ನಬೇಡವೆ? ಆದುದರಿಂದ, ಶಬ್ದವಿಜ್ಞಾನ ದೃಷ್ಟಿಯಿಂದ ಕೆಚ್ಚನೆ ಬೆಚ್ಚನೆ ಪಚ್ಚನೆಗಳು ಮೂಲರೂಪಗಳಲ್ಲ; ಅವುಗಳಿಗೆ ಕಿಸು—ಬಿಸು—ಪಸುಗಳೇ ಮೂಲ. ಹಾಗೆಯೇ ಕಿಚ್ಚು ಎಂಬುದಕ್ಕೆ 'ಕಿಸು' ಮೂಲವಾಗಿರಲೂಬಹುದು.೧೭

ಹೊಸಗನ್ನಡದಲ್ಲಿ **ಕಹಿ** ಎಂದೆನ್ನುವ ಶಬ್ದವು ಹಳೆಗನ್ನಡದಲ್ಲಿ ಕಯ್, ಕಯ್ಪು ಎಂಬ ಎರಡು ರೂಪಗಳಲ್ಲಿ ಕಾಣುತ್ತದೆ. ಇವುಗಳೊಳಗೆ ಮೊದಲನೆಯದು ವಿಶೇಷಣವಾಗಿಯೂ, ಎರಡನೆಯದು ಭಾವರೂಪವಾಗಿಯೂ, ರೂಢಿಗೆ ಬಂದಿರಬಹುದಾದರೂ, ರಸವಾಚಕ ಹಾಗೂ ವರ್ಣವಾಚಕಗಳಾದ ಕೆಲವು ಶಬ್ದಗಳು ಅನೇಕ ಭಾಷೆಗಳಲ್ಲಿ, ದ್ರಾವಿಡ ಭಾಷೆಗಳಲ್ಲಂತೂ ವಿಶೇಷವಾಗಿ, ವಿಶೇಷಣ-ಭಾವ ಎಂಬ ಅರ್ಥಭೇದವಿಲ್ಲದೆ ಏಕರೂಪದಲ್ಲೇ ಪ್ರಯುಕ್ತವಾಗುವ ಕಾರಣ, ಆ ಎರಡನೆಯ ರೂಪಕ್ಕೂ ವಿಶೇಷಣಾರ್ಥದಲ್ಲಿ ಪ್ರಯೋಗ ಉಂಟಾಗಿದೆ. ಉದಾ:— ಕಯ್‌ಬೇವು, ಕಯ್‌ಸೋರೆ; "ಕಯ್ಪಿನಸೊರೆಯ ಕುಡಿಯೇಂ ಮಿಡಿಯೇಂ". ತುಳುವಿನಲ್ಲಿ ಈ ಎರಡು ಅರ್ಥಗಳಲ್ಲಿಯೂ 'ಕಯ್ಪೆ' ಎಂಬೊಂದೇ ರೂಪವಿದೆ. ತಮಿಳರು ಇದನ್ನು 'ಕಶಪ್ಪು' ಎಂದು ಹೇಳುತ್ತಾರೆ.೧೮ ಬೇರೆಡೆಯಲ್ಲಿ ಕನ್ನಡದಲ್ಲಿ ಸಕಾರವಿರುವಾಗ, ತಮಿಳಲ್ಲಿ ಯಕಾರವಿರುತ್ತದೆ. ಇಲ್ಲಿ ತದ್ವಿಪರೀತವಾಗಿದೆ. ಆದರೆ ಕನ್ನಡದಲ್ಲಿಯೂ ಒಮ್ಮೆ ಇಲ್ಲಿ ಸಕಾರವಿದ್ದಿರಬೇಕೆಂಬುದಕ್ಕೆ ಆಧಾರ ದೊರಕುತ್ತದೆ. ವಿಷತಿಂದುಕ (Nux Vomica) ಎಂಬ ಬೇರಿಂದೆಲೆತನಕ ಕಹಿಯಾಗಿ ವಿಷವಾಗಿರುವ ಆ ಮರವನ್ನು ಕನ್ನಡನಲ್ಲಿ ಕಾಸರ, ಕಾಸರಕ, ಕಾಸರ್ಕ— ಎಂಬ ಹೆಸರುಗಳಲ್ಲಿ ಕರೆಯುತ್ತಾರೆ. ತುಳುವಿನಲ್ಲಿ ಇದು 'ಕಾಯೆರ್' ಎಂದಿದೆ. ಹಾಗಾದರೆ ಕನ್ನಡದ ಕಯ್ —ಎಂಬುದಕ್ಕೆ ಸಕಾರ ವಿಶಿಷ್ಟವಾಗಿದ್ದ ಯಾವುದೋ ಒಂದು ರೂಪವೇ (ಪ್ರಾಯಃ **ಕಸು**) ಮೂಲ

ವೆಂದಾಯಿತು. ಇದರಿಂದ ಇಲ್ಲಿಯೂ ಸಕಾರವೇ ಯಕಾರಕ್ಕಿಂತ ಪೂರ್ವ ತರ ರೂಪವೆಂದು ಸಿದ್ಧವಾದಂತಾಯಿತು.

ತುಳುವಿನಲ್ಲಿ ಬೆಂಕಿಗೆ 'ಸೂ' ಎಂದು ಏಕಾಕ್ಷರ ರೂಪವಾದ ಹೆಸರು. ಕನ್ನಡದಲ್ಲಿಯೂ ದಹನಾರ್ಥಕವಾದ ಧಾತು 'ಸುಡು.' ಈ ಎರಡರೊಳಗೆ ಜನಕ—ಜನ್ಯ ಸಂಬಂಧವಿದೆಯೆಂದು ಹೇಳಬಹುದು. ತಮಿಳು ಮಲಯಾಳಗಳಲ್ಲಿ 'ತೀ' ಎಂದರೆ ಬೆಂಕಿ. ಕನ್ನಡದಲ್ಲಿ 'ಸುಟ್ಟನ್' ಎಂದಿದ್ದರೆ ಅದು ತಮಿಳಿನಲ್ಲಿ 'ಶುಟ್ಟಾನ್—ಚುಟ್ಟಾನ್' ಎಂದಾಗುತ್ತದೆ. ಇಲ್ಲಿ ಯಾವುದು ಮೂಲ ರೂಪವಾಗಿರಬಹುದು? **ತೀ**ಯೋ **ಸೂ**ವೋ? ಒಮ್ಮೆ ತಕಾರವಾಗಿಯೋ ಇನ್ನೊಮ್ಮೆ ಶಕಾರವಾಗಿಯೋ ಚಕಾರವಾಗಿಯೊ ಪರಿಣಮಿಸುವ ರೂಪವೇ ಜನ್ಯ; ಏಕರೂಪವಾಗಿದ್ದುದೇ ಜನಕ ಎಂದು ಹೇಳಬೇಡವೆ? ಮಾತ್ರವಲ್ಲ; ಜನರು ಬೆಂಕಿಯನ್ನು ಮುಟ್ಟಿ ಸುಡಿಸಿ ಕೊಂಡಾಗ, ನಾಲಗೆಯನ್ನು ಹಲ್ಲಿನ ಸಾಲುಗಳ ಎಡೆಯಲ್ಲಿಟ್ಟು ಉಸಿರನ್ನು ಒಳಗೆಳೆದುಕೊಳ್ಳುತ್ತಾರೆ. ಆಗ ಹುಟ್ಟುವುದು 'ಸೂ' ಎಂಬುದಕ್ಕೆ ಪ್ರತಿಬಿಂಬ ರೂಪವಾಗಿರುವ ಅದೊಂದು ಧ್ವನಿ. ಆದುದರಿಂದ ಭಾಷೋತ್ಪತ್ತಿಯ ಸೂಕ್ಷ್ಮ ವಿಚಾರ ದೃಷ್ಟಿಯಿಂದಲೂ 'ಸೂ'ವೇ 'ತೀ'ಯ ಮೂಲ ರೂಪವೆನ್ನಬೇಕಾಗುತ್ತದೆ; ಕನ್ನಡ ತುಳುಗಳಲ್ಲಿರುವ 'ಸುಡು'ವೇ ತಮಿಳು ಮಲಯಾಳಗಳ ಶುಡು—ಚುಡುಗಳಿಗಿಂತ ಪೂರ್ವತರ ರೂಪ ವೆಂದಾಗುತ್ತದೆ.

ಈಗ ಮಾಡಿದ ಮೀಮಾಂಸೆಯಿಂದ ಮೂಲ ಸಕಾರವೇ ಬೇರೆ ಬೇರೆ ಭಾಷೆಗಳಲ್ಲಿ ವಿಧ ವಿಧವಾದ —ಯ, ತ, ದ, ವ, ಶ—ಚ ಮೊದಲಾದ ರೂಪಗಳನ್ನು ಪಡೆಯುವುದೆಂದು ಗೊತ್ತಾಯಿತು. ಆದರೂ ಹೆಚ್ಚಾಗಿ ಅದು ಹೊಂದುವ ರೂಪವು ಚಕಾರವಾಗಿದೆ. ಇದಕ್ಕೇನು ಕಾರಣ? ಇದನ್ನು ತಿಳಿಯುವುದಕ್ಕೆ ದ್ರಾವಿಡ ಚಕಾರದ ಉಚ್ಚಾರ ಸ್ವರೂಪವನ್ನು ತಿಳಿದು ಕೊಳ್ಳುವುದು ಲಾಭದಾಯಕವಾಗಬಹುದು.

ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಚಕಾರೋಚ್ಚಾರವು ಒಂದೇ ವಿಧವಾ ಗಿಲ್ಲ. ಕನ್ನಡದ ಚಕಾರಕ್ಕೂ, ತುಳುವಿನ ಚಕಾರಕ್ಕೂ, ಸಂಸ್ಕೃತ ದಲ್ಲಿ ಕೇಳುವ ಚಕಾರಕ್ಕೂ ಉಚ್ಚಾರದಲ್ಲೇನೂ ವ್ಯತ್ಯಾಸವಿಲ್ಲ. ತಮಿಳು ಮಲಯಾಳಗಳಲ್ಲಿಯೂ ಅದಕ್ಕೆ ದ್ವಿತ್ವಉಂಟಾದಾಗ, ಅಚ್ಚಗನ್ನಡದ

ಚಕಾರದ ಹಾಗೆಯೇ ಕಿವಿಗೆ ಬೀಳುತ್ತದೆ. ಆದರೆ ಅದು ಕೇವಲವಾಗಿರುವಾಗ, ಮಲಯಾಳದಲ್ಲಿ ಅತ್ಯಲ್ಪವಾಗಿ ಚಕಾರಕ್ಕೆ 'ಊಷ್ಮತೆ' (sibilation) ಬೆರೆತಂತೆ ಕೇಳುತ್ತದೆ. ಮಲಯಾಳಿಗಳ ಜಕಾರೋಚ್ಚಾರದಲ್ಲಿ ಈ ಊಷ್ಮತೆ ಇನ್ನಷ್ಟು ಸ್ಫುಟವಾಗಿ ಕೇಳುತ್ತದೆ. 'ಅಂಜ್' ಎಂಬುದನ್ನು ಅವರು ಉಚ್ಚರಿಸುವಾಗ 'ಅಂಜ್ಶ' ಎಂಬಂತೆ ಕೇಳುತ್ತದೆ. ತಮಿಳಿನ ಸಾಮಾನ್ಯ ನಿಯಮದಂತೆ, ವರ್ಗದ ಪ್ರಥಮ ವರ್ಣವು ಪದಮಧ್ಯದಲ್ಲಿ ಬರುವಾಗ ಅದಕ್ಕೆ ವರ್ಗತೃತೀಯತ್ವವು ಬರುವುದಾದರೂ ಚಕಾರವು ಅದಕ್ಕೆ ಅಪವಾದವಾಗಿದೆ; ಆದುದರಿಂದ ತಮಿಳಲ್ಲಿ ಜಕಾರದ ಉಚ್ಚಾರವೇ ಇಲ್ಲವೆಂಬುದು ನಾವು ವಿಶೇಷವಾಗಿ ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕ ವಿಷಯವಾಗಿದೆ. ಕಾಲ್ಡ್‌ವೆಲ್ಲರೂ ಇದನ್ನು ಲಕ್ಷಿಸಿದ್ದಾರೆ (ಪುಟ ೨೨). ಐದು ಎಂಬರ್ಥದ 'ಐಂದು' (=ಅಯ್‌ನ್ದು) ಕೆಲವು ಬಾರಿ ತಮಿಳರ ಬಾಯಲ್ಲಿ 'ಅಂಜು' ಎಂದು ರೂಪುಗೊಳ್ಳುವುದಾದರೂ ಇದು 'ಚೆನ್ ತಮಿೞ್' ಅಲ್ಲ. ಆದುದರಿಂದ ಚಕಾರವು ಕೇವಲವಾಗಿರುವಾಗ ಅದು ಎಲ್ಲಿ ಬಂದರೂ ಏಕರೂಪವಾದ ಧ್ವನಿ. ದ್ವಿತ್ವವಿದ್ದಾಗ, ಹಿಂದೆ ಸೂಚಿಸಿದಂತೆ, ನಮ್ಮ ಚಕಾರೋಚ್ಚಾರದಂತೆಯೇ ಅದು ಇರುವುದಾದರೂ, ಕೇವಲವಾಗಿರುವ ವ್ಯಕ್ತಿಭೇದದಿಂದ ಅದಕ್ಕೆ ರೂಪಭೇದ ಬರುತ್ತದೆ. ಹಲವರ ಬಾಯಲ್ಲಿ ಅದು ಹೆಚ್ಚು ಕಡಮೆ ಶಕಾರವೇ ಆಗುತ್ತದೆ. ಕೆಲವರ ಬಾಯಲ್ಲಿ ಆ ಶಕಾರವು ಶಂಖ, ಶಬ್ದ, ಶರೀರ —ಎಂದು ನಾವು ಉಚ್ಚರಿಸುವಾಗ ಉಂಟಾಗುವ ಶಕಾರದಂತಿರದೆ ಅದಕ್ಕಿಂತ ಕೋಮಲವಾಗಿರುತ್ತದೆ; ಎಂದರೆ ಸಂಸ್ಕೃತ ಶಕಾರ ಸಕಾರಗಳ ಮಧ್ಯದಲ್ಲಿರುತ್ತದೆಯೆನ್ನಬಹುದು. ಹೆಚ್ಚಾಗಿ, ಅಸಂಸ್ಕೃತರಾದ ತಮಿಳರ ನುಡಿಯಲ್ಲಿ, ಇವರಲ್ಲಿ ಚತ್ವವು ಹೆಚ್ಚಿರುತ್ತದೆ. ಅವಾದರೂ ನಾವು ಉಚ್ಚರಿಸುವ ಚಕಾರಕ್ಕಿಂತ ಕೋಮಲವಾಗಿ ಕೇಳಿಬರುತ್ತದೆ.

ತೆಲುಗಿನಲ್ಲಿ ಚಕಾರ ಜಕಾರಗಳಿಗೆ ಎರಡೆರಡು ಉಚ್ಚಾರ ರೂಪಗಳಿವೆ. ಒಂದು ಕನ್ನಡದ ಚಕಾರ ಜಕಾರಗಳ ಉಚ್ಚಾರಕ್ಕೆ ಸಮಾನವಾದುದು; ಇನ್ನೊಂದು ಸುಮಾರು, ತ್ಸ ದ್ಜ ಎಂಬಂತಿರುವುದು. ಈ ಉಚ್ಚಾರಗಳು ಮರಾಠಿಯಲ್ಲಿಯೂ ಕೇಳಿಬರುತ್ತವೆ. ಸಂಸ್ಕೃತದಲ್ಲಾಗಲಿ, ಸಂಸ್ಕೃತ ಜನ್ಯವಾದ ಎಲ್ಲಾ ಭಾಷೆಗಳಲ್ಲಾಗಲಿ ಈ ಉಚ್ಚಾರ ವೈಶಿಷ್ಟ್ಯವುಂಟೆಂದು ತಿಳಿದುಬಂದಿಲ್ಲ. ತೆಲುಗನ್ನು ಬಿಟ್ಟರೆ ಇತರ ದ್ರಾವಿಡ

ಭಾಷೆಗಳಲ್ಲಿಯೂ ಕಿವಿಗೆ ಬೀಳುವುದಿಲ್ಲ. ಇದರ ಮೂಲವೆಲ್ಲಿ? ಈ ಧ್ವನಿ ದ್ರಾವಿಡವೋ ಆರ್ಯವೋ ಇನ್ನೂ ನಿಶ್ಚಿತವಾಗಿಲ್ಲ.

ಈ ವಿವರಣದಿಂದ ದ್ರಾವಿಡ ಭಾಷೆಗಳಲ್ಲಿ ಚಕಾರೋಚ್ಚಾರದಲ್ಲಿ ಹಲವು ಭೇದಗಳಿವೆಯೆಂಬುದು ತಿಳಿದಿರಬಹುದು. ಚೆನ್ನಾಗಿ ಪರಾಮರ್ಶಿಸಿದರೆ ಸುಸ್ಪಷ್ಟವಾದ ಇಷ್ಟು ರೂಪಗಳಿವೆಯೆಂದು ಗೊತ್ತಾಗುವುದು :— ಒಂದು—ಕನ್ನಡ ತುಳುಗಳ, ಸಂಸ್ಕೃತ ಸಮವಾದ ಶುದ್ಧ ಚಕಾರ; ತಮಿಳು ಮಲಯಾಳಗಳಲ್ಲಿಯೂ ದ್ವಿತ್ವಬಂದಾಗ ಹೆಚ್ಚುಕಡಮೆ ಇದೇ ರೂಪ. ಎರಡು—ತಕಾರ ಸಕಾರಗಳ 'ಸಂಸೃಷ್ಟಿ' ಯಾಗಿರುವಂತೆ ಕೇಳುವ ತೆಲುಗು ಚಕಾರ. ಮೂರು—ಚಕಾರ ಸಕಾರಗಳ ಸಂಕರವಾದ ತಮಿಳಿನ ಅದೊಂದು ಚಕಾರ. ನಾಲ್ಕು—ಶುದ್ಧ ಶಕಾರಕ್ಕೆ ಹೆಚ್ಚುಕಡಮೆ ಸಮನಾಗಿ ಕೇಳುವ ತಮಿಳಿನ ಇನ್ನೊಂದು ರೂಪ. ಐದು—ತಮಿಳಲ್ಲಿ ಒಮ್ಮೊಮ್ಮೆ ಕೇಳಿಬರುವ ಶಕಾರ ಸಕಾರಗಳ ಮಧ್ಯವರ್ತಿಯೆಂಬಂತೆ ಕಾಣುವ ಇನ್ನೊಂದು ರೂಪ. ಆರು—ಶಕಾರದ ಈಷತ್‌ಸಂಯೋಗವಿರುವ ಮಲಯಾಳದ ಚಕಾರ. —ಹೀಗೆ ಆರು ತರದ ಉಚ್ಚಾರಗಳು ಚಕಾರಕ್ಕೆ ದ್ರಾವಿಡ ಭಾಷೆಗಳಲ್ಲಿವೆ. ಇವುಗಳೊಳಗೆ ಮೊದನೆಯದೊಂದು ಮಾತ್ರ ಶುದ್ಧವಾದ ಸ್ಪರ್ಶವರ್ಣ ಚಕಾರವಾಗಿದೆ. ಉಳಿದ ಐದರಲ್ಲಿಯೂ ಊಷ್ಮತೆ ಇದೆ. ಹಾಗಾದರೆ ಇವುಗಳ ಮೂಲವು ಯಾವುದೊಂದು ಊಷ್ಮವರ್ಣವೇ ಆಗಿರಲಾರದೆ?

ಇನ್ನು ಕನ್ನಡದಲ್ಲಿ ಸಕಾರವು ಚಕಾರವಾಗಿ ಪರಿಣಮಿಸುವ ಕ್ರಮಗಳನ್ನು ಪರೀಕ್ಷಿಸೋಣ. ಅಕರ್ಮಕ ಧಾತುಗಳನ್ನು ಸಕರ್ಮಕವಾಗಿ ಮಾಡಲು 'ಇಸು' ವನ್ನು ಹೆಚ್ಚಾಗಿ ಪ್ರಯೋಗಿಸುವೆವಾದರೂ ಕೆಲವೆಡೆ ಇಕಾರಸ್ಥಾನದಲ್ಲಿ ಅಕಾರವು ಕಂಡುಬರುವುದು. ಉದಾ:—[೧೯] ಬೆರೆ; ಕಲೆ=ಒಟ್ಟಾಗು; ಬೆರಸು; ಕಲಸು=ಒಟ್ಟಾಗಿಸು, ಮಿಶ್ರಮಾಡು. ಹಾಗೆಯೇ ಕೆಲವೆಡೆ ಬರಿಯ 'ಸು' ಎಂಬುದೇ ಗೋಚರಿಸುವುದು. ಉದಾ:— ಕಾಯ್=ಬಿಸಿಯಾಗು; ಕಾಸು=ಬಿಸಿಮಾಡು.[೨೦] ಇನ್ನು ಕೆಲವೆಡೆ ಹಿಂದೆಯೇ ತೋರಿಸಿದಂತೆ—'ಚು' ಎಂಬುದೇ ಆ ಅರ್ಥವನ್ನು ಕೊಡುವುದು. ಉದಾ:—ಅರಲ್=(ತಾನಾಗಿ) ಅರಳು; ಅರೞ್ಚು=(ಬೇರೊಂದನ್ನು) ಅರಳಿಸು. ಅೞಿಲ್ದಂ= ಮರುಗಿದನು; ಅೞಿಲ್ಚಿದಂ= ಮರುಗಿಸಿದನು. ಹಾಗಾದರೆ ಈ 'ಇಸು

ಅಸು, ಸು, ಚು' —ಎಂಬವುಗಳು ಸಮಾನಾರ್ಥಕಗಳೆಂದು ಮಾತ್ರವಲ್ಲ, ಮೂಲದಲ್ಲಿ ಒಂದೇ ಎಂದು ಹೇಳಬೇಕಾಗುತ್ತದೆ. ಇವುಗಳೊಳಗೆ 'ಚು' ಎಲ್ಲಿ ಕಾಣಿಸಿಕೊಳ್ಳುವುದೆಂದು ಚೆನ್ನಾಗಿ ಪರೀಕ್ಷಿಸಿದರೆ, —ಅಲರ್, ಅಗುೞ್, ನಿಮಿರ್, ಕಟಿಲ್, ಒಡರ್, ನಾಣ್ —ಇತ್ಯಾದಿಯಾಗಿ, ಪದಾಂತ್ಯದಲ್ಲಿ ಸ್ವರರಹಿತವಾಗಿ ನಿಲ್ಲಲು ಯೋಗ್ಯವಾದ ವ್ಯಂಜನಗಳೇ ಕೊನೆಯಲ್ಲಿದ್ದು[೨೧] ಗುರ್ವಂತವಾಗಿರುವ (ನಾಮ ಅಥವಾ ಧಾತು) ಪ್ರಕೃತಿಗಳಿಗೇ ಅದು ಅಂಟಿಕೊಳ್ಳುವುದು, ಎಂದು ತಿಳಿದುಬರುವುದು. ಕೇಶಿರಾಜನ ಧಾತುಪಾಠದಲ್ಲಿ 'ಚು' ಪ್ರತ್ಯಯವು ಅಂತ್ಯದಲ್ಲಿರುವ ೬೩ ಧಾತುಗಳಿವೆ. ಇವುಗಳೊಳಗೆ ಅೞುಚು, ಕವಿಚು,[೨೨] ಜಱುಚು —ಎಂಬ ಮೂರು ಮಾತ್ರ ಲಘೂಪಧೆಗಳಾಗಿವೆ. ಉಳಿದ ೬೦ ಧಾತುಗಳೂ ಗುರೂಪಧೆಗಳು. ಅವುಗಳೊಳಗೂ ತೀರ್ಚು, ನಾಣ್ಚು, ಬಾರ್ಚು, ಮೋಚು, ಸಾರ್ಚು, ಸೋರ್ಚು — ಈ ಆರು ಮಾತ್ರ ತೀರ್, ನಾಣ್, ಬಾರ್, — ಎಂಬಂತೆ ದೀರ್ಘಸ್ವರ ಸಹಿತಗಳು. ಉಳಿದ ಎಲ್ಲಾ ಉಪಧಾಕ್ಷರಗಳೂ ಹ್ರಸ್ವಸ್ವರಯುಕ್ತವಾಗಿದ್ದು ಅಸ್ವರ ವ್ಯಂಜನ ಸಾಂನಿಧ್ಯದಿಂದಾಗಿ —ಎಂದರೆ ಉಚ್ಚಾರದ ಒತ್ತಾಟದಿಂದಾಗಿ —ಗುರುವಾದ ಅಕ್ಷರಗಳು. ಹಾಗೆಯೇ 'ಅಸು' ಎಂಬ ಆ ಪ್ರತ್ಯಯರೂಪಕ್ಕೆ ಹ್ರಸ್ವವಾದ ಎಕಾರವು ಉಪಧೆಯಾಗಿರುವಂತೆ ತಿಳಿಯುವುದು. ಉದಾ:— ಬೆರೆ+ಅಸು=ಬೆರಸು; ಮಱೆ+ಅಸು=ಮಱಸು; ಒರೆ+ಅಸು=ಒರಸು. ಕಲೆ+ಅಸು=ಕಲಸು. ಈ 'ಅಸು' ಸೇರುವಾಗ ಪ್ರಕೃತಿಯ ಕೊನೆಯ ಸ್ವರವು ಲೋಪಹೊಂದಿರುವುದರಿಂದ. ಅರ್ಥಹಾನಿಯಾಗುವ ಸಂದರ್ಭದಲ್ಲಿ ಎಕಾರಾಂತಕ್ಕೂ 'ಇಸು' ವೇ ಬಂದು ಸೇರುತ್ತದೆ. ಉದಾ:— ನೆನೆಯಿಸು, ಮಱೆಯಿಸು. (ಪ್ರಯೋಗ— ನೆನೆಯಿಸುಗುಂ ಮನಂ ಮಱೆಯಿಸಿರ್ದಪದಾರ್ಥಮುಂ.... ...........................ಕವಿಕಾಮನ ಶೃಂಗಾರರತ್ನಾಕರ) [೨೩]

[ಅಲ್ಲದೆ 'ಅಸು' ವಿಗೆ ಅಕರ್ಮಕವನ್ನು ಸಕರ್ಮಕವಾಗಿ ಮಾಡುವ ಶಕ್ತಿ ಮಾತ್ರ ಇರುವಂತೆಯೂ, ಪ್ರೇರಣಾರ್ಥವು ಬರಬೇಕಾದರೆ ಎಕಾರಾಂತಕ್ಕೂ 'ಇಸು' ವೇ ಬೇಕಾಗುತ್ತದೆಂದೂ ತೋರುತ್ತದೆ. ಉದಾ:— ಮಱಸು=ಮರೆಮಾಡು. ಆದರೆ ಈ ಕಾರಣದಿಂದಾಗಿ ಇದೊಂದು ಇಸುವಿಗೆ ತತ್ವತಃ ಭಿನ್ನವಾದ ಪ್ರತ್ಯಯವೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, 'ಅಸು' ಎಂಬುದು ಎಕಾರಾಂತಕ್ಕೆ

ಮಾತ್ರ ಅಂಟುವುದು; ಬೇರೆ ಅಕರ್ಮಕ ಧಾತುಗಳನ್ನು ಉದಾ:— ಆಗು—ಪೋಗು—ಇತ್ಯಾದಿಗಳನ್ನು ಸಕರ್ಮಕವಾಗಿಮಾಡಲು 'ಅಸು' ಬರುವುದಿಲ್ಲ. ಆದುದರಿಂದ ಅದು ಕೂಡ 'ಇಸು' ವಿನ ರೂಪವಿಶೇಷ ವೆಂದೇ ಹೇಳಬೇಕಾಗುತ್ತದೆ.] ಇನ್ನು 'ಇಸು' ಎಂಬುದು ಉಕಾರಾಂತ ವಾಗಿಯೋ ಅಕಾರಾಂತವಾಗಿಯೋ ಇರುವ ಪ್ರಕೃತಿಗಳಿಗೆಲ್ಲಾ ಸೇರು ವುದು. ಉದಾ:— ತವು+ಇಸು=ತವಿಸು; ಎತ್ತು+ಇಸು=ಎತ್ತಿಸು; ಓದು+ ಇಸು=ಓದಿಸು; ಉಮ್ಮಳ+ಇಸು=ಉಮ್ಮಳಿಸು; ಚಿತ್ರ+ಇಸು=ಚಿತ್ರಿಸು. ಕೆಲವು ಧಾತುಗಳಲ್ಲಿ ಬರಿಯ 'ಸು' ಎಂಬ ರೂಪದಲ್ಲಿಯೂ ಕಂಡು ಬರುವುದು. ಉದಾ:— ಕಾಸು, ಮೂಸು, ಕೋಸು.[೨೪] ಈ ವಿವರಣ ದಿಂದ ತಿಳಿದುಬರುವ ಅಂಶವೇನೆಂದರೆ, ಹಿಂದೆ ಸವ್ಯಂಜನ ಗುರ್ವಕ್ಷರ ವಿದ್ದಲ್ಲಿ 'ಚು' ಎಂಬುದೇ ಈ ಪ್ರತ್ಯಯದ ರೂಪವಾಗಿದೆ ಹಲವು ಕಡೆಗಳಲ್ಲಿ ಇದು 'ಇಸು' ವೆಂದೋ 'ಅಸು' ವೆಂದೋ ಕಂಡರೂ, ಬರಿಯ 'ಸು' ಕೂಡ ಇದೇ ಅರ್ಥವನ್ನು ಕೊಡಬಲ್ಲುದಾಗಿರುತ್ತದೆ; ಹಿಂದೆ ಒತ್ತಾಟವಿದ್ದಲ್ಲಿ 'ಸು' ತ್ವ ಕಾಣಿಸುವುದಿಲ್ಲ; ಅಲ್ಲಿ 'ಚು' ತ್ವವೇ ಬರುತ್ತದೆ; ಎಂದರೆ ಸಾಮಾನ್ಯವಾಗಿ ಗುರೂಪಧೆಯಾದಲ್ಲಿ 'ಚು' ಲಘೂಪಧೆಯಾದಲ್ಲಿ 'ಸು'.

ಸವ್ಯಂಜನವಾದ ಗುರ್ವಕ್ಷರವನ್ನು ವಿಶೇಷವಾಗಿ ಆ ವ್ಯಂಜನವು ಹ್ರಸ್ವೋಪಧೆಯಾಗಿರುವಾಗ, ನಾವು ಸಹಜವಾಗಿ ನಿಲ್, ಗೆಲ್, ಬಿಲ್ —ಎಂಬಂತೆ ಒತ್ತಿ ಉಚ್ಚರಿಸುತ್ತೇವೆ. ಉಚ್ಚಾರ ತತ್ವವನ್ನು ಶಾಸ್ತ್ರೀಯವಾಗಿ ಪರೀಕ್ಷಿಸಿದರೆ, ಹಿಂದೆ ಸ್ವರವಿರುವ ಅವರ್ಗೀಯ ವ್ಯಂಜನಕ್ಕೆ ವರ್ಗೀಯ ವ್ಯಂಜನವು ಪರವಾದಾಗ (ಮತ್ತು ಅನುನಾಸಿಕ ವ್ಯಂಜನಕ್ಕೆ ಸ್ವವರ್ಗ ಭಿನ್ನವಾದ, ಅನುನಾಸಿಕವಲ್ಲದ, ವರ್ಗೀಯ ವ್ಯಂಜನವು ಪರವಾದಾಗ) ಆ ವರ್ಗೀಯ ವ್ಯಂಜನಕ್ಕೆ ದ್ವಿತ್ವೋಚ್ಚಾರವು ಸಹಜವಾಗಿ ಬರುತ್ತದೆ.[೨೫] ಉದಾ:— ಮರ್+ದನ=ಮರ್ದ್ದನ. ನಾವಿದನ್ನು 'ಮರ್ದನ' ಎಂದಿಷ್ಟೇ ಬರೆದರೂ ಉಚ್ಚಾರವು 'ಮರ್ದ್ದನ' ಎಂದೇ ಆಗುವುದು. ಹೀಗೆ ದ್ವಿತ್ವವನ್ನುಂಟುಮಾಡದೆ ಉಚ್ಚರಿಸಿದರೂ ಆಯೆರಡು (ರ್ ದ್) ವ್ಯಂಜನ ಗಳು ಕಿವಿಗೆ ಬೀಳುವುವಾದರೂ ಅದು ಶಿಥಿಲವಾಗಿ, ಹಿಂದಿನ ಅಕ್ಷರಕ್ಕೆ ಗುರುತ್ವವು ಇಲ್ಲದಾಗುತ್ತದೆ. (ಉದಾ:— ಎರ್ದೆ ಇತ್ಯಾದಿ ಹಳೆಗನ್ನಡದ ಶಿಥಿಲ ದ್ವಿತ್ವಗಳು.) ಆದರೆ ನಾವು ದ್ವಿತ್ವೋಚ್ಚಾರವನ್ನು ಮಾಡುವಲ್ಲಿಯೂ

ಆ ದ್ವಿತ್ವವನ್ನು ಲಿಪಿಯಲ್ಲಿ ಕಾಣಿಸುವುದಿಲ್ಲ. ಆದರೆ ಮೊದಲಿನವರು ಅವುಗಳನ್ನು 'ದಡ್ಡಕ್ಕರ' ಗಳನ್ನಾಗಿಯೇ ಬರೆಯುತ್ತಿದ್ದರೆಂಬುದು ಹಳೆಯ ಓಲೆಯ ಪುಸ್ತಕಗಳನ್ನು ನೋಡಿದವರಿಗೆಲ್ಲ ಗೊತ್ತಿರಬಹುದು. ತಮಿಳಲ್ಲಿ ಹೀಗೆಯೇ ಬರೆಯುತ್ತಾರೆ. ಅಲ್ಲದೆ ಶ್ರೀ. ಪಾಠಕರು ಪ್ರಕಾಶಪಡಿಸಿದ ಕವಿರಾಜಮಾರ್ಗದಲ್ಲಿಯೂ ಹಾಗೆಯೇ— 'ಕವಿರಾಜಮಾರ್ಗ್ಗ' ಎಂಬಿತ್ಯಾದಿಯಾಗಿಯೇ—ಮುದ್ರಿಸಿರುವರು ಹಾಗೆ ದ್ವಿತ್ವವನ್ನು ಕಾಣಿಸದಿದ್ದರೂ ಉಚ್ಚಾರವು ಸಾಧಾರಣವಾಗಿ, ಅಭ್ಯಾಸಬಲದಿಂದಾಗಿ, ಶಿಥಿಲವಾಗುವುದಿಲ್ಲವಾದುದರಿಂದ ನಾವೀಗ ಅವುಗಳನ್ನು ದಡ್ಡಕ್ಕರಗಳನ್ನಾಗಿ ಬರೆಯುವುದಿಲ್ಲ. ಆದರೆ ಉಚ್ಚಾರದ ಒತ್ತಡದ ಕಾರಣದಿಂದಲ್ಲದೆ ಸಹಜವಾಗಿಯೇ, ಶಬ್ದದ ಕೊನೆಯಲ್ಲಿರುವ ವ್ಯಂಜನಕ್ಕೆ ಅದೇ ವ್ಯಂಜನವಿನ್ನೊಂದು ಪರವಾಗುವಲ್ಲಿ ಈಗಲೂ ಹಾಗೆ, ವಿಕಲ್ಪವಾಗಿ, ಬರೆಯುವುದುಂಟು. ಉದಾ:— ತತ್+ತ್ವ=ತತ್ತ್ವ. ಇದನ್ನು ಕೂಡ ತತ್ವ ಎಂದಿಷ್ಟೇ ಬರೆದರೂ ಓದುವುದು ಹಾಗೆಯೇ, ಒತ್ತಿಯೇ; ಶಿಥಿಲವಾಗಿ ಅಲ್ಲ. ಇರಲಿ. ಹಾಗೆಯೆ, ಅಲರ್ಚು, ಅಮರ್ಚು, ಅಗುಳ್ಚು ಇತ್ಯಾದಿಗಳನ್ನು ಉಚ್ಚಾರಕ್ಕೆ ಸಮವಾಗಿ ಬರೆಯುವುದಾದರೆ, ಅಲರ್ಚ್ಚು, ಅಮರ್ಚ್ಚು, ನಾಣ್ಚ್ಚು ಇತ್ಯಾದಿ ರೂಪವಾಗಿಯೇ ಬರೆಯಬೇಕು. ಏಕೆಂದರೆ ಇವು ಶಿಥಿಲ ದ್ವಿತ್ವಗಳಲ್ಲ.೨೬ ಹಾಗಾದರೆ 'ಚು' ಎಂಬುದು ಆ ಪ್ರತ್ಯಯಕ್ಕೆ ದ್ವಿತ್ವವು ಬರುವಲ್ಲಿ ಮಾತ್ರ ಕಾಣಿಸುವುದೆಂದು ನಮಗೆ ಗೊತ್ತಾದಂತಾಯಿತು.೨೭ ಕಾಸು, ಮೂಸು, ಕೋಸು ಎಂಬವುಗಳಲ್ಲಿ ಇಕಾರ ಅಥವಾ ಅಕಾರ ಸಂಸರ್ಗವಿಲ್ಲದೆ ಆ ಅರ್ಥಗಳನ್ನೇ 'ಸು' ಎಂಬ ಕೇವಲ ರೂಪವೂ ಕೊಡುವುದೆಂಬುದು ನಮಗೆ ತಿಳಿದುಬರುವುದರಿಂದ, ಹಿಂದಿನ ಇಕಾರ ಅಥವಾ ಅಕಾರವು ಆರಂಭದಲ್ಲಿ ಆನುಷಂಗಿಕವಾಗಿಯೇ ಇದ್ದಿರಬೇಕೆಂದು ಹೇಳಬೇಕಾಗುತ್ತದೆ. ಏಕೆಂದರೆ 'ಇಸು'ವಿನ ಸ್ಥಾನದಲ್ಲಿ (ಇಕಾರವಿಲ್ಲದ) 'ಚು' ಬಂದುದರಿಂದ ಅರ್ಥವ್ಯತ್ಯಾಸವೇನೂ ಆಗುವುದಿಲ್ಲ. ಉದಾ:— ಕಡೆಗಣಿಸು, ಕಡೆಗಣ್ಚು —ಈ ಎರಡು ರೂಪಗಳೂ ದರ್ಪಣಕಾರನ ಧಾತುಪಾಠದಲ್ಲಿ ಕಾಣುವುದು ಮಾತ್ರವಲ್ಲ; ಹೊಸತೆಂದು ತೋರಬಹುದಾದ 'ಕಡೆಗಣಿಸು' ಪಂಪಭಾರತದಲ್ಲಿಯೂ ಇದೆ. (ಉದಾ:— ಕಡೆಗಣಿಸಲಾಗ—೭-೪೭) ಆದುದರಿಂದ ಸು ಪ್ರತ್ಯಯವೇ ಒತ್ತಲ್ಪಟ್ಟಾಗ 'ಚು' ಎಂದಾಗುತ್ತದೆಂದಾಯಿತು. ಈಗ ಒರ್+ಸೇರೆ ಎಂಬುದು 'ಒಚ್ಚೇರೆ' ಎಂದು ಏಕೆ ಚಕಾರವನ್ನು ಪಡೆಯುವುದೆಂಬುದರ

ರಹಸ್ಯವು ಸ್ಪಷ್ಟವಾಯಿತು. ಅರೆ+ಸೇರು ಎಂಬುದು ಆಡುನುಡಿಯಲ್ಲಿ 'ಅಚ್ಚೇರು' ಎಂದಾದುದು ಮಾತ್ರವಲ್ಲ; 'ಅಚ್ಛೇರು' ಎಂದು ಕೂಡ ಆಗಲು 'ಅರ್ ಸೇರು' ಎಂದು ಅವಸರದಲ್ಲಿ ನುಡಿದ ಪರಿಣಾಮವೇ ಎಂದೂ, ಆ 'ಅಚ್ಛೇರು' ಎಂಬ ರೂಪವು, ಇರ್+ಸಾಸಿರ=ಇರ್ಛಾಸಿರ 'ಪಯಿಂಛಾಸಿರ್ವರಂ' (ವಿಕ್ರ. ವಿ. ೧೦—೨೫) ಇತ್ಯಾದಿ ಮಹಾಪ್ರಾಣ ರೂಪಗಳಲ್ಲಿ ಹೇಗೋ ಹಾಗೆ, ಒತ್ತಿದೊಡನೆ ಉಂಟಾದ ಚಕಾರವನ್ನು ತಳ್ಳಿ, ಮೇಲೆ ನೆಗೆಯುವುದಕ್ಕೆ ಪ್ರಯತ್ನಿಸುವ ಸಕಾರದ ಪರಿಣಾಮವೇ ಎಂದೂ ಸುವ್ಯಕ್ತವಾದಂತಾಯಿತು.

ಸಕಾರವು ಕನ್ನಡದಲ್ಲಿ ಇಷ್ಟು ವ್ಯಾಪಕವಾಗಿರುವುದಾದರೂ, ಸಕಾರಕ್ಕೆ ತನ್ನ ನಿಜರೂಪದಲ್ಲಿ ದ್ವಿತ್ವವೆಂಬುದು (—ಸ್ಸ ಇತ್ಯಾದಿ) ಇಲ್ಲವೇ ಇಲ್ಲವೆನ್ನಬಹುದು. ಇಸ್ಸಿ! ಉಸ್ಸಪ್ಪ! —ಇತ್ಯಾದಿಗಳು 'ಉದ್ಗಾರ' ರೂಪಗಳಾದುದರಿಂದ ಅವುಗಳನ್ನು, ಹಕಾರವಿಚಾರದಲ್ಲಿ 'ಹುಂ' ಇತ್ಯಾದಿಗಳನ್ನು ಕಳೆದುಹಾಕಿದಂತೆ ಇಲ್ಲಿಯೂ ಕಳೆಯಬೇಕಾಗುತ್ತದೆ. ಸಕಾರದಂತೆಯೇ ಅವರ್ಗೀಯವಾದ ಯಕಾರಕ್ಕೆ —ಮೆಯ್ಯಿಂ, ನೆಯ್ಯೊಳ್ ಇತ್ಯಾದಿಯಾಗಿ ದ್ವಿತ್ವವು ತುಂಬ ಪ್ರಚಲಿತವಾಗಿದ್ದರೂ, ಸಕಾರಕ್ಕೇಕೆ ದ್ವಿತ್ವವಿಲ್ಲ? ಕನ್ನಡ ಸಕಾರಕ್ಕೆ ಒತ್ತಡವು ಬೀಳತೊಡಗಿದೊಡನೆ ಅದು ಚಕಾರವಾಗಿ ಪರಿಣಮಿಸುವುದೇ ಅದಕ್ಕೆ ಕಾರಣವೆನ್ನಬೇಕು.[೨೮]

ದಾಕ್ಷಿಣಾತ್ಯರ ಉಚ್ಚಾರದಲ್ಲಿ ಒತ್ತಡವು ಹೆಚ್ಚೆಂಬುದರ ಕುರಿತು ಮಾತಾಡಿದ್ದೇವೆ. ಇದು ಕನ್ನಡಕ್ಕಿಂತಲೂ ತಮಿಳು, ಮಲಯಾಳಗಳಲ್ಲಿ ಇನ್ನಷ್ಟು ಹೆಚ್ಚು. ಕನ್ನಡದಲ್ಲಿ ಸಹಜವಾಗಿ ಸಾದಿನ ಅಥವಾ ಸಾಂದಿನ ಬೊಟ್ಟು ಎಂಬುದನ್ನು ಸಮಸ್ತಪದವಾಗಿ ಮಾಡಿದರೆ 'ಸಾಂದುಬೊಟ್ಟು' ಎಂದಾಗುವುದಾದರೆ, ತಮಿಳಿನಲ್ಲಿ ಅದು 'ಚಾಂದುಪ್ಪೊಟ್ಟು' ಎಂದಾಗುತ್ತದೆ. 'ಘಟನಾ ಸಮಿತಿ' (Constituent Assembly) ಎಂಬುದನ್ನು ತಮಿಳು 'ವಾನೊಲಿ' (ಬಾನುಲಿ) ಯಲ್ಲಿ ಹೆಚ್ಚು ಕಡಿಮೆ 'ಚಟ್ಟಚ್ಚಬಾ' (ಚಟ್ಟ=ವಿಧಾನ; ನಿಯಮ; —ಸಭಾ) ಎಂದು ಆಗಾಗ ಹೇಳುತ್ತಿದ್ದುದನ್ನು ನನ್ನಂತೆಯೇ ಹಲವರು ಕನ್ನಡಿಗರು ಕೇಳಿರಬಹುದು. ಆದುದರಿಂದ ಮೂಲದಲ್ಲಿ ಸಕಾರವೇ ಇದ್ದು, ಒತ್ತಿ ಒತ್ತಿ ಉಚ್ಚರಿಸುತ್ತ ಬಂದಂತೆ, ಆ ನುಡಿಗಳಲ್ಲಿ ಅದು ಚಕಾರದ ಸಮೀಪಕ್ಕೆ ಹೋಗಿ

ಮುಟ್ಟಿರಬೇಕೆಂದು —ಅವುಗಳೆಲ್ಲವೂ ಶುದ್ಧಸ್ಪರ್ಶ ಚಕಾರವಾಗಿಲ್ಲದೆ, ಊಷ್ಮತೆಯೊಡಗೂಡಿಯೇ ಇಂದೂ ಇರುವುದರಿಂದ--ಊಹಿಸಲು, ಅನುಮಾನಿಸಲು, ಸಾಕಷ್ಟು ಬೇಕಾದಷ್ಟು ಆಧಾರಗಳಿಲ್ಲವೆ? ಮತ್ತು ಕನ್ನಡದಲ್ಲಿ ಶಬ್ದಾದಿಯಲ್ಲಿ ಸಕಾರವಿದ್ದೆಡೆಗಳಲ್ಲಿಯೇ ತಮಿಳು ಮಲಯಾಳಗಳಲ್ಲಿ ಹೆಚ್ಚಾಗಿ ಚಕಾರವು ಗೋಚರಿಸುವುದೆಂಬುದೂ, ಶಬ್ದ ಮಧ್ಯದಲ್ಲಾದರೆ ಹೆಚ್ಚಾಗಿ ದ, ಯ, ಪ —ಇತ್ಯಾದಿಯಾಗಿ ರೂಪುಗೊಳ್ಳುವುದೆಂಬುದೂ ಇಲ್ಲಿ ಲಕ್ಷಿಸತಕ್ಕ ಇನ್ನೊಂದು ಮುಖ್ಯ ವಿಷಯ. ಏಕೆಂದರೆ ಇದೂ ನಮ್ಮ ಅನುಮಾನವನ್ನು ಪುಷ್ಟೀಕರಿಸುತ್ತದೆ. ಹೇಗೆಂದರೆ—ಯಾವುದೊಂದು ವ್ಯಂಜನವು ಶಬ್ದಾದಿಯಲ್ಲಿ ಒತ್ತಲ್ಪಟ್ಟರೆ ದ್ವಿರ್ಭಾವವು ಗೋಚರವಾಗುವುದಿಲ್ಲ. ಉದಾ:— ವ್ಯಯ. ಇಲ್ಲಿ ಮೊದಲನೆಯ ಅಕ್ಷರದಲ್ಲಿ ಎರಡು ವ್ಯಂಜನಗಳ ಸಂಯೋಗವಿದ್ದರೂ ನಾವದನ್ನು ಎಷ್ಟು ಒತ್ತಿದರೂ ಅವೆರಡು ಉಚ್ಚಾರದಲ್ಲಿ ಲಘುವೇ ಆಗುತ್ತವೆ. ಹಿಂದೆ ಸ್ವರವಿದ್ದರೆಮಾತ್ರ (ಉದಾ – ಅವ್ಯಯ) ಈ ಒತ್ತಡದ ಪರಿಣಾಮವು ಕಂಡುಬಂದು, ವ್ಯ+ಯ ಎಂಬ ವಿಚ್ಛೇದವು ಉಚ್ಚಾರದಲ್ಲಿ ಮಾಯವಾಗಿ, ಅವ್ವ್+ಯ+ಯ —ಎಂಬ ರೀತಿಯಲ್ಲಿ ವಿಭಕ್ತವಾಗಿ ಕೇಳುತ್ತವೆ. ಆದುದರಿಂದ ಆದಿ ಕಾಲದ ಅತಿದಾಕ್ಷಿಣಾತ್ಯರು, ಸಕಾರವನ್ನು ಒತ್ತಿದಾಗ ಶಬ್ದಾರಂಭದಲ್ಲಿ ಅದು ವಿಶಿಷ್ಟವಾದೊಂದು 'ಊಷ್ಮ ಚಕಾರ'ವಾಗಿ—ಹಾಗೆ ಹೇಳಬಹುದಾದರೆ— ಪರಿಣಮಿಸಿತೆಂದೂ; ಶಬ್ದಮಧ್ಯದಲ್ಲಿ ಒತ್ತಿದರೆ ಅದು ಸ್ಪಷ್ಟವಾಗಿ ದ್ವಿತ್ವವನ್ನು ಪಡೆಯುವುದಾದುದರಿಂದ, —ಹಾಗೆ ಮಾಡಿದರೆ ಹೊಸ ಶಬ್ದವಾಗಿ ಪರಿಣಮಿಸಿ ಅನರ್ಥಕವಾಗಿ ಪರಿಣಮಿಸುವುದರಿಂದ, ಒತ್ತದೆ ಅತಿಲಘುವಾಗಿ, ತೇಲಿಸಿ, ಉಚ್ಚರಿಸುತ್ತಾ ಬಂದುದರಿಂದ, ಯಕಾರವಾಗಿಯೋ, ಪಕಾರವಾಗಿಯೋ, ರೂಪಾಂತರಿಸಿತೆಂದೂ, [ ಪ್ರಾಕೃತದಲ್ಲಿ ಸಂಸ್ಕೃತದ 'ಹೃದಯ'ವು 'ಹಿಯಯ' —ಎಂದಾದಂತೆ—ಉದಾ:— "ತುಜ್ಝ ಣ ಜಾಣೇ ಹಿಯಯಂ........................" (ಶಾಕುಂತಲ—ಅಂಕ-೩ ) —ಛಾಯೆ--ತವ ನ ಜಾನೇ ಹೃದಯಂ ] ಕೆಲವೆಡೆಗಳಲ್ಲಿ ಸಕಾರದೊಡನೆ ಏಕಸ್ಥಾನಿಯಾದ ದಂತ್ಯ ತಕಾರವಾಗಿ, ಅದೇ ಪದಮಧ್ಯದಲ್ಲಿ ಘೋಷವರ್ಣವಾಗಿ ದಕಾರವಾಗಿಯೂ ಆಯಿ

ತೆಂದೂ, ಧೈರ್ಯದಿಂದ ಹೇಳಬಹುದಾಗುತ್ತದೆ. ತಮಿಳರಲ್ಲೇ ಹಲವರು ಉಚ್ಚರಿಸುವ ಕೇವಲ ಚಕಾರವು ಶ—ಸಗಳ ಮಧ್ಯದಲ್ಲಿರುವಂತೆ ಅಥವಾ ಹೆಚ್ಚು ಕಡಮೆ, ಶಕಾರವೆಂಬಂತೆ ಊಷ್ಮವರ್ಣವೇ ಆಗಿರುವುದೂ, ಆ ಉಚ್ಚಾರವು ತಮಿಳು ನಾಡಿನ ಉತ್ತರ ಭಾಗದಲ್ಲಿ ಎಂದರೆ ಉಚ್ಚಾರದಲ್ಲಿ ಒತ್ತಡವು ಒಂದಿಷ್ಟು ಕಡಮೆಯಾಗಿರುವ ಪ್ರದೇಶದಲ್ಲಿ ಕೇಳುವುದೂ ಇವೆಲ್ಲವೂ ನಮ್ಮ ಊಹೆಗೆ ಬೆಂಬಲ.

ತಮಿಳಿನಲ್ಲಿ ಇತರ ವರ್ಗಪ್ರಥಮಗಳೆಲ್ಲ ಪದಮಧ್ಯದಲ್ಲಿ ಘೋಷ ವ್ಯಂಜನಗಳಾಗುತ್ತವೆ. ಆದರೆ ಚಕಾರವೊಂದು ಹಾಗಾಗುವುದಿಲ್ಲ. ಇದೇಕೆ? ಎಂದರೆ, ಒಂಟಿಯಾಗಿರುವಾಗ ಪದಮಧ್ಯದಲ್ಲಿ ಘೋಷವರ್ಣ ವಾಗುವ ಯಾವ ವರ್ಗಪ್ರಥಮ ವರ್ಣವಾದರೂ, ದ್ವಿಭಾವವನ್ನು ಪಡೆದೊಡನೆ ಪುನಶ್ಚ ಮೂಲ ಸ್ವಭಾವಕ್ಕೆ ತಿರುಗಿ ಅಘೋಷವಾಗು ವುದೂ ತಮಿಳಿನ ಸಹಜ ಸ್ವಭಾವ; ಎಂದರೆ ಒತ್ತಿದ ಧ್ವನಿಗಳು ಅಲ್ಲಿ ಘೋಷವರ್ಣವಾಗಲಾರವು. ಸಕಾರವೇ ಒತ್ತಡವನ್ನು ಪಡೆದು ಚಕಾರ ವಾಗುವುದೆಂದಾದರೆ, ಆ ಚಕಾರವು ಮತ್ತೆ ಘೋಷವಾಗುವುದು ಹೇಗೆ? ಆದುದರಿಂದ ತಮಿಳಿನ ಚಕಾರವು—ಅಥವಾ ಮೂಲದಲ್ಲಿ ದ್ರಾವಿಡ ಚಕಾರ ವೆಲ್ಲ—ಸಕಾರದ ಒಂದು ತರದ ದ್ವಿತ್ವರೂಪವೇ ಆಗಿದ್ದಿರಬೇಕೆಂಬ ಅನುಮಾನವು ಇದರಿಂದಲೂ ಸಿದ್ಧವಾಗುತ್ತದೆ.[೨೯]

ಆದರೆ ಕಾಲ್ಡ್‌ವೆಲ್ಲರು ತಮ್ಮ ಗ್ರಂಥದಲ್ಲಿ ತಮಿಳಿನ ಚಕಾರೋ ಚ್ಚಾರದ ಮೀಮಾಂಸೆ ಮಾಡುವಾಗ — "ನ್ಯಾಯವಾಗಿ ಇತರ ವರ್ಗ ಪ್ರಥಮ ಗಳಂತೆ ಈ ವ್ಯಂಜನವೂ ಪದಾದಿಯಲ್ಲಿ ಸಹಜ ಚಕಾರವಾಗಿಯೂ ಪದಮಧ್ಯದಲ್ಲಿ ಶಕಾರವಾಗಿಯೂ ಉಚ್ಚರಿಸಲ್ಪಡಬೇಕಾಗಿತ್ತು; ಆದರೆ ಈ ವ್ಯಂಜನದ ಉಚ್ಚಾರವು ಅದಕ್ಕೆ ಅಪವಾದವಾಗಿದೆ; —ಎಂದರೆ ಪದಾದಿಯಲ್ಲಿಯೂ ಪದಮಧ್ಯದಲ್ಲಿಯೂ ಇದು ಘೋಷವರ್ಣವಾಗಿಯೇ, ಎಂದರೆ ಶಕಾರವಾಗಿ ಉಚ್ಚರಿಸಲ್ಪಡುತ್ತದೆ." ಎಂಬ ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ.[೩೦] ಹಾಗಾಗಿ ಅವರ ಮತದಂತೆ ಶಕಾರವು ಚಕಾರದ ಘೋಷ ಸ್ವರೂಪವೆಂದಾಯಿತು. ಆದರೆ ನನ್ನ ಅಲ್ಪಮತಿ ಅದಕ್ಕೆ ಸಮ್ಮತಿ ಕೊಡುವುದಿಲ್ಲ. ತಮಿಳಿನಲ್ಲಿ ಇತರ ವರ್ಗಪ್ರಥಮ ಗಳಿಗೆಲ್ಲ ಘೋಷ ಸ್ವರೂಪವಿರುವಾಗ ಚಕಾರಕ್ಕೂ ಅದರಲ್ಲೊಂದು

ಘೋಷ ಸ್ವರೂಪವು ಇರಲೇಬೇಕೆಂಬ ಭಾವದಿಂದ, ಚಕಾರಕ್ಕೆ ಸಹಜವಾಗಿ ಘೋಷರೂಪವಾಗಿರುವ ಜಕಾರವು ತಮಿಳಿನಲ್ಲಿ ಇಲ್ಲದಿರುವುದರಿಂದ—ಶಕಾರವೇ ತಮಿಳಿನ ಘೋಷರೂಪವೆಂದು ಕಾಲ್ಡ್‌ವೆಲ್ಲರು ತೀರ್ಮಾನಿಸಿದ ಹಾಗೆ ಕಾಣುತ್ತದೆ. ಆದರೆ ನನ್ನ ಸಣ್ಣ ತಿಳುವಿನಂತೆ, ಶಕಾರವು ವಸ್ತುತಃ ಅಘೋಷವರ್ಣ. ಅದರ ಘೋಷಸ್ವರೂಪವು ಇಂಗ್ಲೀಷಿನ Pleasure ಎಂಬ ಶಬ್ದದಲ್ಲಿ ಕೇಳುವಂತಹ ಧ್ವನಿ. ಅದನ್ನು ನಾವು ಶ಼ ಎಂದು ಬರೆದು ತೋರಿಸಬಹುದು. ಹಾಗೆಯೇ ಸಹಜವಾಗಿ ಅಘೋಷವರ್ಣವಾದ ಸಕಾರವು ಘೋಷವರ್ಣವಾಗಿ ಮಾರ್ಪಡುವಾಗ ಸ಼—ಎಂಪರೆ ಇಂಗ್ಲೀಷಿನ Z ಇದರಂತಾಗುತ್ತದೆ.[೩೧]

ಇರಲಿ. ತೆಲುಗಿನ ಚಕಾರವು ತ್ಸ ಎಂಬಂತಿರುವುದು, ನಮ್ಮ ಊಹೆಗೆ ಇನ್ನೊಂದು ಪ್ರಬಲವಾದ ಆಧಾರ. ತಕಾರವೂ ಸಕಾರವೂ ದಂತ್ಯ ವ್ಯಂಜನಗಳಾದುದರಿಂದ ಒಂದಕ್ಕೊಂದು ವಿನಿಮಯಿಸುವುದು ಸಹಜ. ತುಳುವಿನಲ್ಲಿ 'ಸೂ' ಎಂದಿರುವುದು, ತಮಿಳು ಮಲಯಾಳಗಳಲ್ಲಿ 'ತೀ' ಎಂದಿರುತ್ತದೆ. ತುಳುವಿನಲ್ಲಿ —ಅದು ಚಂದ್ರಗಿರಿ ಹೊಳೆಯಿಂದ ಕಲ್ಯಾಣಪುರ ಹೊಳೆಯವರೆಗೆ ಮಾತ್ರ, ಬಹು ಸಣ್ಣ ಪ್ರದೇಶದಲ್ಲಿ ಅಡಗಿದ್ದರೂ, ಚೆನ್ನಾಗಿ ರೂಪುಗೊಂಡ ಆ ಆಡುನುಡಿಯಲ್ಲಿ—ಹಲವು ಪ್ರಭೇದಗಳಿವೆ. ಇವುಗಳೊಳಗೆ ಒಂದರಲ್ಲಿ ಸಕಾರವಿರುವಲ್ಲಿ ಮತ್ತೊಂದರಲ್ಲಿ ತಕಾರವಿರುತ್ತದೆ; ಇನ್ನೊಂದರಲ್ಲಿ ಅದೇ ಸ್ಥಾನದಲ್ಲಿ ಹಕಾರವೂ, ಮಗುಳೊಂದರಲ್ಲಿ ಚಕಾರವೂ ಇರುತ್ತದೆ. ಉದಾ:— ಕನ್ನಡದ ಸಿಡಿಲು ಅದರಲ್ಲಿ —ಸೆಡಿಲ್,' ತೆಡಿಲ್,' ಹೆಡಿಲ್,' ಚೆಡಿಲ್' —ಎಂಬೆಲ್ಲ ರೂಪಗಳಲ್ಲಿ ಕಾಣುತ್ತದೆ.[೩೨] ಸಂಸ್ಕೃತದಲ್ಲಾದರೂ ತ—ಸಗಳು ವಿನಿಮಯಿಸಿಕೊಳ್ಳುವಂತೆ ತೋರುತ್ತದೆ. ಉದಾ:— ನಪುಂಸಕ ರೂಪವಾದ तत् ಶಬ್ದವು ಪುಲ್ಲಿಂಗದಲ್ಲಿ सः ಸ್ತ್ರೀಲಿಂಗದಲ್ಲಿ सा ಎಂದಾಗುತ್ತದಷ್ಟೆ. ಅವು ಕ್ರಿಯಾಪದದಲ್ಲಿ[೩೩] ಪ್ರಥಮ ಪುರುಷ ಪ್ರತ್ಯಯವಾಗುವಾಗ भवति—ಎಂದು ತ-ಕಾರವೇ ಕಾಣುತ್ತದೆ. ಮಧ್ಯಮ ಪುರುಷ ಸರ್ವನಾಮವು त्वं ಎಂದಿದ್ದರೂ ಕ್ರಿಯಾಪದದಲ್ಲಿ भवसि—ಎಂದು ಸಕಾರವಾಗುತ್ತದೆ. ಅದು ಹೇಗೂ ಇರಲಿ; ಸಕಾರ ತಕಾರಗಳು ಅತಿ ಸಮೀಪವೆಂದು ಹೇಳಲು ಏನೂ ಅಡ್ಡಿಯಿಲ್ಲವಷ್ಟೆ? ಆದುದರಿಂದ ಮೂಲ ದ್ರಾವಿಡ ಸಕಾರಕ್ಕೆ ಒತ್ತಡ ಬರುವಾಗ ಅಲ್ಲಿ ತಕಾರವು ಕಾಣಿಸಿಕೊಂಡರೆ ಆಶ್ಚರ್ಯವೇನೂ ಇಲ್ಲ.

ಈ ಒತ್ತಡದ ಒಂದು ಪರಿಣಾಮವು ತಮಿಳಿನ ಊಷ್ಮ ಚಕಾರವಾದರೆ, ಇನ್ನೊಂದು ಪರಿಣಾಮವು ತೆಲುಗಿನ 'ತ್ಸ' ಎಂಬ ಧ್ವನಿಯುಳ್ಳ ವಿಶಿಷ್ಟವಾದ ಚಕಾರ. ಇದರಲ್ಲಿ ಸಕಾರವು ಅತಿಸ್ಫುಟವಾಗಿ ಕಾಣುತ್ತದೆ. ಕನ್ನಡದ 'ಇಸು' ವಿಗೆ ಪ್ರತಿರೂಪವಾದ 'ಇಂಚು' ಎಂಬುದರಲ್ಲಿ ಇದುವೇ ಧ್ವನಿಸುತ್ತದೆ.

ಕನ್ನಡಡಲ್ಲಿ ಸಕಾರವು ಒತ್ತಲ್ಪಟ್ಟಾಗ ಚಕಾರವು ಹುಟ್ಟುವುದಾದರೂ ಅವಸ್ಥಾನ ವಿಶೇಷದಲ್ಲಿ ಜಕಾರವೂ ಆಗಿ ಪರಿಣಮಿಸುತ್ತದೆ. ಉದಾ:—ಮುನ್+ಸೆಱಗು=ಮುಂಜೆಱಗು; ಮುನ್+ಸೂರ್=ಮುಂಜೂರ್; ಪೊನ್+ಸುರಿಗೆ=ಪೊಂಜುರಿಗೆ. ತಣ್+ಸೊಡರ್=ತಣ್ಜೊಡರ್. ಇದರಿಂದ ಒಂದು ವಿಶೇಷವು ನಿಷ್ಪನ್ನವಾಗುತ್ತದೆ. ಇಲ್ಲೆಲ್ಲ ಅನುನಾಸಿಕ ವ್ಯಂಜನದ ಸಾಂನಿಧ್ಯದಿಂದ ಘೋಷತ್ವವನ್ನು ಪಡೆದು ಒತ್ತಡವನ್ನು ಪಡೆದುದು ಸಕಾರವೇ ಆಗಿದೆ. ಹಾಗಾದರೆ ಒತ್ತಲ್ಪಡದ ಸಕಾರವು ಘೋಷವಾದರೆ ಅದು ಹೇಗಿರಬಹುದು? ಎಂದರೆ ಹಿಂದೆಯೇ ಹೇಳಿದಂತೆ ಅದು ಸಹಜವಾಗಿ ಸ಼ ಆಗಿರಬೇಕು.

ತೆಲುಗಿನ ಜಕಾರ ರೂಪದಿಂದಲೂ ಇದು ಸಿದ್ಧವಾಗುತ್ತದೆ. ತೆಲುಗಿನ ಚಕಾರವು 'ತ್ಸ' —ಎಂಬ ಧ್ವನಿಯಾಗಿರುವಂತೆಯೇ ಅದರ ಜಕಾರವು 'ದ್ಸ಼' ಎಂಬ ಧ್ವನಿಯಾಗಿದೆ. ಹೇಗೆ ದಕಾರವು ತಕಾರದ ಘೋಷರೂಪವೋ ಹಾಗೆಯೆ ಸ಼ ಕಾರವು ಸಕಾರದ ಘೋಷರೂಪವೆಂಬುದೂ, ಆದುದರಿಂದ ತೆಲುಗಿನ ಚಕಾರವು ತಕಾರದೊಡಗೂಡಿದ ಸಕಾರವೇ ಎಂಬುದೂ ಇದರಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ.

ತೆಲುಗಿನ ಚಕಾರದಲ್ಲಿ ಸಕಾರಕ್ಕೆ ಸ್ಥಾನವಿರುವಷ್ಟೇ ತಕಾರಕ್ಕೂ ಇರುವಾಗ ಅದು ಸಕಾರ ಜನಿತವೆಂದೇ ತೀರ್ಮಾನಿಸುವುದು ಹೇಗೆ? ಅದೇಕೆ ತಕಾರದಿಂದ ಹುಟ್ಟಿರಬಾರದು? ಎಂಬ ಪ್ರಶ್ನೆಗೆ ಉತ್ತರವೇನೆಂದರೆ—ತೆಲುಗಿನ ಚಕಾರ ಜಕಾರಗಳು ತಕಾರ ದಕಾರಗಳ ವಿಕೃತಿಗಳೆಂದು ಜನ್ಯ–ಜನಕ ಶಬ್ದಗಳ ಮೀಮಾಂಸೆಯು ಮೂಲಕವಾಗಿ ಯಾರೂ ಸ್ಥಿರಪಡಿಸಿರುವುದಿಲ್ಲ. ಆ ತ್ಸ–ದ್ಸ಼ ಗಳು ಇತರ ದ್ರಾವಿಡ ಭಾಷೆಗಳ ಚ-ಜ ಗಳ

ಪ್ರತಿರೂಪಗಳೆಂದೇ ಎಲ್ಲರೂ ತಿಳಿದಿದ್ದಾರೆ. ನಾವು ಮಾಡಿದ ಸಾಧಾರಣವಾದ ವಿವೇಚನೆಯಿಂದ, ತಮಿಳು—ಮಲಯಾಳಗಳ ಚಕಾರಕ್ಕೆ ಸಕಾರವೇ ಮೂಲವಾಗಿರಬಹುದೆಂದು ಕಂಡುಬಂದಿದೆ. ಆ ಚಕಾರಕ್ಕೆ ಆಯಾ ಶಬ್ದಗಳಲ್ಲಿ ತೆಲುಗಿನಲ್ಲಿ ಪ್ರತಿರೂಪವಾಗಿರುವುದು 'ತ್ಸ' ಎಂಬುದೇ ಆಗಿರುವುದರಿಂದ, ಇತರ ಚಕಾರಗಳಿಗೆ ಸಕಾರವು ಮೂಲವೆಂದು ಸಿದ್ಧವಾದರೆ ಅದಕ್ಕೂ ಕೂಡ ಅದೇ ಮೂಲವೆಂದು ಸಿದ್ಧವಾದಂತಾಯಿತು. ಮತ್ತು ತುಳುವನ್ನು ಬಿಟ್ಟರೆ ಬೇರೆ ಯಾವುದರಲ್ಲಿಯೂ ಸಕಾರವು ಚಕಾರವಾಗುವಷ್ಟು ವಿಪುಲವಾಗಿ ತಕಾರವು ಚಕಾರವಾಗುವುದಿಲ್ಲ. ಹಾಗೆ ತುಳುವಿನಲ್ಲಿ ಆಗುವುದಾದರೂ, ನುಡಿಯ ಒಂದು ಪ್ರಭೇದದ ವೈಶಿಷ್ಟ್ಯ ಮಾತ್ರವಾಗಿದೆ. ಇನ್ನೊಂದು ಪ್ರಭೇದದಲ್ಲಿ ಅಲ್ಲಿಲ್ಲ ಹಕಾರವೋ ಸಕಾರವೋ ಇರುತ್ತದೆ ಆದುದರಿಂದ ತೆಲುಗಿನ ಚಕಾರ—ಎಂದರೆ 'ತ್ಸ' ಕಾರಕ್ಕೂ ಸಕಾರವೇ ಮೂಲವೆನ್ನಬೇಕಾಗುತ್ತದೆ. ಇದಕ್ಕೆ 'ಇಸು' 'ಇಂತ್ಸು' ಮಾದುದು ದುರ್ಬಲವಾದ ಆಧಾರವೇನೂ ಅಲ್ಲ.

ಅತಿಯಾಗಿ ಬೆಳೆಯಬೇಕಾಗಿಬಂದ ಈ ಪ್ರತಿಪಾದನದ ನಿಗಮನವಿದು:— ಚಕಾರದ ಉಚ್ಚಾರವು ಎಲ್ಲಾ ದ್ರಾವಿಡ ನುಡಿಗಳಲ್ಲಿ ಒಂದೇ ವಿಧವಾಗಿಲ್ಲ. ತಮಿಳಿನ ದ್ವಿಭಾವವಿಲ್ಲದ ಚಕಾರವು ಹೆಚ್ಚು ಕಡಮೆ ಶಕಾರವೇ; ಹಾಗೆ ಅದು ಆಗದಿರುವಲ್ಲಿಯೂ ಅದು ಊಷ್ಮತೆಯೊಡಗೂಡಿಯೇ ಉಚ್ಚರಿಸಲ್ಪಡುತ್ತದೆ ಮಲಯಾಳದ ಚಕಾರವೂ ಜಕಾರವೂ ಊಷ್ಮತೆಯನ್ನು ಸಂಪೂರ್ಣವಾಗಿ ಇನ್ನೂ ಕಳೆದುಕೊಂಡಿಲ್ಲ. ಕನ್ನಡದ ಚಕಾರವು ದ್ವಿಭಾವವಿಲ್ಲದಿರುವಾಗಲೂ ಶುದ್ಧ ಸ್ಪರ್ಶವರ್ಣ ಚಕಾರವೇ ಆಗಿರುವುದಾದರೂ, ಕನ್ನಡ ಪದಾದಿಯ ಚಕಾರಗಳಲ್ಲಿ ಅರ್ಧಕ್ಕಿಂತ ಹೆಚ್ಚಿನವಕ್ಕೆಂಬಂತೆ ಸಕಾರ ಮೂಲವು ದೊರಕುತ್ತದೆ[೩೪] (ಉಳಿದವುಗಳಲ್ಲಿ ಕೆಲವಕ್ಕೆ ತಕಾರ ಮೂಲವು ಕಾಣುತ್ತದೆ.) ಅಲ್ಲದೆ ಸಕಾರಕ್ಕೆ ದ್ವಿಭಾವ ಬರುವಲ್ಲೆಲ್ಲ ಕನ್ನಡದಲ್ಲಿ ಚಕಾರವೇ ಹುಟ್ಟುತ್ತದೆ. ತುಳುವಿನಲ್ಲಿ ಚಕಾರ ಸಕಾರಗಳು ಧಾರಾಳ ವಿನಿಮಯಿಸುತ್ತವೆ; ಮತ್ತು ಆ ಸಕಾರ ಚಕಾರಗಳೊಳಗೆ ಸಕಾರವೇ ಪೂರ್ವತರವೆಂದು ನಂಬಲು ಎಡೆಯಿದೆ. ತೆಲುಗಿನ ಚಕಾರದಲ್ಲಂತೂ ಚಕಾರದ ಲೇಶವೂ ಇಲ್ಲ; ಸ್ಪಷ್ಟವಾಗಿ ಸಕಾರ ಧ್ವನಿ ಇದೆ; ಅದರ ಘೋಷರೂಪವನ್ನು ಪರೀಕ್ಷಿಸಿದರೂ ಮೂಲ ಸಕಾರದ ಘೋಷಾಂಶವು ಕಾಣುತ್ತದೆ.

ಹೀಗೆ ದ್ರಾವಿಡ ಚಕಾರಗಳಲ್ಲೆಲ್ಲ ಊಷ್ಮವರ್ಣವಾದ ಸಕಾರವು ಅಡಗಿಕೊಂಡಂತಿರುವುದರಿಂದ, ಸಕಾರವೇ ಅದರ ಮೂಲವೆಂದೂ ಸಕಾರವು ದ್ರಾವಿಡಧ್ವನಿಗಳೊಳಗೆ ಒಂದೆಂದೂ ಭಾವಿಸಬಹುದಾಗಿದೆ.

ನನ್ನ ಈ ವಿವೇಚನೆ ಸಮಂಜಸವೆಂದಾದರೆ, ಸಕಾರವು ಅಚ್ಚ-ಕನ್ನಡ ವರ್ಣಮಾಲೆಯಿಂದ ಮಾತ್ರವಲ್ಲ, ಮೂಲ ದ್ರಾವಿಡ ವರ್ಣಮಾಲೆಯಿಂದಲೂ ಬಹಿರ್ಭೂತವಲ್ಲೆಂಬ ನಿರ್ಣಯಕ್ಕೆ ನಾವು ಬರಬೇಕಾಗುತ್ತದೆ. ಮತ್ತು ಮರಾಠಿಯ[೩೫] ಚ-ಜಕಾರಗಳ ಉಚ್ಚಾರ ವೈಶಿಷ್ಟ್ಯಕ್ಕೆ ತೆಲುಗಿನಲ್ಲಿ ಈಗ ಕಾಣುವ ತ್ಸ ಡ್ಸ ಎಂಬ ಉಚ್ಚಾರ ವಿಶೇಷಗಳೇ ಕಾರಣವೆಂದೂ ಅವೆರಡು ದ್ರಾವಿಡ ಧ್ವನಿಗಳೆಂದೂ ಹೇಳಬೇಕಾಗುತ್ತದೆ.

ಆದರೆ ಮರಾಟಿಗರಿಗೆ ತೆಲುಗರೊಡನಿದ್ದುದಕ್ಕಿಂತ ಕನ್ನಡಿಗರೊಡನೆ ಸಂಪರ್ಕ ಹೆಚ್ಚಾಗಿತ್ತೆಂದು ಇತಿಹಾಸವು ಹೇಳುತ್ತದೆ. ಹಾಗಾದರೆ ಕನ್ನಡದ ಚಕಾರ ಜಕಾರಗಳು ಮರಾಠಿಯ ಮೇಲೆ ಪರಿಣಾಮವನ್ನುಂಟು ಮಾಡದೆ—ಎಂದರೆ ಸಂಸ್ಕೃತದ ಮೂಲ ಚಕಾರ ಜಕಾರೋಚ್ಚಾರಗಳೇ ಉಳಿಯುವಂತೆ ಮಾಡದೆ—ತೆಲುಗರ ಚಕಾರ ಜಕಾರಗಳು ಅದರ ಮೇಲೆ ಪ್ರಭಾವವನ್ನು ಬೀರಲು ಕಾರಣವೇನು? ಎಂಬ ಶಂಕೆ ಹುಟ್ಟುತ್ತದೆ. ಇದಕ್ಕಾಗಿ ಬೇರೆ ಬೇರೆ ಸಂಭಾವನೆಗಳನ್ನು ಮಾಡಬಹುದು.

ಮೊದಲು ಕನ್ನಡದಲ್ಲಿ ೞಕಾರ ಱಕಾರಗಳ ಉಚ್ಚಾರವಿತ್ತಷ್ಟೆ? ಅವು ಈಗ ಇಲ್ಲ; ಎಂದರೆ ಅವುಗಳ ಧ್ವನಿ ಬೇರಾಗಿದೆ. ತಮಿಳಿನಲ್ಲಿಯೂ ಒಂದೊಂದು ಪ್ರದೇಶದಲ್ಲಿ ೞಕಾರಕ್ಕೆ ಒಂದೊಂದು ಉಚ್ಚಾರ ಕೇಳಿಬರುತ್ತದೆ. ಪಾಂಡ್ಯ ದೇಶದಲ್ಲಿ ಅದು ಳಕಾರವೇ ಆಗಿರುವುದಾದರೆ, ಚೋಳದೇಶದಲ್ಲಿ ಷಕಾರವಾಗಿದೆ. —ಎಂದರೆ ಅದರ ಮೊದಲಿನ ಉಚ್ಚಾರ ಬದಲಾಗಿದೆ. ಸಕಾರದಿಂದ ಚಕಾರ ಹುಟ್ಟಿತೆಂದರೆ, ಕೆಲವೆಡೆಗಳಲ್ಲಾದರೂ, ಅದರ ಉಚ್ಚಾರ ಬೇರಾಗಿದೆಯೆಂದೇ ಅರ್ಥ. ಹಾಗಾದರೆ ಈಗ ಕನ್ನಡಿಗರು ಚಕಾರ ಜಕಾರಗಳನ್ನು ಉಚ್ಚರಿಸುವಂತೆಯೇ ಒಂದೂವರೆ ಸಾವಿರ ವರ್ಷಗಳ ಮೊದಲೂ ಉಚ್ಚರಿಸುತ್ತಿದ್ದರೆಂಬುದಕ್ಕೆ ಪ್ರಮಾಣವೇನು? ಬರಿಯ ಲಿಪಿ ರೂಪದಿಂದ ಇದರ ನಿರ್ಣಯವಾಗಲಾರದು.

ಲಿಪಿಯಲ್ಲಿ ತೆಲುಗಿನ ಚಕಾರವೂ ಕನ್ನಡದ ಚಕಾರವೂ ಒಂದೇ ವಿಧವಾಗಿವೆ; ಆದರೆ ಉಚ್ಚಾರ ಮಾತ್ರ ಬೇರೆ ಕೇಳಬರುತ್ತದೆ. ಒಂದುವೇಳೆ ಇಂದು ತೆಲುಗರೂ ಮರಾಟಿಗರೂ ಚ ಜ ಕಾರಗಳನ್ನು ತ್ಸ ದ್ಸ ಎಂದು ಉಚ್ಚರಿಸುವಂತೆಯೇ ತೆಲುಗು ನಾಡಿಗೆ ಸಮೀಪದಲ್ಲಿದ್ದ, ಅತ ಏವ ಕನ್ನಡ ನಾಡಿನ ಉತ್ತರದಲ್ಲಿದ್ದ ನಮ್ಮ ಜನರೂ ಉಚ್ಚರಿಸುತ್ತಿದ್ದರೋ ಏನೋ! ಈಗಲೂ ಕನ್ನಡದ ಉತ್ತರ ಜಿಲ್ಲೆಗಳ ನಮ್ಮ ಕನ್ನಡಿಗ ಬಂಧುಗಳಲ್ಲಿ ಕೆಲವರು ಹೀಗೆ ಉಚ್ಚರಿಸುವುದಿದೆ. ಆದರೆ ಅದು ಮರಾಠಿಯ ಪ್ರಭಾವವೆಂದು ತೆಂಕನಾಡಿನವರಾದ ನಾವು ಭಾವಿಸುತ್ತಾ ಬಂದಿದ್ದೇವೆ. ಮನೆಮಾತು ಕನ್ನಡವೇ ಆಗಿರುವ ಉತ್ತರ ಕರ್ನಾಟಕದ ಹಳ್ಳಿಯ ಕನ್ನಡಿಗರಲ್ಲಿ, ಕಲಿಯದ ಭೂರಿ ಜನತೆಯಲ್ಲಿ, ಈ ಉಚ್ಚಾರವು ಈಗಲೂ ಎಷ್ಟರಮಟ್ಟಿಗೆ ಇದೆಯೆಂಬುದು ನನ್ನ ಅರಿವಿನ ಹೊರಗೆ ಅಥವಾ ಮರಾಟಿಗರಿಗೆ ಕನ್ನಡಿಗರ ಸಂಪರ್ಕವಾಗುವ ಮೊದಲೇ, ತೆಲುಗರ ಪೂರ್ವಜರ ಸಂಪರ್ಕವು ಎಲ್ಲೋ ಉತ್ತರದಲ್ಲಿ ಆಗಿಹೋಗಿ, ಮರಾಟಿಯ ಚಜಗಳು ರೂಪಿತವಾಗಿದ್ದುವೋ ಏನೋ! ಅಥವಾ ತೆಲುಗಿನಲ್ಲಿ ಈ ಧ್ವನಿ ಹೇಗೆ ಎಲ್ಲಿಂದಲೂ ಕಡವಾಗಿ ಬಾರದೆ, —ನನ್ನ ಅನುಮಾನದಂತೆ ಮೂಲ ಸಕಾರದಿಂದ ಹೇಗೆ ವಿಕಾಸಗೊಂಡಿತೋ ಹಾಗೆಯೇ, ಅಥವಾ ಬೇರೆ ಸ್ವತಂತ್ರ ಕಾರಣಗಳಿಂದ, ಮರಾಟಿಯಲ್ಲಿಯೂ ರೂಪಗೊಂಡಿತೋ ಏನೋ![೩೬] ಆದರೆ ಇದೆಲ್ಲ ಬರಿಯ ಊಹಗಳು, ಅಥವಾ ಸಂಭಾವನೆಗಳು (suppositions). ಇವಕ್ಕೆ ಆಧಾರವೇನೂ ನನಗೆ ಕಂಡಿಲ್ಲ. ಆಧಾರವಿರುವ ಮಟ್ಟಿಗೆ ಅನುಮಾನಿಸುವುದಾದರೆ— ಈ ಧ್ವನಿ ದ್ವಂದ್ವವು ಮೂಲ ಸಕಾರದ ವಿಕಾರವಾಗಿ ತೆಲುಗಿನಲ್ಲಿ ವಿಕಾಸ ಹೊಂದಿತು; ತೆಲುಗಿನಿಂದ ಅದು ಮರಾಟಿಗೆ ಸಂಕ್ರಮಿಸಿತು; ಅದು ದ್ರಾವಿಡ ಧ್ವನಿಯೆಂಬುದರಲ್ಲಿ ಸಂದೇಹವಿಲ್ಲ —ಇಷ್ಟು ಹೇಳಬಹುದು.

# ಅಡಿಟಿಪ್ಪಣಿಗಳು

೧. ಉದಾ:— ತಮಿಳಿನ ಬರವಣಿಗೆಯಲ್ಲಿ —ತಲೈ; ನುಡಿಯಲ್ಲಿ ತಲೆ. ನಾವು 'ಬಂದಯ್' —ಎಂದು ಇದ್ದುದು 'ಬಂದೆ' —ಎಂದಾಗ, ಕೂಡಲೆ 'ಬಂದೆ' ಎಂದೇ ಮಾಡಿದ್ದೇವೆ.

೨. ತಮಿಳಿನ ಹಳೆಯ ರೂಪಗಳೆಲ್ಲ ಇಂದು ಬಹಳ ಬದಲಾಗಿದ್ದರೂ, ಅವರ ಬರವಣಿಗೆಯಲ್ಲಿ ಅದು ಹೆಚ್ಚಾಗಿ ಕಾಣದಿರುವುದೇ, 'ಹಳೆಗನ್ನಡ—ಹೊಸಗನ್ನಡ' ಎಂಬಂತೆ ಭಾಷಾಭೇದವು ಅದರಲ್ಲಿ ಉಂಟಾಗಲಿಲ್ಲವೆಂದು ಹೇಳಿಸಿಕೊಳ್ಳುವುದಕ್ಕಿರುವ ಕಾರಣಗಳಲ್ಲಿ ಒಂದೆಂದು ನನಗೆ ತೋರುತ್ತದೆ. ಕನ್ನಡದಲ್ಲಿ 'ಪೋಗವೇಳ್ಕುಂ' —ಎಂದಿದ್ದುದು 'ಹೋಗಬೇಕು' —ಎಂದಾದುದನ್ನು ನಾವು 'ಹೊಸಗನ್ನಡ' ಎಂದು ಕರೆದು, ಒಪ್ಪಿಕೊಂಡು ಬರೆಯುತ್ತೇವೆ. ತಮಿಳಲ್ಲಿ, 'ಪೋಗವೇಣ್ಡುಂ' —ಎಂದಿದ್ದುದು ಇಂದು, ಕನ್ನಡದಲ್ಲಿರುವಷ್ಟೇ ರೂಪಾಂತರ ಹೊಂದಿ, 'ಪೋಗೋಣಂ–ಪೋಹಣಂ–ಪೋವೊಣಂ' ಇವುಗಳೊಳಗೆ ಯಾವುದೋ ಒಂದಾಗಿ ಉಚ್ಚರಿಸಲ್ಪಡುತ್ತಿದ್ದರೂ, ಅವರು ಅದನ್ನು 'ಚೆನ್ ತಮಿೞ್' ಅಲ್ಲವೆಂದು ತಿರಸ್ಕರಿಸಿ, ಹಾಗೆ ಬರೆಯುವುದಿಲ್ಲ. —ಇಷ್ಟೇ ವ್ಯತ್ಯಾಸ. ವಾಸ್ತವವಾಗಿ ನೋಡಿದರೆ, ಅವರು 'ಹೊಸ ತಮಿಳ'ಗೆ ಕೊಡಬೇಕಾಗಿದ್ದ ಮಾನ್ಯತೆಯನ್ನು ಕೊಟ್ಟಿರುವುದಿಲ್ಲವೆಂದು ಹೇಳಬೇಕಾಗುತ್ತದೆ. ರಾಘವಾಂಕ, ಬಸವಾದಿ ಮಹನೀಯರು ಹುಟ್ಟದಿರುತ್ತಿದ್ದರೆ ಪ್ರಾಯಃ ನಮ್ಮ ಸ್ಥಿತಿಯೂ ಹಾಗೆಯೇ ಇರುತ್ತಿತ್ತೋ ಏನೋ! ಸಮಾಜ ಧರ್ಮ ಸುಧಾರಕರು ಮಾತ್ರವಲ್ಲ, ವಾಙ್ಮಯ ಸುಧಾರಕರೂ ಆದ ಅಂದಿನ 'ವಾಸ್ತವವಾದಿ' (Realist) ಗಳಿಗೆ 'ನಮೋಸ್ತು'.

೩. "ನಾತ್ರ ಪ್ರಾಯೇಣ ವರ್ಗಾಣಾಂ ದ್ವಿತೀಯಚತುರ್ಥಾಃ" ಎಂಬ ಭಾಷಾಭೂಷಣದ ೧೧ನೆಯ ಸೂತ್ರದ ವೃತ್ತಿಯಲ್ಲಿ ಪ್ರಾಯೇಣೇತಿ ವಚನಾತ್ ಸಂಖ್ಯಾನುಕರಣಾದೌ ದೃಶ್ಯಂತೇ —ಎಂದಿದೆ.

೪. ನಗರದ ಅಪ್ಪಣ್ಣ ಜೋಯಿಸನ (ಕೊಡಗಿನ) ಲಿಂಗರಾಜಸ್ತುತಿ.

೫. ಮುದ್ರಿತ ಪ್ರತಿಗಳಲ್ಲಿ 'ಅವರ್ಣೆ' ಎಂದಿದೆ. ಅರ್ಥದೃಷ್ಟಿಯಿಂದಲೂ ಅಲಂಕಾರ ದೃಷ್ಟಿಯಿಂದಲೂ, 'ಅವರ್ಣ' ಎಂಬ ಪಾಠವೇ ಇದ್ದಿರಬೇಕೆಂದು ತೋರುತ್ತದೆ. ಏಕೆಂದರೆ, ಅರ್ಣ=ನೀರು; 'ಅರ್ಣೆ' ಎಂದಿದ್ದರೆ ಜಲಾಶಯುವೆಂದಾಗಬಹುದು. ದಿವಾಕರನು 'ಜಲಾಶಯು ಕಾಮನು' ಎನ್ನುವುದಕ್ಕಿಂತ 'ಜಲಕಾಮನು' ಎನ್ನುವುದೇ ಯುಕ್ತತರ; 'ಅವರ್ಣ' ಎಂದಿದ್ದರೆ ವಿರೋಧಾಭಾಸವೂ ಪರಿಪುಷ್ಟವಾಗುವುದಲ್ಲದೆ, ಯಮಕವೂ ಉಂಟಾಗುತ್ತದೆ. ಆದರೆ 'ಅವರ್ಣೆ' ಎಂದೇ ಇದ್ದರೂ ಪ್ರಸ್ತುತಕ್ಕೇನೂ ಭಂಗವಿಲ್ಲ.

೬. ವೈಖರೀ ಶಬ್ದನಿಷ್ಪತ್ತಿಃ ಮಧ್ಯಮಾ ಶ್ರುತಿಗೋಚರಾ। ದ್ಯೋತಿತಾರ್ಥಾ ತು ಪಶ್ಯಂತೀ ಸೂಕ್ಷ್ಮಾವಾಗನಪಾಯಿನೀ॥ ಈ ಶ್ಲೋಕದಲ್ಲಿ ಪುರಾತನ ಭಾಷೋತ್ಪತ್ತಿ ವಿಚಾರದ ತಪಃಫಲವು ಸಂಗ್ರಹಿಸಲ್ಪಟ್ಟಿವೆ.

೭. ಕನ್ನಡದಲ್ಲಿ ಪಕಾರವು ಹಕಾರವಾದುದಕ್ಕೆ ಇನ್ನೊಂದು ಊಹವನ್ನು ಕಟ್ಟಬಹುದು. ಸಂಧಿಯಲ್ಲಿ ಪಕಾರವು ವಕಾರವಾಗುತ್ತದಷ್ಟೆ; ಉದಾ:— ಎಳ+ಪೆಱ್=ಎಳವೆಱ್; ಕೆಯ್+ಪೊಲ=ಕೆಯ್ವೊಲ ಇತ್ಯಾದಿ. ವಾಕ್ಯದಲ್ಲಿಯೂ ಈ ಬದಲಾವಣೆ ಇದೆ. ಉದಾ:— ತಮರೂರ್ಗೆಪೋಪ=ತಮುಱೂರ್ಗೆವೋಪ. (ಶ. ದರ್ಪಣ. ಸೂತ್ರ ೬೭ಕ್ಕೆ ಕೊಟ್ಟ ಉದಾಹರಣಭಾಗ) ಪರಿಣಾಮವಾಗಿ ಪದಾದಿ ಪಕಾರವು ವಕಾರವಾದ ನಿದರ್ಶನಗಳಿವೆ. ಉದಾ:— ಪೆರ್ಗಳ>ವೆಗ್ಗಳ. ಪದಾದಿ ವಕಾರವು ನಮ್ಮ ಗ್ರಾಮೀಣರ ಬಾಯಲ್ಲಿ ಮರೆಯಾಗಿ ಕೇವಲ ಸ್ವರಾಕ್ಷರವಾಗುವುದೂ, ಓಷ್ಠ್ಯ ಸ್ವರಾದಿಯಾದ ಶಬ್ದವು ವಕಾರಪೂರ್ವಕವಾಗುವುದೂ ಸಾಮಾನ್ಯವೆಂದು ಪರೀಕ್ಷಿಸಿದರೆ ತಿಳಿಯುವುದು. ಉದಾ:— ವಂಕಿ (ವಕ್ರವಾದ ಒಂದು ಬಗೆಯ ತೋಳಬಳೆ, 'ಕೇಯೂರ')= ಒಂಕಿ. ಓಲೆ=ವಾಲೆ. ಗ್ರಾಮೀಣರ ಬಾಯಿಂದ ಇದು ಸಾಹಿತ್ಯಕ್ಕೂ ದಾಟಿದುದುಂಟು. ಉದಾ:— ಪೋಲ್ ಎಂಬುದರ ರೂಪಾಂತರವಾದುದರಿಂದ 'ವೋಲ್' ಎಂದೇ ಇದ್ದಿದ್ದ ಶಬ್ದವು 'ಓಲ್' ಎಂದಾಗಿದೆಯಷ್ಟೆ. ಗ್ರಾಮೀಣರು ಸುಸಂಸ್ಕೃತರಂತೆ ನಟಿಸಿ ನುಡಿಯುವಾಗ, ಅಲ್ಪಪ್ರಾಣಗಳನ್ನು ಮಹಾಪ್ರಾಣಗಳಾಗಿ ಮಾಡುವಂತೆಯೇ, ಸ್ವರಾದಿಗಳನ್ನು ಹಕಾರಾದಿಯಾಗಿ ಮಾಡುವುದುಂಟು. ಉದಾ:— ಬೆಲ್ಲದ

ಅಚ್ಚು —ಎಂಬುದನ್ನು ಹಚ್ಚು ಎಂದು ನುಡಿಯುವವರು ಬಹಳ ಮಂದಿ ಇದ್ದಾರೆ ಹೀಗೆ ಔಜ್ವಲ್ಯಕ್ಕಾಗಿ ಹಕಾರವನ್ನು ತಂದ ಪರಿಣಾಮ ವಾಗಿಯೇ, ಮೊದಲು 'ಒಂದು' (ಒಂದು ಸಂಮೇಲನೇ ಶ. ದ.) ಎಂದೇ ಇದ್ದ ಧಾತು ಇಂದು 'ಹೊಂದು' ಎಂದಾಗಿದೆ. ಈ ಊಹವು ಸರಿಯೆಂದಾದರೆ ಪಕಾರವು ಹಕಾರವಾಗಿ ಪರಿಣಮಿಸಿದ ಪ್ರಕ್ರಮವನ್ನು 'ಪೋಲ್' ಎಂಬ ಶಬ್ದವನ್ನೆತ್ತಿಕೊಂಡು ಹೀಗೆ ನಿರೂಪಿಸಬಹುದು:— ಪೋಲ್ > ವೋಲ್ > ಓಲ್ > ಹೋಲು. ಆದರೆ ಇದನ್ನು ಸಿದ್ಧಾಂತವಾಗಿ ಎಣಿಸುವುದಕ್ಕೆ ಮೊದಲು, ಹಿಂದೆ ಸೂಚಿಸಿದಂತೆ, ಪ್ರಾಕೃತಭಾಷೆಗಳಲ್ಲಿ ಈ ಬದಲಾವಣೆ ಎಷ್ಟರಮಟ್ಟಿಗೆ ಇದೆಯೆಂದು ತಿಳಿದುಕೊಳ್ಳುವುದು ಅವಶ್ಯ.

೮. ಇಲ್ಲಿ ತೋರಿಸಿದ ತಮಿಳು, ತೆಲುಗು, ಮಲಯಾಳ ರೂಪ ಗಳಿಗೆ ಕಿಟ್ಟೆಲರ ನಿಘಂಟುವಿನ ಹಾಗೂ ರಾ. ನರಸಿಂಹಾಚಾರ್ಯರ History of Kannada Languageನ ಋಣವಿದೆ. ಮತ್ತು ತಮಿಳಿನ ಚಕಾರವೆಲ್ಲ (ಶ್ರಾವಣವಾಗಿ) ಶಕಾರವಾಗಿಯೂ ಇದ್ದರೂ ಚಕಾರವನ್ನು ಮಾತ್ರ ಬರೆದಿರುತ್ತೇನೆ.

೯. ಈಸೀಸಿ ಚುಂಬಿಯಾಯಿಂ — (ಸಂಸ್ಕೃತಚ್ಛಾಯೆ— ಈಷದೀಷತ್ ಚುಂಬಿತಾನಿ.) —ಆನುಷಂಗಿಕವಾಗಿ ಒಂದು ವಿಚಾರ:— 'ಈಸಿ' ಎಂಬುದು, ಕನ್ನಡದ 'ಇನಿತು' ಎಂಬುದಕ್ಕೆ ಸ್ವಲ್ಪ ಎಂದರ್ಥ ಬರುವಾಗ ಸಮಾನಾರ್ಥಕವಾಗುತ್ತದೆ. ಈ ಅರ್ಥವನ್ನು ನಡುಗನ್ನಡ ಹಾಗೂ ಇಂದಿನ ಕೆಲವರ ಆಡುನುಡಿಯಲ್ಲಿರುವ 'ಈಸು' ಮತ್ತು ಹೊಸಗನ್ನಡದಲ್ಲಿ 'ಇಷ್ಟು' —ಎಂಬ ಶಬ್ದಗಳೂ ಕೊಡು ತ್ತವೆ. ಅದಕ್ಕೆ 'ಈಟು' ಎಂಬ ಗ್ರಾಮ್ಯ ರೂಪವೂ ಇದೆ. ಹಾಗಾದರೆ 'ಈಸು' ವಿನ ಮೂಲವು ಪ್ರಾಕೃತವೆ? 'ಈಸಿ' ಎಂಬುದರಲ್ಲಿರುವ ಈಕಾರವು ಕನ್ನಡದ 'ಈ' ಎಂಬ ಸರ್ವನಾಮ ರೂಪವಿಶೇಷ ವೆಂಬಂತೆ ಭ್ರಾಂತಿ ಹುಟ್ಟಿಸಲು ಸಮರ್ಥವಾದುದರಿಂದ 'ಆ' 'ಏ', ಎಂಬ ಇತರ ಸರ್ವನಾಮ ರೂಪ ವಿಕಾರಗಳಿಗೂ ಸಕಾರವು ಅಂಟಿ ಕೊಂಡು, ಸಾಮಾನ್ಯವಾಗಿ 'ನಾಮ' ಗಳಿಗೆಲ್ಲ ಸೇರಿಕೊಳ್ಳುವ 'ಉ' ಎಂಬುದೂ ಕೂಡಿ, ಈಸು, ಆಸು, ಏಸು ಎಂಬ ರೂಪಾಂತರಗಳುಂಟಾ ದುವೆನ್ನಬಾರದೆ? ಇದು ನಿಜವಾದ ಪಕ್ಷದಲ್ಲಿ 'ಈಷತ್' ಎಂಬ ಸಂಸ್ಕೃತ

ರೂಪದಲ್ಲಿರುವ ಈಕಾರವೂ ಹೀಗೆಯೇ ಪರಿಣಮಿಸಿ, ಈಷತ್, ಎಂಬುದರ ಕೊನೆಯ ತಕಾರವೆಯೋ, ಇಲ್ಲವೆ ನಪುಂಸಕಲಿಂಗ ಸೂಚಕವಾಗಿ ಸೇರಿಹೋದ ಕನ್ನಡ 'ತು' ಪ್ರತ್ಯಯವೋ, (ಉದಾ:—ಒಳ್ಳಿತು, ಮೆಲ್ಲಿತು, ಬೆಟ್ಟಿತು, ಇತ್ಯಾದಿ) ಷಕಾರದ ಸಾಂನಿಧ್ಯದಿಂದ ಟಕಾರವಾಗಿ ಪರಿಣಮಿಸಿ, ಒತ್ತಾಟದಿಂದಾಗಿ ಮೊದಲನೆಯ ಪದಾದಿಸ್ವರವು ಹ್ರಸ್ವವಾಗಿ, 'ಇಷ್ಟು' ಹಾಗೆಯೇ ಅಷ್ಟು ಎಷ್ಟುಗಳೂ ಆಗಿರಬಹುದಲ್ಲವೆ? ಈವರೆಗೆ ಇವುಗಳ ಮೂಲವೆಂದು ಭಾವಿಸಲ್ಪಟ್ಟಿರುವ ಇನಿತು,—ಅನಿತು—ಎನಿತು ಅಥವಾ ಇಂತುಟು—ಅಂತುಟು—ಎಂತುಟುಗಳಲ್ಲಿ ಸಕಾರವು ಸೇರಿಕೊಳ್ಳುವುದಕ್ಕೆ ಸಮಂಜಸವಾದ ಕಾರಣವೇನೂ ತೋರುವುದಿಲ್ಲ. ಅಲ್ಲದೆ 'ಇಂತುಟು' ವಿಗೆ ಒಮ್ಮೊಮ್ಮೆ 'ಇಷ್ಟು' ಎಂಬರ್ಥ ಬರುವಂತೆ ತೋರುವುದಾದರೂ, ಹೆಚ್ಚಾಗಿ 'ಹೀಗೆ' ಎಂಬುದೇ ಅದರ ಅರ್ಥವಲ್ಲವೆ? ಹಾಗೆಯೇ ಅಂತುಟು ಎಂತುಟುಗಳು. ಆದುದರಿಂದ ಇಂತುಟು—ಅಂತುಟು—ಎಂತುಟುಗಳಾದರೂ ಇಂತು—ಅಂತು—ಎಂತುಗಳಿಂದಲೇ ರೂಪುಗೊಂಡುವೆಂದು ಹೇಳುವುದು ಮೇಲು; ಹೊರತು ಇನಿತು—ಅನಿತು—ಎನಿತುಗಳಿಂದೆಂದಲ್ಲ. ತಾತ್ಪರ್ಯವೇನೆಂದರೆ ಈಸು—ಇಷ್ಟು; ಆಸು—ಅಷ್ಟು; ಏಸು—ಎಷ್ಟು, ಇವುಗಳ ಮೂಲವು ಈಸಿ—ಈಷತ್—ಎಂಬುವುಗಳಲ್ಲಿ ಅಡಗಿದೆಯೆಂದು ನನಗೆ ತೋರುತ್ತದೆ. ಇನಿತು ಎಂಬುದರ ಇನ್ನೊಂದು ರೂಪವಾಗಿಯೇ ತೋರುವ ಇನಿಸು—ಎಂಬುದರಲ್ಲಿ ಸಕಾರವು ಕಾಣಿಸಿಕೊಳ್ಳುವುದಕ್ಕೂ 'ಈಸು' ಎಂಬ ರೂಪವು ಕಾರಣವಾಗಿರಲೂಬಹುದು.

೧೦. ತುಳುವಿನಲ್ಲಿ, ಮಲಯಾಳದಲ್ಲಿಯೂ, ಒಂದು ವಿಶಿಷ್ಟವಾದ ಉಕಾರಧ್ವನಿ ಇದೆ. ಉತ್ತರದ ನುಡಿಗಳ 'ಸಂವೃತ ಅಕಾರ' ವನ್ನುಚ್ಚರಿಸಲು ಬೇಕಾದಷ್ಟು ಮಾತ್ರ—ಅದಕ್ಕಿಂತಲೂ ಕಮ್ಮಿ—ಬಾಯಿತೆರೆದಿಟ್ಟುಕೊಂಡು, ಓಷ್ಠಪ್ರಯತ್ನವಿಲ್ಲದೆ ಉಕಾರವನ್ನುಚ್ಚರಿಸಲು ತೊಡಗಿದರೆ, ಈ ವಿಶಿಷ್ಟ 'ಸ್ವರ' ವುಂಟಾಗುತ್ತದೆ. ಅಥವಾ ಇದು ಕೇವಲ ವ್ಯಂಜನವನ್ನು ಇತರರಿಗೆ ಕೇಳಿಸಲು ಪ್ರಯತ್ನಿಸಿದರೆ ಉಂಟಾಗುವ ಧ್ವನಿಯಂತಿದೆ ಎಂದೂ ಹೇಳಬಹುದು. ಆದುದರಿಂದ ಅದನ್ನು ಗುರುತಿಸುವುದಕ್ಕಾಗಿ ವ್ಯಂಜನಮಾತ್ರವನ್ನು ಬರೆದು ಒಂದು' (ಕೋಮ) ಇಂತಹ ಚಿಹ್ನವನ್ನು ಹಾಕಿದ್ದೇನೆ

೧೧. **ಎಸಡಿ** ಎಂಬುದು ತಮಿಳಿನಲ್ಲಿ 'ನಂಡು' ಎಂದು ಇರುವುದಾದರೂ 'ನಂಡು' ವಿಗಿಂತ ಞಂಡ್'ವೇ ಪ್ರಾಚೀನ ರೂಪವೆಂದೂ ಅದಕ್ಕಿಂತಲೂ, 'ಡೆಂಜಿ'ಯು ಯಾವುದರ ವಿಪರ್ಯಯವಾಗಿದ್ದಿರಬಹುದೋ ಆ 'ಜೆಂಡಿ' ಮತ್ತಷ್ಟು ಪುರಾತನವೆಂದೂ ಹೇಳಬೇಕಾಗುತ್ತದೆ. ಏಕೆಂದರೆ ಸಕಾರವು ಮೂಲರೂಪವಾಗಿದ್ದರೆ—ಇದು ನನ್ನ ಪ್ರತಿಪಾದ್ಯ—ಅದು ನೆಟ್ಟಗೆ ನಕಾರವಾಗಲಾರದು; ನಕಾರವಂತೂ ಸಕಾರವನ್ನು ಹೇಗೂ ಹುಟ್ಟಿಸಲಾರದು. ಆದುದರಿಂದ ಆ ರೂಪಗಳು ಹೀಗೆ ಉಂಟಾಗಿರಬೇಕು:—

(1) (2) (3) (4) (5) (6) (7) (8)

ಎಸಡಿ > ಎಯಡಿ > ಎಯ್ಡಿ > ಎಞಡಿ > ಞೆಂಡಿ > ಞಂಡಿ > ಞಂಡ್ > ನಂಡು

V V V V

(3)A ಏಡಿ ಎಂಡಿ(4)A (6)A ಜೆಂಡಿ ನಂಡಿ(7)A

V V V

ಎಂಡ್ರಿ(4)B (6)B ಡೆಂಜಿ ನಳ್ಳಿ (7)B

ಇವುಗಳೊಳಗೆ 1, 3A, 7B ರೂಪಗಳು ಕನ್ನಡದಲ್ಲಿಯೂ, 4B ತೆಲುಗಿನಲ್ಲಿಯೂ, 6B ತುಳುವಿನಲ್ಲಿಯೂ, 7 ಮಲಯಾಳದಲ್ಲಿಯೂ, 8 ತಮಿಳಿನಲ್ಲಿಯೂ ರೂಢವಾಗಿವೆ. ಮೂಲ ಶಬ್ದವು ಹೀಗೆ ಬೇರೆ ಬೇರೆ ನುಡಿಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ನೆಲೆಗೊಳ್ಳುವುದಕ್ಕೆ ಮೊದಲು, ಉಚ್ಚಾರದಲ್ಲಿ ಯಾವ ಯಾವ ರೂಪ ವಿಶೇಷಗಳನ್ನು ಕ್ರಮವಾಗಿ ಪಡೆದಿರಬಹುದು—ಪಡೆದಿರಬೇಕಾಗುತ್ತದೆ, ಎಂಬುದನ್ನು ನಿದರ್ಶಿಸುವುದಕ್ಕಾಗಿ ಮಧ್ಯಕಾಲೀನ ರೂಪಗಳನ್ನು ಸಂಭಾವಿಸಿದುದಾಗಿದೆ.

೧೨. ಇದು ಚಿಂತ್ಯವೆಂದು ನನಗೆ ತೋರುತ್ತದೆ.

೧೩. ಹಿಂದೆಯೇ ನಾನು ನಮ್ರತೆಯಿಂದ ಸೂಚಿಸಿದಂತೆ, ಕಾಲ್ಡ್ವೆಲ್ಲರಿಗೆ ಕನ್ನಡದ 'ಅನುಭವ' ವು ಸಾಕಷ್ಟು ಇಲ್ಲದಿದ್ದುದರಿಂದ ಅವರು 'ಇಚು' ಕನ್ನಡದ ಹಳೆಯ ರೂಪವೆಂದೂ 'ಇಸು' ಎಂಬುದು ಹೊಸ ರೂಪವೆಂದೂ ಭ್ರಮಿಸಿದ್ದಾರೆ. ಆದರೆ ಕನ್ನಡದಲ್ಲಿ 'ಚುತ್ವ' ವು ಬರುವಾಗ ಇಕಾರ ಇರುವುದೇ ಇಲ್ಲವೆಂಬುದು ನಮಗೆಲ್ಲ ಗೊತ್ತಿದೆ. ಉದಾ:— ಕಡೆಗಣಿಸು=ಕಡೆಗಣ್ಚು.

೧೪. ಅರವೆ ಅರಲ್ದ ಬಯಲ್ದಾ ।
ವರೆಗಳ ಪೊದಱುಗಳೊಳರವೆ ಎಳದಳಿರ ಲತಾಂ ॥
ತರದೊಳವಿದವಿದುಕಾಡುಗು ।
ಮಿರುಳಪ್ಪಿನಮಱಸು ವಿನಿಯಃಳಂ ಚಕ್ರಾಹ್ವಂ ॥

ಶ. ದರ್ಪಣ. ಸೂ. ೫೬ಕ್ಕೆ ಕೊಟ್ಟ ಉದಾಹರಣಪದ್ಯವಿದು. ಚಕ್ರವಾಕವು ನೀರ ಬಳಿಯಲ್ಲಿರುವ ಪಕ್ಷಿಯೆಂಬುದು ಪ್ರಸಿದ್ಧ; ತಾವರೆಯಾದರೂ ನೀರಿಲ್ಲದ 'ಬಯಲ'ಲ್ಲಿ ಬೆಳೆಯದು; ಹಾಗಾದರೆ ಇದು ನೀರು ತುಂಬಿರುವ ಬತ್ತದ ಗದ್ದೆಯ ಬಯಲು ಅಲ್ಲವೆ?

೧೫. ಪಸಿರ್ ಅಥವಾ ಪಸುರ್, ಕಿಸುರ್—ಇವುಗಳಂತೆಯೇ 'ಬಿಸು' ಎಂಬುದಕ್ಕೆ 'ಬಿಸಿರ್' ಎಂಬೊಂದು ರೂಪವಿದ್ದು ಮತ್ತೆ ಲುಪ್ತವಾಗಿರಬಹುದೆ? ಹಾಗಿದ್ದರೆ 'ಬಿಸಿಲ್' —ಎಂಬುದು ಅದರ ರೂಪಾಂತರವಾಗಿರಲಾರದೆ?

೧೬ ಶಬ್ದಮಣಿದರ್ಪಣ ಅವ್ಯಯ ಪ್ರಕರಣ.

೧೭. 'ಕಿಚ್ಚು' ಎಂಬುದಕ್ಕೆ 'ಕಿರ್ಚು' ಎಂಬ ಇನ್ನೊಂದು ರೂಪವಿದೆ. ಇತರ ದ್ರಾವಿಡ ಭಾಷೆಗಳಲ್ಲಿ ಈ ಶಬ್ದಗಳಲ್ಲಿ ರೇಫ ಧ್ವನಿ ಇಲ್ಲ. ಮೂಲ ರೂಪಗಳು ಹೆಚ್ಚಾಗಿ ಕರ್ಕಶವಾಗಿದ್ದು ಕನ್ನಡದಲ್ಲೇ ಕಾಣುತ್ತವೆಂದು ಕಾಲ್ಡ್‌ವೆಲ್ಲರೂ ಹೇಳುತ್ತಾರೆ. ಆದುದರಿಂದ 'ಕಿರ್ಚು' ಎಂಬುದು ಮೂಲವಾಗಿದ್ದಿರಲೂಬಹುದು. ಆದರೆ 'ಕಿಚ್ಚು' ಕೂಡ ನಮ್ಮ ಸಾಹಿತ್ಯದಲ್ಲಿ ಅಷ್ಟೇ ಹಳೆಯದಾಗಿದೆ. ಪಂಪನು ಎರಡನ್ನೂ ಪ್ರಯೋಗಿಸಿದ್ದಾನೆ. ಉದಾ:— "ಭೀಮಸೇನಂ ಪುರೋಚನಂ ಮರಕೆಂದಿದೆರ್ೂೀವರಿ಼ಯೊಳ್ ಕಿಚ್ಚಂ ಕೊಳಿಸಲೊಡಂ................" (ವಿಕ್ರ. ವಿ. ೩—೪ನೆಯ ಪದ್ಯದ ಮೇಲಣ ಗದ್ಯ.) "ಬಟ್ಟೆಯ ನಂಜಿನ ಕಿರ್ಚಿನ ದೆಸೆಗೆ ಕರಂ ಪ್ರಯತ್ನಪರರಾಗಿಂ............" (ವಿಕ್ರ. ವಿ. ೨—೯೬ನೆಯ ಮೇಲಿನ ಪದ್ಯದ ಗದ್ಯ) 'ಕಿಚ್ಚು' 'ಕಿಸು'ವಿನಿಂದ ಹುಟ್ಟಿತೆಂದಾದರೆ "ಕಿಚ್ಚು" ಎಂಬುದೇ ಪೂರ್ವರೂಪವಾಗಿದ್ದು, ಅನಂತರ ಕರ್ಚು, ಚುರ್ಚು, ಪೆರ್ಚು, ಬಿರ್ಚು—ಇತ್ಯಾದಿಗಳ ಸಾಹಚರ್ಯದಿಂದ 'ಕಿರ್ಚು' ಎಂಬ ರೂಪವುಂಟಾಗಿರಲೂ ಬಹುದು ಕಿರ್ಚು ಎಂಬುದೇ ಜನಕ, 'ಕಿಚ್ಚು'

ಜನ್ಯ —ಎಂದು ನಿರ್ಣಯವಾದ ಪಕ್ಷದಲ್ಲಿ, ಆ 'ಕಿರ್ಚು' ಎಂಬುದಕ್ಕೆ 'ಕಿಸು' ಮೂಲವಾಗಿರದೆ, ಬೇರಾವುದೋ ಮೂಲವಾಗಿರಬೇಕೆಂದು ಹೇಳಬೇಕಾಗುವುದು.

೧೮. ತಮಿಳಿನ ಈ ಶಕಾರವು, 'ಶಬ್ದ' ಎಂಬುದರಲ್ಲಿ ನಾವು ಉಚ್ಚರಿಸುವ ಶಕಾರವಲ್ಲ; ಅದಕ್ಕೂ ಸಕಾರಕ್ಕೂ ಮಧ್ಯದಲ್ಲಿದೆ. ಇದನ್ನು ಚಕಾರವೆಂದೇ ತಿಳಿದರೂ ಇಲ್ಲಿ ಇದು ಪದಮಧ್ಯದಲ್ಲಿರುವುದೆಂಬ ಕಾರಣದಿಂದ ಇತರ ವರ್ಗೀಯಗಳಂತೆ ಜಕಾರವಾಗಿ ಪರಿಣಮಿಸುವುದಿಲ್ಲವೆಂಬುದು ಲಕ್ಷಿಸತಕ್ಕುದಾಗಿದೆ.

೧೯. 'ಇಸು' ಪ್ರತ್ಯಯಕ್ಕೆ ಪ್ರೇರಣಾರ್ಥವು ಮಾತ್ರವಲ್ಲ, ಅಕರ್ಮಕವನ್ನು ಸಕರ್ಮಕವಾಗಿಯೂ, ಅಧಾತುವನ್ನು ಧಾತುವಾಗಿ ಮಾಡುವ ಶಕ್ತಿ ಇದೆ.

೨೦. ಹೊಸಗನ್ನಡದಲ್ಲಿ 'ಕಾಯಿಸು' ಎಂಬ ರೂಪವೂ ಕಾಣುವುದಾದರೂ, ಮೊದಲು ಇದಕ್ಕೆ 'ಕಾಸು' ಎಂಬ ಒಂದೇ ರೂಪವಿದ್ದಂತೆ ತೋರುತ್ತದೆ ಉದಾ:— ದೋಃಷಿಪಿಡಿವಂತೆ ದಿವ್ಯದ। **ಕಾಸಿದ** ಕುಟಿಮಂ..........................................( ಪಂಪರಾಮಾಯಣ )

೨೧. ಯ್ ರ್ ಲ್ ಣ್ ನ್ ಳ್ ೞ್ ಱ್ —ಎಂಬುವುಗಳು. ( ಶ. ದ. ಸೂ–೪೮ )

೨೨. ಇದೂ ಹವೀಕರ ನುಡಿಯಲ್ಲಿ 'ಕವುಂಚು' ಎಂದು ಗುರೂಪಧೆಯಾಗಿಯೇ ಇದೆ. ( ಉಪಧೆ=Penultimate )

೨೩. ನೆನೆ+ಅಸು=ನೆನಸು ಎಂಬೊಂದು ರೂಪವಿದೆ. ಆದರೆ ಶಬ್ದಹಾನಿಯೊದಗಿ, ಪ್ರತ್ಯಯವು ವ್ಯರ್ಥವಾಗಿ, ನೆನೆ=ನೆನಸು ಎಂದು ಸಮಾನಾರ್ಥಕವಾಗಿವೆ.

೨೪. ಮೂಸು ಎಂಬುದು 'ಮೂಗು' ಎಂಬರ್ಥದ ಮೂಲ ಶಬ್ದಕ್ಕೆ 'ಸು' ಸೇರಿ ಉಂಟಾದುದೆಂಬುದು ಸ್ಪಷ್ಟ. ಕೋ ಎಂಬ

ಧಾತುವಿದೆ. ದರ್ಪಣಕಾರನು ಕೋ=ಸೂತ್ರಪ್ರವೇಶೇ; ಕೋಸು=ಸೂತ್ರ ಪ್ರವೇಶೇ —ಎಂದು ಎರಡಕ್ಕೂ ಒಂದೇ ಅರ್ಥವನ್ನು ಕೊಟ್ಟಿದ್ದರೂ, ಮೂಲದಲ್ಲಿ, ಎರಡನೆಯ ರೂಪವು ಪ್ರೇರಣಾರ್ಥಕವಾಗಿಯೇ ಉಂಟಾಗಿರಬೇಕು. ಏಕೆಂದರೆ 'ಕೋ' ಸಹಜವಾಗಿ ಸಕರ್ಮಕಧಾತು. (ಪ್ರಯೋಗ— 'ಒಂದೊಂದು ಕೆಂದಾವರೆಯೆಸಳ್ಗಳಂ ಕೋದು —ಚಂದ್ರಪ್ರಭಪುರಾಣದಿಂದ ಕಿಟ್ಟೆಲರು ಉದ್ಧರಿಸಿದ ಭಾಗ.)

೨೫. ವರ್ಗೀಯಕ್ಕೆ ಅವರ್ಗೀಯವು ಪರವಾದಾಗಲೂ ದ್ವಿತ್ವವು ವರ್ಗೀಯಕ್ಕೆ ಬರುವುದು ಉದಾ:— ವಿಗ್ರಹ=ವಿಗ್ಗ್ರಹ; ವಜ್ರ=ವಜ್ಜ್ರ ಇತ್ಯಾದಿ. ಆ ವರ್ಗೀಯವು ಅನುನಾಸಿಕವಾಗಿದ್ದರೂ ಅದಕ್ಕೇ ಒತ್ತಡ ಬೀಳುವುದು. ಉದಾ:— ಅನ್ಯಾಯ=ಅನ್ನ್ಯಾಯ. ಎರಡೂ ಅನುನಾಸಿಕಗಳಾಗಿದ್ದಲ್ಲಿ 'ಬಲಾಬಲಿಕೆ'ಯ ಮೇಲೆ ಅವುಗಳಲ್ಲೊಂದು ದ್ವಿತ್ವವನ್ನು ಪಡೆಯುವುದು. ಉದಾ:— ಅಣ್ಮು=ಅಣ್ಮ್ಮು. ಇದನ್ನು 'ಅಣ್ಣ್ಮು' ಎಂದು ಉಚ್ಚರಿಸಲು ಸಾಧ್ಯವಾಗುವುದಾದರೂ, ಇದು ಮತ್ತೆ 'ಅಮ್ಮು' ಎಂದು ರೂಪಾಂತರ ಹೊಂದಿರುವುದರಿಂದ, ಸಹಜೋಚ್ಚಾರದಲ್ಲಿ ಮಕಾರಕ್ಕೇ ದ್ವಿತ್ವವು ಬರುವುದೆಂದು ಗೊತ್ತಾಗುತ್ತದೆ. ಕಣ್ನೀರು ಎಂಬಲ್ಲಿ ಣಕಾರಕ್ಕೇ ಒತ್ತಡವು ಬಿದ್ದುದರಿಂದ ಅದಿಂದು 'ಕಣ್ಣೀರು' ಎಂದಾಗಿದೆ. ಹಾಗೆಯೇ ಒಂದು ಅವರ್ಗೀಯಕ್ಕೆ ಅವರ್ಗೀಯವೇ ಪರವಾದರೂ ಬಲಾಬಲಿಕೆಯ ಮೇಲೆ ದ್ವಿತ್ವೋಚ್ಚಾರವುಂಟಾಗುತ್ತದೆ. ಆದರೆ ಅವರ್ಗೀಯಕ್ಕೆ ಅವರ್ಗೀಯ ಸೇರುವಾಗ, ಕನ್ನಡದಲ್ಲಿ ಮೊದಲು ರೂಢವಾಗಿದ್ದ ಶಿಥಿಲದ್ವಿತ್ವದಂತೆ ಕೆಲವು ಬಾರಿ ಕವಿಗಳು, ಹೆಚ್ಚಾಗಿ ಪದಾರಂಭದಲ್ಲಿ ಮತ್ತು ಕೆಲವು ಬಾರಿ ಸಮಾಸಾಂಶದ ಆರಂಭದಲ್ಲಿ ಕೂಡ ಶಿಥಿಲೋಚ್ಚಾರವನ್ನು ಮಾಡಬೇಕಾಗುವಂತೆ ಬರೆಯುತ್ತಾರೆ. (ಉದಾ:— "ರಾವಣಾಸುರಮಥನ ಶ್ರವಣಸುಧಾವಿನೂತನ ಕಥನ ಕಾರಣ" —ನಾರಣಪ್ಪನ ಭಾರತ; ನಾಂದೀಪದ್ಯ.) ಇಂತಹ ಸಂದರ್ಭಗಳಲ್ಲಿ ಒತ್ತದಿರುವುದೇ ಚೆಂದ. ಆದರೆ ಸಮಾಸಾಂಶದ ಆರಂಭದಲ್ಲಿ ಅಷ್ಟು ಹಿತವಲ್ಲ. ಆದರೆ 'ನಿರಂಕುಶಾಃ ಕವಯಃ.' ಈ ಶೈಥಿಲ್ಯ ವಿಚಾರವು ಹೆಚ್ಚಿನಮಟ್ಟಿಗೆ ಕನ್ನಡ ಧ್ವನಿವಿಜ್ಞಾನಕ್ಕೆ ಸಂಬಂಧಪಡವಿದ್ದರೂ —ಏಕೆಂದರೆ, ಇಲ್ಲಿ ಅನುನಾಸಿಕ ವ್ಯಂಜನಗಳ ಹೊರತಾಗಿ, ಬೇರೆ ವರ್ಗೀಯ ವ್ಯಂಜನಕ್ಕೆ ಸ್ವಭಿನ್ನ ವ್ಯಂಜನವು ಪರವಾಗು

ವುದೇ ಇಲ್ಲ. —ಧ್ವನಿಯ ಸಾಮಾನ್ಯ ತತ್ತ್ವವಿಚಾರವಾದುದರಿಂದ ಇಲ್ಲಿ ಪ್ರಸ್ತಾವಿಸಲಾಗಿದೆ.

೨೬. ಅಘೋಷ ಸ್ಪರ್ಶ ವ್ಯಂಜನಗಳಿಗೆ ಕನ್ನಡದಲ್ಲಿ ಪ್ರಾಯಃ ಯಾವ ಭಾಷೆಯಲ್ಲಿಯೂ ಶಿಥಿಲದ್ವಿತ್ವವಿಲ್ಲ. ಚಕಾರವು ಅಘೋಷವೂ ಸ್ಪರ್ಶವೂ ಆದುದರಿಂದ 'ಅಮರ್ಚು' ಇತ್ಯಾದಿಗಳಲ್ಲಿ ಅದೆಂದೂ ಶಿಥಿಲ ದ್ವಿತ್ವವೆನ್ನಿಸದು.

೨೭ ಜಱುಚು —ಮೊದಲಾದ ಮೂರು ನಾಲ್ಕು ಮಾತ್ರ— ಈ ನಿಯಮಕ್ಕೆ ಅಪವಾದಗಳು.

೨೮. ಮನಸ್ಸು, ತಪಸ್ಸು —ಇತ್ಯಾದಿಗಳಲ್ಲಿ ಸಕಾರಕ್ಕೆ ದ್ವಿತ್ವ ವಿದೆ; ಆದರೆ ಅವು ಕನ್ನಡ ಪ್ರಕೃತಿಗಳಲ್ಲವೆಂಬುದನ್ನು ಲಕ್ಷ್ಯಿಸಬೇಕು. ಮತ್ತು ಸಕಾರವು ಒತ್ತಲ್ಪಟ್ಟರೆ ಸಕಾರಕ್ಕೇ ದ್ವಿರ್ಭಾವ ಬರಬೇಕು ಹೊರತು ಚಕಾರ ತರುವುದು ಹೇಗೆ ? ಎಂಬ ಪ್ರಶ್ನೆಯಲ್ಲಿಯೂ ಸಾಕಷ್ಟು ವಾಸ್ತವಿಕತೆ ಇಲ್ಲ. ಏಕೆಂದರೆ, ಅದು ಒತ್ತಡದ ಸ್ವರೂಪವನ್ನು ಅವಲಂಬಿಸಿರುತ್ತದೆ. ತಮಿಳಿನಲ್ಲಿ ಱ ಎಂಬುದಕ್ಕೆ ಇನ್ನೊಂದು ಱ ಎಂಬುದರ ಯೋಗವಾಗಿ ಒತ್ತಲ್ಪಟ್ಟಾಗ ಅದೇ ಧ್ವನಿ ಹುಟ್ಟದೆ — 'ಟ಼ಱ' (ಇಂಗ್ಲಿಷಿನಲ್ಲಿ 'ttr' ಎಂದು ಬರೆದು ಇಂಗ್ಲಿಷರು t ಯನ್ನು ಉಚ್ಚರಿಸುವಂತೆಯೋ ಉಚ್ಚರಿಸಿದರೆ ಈ ಧ್ವನಿಯಾಗುತ್ತದೆ) ಎಂಬಂತಾಗುವುದು. ಈ ದ್ರಾವಿಡ ಒತ್ತಡದ ಇನ್ನೊಂದು ವಿಶಿಷ್ಟತೆ ಸಕಾರವು ಒತ್ತಲ್ಪಟ್ಟು ಚಕಾರವಾಗುವಲ್ಲಿ ಕಾಣುವುದೇಂದರೆ ಆಶ್ಚರ್ಯವೆಲ್ಲಿ?

೨೯. ಸಂಸ್ಕೃತದಲ್ಲಿಯೂ ಛಕಾರವು ಯಾವುದೋ ಒಂದು ವಿದಧ ಒತ್ತಡದಿಂದ ಹುಟ್ಟಿರಬಹುದೇ ಎಂದು ಶಂಕಿಸುವುದಕ್ಕೆ ಎಡೆಯಿರುವಂತೆ ಕಾಣುತ್ತದೆ. ಕೆಲವೆಡೆ ನಿರರ್ಥಕವಾಗಿ ನಾನು ಉದಾಹರಿಸಿದ ತಮಿಳಿನ 'ಚಾಂದುಪ್ಪೊಟ್ಟು' ಎಂಬುದರಂತೆ ಅದಕ್ಕೆ ದ್ವಿತ್ವವು ಬರುತ್ತದೆ. ಉದಾ:— ನೀಲ+ಛವಿ=ನೀಲಚ್ಛವಿ ಇತ್ಯಾದಿ.

30. The difference consists in the pronunci-

ation of this consonant in the beginning of a word as well as in the middle as a sonant i, e, as ś (Page 22)

೩೧. ಸಂಸ್ಕೃತದಲ್ಲಿ ಶ ಷ ಸ ಗಳಿಗೆ ಘೋಷರೂಪವಿಲ್ಲದಿದ್ದರೂ ಇತರ ಎಷ್ಟೋ ಆರ್ಯಭಾಷೆಗಳಲ್ಲಿ ಇದೆ; ಮತ್ತು ಅವುಗಳಲ್ಲಿ ಸಕಾರವೇ ಅವಸ್ಥಾನ ವಿಶೇಷದಲ್ಲಿ ಸ಼ ಕಾರದ ಉಚ್ಚಾರವನ್ನು ಪಡೆಯುತ್ತದೆ. ಉದಾ:— ಸಂಸ್ಕೃತದ 'ಅಸ್' (ಇರು) ಎಂಬ ಧಾತುವಿನ ಇಂಗ್ಲಿಷ್ ರೂಪದಲ್ಲಿ, ಬರವಣಿಗೆಯಲ್ಲಿ is ಎಂದು ಸಕಾರ (s) ವೇ ಇದ್ದರೂ -- ಇದರಿಂದ ಇಂಗ್ಲಿಷಿನಲ್ಲಿಯೂ ಅದು ಮೊದಲು ಸಕಾರ ರೂಪದಲ್ಲಿಯೇ ಇತ್ತೆಂದು ಹೊಳೆಯುತ್ತದೆ. ಉಚ್ಚಾರದಲ್ಲಿ ಇಂದು ಸ಼ಕಾರವೇ ( Z ) ಕೇಳುತ್ತದೆ. ತಮಿಳು ನಾಡಿನ ಕೆಲವೆಡೆಗಳಲ್ಲಿಂದು ಟಕಾರವು ಷಕಾರದ ಘೋಷ ರೂಪಕ್ಕೆ ಸಮವಾಗಿ 'ಷ಼' ಎಂಬಂತೆ ನುಡಿಯಲ್ಪಡುತ್ತದೆ.

೩೨. ಈ ಶಬ್ದದಲ್ಲಿಯೂ ಸಕಾರವೇ ಮೂಲವೆಂದು ತೋರುತ್ತದೆ. ಏಕೆಂದರೆ, ಹಕಾರವಂತೂ ದ್ರಾವಿಡ ವರ್ಣವಲ್ಲದುದರಿಂದ ಮೂಲರೂಪವಲ್ಲ; ಆದರೆ ಅದನ್ನು ತಕಾರ ಚಕಾರಗಳು ಹುಟ್ಟಿಸಲಾರವು; ಇವುಗಳೊಳಗೆ ಸಕಾರಕ್ಕೆ ಮಾತ್ರ ಆ ಶಕ್ತಿ ಇದೆಯೆಂದು ಹೇಳಬೇಕಾಗುವುದರಿಂದ, ( ಕಸುವು,—ಕಹಿ—ಆದಂತೆ ) ತಕಾರ ಚಕಾರಗಳು ಹೇಗೂ ಸಕಾರದಿಂದ ಹುಟ್ಟುವವೆಂದು ಈ ಮೊದಲೇ ನಾವು ತಿಳಿದುಕೊಂಡಿರುವುದರಿಂದ ತುಳುವಿನ ಈ ಶಬ್ದದ ಹಲವು ರೂಪಗಳೊಳಗೆ 'ಸೆಡಿಲ್' ಎಂಬುದೇ ಮೂಲವೆನ್ನಬೇಕಾಗುತ್ತದೆ. ಅದನ್ನು ಹೀಗೆ ತೋರಿಸಬಹುದು.

ಸೆಡಿಲ್— { —>ಹೆಡಿಲ್'
—>ತೆಡಿಲ್'
—>ಚೆಡಿಲ್' }

೩೩. ಈ ವಿಷಯದಲ್ಲಿ ನಾನಾ ಮತಭೇದಗಳಿವೆ. ಆದರೆ ಅವುಗಳನ್ನು ಮಥಿಸುವುದಕ್ಕೆ ಇದು ಸ್ಥಳವಲ್ಲ.

೩೪. ಕನ್ನಡ ನಿಘಂಟುಗಳಲ್ಲಿ ಚಕಾರಾದಿಯಾದ ಶಬ್ದಗಳನ್ನು ಪರೀಕ್ಷಿಸಿರಿ.

೩೫. 'ಸಿಂಧಿ' ಯಲ್ಲಿಯೂ ಈ ವಿಶೇಷವಿದೆಯೆಂದು ಹೇಳಿಕೆ ಇದೆ.

೩೬. 'ಜ್ಞ' ಎಂಬುದು 'ದ್ನ್ಯ' ಎಂದು ಮರಾಠಿಯಲ್ಲಾಗಲು, ಅದರ ಜಕಾರದಲ್ಲಿ ದಕಾರದ ಅಂಶವಿರುವುದೇ ಕಾರಣವೆಂಬುದು ಹಿಂದೆ ಸ್ವರಪ್ರಕರಣದಲ್ಲಿ ವಿವೃತವಾಗಿದೆ. ಆದರೆ ತೆಲುಗರು ಇದನ್ನು ದ್ನ್ಯ ಎಂಬಂತೆ ಉಚ್ಚರಿಸುವುದು ಕೇಳಿಬರುವುದಿಲ್ಲ. ಆದುದರಿಂದ, ಮರಾಠಿಗೆ ದ್ರಾವಿಡ ಎಂದರೆ ತೆಲುಗಿನ ಜಕಾರೋಚ್ಚಾರವು (ದ್ಸ) ಸಂಕ್ರಾಂತವಾದ ಬಳಿಕವೇ, ಜ್ಞ ಎಂಬುದಕ್ಕೆ ಮರಾಠಿಯಲ್ಲಿ ದ್ನ್ಯ ಎಂಬ ಉಚ್ಚಾರವು ಸ್ವತಂತ್ರವಾಗಿ ವಿಕಾಸಗೊಂಡಿತೆಂದು ಹೇಳಬೇಕಾಗುತ್ತದೆ; ಎಂದರೆ ದ್ನ್ಯ ಎಂಬ ಉಚ್ಚಾರವು ಅತಿಪುರಾತನದಲ್ಲಿ, ಮತ್ತೆ ಉಂಟಾದ ವಿಕೃತಿ ಎಂಬುದರಲ್ಲಿ ಸಂದೇಹವಿಲ್ಲ.

# ಅನುಬಂಧ

## ಅಱ ಕುೞ ಕ್ಷಳ ಸಂಜ್ಞೆಗಳ ಹುಟ್ಟು

ಱ ಎಂಬ ವರ್ಣವನ್ನು ಕುರಿತಾಗಿ ನಿರ್ದೇಶಿಸಬೇಕಾದಾಗ ಅಱ ಱ ಎನ್ನುವುದೂ, ಕನ್ನಡ ಶಬ್ದಗಳಲ್ಲಿರುವ ೞ ಎಂಬ ವರ್ಣವನ್ನು ಕುೞ ಎನ್ನುವುದೂ ಹಿರಿಯರಿಂದ, ಕೇಶಿರಾಜನಿಗಿಂತಲೂ ಮೊದಲಿನವರಿಂದ ಬಂದ ಕನ್ನಡ ಸಂಪ್ರದಾಯ. ಈ ಹೆಸರುಗಳು ಇವಕ್ಕೆ ಹೇಗೆ ಬಂದುವು?

'ಜಾತಿ' ಯೊಳಗೆ ಸೇರಿರುವ 'ವ್ಯಕ್ತಿ' ಯನ್ನು ನಿರ್ದೇಶಿಸುವುದಕ್ಕಾಗಿ ನಾವು ಹೆಸರುಗಳನ್ನಿಡುತ್ತೇವೆ. ಉದಾ:— ಮರ ಎಂಬುದೊಂದು ಸಜೀವವಸ್ತುಜಾತಿ. ಮಾವು, ಹಲಸು, ತೆಂಗು ಇತ್ಯಾದಿಗಳು "ಮರ ಜಾತಿ" ಯ ವ್ಯಕ್ತಿಗಳು. ಆ 'ಮಾವು ಜಾತಿ' ಯೊಳಗೂ ಸೀಮಾವು, ಹುಳಿಮಾವು ಇತ್ಯಾದಿ ವ್ಯಕ್ತಿಗಳು. ಅವುಗಳೊಳಗೂ ಪುನಃ ಅಂತರ್ಭೇದಗಳೂ ಇರಬಹುದು ಇರುತ್ತವೆ. ಹಾಗೆಯೇ ವರ್ಣಗಳೊಳಗೂ ಜಾತಿಯಲ್ಲಿ ಒಂದಾಗಿರುವ 'ವರ್ಣವ್ಯಕ್ತಿ' ಗಳನ್ನು ಕುರಿತಾಗಿ ನಿರ್ದೇಶಿಸುವ ಅವಶ್ಯಕತೆ ಬಂದಾಗ ಅವುಗಳಿಗೆ ಹೆಸರು ಹುಟ್ಟುತ್ತದೆ. ಯ ಎಂಬುದನ್ನೋ ಹ ಎಂಬುದನ್ನೋ ನಿರ್ದೇಶಿಸಬೇಕಾದಾಗ ಯಕಾರವೆಂದೂ ಹಕಾರವೆಂದೂ ಮಾತ್ರ ಹೇಳುವೆವು ಹೊರತು, ಇಂತಹ ಯಕಾರ ಇಂತಹ ಹಕಾರ ಎಂದು ಹೇಳುವುದಿಲ್ಲ; ಅಂತಹ ಅವಶ್ಯಕತೆ ಬರುವುದಿಲ್ಲ. ಕಾರಣವೇನೆಂದರೆ ಯಕಾರ ಜಾತಿ, ಹಕಾರ ಜಾತಿ ಎಂಬುದೇನೂ ಇಲ್ಲ. ಅವುಗಳ 'ವ್ಯಕ್ತಿತ್ವ' ವು ಉಚ್ಚಾರದಲ್ಲಿ ಅಷ್ಟು ಸ್ಫುಟವಾಗಿರುವುದರಿಂದ ಅವು ಜಾತಿಗೆ ಒಡಂಬಡುವುದಿಲ್ಲ.

ಱ, ೞ ಎಂಬವುಗಳಿಗಾದರೆ ಅಱ, ಕುೞ ಎಂಬ ಹೆಸರುಗಳಿರುವುದರಿಂದ ಅವು ಸಜಾತಿಗಳಾಗಿವೆಯೆಂಬುದು ಸುಸ್ಪಷ್ಟ.

ತಮಿಳಿನಲ್ಲಿ ನಕಾರವು ಕೋಮಲ, ಪರುಷ ಎಂದು ಎರಡಾಗಿದೆ. ಕನ್ನಡದಲ್ಲಿಯೂ, ಸೂಕ್ಷ್ಮವಾಗಿ ಪರೀಕ್ಷಿಸಿದರೆ, ಉಚ್ಚಾರದಲ್ಲಿ ಈ ಭೇದವಿದೆ ಉದಾ:— 'ಬಂತು' (=ಬನ್ತು) ಎಂದು ಉಚ್ಚರಿಸುವಾಗ ಉಂಟಾಗುವ ನಕಾರವೇ 'ಅವನು' ಎನ್ನುವಾಗ ಧ್ವನಿಸುವುದಿಲ್ಲ. ಹೀಗಿದ್ದರೂ ಯಾರಾದರೊಬ್ಬನು 'ಬಂತು' ಇತ್ಯಾದಿಗಳನ್ನು ಹೇಳುವಾಗ ಉಚ್ಚರಿಸುವ ನಕಾರವನ್ನೇ ಅವನು ಇತ್ಯಾದಿಗಳನ್ನು ಹೇಳುವ

ಪ್ರಸಂಗದಲ್ಲಿಯೂ ಉಚ್ಚರಿಸಿದರೆ (ಹೀಗೆ ಉಚ್ಚರಿಸುವವರು ಕೆಲವರು ಇರುವರು) ಅರ್ಥವೇನೂ ಕೆಡುವುದಿಲ್ಲ. ಸೂಕ್ಷ್ಮಭೇದವಾದುದರಿಂದ ಹೆಚ್ಚಿನವರ ಲಕ್ಷ್ಯಕ್ಕೆಬಾರದೆ ನಿರಾತಂಕವಾಗಿ ನಡೆದುಹೋಗುತ್ತದೆ. ಆದರೆ ತಮಿಳಿನಲ್ಲಿ ಇವಕ್ಕೆ ಭಿನ್ನ ಲಿಪಿಗಳನ್ನು ನಿರ್ಮಿಸಿಕೊಂಡು ವ್ಯವಹರಿಸುತ್ತಾರೆ ತಮಿಳಿನಲ್ಲಿ ನಕಾರವು ಱಕಾರಕ್ಕೆ ಅಂಟುವಾಗ ಒಂದು ವಿಶಿಷ್ಟ ಧ್ವನಿ ಹುಟ್ಟುತ್ತದೆ. ಅದನ್ನು ಪ್ರಕಟಿಸುವ ಅನುಕೂಲತೆಗೋ ಏನೋ, ಅದರ ಆವಶ್ಯಕತೆಯ ಕುರಿತು ನನ್ನ ವಿಚಾರವು ಅಪೂರ್ಣ — ಅಂತೂ ಎರಡು ನಕಾರಗಳು ತಮಿಳಿನ ಚಾಕ್ಷುಷ ವರ್ಣಮಾಲೆಯಲ್ಲಿಯೂ ಇವೆ.[೧] ಇವುಗಳನ್ನು ಆವಶ್ಯಕತಾನುರೋಧದಿಂದ ನಿರ್ದೇಶಿಸಬೇಕಾದಾಗ ಕೋಮಲವಾದುದನ್ನು 'ತನ್ನಕಾರ' (ಎಂದರೆ, ತಕಾರಹುಟ್ಟುವ ಸ್ಥಳದಲ್ಲಿ ಉಂಟಾಗುವ ಅಥವಾ ತಕಾರಕ್ಕೆ ಉಪಧೆಯಾಗುವಾಗ ಉಂಟಾಗುವಂತಹ ನಕಾರಧ್ವನಿ) ಎಂದೂ, ಪರುಷವಾದುದನ್ನು 'ಱನ್ನಕಾರ' (ಎಂದರೆ, ಱಕಾರ ಹುಟ್ಟುವ ಸ್ಥಳದಲ್ಲಿ ಉಂಟಾಗುವ ಅಥವಾ ಱಕಾರಕ್ಕೆ ಉಪಧೆಯಾಗುವಾಗ ಉಂಟಾಗುವಂತಹ ನಕಾರಧ್ವನಿ) ಎಂದೂ ಹೆಸರಿಸುತ್ತಾರೆ. ಹಾಗಾದರೆ ತನ್ನಕಾರ, ಱನ್ನಕಾರ ಎಂಬೀ ಸಂಜ್ಞೆಗಳು ಆಯಾ ಉಚ್ಚಾರಭೇದ ಸೂಚಕವಾಗಿವೆ ಎಂಬುದು ಸ್ಪಷ್ಟ.

ಆದರೆ ಕನ್ನಡದ ಱಟಿ ಕುಳ ಸಂಜ್ಞೆಗಳು ತನ್ನಕಾರ ಱನ್ನಕಾರಗಳಂತೆ ಉಚ್ಚಾರ ಲಕ್ಷಣವನ್ನೆತ್ತಿ ಇಟ್ಟ ಹೆಸರುಗಳಾಗಿ ತೋರುವುದಿಲ್ಲ. ಒಂದುವೇಳೆ ಱಕಾರ ಟಕಾರಗಳಲ್ಲಿ ಉಚ್ಚಾರ ಸಾಮ್ಯವು ಒಂದಿಷ್ಟು ಇದ್ದಿರಬಹುದು. ಆದುದರಿಂದ 'ಸುಮಾರು ಱಕಾರದಂತೆ ಉಚ್ಚರಿಸಲ್ಪಡುವ ವರ್ಣ' ಎಂಬರ್ಥದಲ್ಲಿ ಱ ಟಿ ಎಂಬ ಹೆಸರುಂಟಾಗಬೇಕು ಎಂದು ವಾದಕ್ಕಾಗಿ—ಕೇವಲ ವಾದಕ್ಕಾಗಿ, ಹೇಳಬಹುದೆಂದರೂ (ಱಕಾರವೂ ಟಕಾರವೂ, ಸೂಕ್ಷ್ಮ ದೃಷ್ಟಿಯಿಂದ, ಉಚ್ಚಾರದಲ್ಲಿ ಏಕಸ್ಥಾನಿಗಳಲ್ಲವೆಂಬುದನ್ನೂ,[೨] ಳಕಾರದಿಂದ ಭಿನ್ನವಾದ ಇದ್ದೊಂದು ಸಜಾತೀಯ ಎಂದರೆ ಉಚ್ಚಾರದಲ್ಲಿ ಳಕಾರಕ್ಕೆ ಅತಿ ಸಮೀಪವಾದ ವರ್ಣ ಎಂದು ಸೂಚಿಸುವುದೇ ಱ ಟಿ ಎಂಬ ಸಂಜ್ಞೆಯ ಪ್ರಯೋಜನವೆಂಬುದನ್ನೂ ಗಮನಿಸಿದರೆ ಈ ವಾದದಲ್ಲಿ ಹುರುಳಿಲ್ಲವೆಂಬುದು ಸ್ಪಷ್ಟವಾಗದಿರದು.) ಅದರ ಸಹಚರ ಸಂಜ್ಞೆಯಾದ 'ಕುಳ'ವೆಂಬುದಕ್ಕೆ ಈ ಪ್ರಕ್ರಮವನು ಹಿಡಿದು ಅರ್ಥ ಕಟ್ಟುವುದು ಅಸಾಧ್ಯ. ಆದುದರಿಂದ ಱ ಟಿ ಕುಳ ಎಂಬ

ಸಂಜ್ಞೆಗಳು ಉಚ್ಚಾರ ಸ್ವರೂಪವನ್ನೆತ್ತಿಕೊಂಡು ಹುಟ್ಟಿದವುಗಳಲ್ಲವೆಂಬುದು ಸ್ಪಷ್ಟ. ಹಾಗಾದರೆ ಅವು ಅರ್ಥಹೀನವಾದ ಬರಿಯ ಸಂಕೇತಗಳೇ ? ಹಾಗಿದ್ದರೆ ಪದಾರಂಭದಲ್ಲಿ ಉಚ್ಚರಿಸಲು ಕ್ಲೇಶಕೊಡುವ ಱಕಾರವು ಱ ೞ ವೆಂಬ ಆ ಸಂಜ್ಞೆಯ ಪ್ರಥಮಾಕ್ಷರವಾಗಿರುತ್ತಿದ್ದಿಲ್ಲ; ಲಟ್, ಲೋಟ್ —ಎಂಬುವುಗಳಂತೆ ಯಾವುದಾದರೊಂದು ಲಲಿತಾಕ್ಷರವು ಆರಂಭದಲ್ಲಿರ ಬಹುದಿತ್ತು. ಕುಳವೆಂಬಲ್ಲಿಯೂ ಹಾಗೆಯೇ; ಭಾವಿಕರಾದ ನಮ್ಮ ಪೂರ್ವಜರು ಕುತ್ಸಿತಾರ್ಥವುಳ್ಳ 'ಕು' ಎಂಬುದನ್ನು ಅರ್ಥಹೀನವಾದ ಸಂಕೇತದ ಆರಂಭಾಕ್ಷರವಾಗಿ ಮಾಡುತ್ತಿರಲಿಲ್ಲ. ಅಲ್ಲದೆ ಱ ೞ ಎಂಬು ದರಲ್ಲಿರುವಂತೆ ಕುಳ ಎಂಬುದರಲ್ಲಿ, ಸಹಜವಾಗಿ ಇದ್ದಿರಬೇಕಾದಂತೆ, ಪ್ರಥಮಾಕ್ಷರವು ಅಕಾರ ಸಹಿತವಾಗಿಯೂ ಇಲ್ಲ. ಸಹಜ ಕ್ರಮವನ್ನೂ ಪ್ರಕ್ರಮವನ್ನೂ ಮೀರಿ ಅಕಾರವನ್ನು ತಳ್ಳಿ ಉಕಾರವನ್ನು ( ಕ್+ಉ ) ಆಶ್ರಯಿಸಬೇಕಾಗಿದ್ದರೆ ಅದಕ್ಕೆ ನ್ಯಾಯವಾದ ಕಾರಣವಿರಲೇಬೇಕೆಂದೂ ಆದುದರಿಂದ ಆ ಸಂಜ್ಞೆಗಳು ಅರ್ಥಹೀನ ಸಂಕೇತ ಮಾತ್ರಗಳಲ್ಲ ವೆಂದೂ ಹೇಳದೆ ನಿರ್ವಾಹವಿಲ್ಲ. ಹಾಗಾದರೆ ಯಾವ ಲಕ್ಷಣದ ಅವ ಲಂಬನದಿಂದ ಈ ಸಂಜ್ಞೆಗಳು ಹುಟ್ಟಿರಬಹುದು ?

ಮೊದಲು ಱ ೞ ವನ್ನು ಮಾತ್ರ ನೋಡೋಣ. ಱ ೞ ಎಂಬ ಲಿಪಿ ರೂಪಗಳಲ್ಲಿ ಸಾಮ್ಯವು ಸುಸ್ಪಷ್ಟ. ಬರಿಯ ಒಂದು ಅಡ್ಡಗೆರೆಮಾತ್ರ ಅವುಗಳೊಳಗಿನ ಭೇದ. ಆದುದರಿಂದ 'ಸುಮಾರು ಱ ಎಂಬುದರಂತೆ ಬರೆಯಲ್ಪಡುವ ವರ್ಣ' ಎಂದು ಸೂಚಿಸುವುದಕ್ಕಾಗಿ ಱ ೞ ಎಂಬ ಆ ಹೆಸರು ಅದಕ್ಕೆ ಬಂದಿರಬೇಕೆಂದು ಊಹಿಸಿದರೆ ಅಸಮಂಜಸವೆಂದಾಗ ಲಾರದು. ಹೀಗೆ ಲಿಪಿರೂಪವನ್ನೆತ್ತಿ ಸಜಾತೀಯ ಧ್ವನಿಯುಳ್ಳ ಭಿನ್ನ ವರ್ಣಗಳನ್ನು ನಿರ್ದೇಶಿಸುವುದು ಕನ್ನಡದ ಪರಂಪರೆಯಾಗಿಯೂ ತೋರು ತ್ತದೆ. ಉದಾ:— ವಿದ್ವಾಂಸರಲ್ಲದ ಬಹು ಸಂಖ್ಯಾಕರ ಉಚ್ಚಾರದಲ್ಲಿ ಹೆಚ್ಚು ಕಡಿಮೆ ಒಂದೇ ಆಗಿ ಕಿವಿಗೆ ಬೀಳುವ ಶಷ ಎಂಬ ಊಷ್ಮ ವರ್ಣಗಳೊಳಗೆ ಒಂದನ್ನು ಕುರಿತಾಗಿ ನಿರ್ದೇಶಿಸಬೇಕಾದಾಗ ವಿದ್ವಾಂಸರು ತಾಲವ್ಯ, ಮೂರ್ಧನ್ಯ ಎಂಬ ಶಬ್ದಗಳನ್ನು ಪ್ರಯೋಗಿಸುವರಾದರೂ ಸಾಮಾನ್ಯರ ಬಳಕೆ 'ಮುರುಟು ಶ, ಪಟ್ಟೆ ಷ' ಎಂದು ಲಿಪಿರೂಪ ವನ್ನವಲಂಬಿಸಿಯೇ ಹೇಳುವುದಾಗಿದೆ. ಆದುದರಿಂದ ಱ ೞ ಎಂಬ ಹೆಸರು ಲಿಪಿರೂಪ ಸಾಮ್ಯದಿಂದಲೇ ಹುಟ್ಟಿರಬೇಕು ಎಂದರೆ ಒಪ್ಪಬಹುದು.

ಆದರೆ ' ಕುಳ ' ಎಂಬಲ್ಲಿ ಈ ಪ್ರಕ್ರಮವು ಹೊಂದುವುದೇ? ನೋಡೋಣ. ಇಂದು ನಾವು ಮುದ್ರಣದಲ್ಲಿ ಕಾಣುವ ಅಥವಾ ನಾವಿಂದು ಬರೆಯುವ ಕು ಮತ್ತು ಳ ಎಂಬ ಲಿಪಿರೂಪಗಳಲ್ಲಿ ಸಾಮ್ಯವು ತೋರುವುದಿಲ್ಲವೆಂಬುದು ನಿಜ. ಆದರೆ ಕುಳವೆಂಬ ಸಂಜ್ಞೆ ಹೆಚ್ಚು ಕಡಿಮೆ ಸಾವಿರ ವರ್ಷಗಳ ಹಿಂದಿನ ಹೆಸರು. ಶಾಸನಾದಿಗಳಲ್ಲಿಯೂ ಓಲೆಯ ಪುಸ್ತಕಗಳಲ್ಲಿಯೂ ಇಂದಿಗೂ ಕಾಣಬಹುದಾದ ಹಿಂದಿನ ಕಾಲದ ಬರವಣಿಗೆಗಳನ್ನು ಕ್ರಮವಾಗಿ ನೋಡಿದರೆ, ಸುಮಾರು ಒಂದೂವರೆ ಸಾವಿರ ವರ್ಷಗಳಿಂದ ನಮ್ಮ ಬರವಣಿಗೆ ವಿಕಾಸಹೊಂದುತ್ತ ಕ್ರಮವಾಗಿ ಹೊಂದಿದ ರೂಪಗಳನ್ನು ಪರೀಕ್ಷಿಸಿದರೆ, ಱಱ ಎಂಬ ಹೆಸರು ಹುಟ್ಟಿದಂತೆಯೆ ಎಂದರೆ ಲಿಪಿರೂಪ ಸಾಮ್ಯದಿಂದಲೇ ಕುಳವೆಂಬ ಸಂಜ್ಞೆಯೂ ಹುಟ್ಟಿತೆಂದು ನಿರಾತಂಕವಾಗಿ ಹೇಳಬಹುದಾಗಿದೆ. ಈ ವಿಕಾಸದ ಮಧ್ಯಕಾಲದಲ್ಲಿ ಎಂದರೆ ಸುಮಾರು ಸಾವಿರ ವರ್ಷಗಳಕೆಳಗೆ ನಮ್ಮ ಕ ಳ ಲಿಪಿಗಳು ಅನುಕ್ರಮವಾಗಿ  ಹೀಗಿದ್ದವು.[೩] ಅಂದು ಕ ಎಂಬುದನ್ನು ಕು ಎಂದು ಮಾಡಬೇಕಾದರೆ, ಉಕಾರ ಸೂಚಕವಾದ ಕೊಂಬನ್ನು ಹೆಚ್ಚಾಗಿ ಮೇಲಿಂದ ಕೆಳಗೆ—ನಾಗರೀ ಲಿಪಿಯಲ್ಲಿ ಇಂದೂ ರ ಎಂಬುದನ್ನು ರು ಮಾಡುವಾಗ ಕೊಡುವಂತೆ—ಕೊಡುತ್ತಿದ್ದರು. ಆಗ ಅದು  ಹೀಗೆ ಆಗುವುದು. ಇದಕ್ಕೂ ಮೇಲೆ ತೋರಿಸಿದ ಹಿಂದಿನ ಳ ಲಿಪಿಯ ರೂಪಕ್ಕೂ ವ್ಯತ್ಯಾಸವು ಅತ್ಯಲ್ಪ. ಆದುದರಿಂದ ' ಹೆಚ್ಚು ಕಡಿಮೆ ಕು ಎಂಬುದರಂತೆ ಬರೆಯಲ್ಪಡುವ ವರ್ಣ ' ಎಂದು ಸೂಚಿಸಬಲ್ಲ ' ಕು ಳ ' ಎಂಬ ಸಂಜ್ಞೆ ಅನ್ವರ್ಥವೇ ಆಗಿದೆ ಎಂಬುದರಲ್ಲಿ ಸಂದೇಹವುಳಿಯಲಾರದು.[೪]

ಱಱ ಕುಳ ಎಂದಲ್ಲದೆ ' ಕ್ಷಳ ' ಎಂಬ ಇನ್ನೊಂದು ಳಕಾರ ಜಾತಿಯ ವ್ಯಕ್ತಿಯೂ ಇದೆ. ವಾಸ್ತವವಾಗಿ ನೋಡಿದರೆ, ಇದೊಂದು ಬೇರೆ ವರ್ಣವೇ ಅಲ್ಲ. ಉಚ್ಚಾರದಲ್ಲಿಯೂ ಬರವಣಿಗೆಯಲ್ಲಿಯೂ ಇದು ಸಂಪೂರ್ಣ ಕುಳ ರೂಪವಾಗಿಯೇ ಇದೆ. ಆದರೆ ಇದು ಕುಳದಂತೆ ಕನ್ನಡ ಳಕಾರವಾಗಿರದೆ ಸಂಸ್ಕೃತ ಶಬ್ದಗಳಲ್ಲಿ ಕಾಣಿಸಿಕೊಳ್ಳುವ ಳಕಾರವಾದುದರಿಂದ, ಅತಏವ ಅರ್ಥದಲ್ಲಿ ಯಾವ ವ್ಯತ್ಯಾಸವೂ ಆಗದೆ ಶುದ್ಧಲಕಾರ ರೂಪವನ್ನು ಪಡೆಯಬಹುದಾದುದರಿಂದ, ವ್ಯಾಕರಣ ನಿಯಮಗಳನ್ನು ಹೇಳುವ ಸೌಲಭ್ಯಕ್ಕಾಗಿ ಕ್ಷಳವೆಂಬ ವಿಶಿಷ್ಟವಾದ

ಹೆಸರನ್ನು ಪಡೆದಿದೆ. ೫೮ ಎಂಬ ಸಂಜ್ಞೆ ಲಿಪಿಸಾಮ್ಯಜನ್ಯವೆಂಬುದರಲ್ಲಿ ಸಂದೇಹವಿಲ್ಲ; ಕುಳ ಎಂಬುದೂ ಅದೇ ಕಾರಣದಿಂದ ಹುಟ್ಟಿದ ಸಂಜ್ಞೆಯೆಂಬುದು ಪ್ರಕ್ರಮದಿಂದಲೂ ಲಿಪಿರೂಪ ಮೀಮಾಂಸೆಯಿಂದಲೂ ತಿಳಿದುಬರುತ್ತದೆ. ಹಾಗಾದರೆ ಕ್ಷಳವೆಂಬುದೂ ಅದೇ ಪ್ರಕ್ರಮದಲ್ಲಿ ಹುಟ್ಟಿರಬೇಕೆಂದು ಊಹಿಸೋಣವೆ ? ಆದರೆ ರೂಪದಲ್ಲಿ ಕುಳಕ್ಕೂ ಕ್ಷಳಕ್ಕೂ ಯಾವ ಭೇದವೂ ಇಲ್ಲದುದರಿಂದ, ಈ ಪ್ರಕ್ರಮವನ್ನು ಹಿಡಿದು ಇದಕ್ಕೊಂದು ಬೇರೆ ಸಂಜ್ಞೆಯನ್ನು ನಿರ್ಮಿಸುವುದು ಕೇವಲ ಅಸಾಧ್ಯ. ಉಚ್ಚಾರದಲ್ಲಿ ಅವೆರಡೂ ಸರ್ವಾತ್ಮನಾ ಒಂದೇ ಆದುದರಿಂದ ಆ ಅವಲಂಬನದಿಂದಲೂ ಅವುಗಳೆರಡರೊಳಗಿನ ಭೇದವನ್ನು ಸೂಚಿಸಲಳವಲ್ಲ. ಸಾಮ್ಯವು ಸಂಪೂರ್ಣವಾದಲ್ಲಿ ಉಪಮೆ ಅನ್ವಯಿಸುವುದಿಲ್ಲ, ಅನನ್ವಯವಾಗುತ್ತದೆ. ಹಾಗಾದರೆ 'ಕ್ಷಳ' ಎಂಬ ಸಂಜ್ಞೆಯು ಹುಟ್ಟು ಹೇಗಾಗಿರಬಹುದು? ಅಮುಕ ಎಂಬರ್ಥದಲ್ಲಿ ಇಂಗ್ಲಿಷಿನಲ್ಲಿ X ಎಂಬುದನ್ನು ಪ್ರಯೋಗಿಸುವಂತೆ 'ವಿಶಿಷ್ಟವಾದೊಂದು ಳಕಾರ' ಎಂಬರ್ಥದಲ್ಲಿ 'ಕ್ಷಳ' (ಈಗಿನ ಕನ್ನಡದಲ್ಲಿ ಕ್ಷ-ಕಿರಣ ಎಂದು ಬರೆಯತೊಡಗಿರುವಂತೆ) ಎಂದು ಮಾಡಿಕೊಂಡರೆ? ಅಸಂಭವ. Xನ ಭಾಷಾಂತರವಾದ ಕ್ಷ ಇಪ್ಪತ್ತನೆಯ ಶತಮಾನದ ನಿರ್ಮಿತಿ. ಕ್ಷಳ ಎಂಬ ಸಂಜ್ಞೆ ಹೆಚ್ಚು ಕಡಿಮೆ ಸಹಸ್ರಮಾನಕ್ಕೆ ಹಳೆಯದು. ಹಾಗಾದರೆ ಆ ಸಂಜ್ಞೆಯ ರೂಪಸಿದ್ಧಿ ಹೇಗಾಗಿರಬಹುದು ?

೫೮ ಕುಳ ಕ್ಷಳ ವಿಚಾರದಲ್ಲಿ ಹೆಚ್ಚು ಪರಿಶ್ರಮಪಟ್ಟ ಕೇಶಿರಾಜನು ತನ್ನ ವ್ಯಾಕರಣದಲ್ಲಿ ಮೊದಲು 'ಅರ್ಣವವೃತಧಾತ್ರಿಯೊಳ್ ಪ್ರಸಿದ್ಧ'ವಾದ ಸಂಸ್ಕೃತ ವರ್ಣಮಾಲೆಯನ್ನೇ ಮುಂದಿಟ್ಟಿದ್ದಾನೆ. ಆದರೆ ನಾಗವರ್ಮನ ಭಾಷಾಭೂಷಣದಲ್ಲಿರುವಂತೆ, "ಕಾದಯಃ ತ್ರಯಸ್ತ್ರಿಂಶತಾ ವ್ಯಂಜನಾನಿ" (ಸೂತ್ರ-೬) ಎಂದು ಕಕಾರ ಮೊದಲುಗೊಂಡು ಹಕಾರದವರೆಗಿರುವ ೩೩ ವ್ಯಂಜನಗಳನ್ನೇ ಹೇಳದೆ, 'ಳಕಾರಂಬರೆಗಂ' (ಶ. ದ. ಸೂ—೪) ಎಂದು ೩೪ನ್ನು ನಿರ್ದೇಶಿಸಿದ್ದಾನೆ. ಮುಂದೆಯೂ (ಶ. ದ. ಸೂತ್ರ—೩೭) "ಇರ್ಪತ್ತೈದು ವರ್ಣಮವು ವರ್ಗಂ, ತತ್ಪರದೊಂಬತ್ತುಮವರ್ಗಂ" —ಎಂದು ಳಕಾರ ಸಹಿತವಾಗಿಯೇ ಹೇಳಿದ್ದಾನೆ. ಈ ಳಕಾರವು ಕುಳವೆ ? ಕುಳವಲ್ಲ. ಏಕೆಂದರೆ ಮೊದಲು ಅವನು ಮುಂದಿಟ್ಟ ೪೮ (ಸ್ವರ ೧೪+ವ್ಯಂಜನ ೩೪) ವರ್ಣಗಳಿಗೆ, ನಾಲ್ಕು ಯೋಗ

ವಾಹಗಳನ್ನು ಸೇರಿಸಿ ೫೨ ಎಂದು ಮಾಡಿ, ಆಮೇಲೆ ಅವುಗಳಿಂದ ಕ್ಷಳಸಹಿತವಾಗಿ ಹತ್ತು ವರ್ಣಗಳನ್ನು ಸಂಸ್ಕೃತದ ವಿಶಿಷ್ಟಧ್ವನಿಗಳೆಂದು ಕಳೆದುಹಾಕಿ,[೫] ದೇಶೀಯವಾದ ಎ, ಒ, ಱ, ೞ, ಳ ಎಂಬ ಐದನ್ನು ಸೇರಿಸಿದ್ದಾನೆ.[೬] ಆದುದರಿಂದ ಮೊದಲು ಮುಂದಿಟ್ಟ 'ಳಕಾರಂಬರೆಗಂ' ಎಂಬುದರ ಳಕಾರವು ಕ್ಷಳ; ಎಂದರೆ ಸಂಸ್ಕೃತದ ಳಕಾರ.

ಸಂಸ್ಕೃತದಲ್ಲಿ ಲಕಾರವು ಮಾತ್ರ ಸಾಧಾರಣವಾಗಿ ಇರುವುದಾದರೂ —ಕಾರಣವು ಏನೇ ಇರಲಿ—ಅದರ ಉಚ್ಚಾರವು ಳ ಎಂದೂ ಕೆಲವರ ಬಾಯಲ್ಲಿ ಆಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ದಕ್ಷಿಣ ದೇಶದವರು ಹೆಚ್ಚಾಗಿ ಹೀಗೆ ಮಾಡುತ್ತಿದ್ದರೆಂದು ಹೇಳಬಹುದು. ಉದಾ:—
"ಚಳದನಿಳಾಹತಕ್ಷುಭಿತಭಂಗುರತುಂಗತರಂಗಮಾಳಿಕಾವಳಸ ಸಮುಚ್ಛಳನ್ಮಣಿಗಣಾತ್ತ ಮರೀಚಿ........................" (ಪಂಪಭಾರತ ೪೨—೫.)
" ಅಳಿಮಾಳಾನೀಳನೀಳೋತ್ಪಳದಳವಿಳಸತ್ ಕಂಜಕಿಂಜಲ್ಕಪುಂಜಾವಳಿ.... "
(ದುರ್ಗಸಿಂಹನ ಪಂಚತಂತ್ರ)

ಉತ್ತರದವರೂ ಅಲ್ಲಲ್ಲಿ ಹೀಗೆ ಮಾಡುತ್ತಿದ್ದಿರಬೇಕೆಂದು ಪ್ರಾಕೃತದ ಕೆಲವು ಪ್ರಭೇದಗಳಲ್ಲಿ ತುಂಬಿರುವ ಳಕಾರದಿಂದ ಸ್ಫುಟವಾಗುತ್ತದೆ. ಉದಾ:— 'ಣಮೋಳೋಯೇ ಸವ್ವಸಾಹೂಣಂ' —'ಚೌಸಟ್ಠಿ ಮಹಿಳ ವಣ್ಣಾಹು' ಇತ್ಯಾದಿ ಜೈನ ವಚನಗಳಲ್ಲಿ ಳಕಾರವು ವಿಪುಲವಾಗಿದೆ. ವೇದಭಾಷೆಯಲ್ಲಿ ಲಕಾರ ವಿಕೃತಿಯಲ್ಲದ ಒಂದು ಳಕಾರವಿತ್ತು. ಉದಾ:—"ಅಗ್ನಿಮೀಳೇ ಪುರೋಹಿತಂ.........." ಇತ್ಯಾದಿ. ಅದು ಮತ್ತಿನ ಸಂಸ್ಕೃತಭಾಷೆಯಲ್ಲಿ ಡಕಾರವಾಗಿ ಪರಿಣಮಿಸಿತು. ಉದಾ:— "ಸಾನುಜಂ ರಾಮಮೀಡೇ."[೭] 'ಮೂಲ'ವು, 'ಮೂಳ'ವಾದಂತೆ ಲಕಾರ ಸ್ಥಾನದಲ್ಲಿ ಳಕಾರೋಚ್ಚಾರವು ಅತಿಯಾಗಿ ರೂಢವಾಗುತ್ತ ಬಂತು. ಖಡ್ಗ ಖಳ್ಗವಾದಂತೆ ಕೆಲವು ಡಕಾರಗಳೂ ಳಕಾರಗಳಾದುವು. ಇವೆಲ್ಲಾ ಸಂಕಲಿಸಿ ಕೊನೆಗೆ 'ಲಳಯೋರಭೇದಃ' ಮಾತ್ರವಲ್ಲ 'ಲಡಯೋರಭೇದಃ' ಎಂದೂ ಆಯಿತು. ಹಾಗಾಗುವುದಕ್ಕೆ ಕಾರಣವಾದ ಮನಃಸ್ಥಿತಿಯನ್ನು ಹೀಗೆ ಗಣಿತರೀತಿಯಲ್ಲಿ ಬರೆದು ತೋರಿಸಬಹುದು:—ಲ=ಳ, ಳ=ಡ ∴ ಲ=ಡ.

'ಲಡಯೋರಭೇದ'ಕ್ಕೆ ಸಂಸ್ಕೃತದ ಉತ್ತಮ ಸಾಹಿತ್ಯದಲ್ಲಿಯೂ ನಿದರ್ಶನಗಳಿವೆ. ಉದಾ:— ರಘುವಂಶ ಮಹಾಕಾವ್ಯದ ನವಮಸರ್ಗದ

೪೬ನೆಯ ಪದ್ಯವು ಇದು:—

> ಅನುಭವನ್ ನವದೋಲಮೃತೂತ್ಸವಮ್
> ಪಟುರಪಿ ಪ್ರಿಯಕಂಠಜಿಘೃಲಕ್ಷಯಾ
> ಅನಯದಾಸನ ರಜ್ಜುಪರಿಗ್ರಹೇ
> ಭುಜಲತಾಮ್ ಜಲತಾಮಬಲಾಜನಃ

ಇಲ್ಲಿ ಜಡತಾಮ್ ಎಂಬುದರ ಬದಲಾಗಿ ಕಾಳಿದಾಸನು ಜಲತಾಮ್ ಎಂದು ಪ್ರಯೋಗಿಸಿದ್ದಾನೆ. ಇಂತಹ ರೂಢಿ ಆಗ ಇಲ್ಲದಿರುತ್ತಿದ್ದರೆ, ಆ ಮಹಾಕವಿ—ಕೇವಲ ಪ್ರತಿಭಾಪರವಶನಾದ 'ವರಕವಿ' ಮಾತ್ರವಲ್ಲ; ಅವನ ಕಾವ್ಯಗಳ ಅಧ್ಯಯನದಿಂದ ತಿಳಿದುಬರುವಂತೆ, ನಾನಾ ಶಾಸ್ತ್ರಜ್ಞನಾದ ಆ ವಿದ್ವತ್ಕವಿ—ಕೇವಲ ಒಂದು ಶಬ್ದಾಲಂಕಾರಕ್ಕಾಗಿ ತಪ್ಪುಮಾಡುತ್ತಿರಲಿಲ್ಲ; ಅವನಲ್ಲಿ ಶಬ್ದದಾರಿದ್ರ್ಯವೂ ಇರಲಿಲ್ಲ' ಧ್ವನಿವಿಜ್ಞಾನ ದೃಷ್ಟಿಯಿಂದ ಪರೀಕ್ಷಿಸಿದರೆ, 'ಲಡಯೋರಭೇದವುಂಟಾಗುವುದಕ್ಕೆ ಮೊದಲು 'ಳಡಯೋರಭೇದಃ' ಮತ್ತು 'ಲಳಯೋರಭೇದಃ' ಎಂಬ ಎರಡು ಮೆಟ್ಟಿಲುಗಳನ್ನು ಸಂಸ್ಕೃತವಾಣಿ ಮೇಲೇರಿರಬೇಕು. ಆದುದರಿಂದ (೧) ಸಂಸ್ಕೃತದಲ್ಲಿಯೂ ಒಂದು ಳಕಾರ ಉಂಟೆಂದೇ ಹಲವರು ತಿಳಿಯುತ್ತಿದ್ದರೆಂದು ಗೊತ್ತಾಗುತ್ತದೆ; (೨) ಕೆಲವರು ಮಾತ್ರ ಲಕಾರ ಳಕಾರಗಳು ಅರ್ಥದಲ್ಲಿ ಒಂದೇ ಎಂಬ ಕಾರಣದಿಂದ ಳಕಾರಕ್ಕೆ ಸಂಸ್ಕೃತದ ಚಾಕ್ಷುಷ ವರ್ಣಮಾಲೆಯಲ್ಲಿ ಸ್ಥಳ ಕೊಡಲಿಲ್ಲವೆಂದೂ ತಿಳಿಯುತ್ತದೆ.[೮] ಈ ಎರಡರಲ್ಲಿ ನಾಗವರ್ಮನು ಎರಡನೆಯ ಪಕ್ಷವನ್ನೂ ಕೇಶಿರಾಜನು ಮೊದಲನೆಯ ಪಕ್ಷವನ್ನೂ ಸ್ವೀಕರಿಸಿದ್ದಾರೆ. ೞಕಾರದ ಉಚ್ಚಾರದ ವಿಶಿಷ್ಟತೆ ಅಳಿದುಹೋಗಿ, ಸಂಸ್ಕೃತದ 'ಲಳಯೋರಭೇದ' ವೂ ಪ್ರಬಲಿಸಿ, ಕನ್ನಡದಲ್ಲುಂಟಾದ ಳಕಾರಗಳ ಗೊಂದಲವನ್ನು ಶಾಸ್ತ್ರೀಯವಾಗಿ ಪರಿಹರಿಸಬೇಕೆಂದೇ ಕೇಶಿರಾಜನು ಈ ಮತವನ್ನು—ಎಂದರೆ, ಸಂಸ್ಕೃತದಲ್ಲಿಯೂ ಒಂದು ಳಕಾರವುಂಟು ಎಂಬ ಮತವನ್ನು—ಬುದ್ಧಿಪೂರ್ವಕವಾಗಿ ಅವಲಂಬಿಸಿದ್ದಾನೆ; ಮತ್ತು ೞಕಾರವನ್ನು ಉಳಿಸುವ ಅವನ ಪ್ರಯತ್ನವು ಕಾಲ ಪ್ರವಾಹಕ್ಕೆ ಇದಿರಾಗಿ

ಹೋಗುವ ಕೆಲಸವಾಗಿದ್ದುದರಿಂದ ಸಫಲವಾಗದಿದ್ದರೂ—ಆ ಕಗ್ಗಂಟನ್ನು ವಿಶ್ಲೇಷಿಸುವ ಕೆಲಸದಲ್ಲಿ ಸಾಫಲ್ಯವನ್ನು ಪಡೆದಿದ್ದಾನೆ; ಮತ್ತು ಸಾಹಿತ್ಯದಲ್ಲಿ ಸರ್ವತ್ರ ' ಲಳಯೋರಭೇದ ' ವಾಗುವ ಪರಿಸ್ಥಿತಿಯನ್ನು ಸಂಪೂರ್ಣ ಸಾಧ್ಯವಾಗದಿದ್ದರೂ ತಕ್ಕಮಟ್ಟಿಗೆ ತಪ್ಪಿಸಿದ್ದಾನೆನ್ನಬಹುದು.[೯]

ಇರಲಿ; ಇದೀಗ ಕ್ಷಳ ಎಂಬ ವರ್ಣದ ಉತ್ಪತ್ತಿ ಅಸ್ತಿತ್ವಗಳ ವಿವರವಾಯಿತು. ಈ ವರ್ಣಕ್ಕೆ ಕ್ಷಳ ಎಂಬ ಸಂಜ್ಞೆ ಏಕೆ, ಹೇಗೆ ಬಂತು? —ಇದನ್ನು ತಿಳಿಯುವುದೇ ಈಗಣ ನಮ್ಮ ಗುರಿ.

ಕೇಶಿರಾಜನಿಗಿಂತ ಹೇಗೂ ಅರ್ಧ ಶತಮಾನದಷ್ಟಾದರೂ ಹಿಂದಿನವನಾದ ಹರಿಹರನು —" ಕವಿತತಿ ವಿಚಾರಿಸಬೇಡದರಿಂ ಱಳಕುಳ ಕ್ಷಳಂಗಳನಿದರೊಳ್ " ಎಂದು ತನ್ನ ಗಿರಿಜಾಕಲ್ಯಾಣದಲ್ಲಿ ಹೇಳಿದ್ದಾನಷ್ಟೆ. ಇದರಿಂದ ' ಕ್ಷಳ ' ಎಂಬ ಹೆಸರು ಕೇಶಿರಾಜನಿಗಿಂತ ಮೊದಲೇ ಜನತೆಯಲ್ಲಿ ರೂಢವಾಗಿತ್ತು ಎಂಬುದರಲ್ಲಿ ಸಂದೇಹವಿರದು.

ಕೇಶಿರಾಜನು ಶಬ್ದಮಣಿದರ್ಪಣದ ನಾಲ್ಕನೆಯ ಸೂತ್ರದಲ್ಲಿ ' ಅರ್ಣವವೃತ ಧಾತ್ರಿಯೊಳ್ ಪ್ರಸಿದ್ಧ ' ವಾದ ' ವರ್ಣಂಗಳ ಪಾಠಕ್ರಮ ' ವನ್ನು ' ಳಕಾರಂ ಬರೆಗಂ ಎಂದೇ ಹೇಳಿರುವನಾದರೂ; ನಾಗವರ್ಮನು ' ಅಕಾರಾದಯಃ ಪ್ರಸಿದ್ಧಾ ವರ್ಣಾಃ ' (ಭಾ. ಭೂ. ಸೂ–೨) ಎಂದು ಹೇಳಿ ಮತ್ತೆ ' ಕಾದಯಃ ತ್ರಯಸ್ತ್ರಿಂಶತ್ ವ್ಯಂಜನಾನಿ ' (ಸೂ. ೬) ಎಂದು ಕಕಾರದಿಂದ ಹಕಾರದವರೆಗೆ ೩೩ ವ್ಯಂಜನಗಳನ್ನು ಮಾತ್ರ ತೋರಿಸಿರುವನಾದರೂ; ಮೊನ್ನೆ ಮೊನ್ನೆಯವರೆಗೆ, ಪರಂಪರೆಯಿಂದ ಬಂದಂತೆ, ಕನ್ನಡ ಮಕ್ಕಳು ಕಲಿಯುತ್ತಿದ್ದ ವರ್ಣಮಾಲೆಯಲ್ಲಿ ಳಕಾರದ ಅನಂತರ ಕ್ಷ ಎಂಬ ಒಂದು ಇದ್ದೇ ಇತ್ತು.[೧೦] ಇದು ಸಂಯುಕ್ತ ವ್ಯಂಜನವಾದುದರಿಂದ ' ವರ್ಣಮಾಲೆ ' ಯಲ್ಲಿ ಇದನ್ನು ಸೇರಿಸುವುದು ಅಶಾಸ್ತ್ರೀಯವಾದರೂ, ಷಕಾರವು ಕಕಾರಕ್ಕೆ ಮಾತ್ರ ಸೇರುವುದರಿಂದ (ರಕಾರಕ್ಕೆ ಸೇರುವಲ್ಲಿ ಬರೆಯುವ ರೀತಿ ಬೇರೆ.) ಮಕ್ಕಳಿಗೆ ಕಲಿಸುವಾಗ ಹಾಗೆ ಹೇಳಿಕೊಡುವ ಪರಿಪಾಟಿ ಇತ್ತು. ಇದು ಕೇವಲ ಇತ್ತೀಚೆಯ ರೂಢಿಯಾಗಿ ತೋರುವುದಿಲ್ಲ. South Indian Palaeography ಯಲ್ಲಿಯೂ ವರ್ಣಮಾಲೆಯ ಕೋಷ್ಟಕಗಳಲ್ಲಿಯೇ ಅದರ ಕೊನೆಯ

ದೊಂದು ಪುಷ್ಪವಾಗಿ ಕ್ಷ ಎಂಬುದನ್ನೂ ಸೇರಿಸಲಾಗಿದೆ.೧೧ 'ಅಕ್ಷರ ಮಾಲಿಕಾಸ್ತೋತ್ರ' ಎಂಬ ಹೆಸರುಳ್ಳ ರಚನೆಗಳಲ್ಲೆಲ್ಲ ಕೊನೆಗೆ ಕ್ಷ ಎಂಬ ಅಕ್ಷರದಿಂದಾರಂಭಿಸುವ ಒಂದು ಪದ್ಯವಿದ್ದೇ ಇದೆ. ಆದುದರಿಂದ ಕ್ಷ ಸಹಿತವಾದ ವರ್ಣಮಾಲೆ ಅನೇಕ ಶತಮಾನಗಳ ಮೊದಲೇ ಜನ ರಲ್ಲಿ ರೂಢವಾಗಿದ್ದಿರಬೇಕೆಂದು ಅನುಮಾನಿಸಬೇಕಾಗುತ್ತದೆ.

ಸಂಸ್ಕೃತದ 'ಳಕಾರಂ ಬರೆಗಂ' ಇರುವ ವರ್ಣಮಾಲೆಗೆ 'ಕ್ಷ' ಎಂಬುದನ್ನೂ ಕೂಡಿಸಿ ಕಣ್ಣ ಮುಂದಿಟ್ಟುಕೊಂಡರೆ, 'ಕ್ಷಳ' ಎಂಬ ಸಂಜ್ಞೆಯ ರಹಸ್ಯವು ಜಲಕ್ಕನೆ ಹೊಳೆಯುವುದು. ಆಗ ವರ್ಣ ಮಾಲೆಯ ಪ್ರಸ್ತುತಾಂಶವು ಹೀಗೆ:—

ಯ ರ ಲ ವ ಶ ಷ ಸ ಹ ಳ ಕ್ಷ.

ಈಗ ಕ್ಷಳವೆಂದರೆ, 'ಕ್ಷ' ಎಂಬುದರ ಸಮೀಪದಲ್ಲಿರುವ 'ಳ' ಎಂಬರ್ಥವನ್ನು ಕೊಡುವ ಸಂಜ್ಞೆ ಎಂಬುದು ಸ್ಫುಟವಾದಂತಾಯಿತು. ಹಾಗಾದರೆ ಕೇಶಿರಾಜನು 'ಅರ್ಣವವೃತಧಾತ್ರಿಯೊಳ್ ಪ್ರಸಿದ್ಧಂ' ಆದ 'ವರ್ಣಂಗಳ ಪಾಠಕ್ರಮ'ವೆಂದು ಹೇಳಿದುದೂ, ನಾಗವರ್ಮನು 'ಪ್ರಸಿದ್ಧಾಃ ವರ್ಣಾಃ' ಎಂದು ಹೇಳಿದುದೂ ಶಿಷ್ಟರಲ್ಲಿ, ವೈಯಾಕರಣ ರಲ್ಲಿ ಅಥವಾ ಶಬ್ದಶಾಸ್ತ್ರವನ್ನು ಅಭ್ಯಾಸಮಾಡಲು ಅರ್ಹತೆಯನ್ನು ಸಂಪಾದಿಸಿಕೊಂಡಿರುವ ವ್ಯುತ್ಪನ್ನರಲ್ಲಿ ಪ್ರಸಿದ್ಧವಾದ ಪಾಠಕ್ರಮವನ್ನೇ ಅನುಲಕ್ಷಿಸಿ, ಹೊರತು, ಸಾಮಾನ್ಯ ಜನರಲ್ಲಿ ರೂಢವಾದ ಪಾಠಕ್ರಮ ವನ್ನಲ್ಲವೆಂದು ತಿಳಿಯಬೇಕು. ಏಕೆಂದರೆ 'ಕ್ಷಳ' ಎಂಬ ಸಂಜ್ಞೆಯ ಸುಸ್ಪಷ್ಟವಾದ ಅರ್ಥವು ನಮಗೆ ತಿಳಿಸುವಂತೆ ಕನಿಷ್ಠಪಕ್ಷ ೧೨ನೆಯ ಶತಮಾನದಿಂದ ಪ್ರಾಯಃ ಅದಕ್ಕಿಂತಲೂ ಎಷ್ಟೋ ಮೊದಲಿನಿಂದ ಸಾಮಾನ್ಯ ಜನತೆಯ ವರ್ಣಮಾಲೆಯಲ್ಲಿ ಕ್ಷ ಎಂಬುದು ಸೇರಿಯೇ ಇತ್ತು ಎಂದು ಸಿದ್ಧವಾಗುತ್ತದೆ.

ೞಕಾರ ಳಕಾರಗಳ ಉಚ್ಚಾರವು ಸ್ಫುಟಭೇದವನ್ನು ಕಳೆದುಕೊಳ್ಳ ತೊಡಗಿದೊಡನೆ, ೞ ಕುಳ ಎಂಬ ಸಂಜ್ಞೆಗಳ ಉದಯವಾಯಿತು. ಸಂಸ್ಕೃತದ ಹಾಗೂ ಪ್ರಾಕೃತಗಳ ನಿಕಟ ಸಂಸರ್ಗದಿಂದ, ಕನ್ನಡದ ಳಕಾರವು ಎಂದರೆ 'ಕುಳ'ವು ಸಂಸ್ಕೃತದ ಳಕಾರದಂತೆ 'ಲಳಯೋರ ಭೇದ'ವೆಂದು ಗೊಂದಲಿಸತೊಡಗಿದಾಗ ವ್ಯವಸ್ಥೆಗೋಸ್ಕರ 'ಕ್ಷಳ'

ಎಂಬ ಸಂಜ್ಞೆಯೂ ಹುಟ್ಟಿತು. ಕೇಶಿರಾಜನ ಕಾಲದಲ್ಲಿ ಖಂಡಿತವಾಗಿಯೂ ಉಚ್ಚಾರದಲ್ಲಿ ಪರಿಸ್ಫುಟವಾಗಿದ್ದ ಱಕಾರವು[೧೨] ಪ್ರಾಯಃ ೧೫–೧೬ನೆಯ ಶತಮಾನಗಳಲ್ಲಿ 'ವ್ಯಕ್ತಿತ್ವ'ವನ್ನು ಕಳೆದುಕೊಳ್ಳತೊಡಗಿತು. ಆಗ ಱಕಾರವನ್ನು ಕುರಿತಾಗಿ ನಿರ್ದೇಶಿಸುವ ಒಂದು ಸಂಜ್ಞೆ ಹುಟ್ಟಬೇಕಾಗಿತ್ತು. ಆದರೆ ಕನ್ನಡ ರಾಜ್ಯಕ್ಕೆ ಬಂದ ಅವನತಿಯೊಡನೆ ಕನ್ನಡ ಭಾಷಾವ್ಯವಸಾಯಕ್ಕೂ —ಕಾವ್ಯ ರಚನೆಗೆಂದು ನನ್ನ ಅಭಿಪ್ರಾಯವಲ್ಲ; ಕನ್ನಡ ಭಾಷೆಯ ಶಾಸ್ತ್ರೀಯವಾದ ವ್ಯವಸಾಯಕ್ಕೆ — ಅವದೆಸೆ ಬಂದೊದಗಿ, ಕನ್ನಡದ ವೈಶಿಷ್ಟ್ಯವನ್ನು ಎತ್ತಿ ಹಿಡಿಯುವ (ಕೇಶಿರಾಜನಂಥ) ವರು ಹುಟ್ಟದೆ—ಹುಟ್ಟಿದ ಭಟ್ಟಾಕಳಂಕನಂತಹ ಶಬ್ದಶಾಸ್ತ್ರನಿಷ್ಣಾತರೂ ಕನ್ನಡದ ಮರ್ಮವನ್ನು ತಿಳಿಯುವ ಪ್ರಯತ್ನವನ್ನು ಮಾಡದೆ ಇದ್ದುದರಿಂದ, ಱಕಾರ ನಿರ್ದೇಶಕ್ಕೆ ಒಂದು ಸಂಜ್ಞೆ ಉಂಟಾಗಲಿಲ್ಲವೆಂದು ತೋರುತ್ತದೆ. ಈಗ ನಮಗೆ ಸಾಹಿತ್ಯ ನಿರ್ಮಾಣಕ್ಕಾಗಲಿ, ಸಾಮಾನ್ಯ ವ್ಯವಹಾರಕ್ಕಾಗಲಿ, ಯಾವ ರೀತಿಯ ಅಭಿಪ್ರಾಯ ಪ್ರಕಾಶನಕ್ಕಾಗಲಿ ಱಕಾರದ ಬರವಣಿಗೆಯ ಅವಶ್ಯಕತೆ ಇಲ್ಲದಿದ್ದರೂ ಮೌಖಿಕವಾಗಿ ಕನ್ನಡ ಶಬ್ದವಿವೇಚನೆ ಮಾಡುವಾಗ, ಅದರ (ಱ) ಉಚ್ಚಾರವೂ ರಕಾರದ ಉಚ್ಚಾರವೂ ಈಗ ಕನ್ನಡದಲ್ಲಿ ಅಭಿನ್ನವಾದುದರಿಂದ ಕುರಿತಾಗಿ ಅದನ್ನು (ಱಕಾರವನ್ನು) ಸೂಚಿಸಲು ಒಂದು ಸಂಜ್ಞೆಯ ಅವಶ್ಯಕತೆ ಬಂದೇ ಬರುತ್ತದೆ.[೧೩] ತೆಲುಗಿನಲ್ಲಿ ಱಕಾರಕ್ಕೆ 'ಬಂಡಿ ಱ' ಎಂದು ಹೆಸರಿದೆಯೆಂದೂ, ಅದರ ಆಕಾರವು ಬಂಡಿ ಎಂದರೆ ಗಾಡಿಯಂತಿರದಿದ್ದರೂ ಎರಡು ಗಾಲಿಗಳನ್ನು ಅಚ್ಚುಮರಕ್ಕೆ ಜೋಡಿಸಿಬಿಟ್ಟರೆ ಉಂಟಾಗುವ ರೂಪವು ಅದಕ್ಕಿರುವುದೇ ಸಂಜ್ಞೆಯ ಅನ್ವರ್ಥತೆ ಎಂದೂ ಕೇಳಲಾಗುತ್ತದೆ. ಅದನ್ನೇ ಕನ್ನಡ ವಿದ್ವಾಂಸರು ಸಂಸ್ಕೃತೀಕರಿಸಿ 'ಶಕಟರೇಫ'ವೆಂದು ಈಗೀಗ ಕನ್ನಡದಲ್ಲಿ ವ್ಯವಹರಿಸತೊಡಗಿದಂತಿದೆ. ಆದರೆ 'ಶಕಟ' ಎಂದರೆ ನಮಗೆ 'ಗಾಡಿ'ಯ ಬಿಂಬವೇ ಮನಸ್ಸಿಗೆ ಕಾಣುವುದು ಹೊರತು ಅಚ್ಚುಮರಕ್ಕೆ ಜೋಡಿಸಿದ ಎರಡು ಗಾಲಿಗಳಲ್ಲ. ಆದುದರಿಂದ ಚೆನ್ನಾಗಿ ಒಪ್ಪದಿರುವ ಆ 'ಶಕಟರೇಫ' ಎಂಬ ವಿಕಟಸಂಜ್ಞೆಯನ್ನು ಬಳಸುವ ಬದಲಾಗಿ, ಱಟ ಕುಳಗಳಿಗೆ ಹೆಸರಿಟ್ಟ ಕನ್ನಡ ಪರಂಪರೆಯಲ್ಲಿಯೇ ಇದಕ್ಕೂ ಒಂದು ಅಚ್ಚುಕಟ್ಟಿನ ಹೆಸರಿಡುವುದು ಯುಕ್ತವಲ್ಲವೆ? ಈ ಸರಣಿಯಲ್ಲಿ ಆಲೋಚಿಸಿದರೆ, ಎಂದರೆ ರೂಪದಲ್ಲಿ ಱ ಎಂಬುದನ್ನು ಹೋಲುವ ಮತ್ತು ರ ಎಂಬುದನ್ನು ಸರ್ವಥಾ ಹೋಲದ ಲಿಪಿ ಬೇರೆ

ಯಾವುದಿದೆ ಎಂದು ಹುಡುಕತೊಡಗಿದರೆ, ಸಹಜವಾಗಿ ಮೊದಲು ಱಕಾರವು ಗೋಚರಿಸುತ್ತದೆ. ಆದರೆ ಇದನ್ನು ಬಳಸಕೂಡದು; ಬಳಸಿದರೆ ‘ ೞಱ ’ ಎಂಬ ಸಂಜ್ಞೆಯೂ ಈ ಹೊಸ ಸಂಜ್ಞೆಯೂ ಕಣ್ಣುಕಟ್ಟಿಗೊಂದಲಿಸದಿರವು. ಆಗ ಎಲ್ಲವನ್ನೂ ಕೆಡಿಸಿದಂತಾಗುವುದು. ಹಾಗಾದರೆ ಬೇರೆ ಯಾವುದನ್ನು ಬಳಸಬಹುದು ?

ೞಕಾರದ ಹೋಲಿಕೆಯಲ್ಲಿ ಱಕಾರಕ್ಕಿಂತ ಬೀಸತೂಕವೂ ಕಡಿಮೆಯಲ್ಲದ ಇನ್ನೊಂದು ಲಿಪಿ ಈಗಿನ ಕನ್ನಡದಲ್ಲಿ ಇದೆ. ಅದಾವುದೆಂದರೆ ನಮ್ಮ ವರ್ಣಮಾಲೆಯ ಆರಂಭದ ಪುಷ್ಪ —ಅ. ಇದನ್ನು ಬಳಸಿದರೆ ೞಕಾರಕ್ಕೆ, ‘ ಅ ಎಂಬ ಲಿಪಿಗೆ ಹೆಚ್ಚುಕಡಿಮೆ ಸಮಾನವಾದ ಚಾಕ್ಷುಷ ರೂಪವುಳ್ಳ ವರ್ಣ ’ ಎಂಬರ್ಥವನ್ನು ಕೊಡುವ ‘ ಅೞ ’ ಎಂಬ ಲಲಿತವಾದ ಸಂಜ್ಞೆಯೊಂದು ಏರ್ಪಡುವುದು. ಈ ಹೆಸರು ನಮ್ಮ ಪರಂಪರೆಗೂ ಒಪ್ಪುವುದು; ಶಬ್ದಶಾಸ್ತ್ರ ವಿಚಾರಗಳಲ್ಲಿ ವ್ಯವಹರಿಸಲು ಸೌಲಭ್ಯವೂ ಉಂಟಾಗುವುದು. ಈ ಸಂಜ್ಞೆಯನ್ನು ಅಕ್ಕರಿಗರು ಸ್ವೀಕರಿಸಿದರೆ, ನಮ್ಮ ಅವರ್ಗೀಯಗಳೊಳಗಿನ ಈ ಸಜಾತೀಯ ವರ್ಣಗಳನ್ನು ಇಂತು ಹೆಸರಿಸುವಂತಾಗುತ್ತದೆ.

(೧) ಱ — ೞಱ; ಕನ್ನಡ ಳ — ಕುಳ; ಸಂಸ್ಕೃತ ಳ — ಕ್ಷಳ.

(೨) ರ — ರೇಫ;[೧೪] ೞ — ಅೞ.

# ಅಡಿಟಿಪ್ಪಣಿಗಳು

೧. ಒಂದು ಭಾಷೆಯಲ್ಲಿರುವ ಎಲ್ಲಾ ಏಕಧ್ವನಿಗಳ ಎಂದರೆ ಮೂಲಧ್ವನಿಗಳ ಸಮುಚ್ಚಯವು ಆ ಭಾಷೆಯ 'ವರ್ಣಮಾಲೆ'. ಆ ಧ್ವನಿಗಳನ್ನು ಬರೆದು ತೋರಿಸುವುದಕ್ಕಾಗಿ ನಿರ್ಮಿಸಿಕೊಂಡಿರುವ ಮೂಲ ಲಿಪಿಗಳ ಸಮುಚ್ಚಯವೂ 'ವರ್ಣಮಾಲೆ' ಎಂಬ ಹೆಸರಲ್ಲಿಯೇ ಕರೆಯಲ್ಪಡುತ್ತದೆ. ಮೊದಲನೆಯದು 'ಶ್ರಾವಣ' —ಎಂದರೆ ಕಿವಿಗೆ ಕೇಳುವ ರೂಪ. ಎರಡನೆಯದು 'ಚಾಕ್ಷುಷ' ಎಂದರೆ ಕಣ್ಣಿಗೆ ಕಾಣುವ ರೂಪ. ಶಾಸ್ತ್ರೀಯ ವಿಚಾರಗಳಲ್ಲಿ ಹೀಗೆ ಪ್ರತ್ಯೇಕಿಸಿ ಹೇಳ ಬೇಕಾಗುತ್ತದೆ. ಏಕೆಂದರೆ ಎರಡನೆಯದು ಮೊದಲನೆಯದರ ಪ್ರತಿ ಬಿಂಬವೆಂದೇ ನಿರ್ಮಿತವಾದುದಾದರೂ, ಇವೆರಡರೊಳಗೆ ಸಂಪೂರ್ಣ ಐಕ್ಯವು ಕಂಡುಬರುವುದು ದುರ್ಲಭ. ಕೆಲವು ವರ್ಣಮಾಲೆಗಳಲ್ಲಂತೂ ಇವುಗಳೊಳಗೆ ಮೇಳವೇ ಇಲ್ಲವೆಂಬಂತೆ ತೋರುವುದಿದೆ ಉದಾ:— ಇಂಗ್ಲಿಷ್. ಅದರಲ್ಲಿ ಒಂದು ಚಾಕ್ಷುಷವರ್ಣವು ಅನೇಕ ಶ್ರಾವಣ ರೂಪಗಳನ್ನೂ (ಉದಾ:— a—Man, Master; g—get, general) ಅನೇಕ ಚಾಕ್ಷುಷವರ್ಣಗಳು ಒಂದೇ ಶ್ರಾವಣ ರೂಪವನ್ನೂ (ಉದಾ:— Cook) ಪಡೆಯುತ್ತವೆ. ಕನ್ನಡ ಮೊದಲಾದ ನಮ್ಮ ದೇಶದ ವರ್ಣ ಮಾಲೆಗಳ ಐಕ್ಯವು ನೂರಕ್ಕೆ ೯೯ರಷ್ಟು ಎಂಬಂತಿರುವುದರಿಂದ ವೈಷಮ್ಯವೇ ಇಲ್ಲದಂತೆ ನಮಗೆ ಭಾಸವಾಗುತ್ತದೆ; ಆದರೂ ಸೂಕ್ಷ್ಮವಾಗಿ ಇದ್ದೇ ಇದೆ. ಉದಾ:— ಚೆಲುವು+ಎ=ಚೆಲುವೆ (ಸೌಂದರ್ಯವೇ) ಮತು ಚೆಲುವೆ (ಸುಂದರಿ); ಕತ್ತು+ಎ=ಕತ್ತೆ (ಕೊರಳೆ) ಮತ್ತು ಕತ್ತೆ (ass) —ಈ ದ್ವಂದ್ವಗಳಲ್ಲಿರುವ ಎಕಾರಗಳು ಸಮಾನ ಧ್ವನಿಗಳಲ್ಲ ವೆಂಬುದು ಹೊಳೆಯದಿರದು. ಹಾಗೆಯೇ ನಕಾರಕ್ಕೆ ಹಿಂದೆ ತೋರಿಸಿ ದಂತೆ ಎರಡು ಶ್ರಾವಣ ರೂಪಗಳೂ; ಅನುಸ್ವಾರವೆಂಬ ಹೆಸರುಳ್ಳ ೦ (ಸೊನ್ನೆ) ಎಂಬ ಒಂದೇ ಚಾಕ್ಷುಷ ವರ್ಣಕ್ಕೆ, ಙ್, ಞ್, ಣ್, ನ್ (ಕೋಮಲ), ಮ್ ಮತ್ತು ಶುದ್ಧಾನುಸ್ವಾರವೆಂದು ಆರು ಶ್ರಾವಣ ರೂಪಗಳೂ ಇವೆ. ಆದುದರಿಂದ ಭಾಷಾವಿಜ್ಞಾನ ವಿಚಾರಗಳಲ್ಲಿ 'ಶ್ರಾವಣ ವರ್ಣಮಾಲೆ', 'ಚಾಕ್ಷುಷ ವರ್ಣಮಾಲೆ' —ಎಂದು ಭೇದಮಾಡಿಕೊಳ್ಳುವುದು ಅವಶ್ಯವಾಗಿದೆ. ಈ ವಿಭಾಗಕ್ರಮವು ನಮ್ಮ ಪೂರ್ವಪರಂಪರೆಗೆ ಅವಿರುದ್ಧ ಮಾತ್ರವಲ್ಲ, ಅನುಗುಣವೇ ಆಗಿದೆ. ಶಬ್ದಮಣಿದರ್ಪಣ ಸೂತ್ರ ೩ನ್ನು ಪರಿಶೀಲಿಸಿರಿ.

೨. ನಾವು ಉಚ್ಚರಿಸುವ ರ, ಱ, ( ಪರುಷ ) ನ, ಇಂಗ್ಲಿಷರು ಚ್ಚರಿಸುವಂತೆ t, d ಇವುಗಳೆಲ್ಲ ಏಕಸ್ಥಾನಿಗಳು; ೞ, ಳ, ಡ, ಸಾಧಾರಣವಾಗಿ ನಾವು ಉಚ್ಚರಿಸುವ ಇಂಗ್ಲಿಷಿನ t, d ಇವುಗಳೆಲ್ಲ ಏಕಸ್ಥಾನಿಗಳು —ಎನ್ನಬಹುದು.

೩. (೧) South Indian Palaeography-Burnell ಮತ್ತು (೨) Lewis Rice ಸಂಪಾದಿಸಿದ 'ಕರ್ಣಾಟಕ-ಭಾಷಾಭೂಷಣ'ದ ಪ್ರಥಮ ಮುದ್ರಣದಲ್ಲಿ ಅನುಬಂಧಿಸಿರುವ ಕನ್ನಡ ಲಿಪಿವಿಕಾಸದರ್ಶಕ ವಾದ ಹಾಳೆಯನ್ನು ನೋಡಿರಿ.

೪. ೞ ಮತ್ತು ಳ ಎಂಬ ಲಿಪಿರೂಪಗಳಿಗೆ ಸಾಮ್ಯವಿರುವುದು ಕನ್ನಡ ಲಿಪಿಯಲ್ಲಿ ಮಾತ್ರವಲ್ಲ; 'ತುಳುಲಿಪಿ' ಎಂದು ಹೆಸರುಪಡೆದ ಅದೊಂದು ಗ್ರಂಥಲಿಪಿಯಲ್ಲಿಯೂ ಇವಕ್ಕೆ ತುಂಬ ಸಾಮ್ಯವಿದೆ. South Indian Palaeography-Burnell ನೋಡಿರಿ.

೫. ಕಳೆ ನೀಂ ೞು ೞ ವರ್ಣ ಶ ಷ ವಿಸರ್ಗ ೧ ಕ ಂಪ ಕ್ಷಳನಂ — ಸೂ. ೩೩. ಶ. ದ.

೬. " ಱಕಾರಮುಂ....ಱೞನುಂ....ೞಳನುಂ....ಹ್ರಸ್ವಮೆನಿಸಿದಾ ಎ ಒ ಸಹಿತಂ....ದೇಶೀಯಮೆನಿಪುವು" —( ಶ. ದರ್ಪಣದ ೧೮, ೧೯ ನೆಯ ಸೂತ್ರಗಳಿಂದ ಉದ್ಧೃತ. )

೭. ಭಾಷಾವಿಜ್ಞಾನಿಗಳಲ್ಲಿ ಕೆಲವರು ' ಖಡ್ಗ ' ವು ' ಖಳ್ಗ ' ವಾದಂತೆ, ಡಕಾರವು ಳಕಾರವಾಗಿ ಪರಿಣಮಿಸುವುದೇ ಹೊರತು, ಳಕಾರವು ಎಂದೂ ಡಕಾರವಾಗಲಾರದೆನ್ನುತ್ತಾರೆ. ಆದರೆ ವೇದಭಾಷೆ ಯಲ್ಲಿರುವ ಳಕಾರವು ಮತ್ತೆ ಡಕಾರವಾಗಿ ಕಂಡುಬರುವುದಕ್ಕೆ ಅವರು ಕೊಡುವ ಸಮಾಧಾನವೇನೆಂದರೆ —" ಈಳೇ ಇತ್ಯಾದಿಗಳು ತತ್ಪೂರ್ವ ದಲ್ಲಿದ್ದಿರಬಹುದಾದ ಈಡೇ ಇತ್ಯಾದಿ ರೂಪಗಳ ವಿಕಾರವಾಗಿರ ಬೇಕು; ಕಾಲಾಂತರದಲ್ಲಿ ಳಕಾರ ರೂಪಗಳು ಮಾಯವಾಗಿ ಡಕಾರ ರೂಪಗಳು ಮಾತ್ರ ಉಳಿದಿರಬೇಕು. ಏಕೆಂದರೆ ಳಕಾರವು ಡಕಾರಕ್ಕೆ

ಎಂದೂ ಜನಕವಾಗಲಾರದು." ಅವರ ಈ ಮಾತಿಗೆ ವಿರುದ್ಧವಿದಾ ನಿದರ್ಶನಗಳು ಕನ್ನಡ ಮೊದಲಾದ ಭಾಷೆಗಳಲ್ಲಿವೆ. ಉದಾ:— "ಈಗಡಿನ ನೆಗಟ್ತೆಯು ಕಬ್ಬದೊಳ್...." (ಕವಿರಾಜಮಾರ್ಗ ೧--೩೨). ಇಲ್ಲಿ ಬಂದಿರುವ ಡಕಾರಕ್ಕೆ ಈಗಳ್ ಎಂಬುದರ ಳಕಾರವೇ ಪೂರ್ವ ರೂಪವೆಂಬುದರಲ್ಲಿ ಪ್ರಾಯಃ ಸಂದೇಹವಿಲ್ಲ. ಹಳೆಯ ನುಡಿಯಲ್ಲಿ 'ಕುಳ್' (=ಕುಳ್ಳಿರು) ಎಂದಿದ್ದ ಮೂಲರೂಪವು ಇಂದು ಕನ್ನಡದ ಆಡುನುಡಿಯಲ್ಲಿ ಕೆಲವೆಡೆ 'ಕೂಡು' ಎಂದಾಗಿಲ್ಲವೆ? ಇಲ್ಲಿ ಳಕಾರವೇ ಜನಕ, ಡಕಾರವೇ ಜನ್ಯ —ಎಂಬುದರಲ್ಲಿ ಸಂದೇಹವುಂಟೆ? ಸಂಸ್ಕೃತ ಭಾಷೆಯ 'ಸಕಲ' ಎಂಬ ರೂಪವು ಮರಾಠಿಯಲ್ಲಿ 'ಸಕಳ' ಎಂದಾಗಿ ಕೊಂಕಣಿಯಲ್ಲಿ 'ಸಕಡ' ಎಂದಾದುದನ್ನು ಗಮನಿಸಿದರೆ ಳಕಾರವು ಡಕಾರಕ್ಕೆ ಜನಕವಾಗಲಾರದೆಂಬ ಮಾತು ಉಳಿಯಲಾರದು. ಆದುದರಿಂದ ವೇದಭಾಷೆಯ ಳಕಾರವು, ಕಾವ್ಯಸಂಸ್ಕೃತದಲ್ಲಿ ಡಕಾರವಾಗಿ ರೂಪುಗೊಂಡಿತು ಎಂದು ಹೇಳುವುದು ಅಸಮಂಜಸವೆಂದಾಗಲಾರದು.

೮. ಭಟ್ಟಾಕಳಂಕನ ಶಬ್ದಾನುಶಾಸನದ ವರ್ಣಸಮಾಮ್ನಾಯದ ವಿವರಗಳನ್ನು ನೋಡಿರಿ.

೯. ಇಂದಿನ ತುಳು ಭಾಷೆಯಲ್ಲಿ ಹೀಗಾಗಿದೆ —ಎಂದರೆ ಲಕಾರ ಳಕಾರಗಳು ಸರ್ವತ್ರ ವಿಕಲ್ಪವಾಗಿವೆ. ಅದರ ಪರಿಣಾಮವಾಗಿಯೋ ಏನೋ, ನಕಾರ ಣಕಾರಗಳೂ —ಲಕಾರ ಳಕಾರಗಳಿಗೆ ಅನುಕ್ರಮವಾಗಿ ಸಮಾನ ಸ್ಥಾನಿಗಳಾದುದರಿಂದ —ವ್ಯವಸ್ಥೆಯಿಲ್ಲದೆ ವೈಕಲ್ಪಿಕವಾಗುತ್ತಿವೆ.

೧೦. ಉತ್ತರದ ಪರಂಪರೆಯಲ್ಲಿ ಕ್ಷ ಎಂಬುದಲ್ಲದೆ ಜ್ಞ ಎಂಬುದೂ ಸೇರಿತ್ತೆಂದು ತಿಳಿದುಬರುತ್ತದೆ.

೧೧. South Indian Palaeography—Burnell Pl vi, vii, x ನೋಡಿರಿ.

೧೨. ಶಬ್ದಮಣಿದರ್ಪಣದ ೧೯ನೆಯ ಸೂತ್ರಕ್ಕೆ ಕೊಟ್ಟ ಉದಾಹರಣದ ವಿವೃತಿ ಹೀಗಿದೆ: —"ಕಱೆಯುಂ ಪೊತ್ತಪ್ಪು**ದೆಂಬುದಂ, ಕರೆಯುಂ** ಪೊತ್ತಪ್ಪು**ದೆಂದೊಡೆ** ಅರ್ಥಘಟನೆಯಿಲ್ಲಾಗಿಯುಂ" ಎಂದು ಆಯಾ ವರ್ಣಗಳ ಉಚ್ಚಾರವನ್ನನುಲಕ್ಷಿಸುವ ವಿವರಣೆ ಇರುವುದರಿಂದಲೂ, ಱಕಾರದಂತೆ ೞಕಾರವೂ ಆಗ ಲುಪ್ತಪ್ರಾಯವಾಗಿದ್ದಿದ್ದರೆ ಕೇಶಿರಾಜನು ಅದರ ವಿಶೇಷ ವಿಮರ್ಶೆಯನ್ನೂ ಮಾಡಿ, ಱಕಾರ ಶಬ್ದಗಳ ಸಂಗ್ರಹವನ್ನು ಮಾಡಿದಂತೆ ೞಕಾರ ಶಬ್ದಗಳ ಸಂಗ್ರಹವನ್ನೂ ಮಾಡಿಯೇ ಮಾಡುತ್ತಿದ್ದನೆಂಬುದರಿಂದಲೂ, ಆಗ ೞಕಾರವು ಉಚ್ಚಾರದಲ್ಲಿ ಪ್ರಸ್ಫುಟವಾಗಿತ್ತೆಂದು ದೃಢಮಾಡಬಹುದು. ಅವನು ಅದನ್ನು ಕೇವಲವಾಗಿ ೞಕಾರವೆಂದೇ ಕರೆದಿರುವನು. (ಶ. ದ. ಸೂತ್ರ—೧೮)

೧೩. ಸಂಸ್ಕೃತದಲ್ಲಿ ರಕಾರಕ್ಕೆ (ರೇಫ ಎಂಬ) ವಿಶಿಷ್ಟವಾದ ಹೆಸರಿನ ಅವಶ್ಯಕತೆ ಬರಲು, ಅದರ ಉಚ್ಚಾರಕ್ಕೂ ಋಕಾರದ ಉಚ್ಚಾರಕ್ಕೂ ಇರುವ ಸಾಮೀಪ್ಯವೇ ಕಾರಣವೆಂದು ತೋರುತ್ತದೆ. ಹೀಗೆಯೇ ಲಕಾರ ೱಕಾರಗಳ ಉಚ್ಚಾರದಲ್ಲಿ ಸಾಮೀಪ್ಯವಿರುವುದಾದರೂ, ೱಕಾರವು ಭಾಷೆಯಲ್ಲಿ ಕ್ವಾಚಿತ್ಕವಾದುದರಿಂದ ಲಕಾರಕ್ಕೊಂದು ವಿಶಿಷ್ಟವಾದ ಹೆಸರು ಹುಟ್ಟಬೇಕಾಗಿ ಬರಲಿಲ್ಲವೆಂದೂ ಕಾಣುತ್ತದೆ.

೧೪. ರೇಫ ಎಂಬ ಸಂಜ್ಞೆ ಸಂಸ್ಕೃತ ಶಬ್ದಶಾಸ್ತ್ರದ ಸೊತ್ತು. ಅದರ ಮೂಲ ವಿಚಾರವನ್ನು ಈ ಲೇಖನದಲ್ಲಿ ಮಾಡಿರುವುದಿಲ್ಲ.

# ಶುದ್ಧಿ ಪತ್ರ

| ಪುಟ | ಪಂಕ್ತಿ | ಅಶುದ್ಧ | ಶುದ್ಧ |
|---|---|---|---|
| ೬ | ೧೦ | ಸುತಾರಾಂ | ಸುತರಾಂ |
| ೧೦ | ೩ | ಶಷಗಳು ೠ ೠ | ಶಷಗಳೂ ಋ ೠ |
| ೧೧ | ೧ | ವಿಶೇಷಣಗಳನ್ನು | ವಿಶೇಷಗಳನ್ನು |
| ೧೩ | ೩ | ‘ಸಾಜ’ವನು | ಸಾಜವನ್ನು |
| ೧೫ | ೪ | ದಿಗ್ದರ್ಶನವನು | ದಿಗ್ದರ್ಶನವನ್ನು |
| ೨೩ | ೧೮ | ನುಡಿಗಳನು | ನುಡಿಗಳನ್ನು |
| ೨೫ | ೪ | ಊಹಾಬಲ | ಊಹನ ಬಲ |
| ೨೬ | ೧೨ | ಮೈಂದ | ಮೈಂದ್ ’ |
| ೨೮ | ೧೯ | ಐಬು ’ | ಐದು |
| ೩೦ | ೧ | ಪೊಟ್ರ್ತಿ= | ಪೊಟ್ತು= |
| ೩೧ | ೧ | ಮುಂದೊತಿ, | ಮುಂದೊತ್ತಿ, |
| ೩೬ | ೨೮ | =ಕೈಯ್ಗ್ಯ್ | =ಕೆಯ್ಗ್ಯ್ |
| ೩೭ | ೨೭ | ಉಚ್ಚರಿರುವುದು | ಉಚ್ಚರಿಸುವುದು |
| ೩೮ | ೨೬ | Dipthong | Diphthong |
| ೪೦ | ೧೬-೧೭ | Foreigners led | Foreigners are led |
| ೪೪ | ೧೧ | ಮೂಲವೂ ಒಂದೇ. | ಮೂಲವೂ ಒಂದೇ ಆಗಿದೆ. |
| ೪೫ | ೧೩ | ಪರೀಕ್ಷಿರುವುದು | ಪರೀಕ್ಷಿಸುವುದು. |
| ೪೯ | ೩ | (:ಕಾಣುವದಿಲ್ಲ) | [illegible] |
| ೫೦ | ೮ | ವಿಧಾನವಾಗಿ | ವಿಧವಾಗಿ |
| ೫೧ | ೮ | ತಿಳಿಸಿರುತ್ತೇವೆ | ತಿಳಿದಿರುತ್ತೇವೆ. |
| ೫೨ | ೧೩ | ಪರಣಮಿಸುವ | ಪರಿಣಮಿಸುವ |
| ೫೫ | ೮ | ವಜ್ರ | ವ್ರಜ |
| ೫೬ | ೨ | ದಿಕ್ಕೆಲ್ ‘ ಡ್ ’ | ಡಿಕ್ಕೆಲ್ ‘ ಡ್ ’ |
| ೫೯ | ೭ | ಇದು ಗೆಯ್ ಎಂಬುದಕ್ಕೆ | ಗೆಯ್ ಎಂಬುದಕ್ಕೆ |
| ೬೦ | ೧೬ | ಬೆಣ್ಣೆಯ್ ಒಂಬ | ವೆಣ್ಣೆಯ್ ಎಂಬ |
| ೬೦ | ೨೮ | ಜಳ್ಳಾಗಬಾರದೆಂದು | ಜಳ್ಳಾಗಲಾರದೆಂದು |
| ೬೧ | ೯ | ದ್ರಾವಿಢ | ದ್ರಾವಿಡ |

| | | | |
|---|---|---|---|
| ೬೫ | ೧೩ | ಜಕಾರ ಝಕಾರಗಳು | ಜಕಾರ ಝಕಾರಗಳ |
| ೬೬ | ೨೦ | ಊಣ್ಪು | ಉಣ್ಪು |
| ೬೭ | ೧೦ | ಚಿರಯೌವ್ವನದ | ಚಿರಯೌವನದ |
| ೬೭ | ೨೮ | गयंदन को | गयंदन के |
| ೬೯ | ೧೯ | ಮೆಯ್ಯಿಗಳು | ಮೆಯಿಗಳು |
| ೭೧ | ೨ | ಕರಣಾರ್ಥವಾಗಿ | ಕರಣಾರ್ಥಕವಾಗಿ |
| ೭೨ | ೧೨ | ಹಸ್ತಾರ್ಥಕದಲ್ಲಿ | ಹಸ್ತಾರ್ಥದಲ್ಲಿ |
| ೭೨ | ೨೬ | ಬರೆದಿರುವರು.) | ಬರೆದಿರುವರು. |
| ೭೨ | ೨೯ | ಕರಣಾರ್ಥವಾದ | ಕರಣಾರ್ಥಕವಾದ |
| ೭೪ | ೧೧ | ಹಕಾರದಂತೆ | ಹಕಾರವಾದಂತೆ |
| ೭೫ | ೩ | ಕರ್ಣಿಕೆಯಲ್ಲಿ | ಕರ್ಣಿಕೆಯಲ್ಲಿ ಹುಟ್ಟುವುದು. |
| ೭೫ | ೩ | ಮುಖ್ಯದ್ವಾರವನ್ನು | ಮುಖದ್ವಾರವನ್ನು |
| ೭೬ | ೧೬ | ಆಹ್ವಯತೆ | ಆಹ್ವಯತೇ |
| ೭೭ | ೭ | ಪೃಚ್ಛಾವಿತರ್ಕ+ | ಪೃಚ್ಛಾ+ವಿತರ್ಕ+ |
| ೭೮ | ೧೨ | ಚಿಯಕ್ಕಾಯ್ | ಚೀಯಕ್ಕಾಯ್ |
| ೭೯ | ೪ | ಸರಕಾರವೂ | ಸಕಾರವೂ |
| ೭೯ | ೧೦ | ಪ್ರಾಕೃತ | ಪ್ರಾಕೃತದ |
| ೮೦ | ೧೬ | ಇದಱ್ | ಇದಱ್ |
| ೮೧ | ೪ | ಕನ್ನಡದಲ್ಲಿಯೂ | ಕನ್ನಡದಲ್ಲಿ |
| ೮೧ | ೨೬ | ಎಬುದೇ | ಎಂಬುದೇ |
| ೮೨ | ೭ | ಬಯಲ್' ಕಂಡೊ | ಬಯಿಲ್' ಕಂಡೊ |
| ೮೨ | ೧೯ | ಕನ್ನಡದಲಿ | ಕನ್ನಡದಲ್ಲಿ |
| ೮೩ | ೨೭ | ಗ್ಗಳಿಕೆಯೆನೆ | ಗ್ಗಳಿಕೆಯನೆ |
| ೮೪ | ೧೨ | ಕಯ್ವೆ | ಕಯ್ಪೆ |
| ೮೪ | ೧೯ | ಕಯ್ವೆಸೋರೆಯ | ಕಯ್ಪೆಸೊರೆಯ |
| ೮೪ | ೨೦ | ಕಯ್ವೆ | ಕಯ್ಪೆ |
| ೮೪ | ೨೨ | ಕನ್ನದಲ್ಲಿ | ಕನ್ನಡದಲ್ಲಿ |
| ೮೫ | ೧೩-೧೪ | ಪ್ರತಿರೂಪ | ಪ್ರತಿಬಿಂಬರೂಪ |
| ೮೬ | ೨ | Sibilition | Sibilation |
| ೮೬ | ೧೬ | ಕೇವಲವಾಗಿರುವ | ಕೇವಲವಾಗಿರುವಾಗ |

| | | | |
|---|---|---|---|
| ೮೮ | ೧೯-೨೦ | ಲೋಪ ಹೊಂದಿರುವುದರಿಂದ. | ಲೋಪಹೊಂದುವುದರಿಂದ, |
| ೮೮ | ೨೧ | ಮರೆಯಿಸು | ಮಱೆಯಿಸು |
| ೮೮ | ೨೨ | ಮರೆಯಿಸಿರ್ದ | ಮಱೆಯಿಸಿರ್ದ |
| ೯೧ | ೪ | ಅಚ್ಚೇರು | ಅಚ್ಛೇರು |
| ೯೧ | ೯ | ಕನ್ನದಲ್ಲಿ | ಕನ್ನಡದಲ್ಲಿ |
| ೯೨ | ೧೨ | ಅವೆರಡು ಉಚ್ಚಾರಗಳಲ್ಲಿ | ಅವೆರಡೂ ಉಚ್ಚಾರದಲ್ಲಿ |
| ೯೨ | ೨೫ | ತವನ ಜಾನೆ | ತವ ನ ಜಾನೇ |
| ೯೩ | ೧೯ | ಇತರ ಪ್ರಥಮ | ಇತರ ವರ್ಗಪ್ರಥಮ |
| ೯೪ | ೪ | ತಿಳುವಿನಂತೆ | ತಿಳಿವಿನಂತೆ |
| ೯೪ | ೭ | ಶ ಎಂದು | ಶ ಎಂದು |
| ೯೪ | ೨೭ | ಸಮೀಪವೆಂದು | ಸಮೀಪದವೆಂದು |
| ೯೫ | ೨೧ | ಚಕಾದಲ್ಲಿ | ಚಕಾರದಲ್ಲಿ |
| ೯೬ | ೨ | ಮಲಯಾಲ | ಮಲಯಾಳ |
| ೯೬ | ೨೧ | ಕನ್ನಚದ | ಕನ್ನಡದ |
| ೯೬ | ೩೦ | ಘೊಷಾಂಶವು | ಘೋಷಾಂಶವು |
| ೯೯ | ೩ | ಎಂದಾಗ | ಎಂದಾದಾಗ |
| ೯೯ | ೧೧-೧೨ | ಕನ್ನಡದಲ್ಲಿರುವಷ್ಟೇ | ಕನ್ನಡದಲ್ಲಾಗಿರುವಷ್ಟೇ |
| ೯೯ | ೧೨ | ಪೋಗೋಣಂ | ಪೋಗಣಂ |
| ೧೦೦ | ೧೦ | ದೋತಿತಾರ್ಥಾ | ದ್ಯೋತಿತಾರ್ಥಾ |
| ೧೦೦ | ೧೧ | ಪುರಾತನ | ಪುರಾತನರ |
| ೧೦೧ | ೧೭ | ಚುಂಬಿಕಾನಿ | ಚುಂಬಿತಾನಿ |
| ೧೦೧ | ೨೧ | ಹೊಸಗನ್ನಡದಲ್ಲಿ | ಹೊಸಗನ್ನಡದ |
| ೧೦೧ | ೨೭ | ‘ಬಿ’ . | ‘ಉ’ |
| ೧೦೨ | ೨೬ | ಪ್ರಯುತ್ನಿಸಿದರೆ | ಪ್ರಯುತ್ನಿಸುವಾಗ |

೧೦೩ ಈ ಪುಟದಲ್ಲಿ ಎಸಡಿ ಎಂಬುದರ ವಿವಿಧ ರೂಪಗಳ ಕೋಷ್ಟಕದಲ್ಲಿ, ಎರಡನೆಯ ಸಾಲು ಸ್ಥಾನತಪ್ಪಿ ಮುದ್ರಿತವಾಗಿದೆ. ಆ ಸಾಲು ಒಂದು ಹಜ್ಜೆ ಮೊದಲು ಇರತಕ್ಕದ್ದು. ಹಾಗೆ ಮಾಡಿಕೊಂಡರೆ (೩)A. ಮೊದಲಾದ ಜನ್ಯರೂಪಗಳು ಜನಕ ರೂಪಗಳ ಅಡಿಯಲ್ಲಿಯೇ ಕಾಣುವುವು.

| | | | |
|---|---|---|---|
| ೧೦೪ | ೨೩ | ಮೇಲಿನ ಪದ್ಯದ ಗದ್ಯ | ಪದ್ಯದ ಮೇಲಿನ ಗದ್ಯ |
| ೧೦೫ | ೧೦ | ಧಾತುವಾಗಿ | ಧಾತುವಾಗಿಯೂ |
| ೧೦೬ | ೮ | ವರ್ಗೀಯಕ್ಕೆ | ವರ್ಗೀಯಕ್ಕೇ |
| ೧೦೭ | ೧೨ | ತರುವುದು | ಬರುವುದು |
| ೧೦೭ | ೨೨ | ನಿರರ್ಥಕವಾಗಿ | ನಿರರ್ಥಕವಾಗಿ— |
| ೧೦೯ | ೧೦ | ಅತಿಪುರಾತನದಲ್ಲಿ, | ಅತಿಪುರಾತನವಲ್ಲ, |
| ೧೧೦ | ೧೦ | ವ್ಯಕ್ತಿಗಳು. | ವ್ಯಕ್ತಿಗಳೂ, |
| ೧೧೧ | ೧೫ | ಸಂಜೆ | ಸಂಜ್ಞೆ |
| ೧೧೧ | ೨೪ | ಇದ್ದೊಂದು | ಇನ್ನೊಂದು |
| ೧೧೧ | ೨೮ | ಪ್ರಕ್ರಮವನು | ಪ್ರಕ್ರಮವನ್ನು |
| ೧೧೨ | ೩ | ರಕಾರವು | ಱ ಕಾರವು |
| ೧೧೫ | ೩ | ಕುಱಿ | ಕುಳ |
| ೧೧೫ | ೧೨ | ಕಿಂಜಲ | ಕಿಂಜಲ್ಕ |
| ೧೧೫ | ೨೦-೨೧ | ರಾಮುಮಿಡೆ | ರಾಮುಮೀಡೇ |
| ೧೧೬ | ೩ | ಜಿಘಲಕ್ಷಯಾ | ಜಿಘೃಕ್ಷಯಾ |
| ೧೧೮ | ೨೦ | ಕನಿಷ್ಪ | ಕನಿಷ್ಠ |
| ೧೨೧ | ೧೫-೧೬ | ವರ್ಣಮಾಲೆಗಳ ಐಕ್ಯವು | ವರ್ಣಮಾಲೆಗಳಲ್ಲಿ ಐಕ್ಯವು |
| ೧೨೧ | ೨೭ | ನಮು | ನಮ್ಮ |
| ೧೨೨ | ೧-೨ | ಇಂಗ್ಲಿಪರುಚ್ಚರಿಸುವಂತೆ | ಇಂಗ್ಲಿಷರು ಉಚ್ಚರಿಸುವಂತೆ |
| ೧೨೩ | ೧ | ವಿರುದ್ಧವದಾ | ವಿರುದ್ಧವಾದ |

**ಸೂಚನೆ:**— ಕೆಲವೆಡೆಗಳಲ್ಲಿ ವಿರಾಮ ಚಿಹ್ನಗಳು ಲುಪ್ತವಾಗಿವೆ. ವಾಚಕರು ಅರ್ಥಾನುಸಾರವಾಗಿ ಅವುಗಳನ್ನು ಅಲ್ಲಲ್ಲಿ ಸಂಭಾವಿಸಿಕೊಳ್ಳಬೇಕೆಂದು ಪ್ರಾರ್ಥನೆ.

ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ

# ಪ್ರಕಟವಾದ ಉಪನ್ಯಾಸಗಳು

೧. ಮೂರು ಉಪನ್ಯಾಸಗಳು ೧—೦—೦
— ಶ್ರೀ. ಎಂ. ಗೋವಿಂದ ಪೈ.

೨. Three Lectures 1—0—0
— *by Shri K. V. Subrahmanya Aiyar*, B.A.

೩. ಕರ್ನಾಟಕ ಸಂಗೀತವೂ ದಾಸಕೂಟವೂ ೨—೮—೦
— ಕಿನ್ನರಿವಿದ್ವಾನ್ ಹುಲಗೂರು ಕೃಷ್ಣಾಚಾರ್ಯರು

೪. ಶಬ್ದಮಣಿದರ್ಪಣದ ಪಾಠಾಂತರಗಳು
ಮತ್ತು ಅನುಭವಾಮೃತವೂ ಹರಿಕಥಾಮೃತಸಾರವೂ ೩—೦—೦
— ಪ್ರೊ. ಡಿ. ಕೆ. ಭೀಮಸೇನರಾಯರು

೫. ಕರ್ನಾಟಕದ ಪೂರ್ವಚರಿತೆ ೨—೦—೦
— ಡಾ. ಎಂ. ಎಚ್. ಕೃಷ್ಣ

೬. ಕೆಲವು ಕನ್ನಡ ವ್ಯಾಕರಣ ವಿಚಾರಗಳು ೧—೮—೦
— ಪಂಡಿತ ಮ. ಪ್ರ. ಪೂಜಾರ

೭. ಕನ್ನಡನಾಡೂ ದೇಶಿಸಾಹಿತ್ಯವೂ ೧—೦—೦
— ಪಂಡಿತ ಮುಳಿಯ ತಿಮ್ಮಪ್ಪಯ್ಯ

೮. Some Problems in Kannada Linguistics 1—8—0
— *by Shri C. R. Sankaran*

೯. ಕರ್ನಾಟಕ ಲಾಕುಳಶೈವರ ಇತಿಹಾಸ ೨—೦—೦
— ಶ್ರೀ. ಕಪಟರಾಳ ಕೃಷ್ಣರಾಯರು